ಸೋಮವಾರ, ಫೆಬ್ರುವರಿ 10, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 41 | ಪುಟ 14

• www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶತಕದ ಆಟ

ಇಂಗ್ಲೆಂಡ್ ವಿರುದ್ಧ ಕಟಕ್‌ನಲ್ಲಿ ಭಾನುವಾರ ನಡೆದ 2ನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ರೋಹಿತ್ ಶರ್ಮಾ ಅವರು 32ನೇ ಶತಕ ದಾಖಲಿಸಿದರು

ಆಳ-ಅಗಲ: 'ನಮ್ಮ ಮೆಟ್ರೊ' ದೇಶದಲ್ಲಿಯೇ ದುಬಾರಿ

ದೇಶದ ಮೊದಲ ಲಿಫ್ಟ್ ಸೇತುವೆ ಉದ್ಘಾಟನೆಗೆ ಸಜ್ಜು 8

ಧಾರ್ಮಿಕ ದೇಣಿಗೆ: ಪ್ರತ್ಯೇಕ ಕಾನೂನು ಏಕೆ?- ಅಲೋಕ್ ಕುಮಾರ್

ದೆಹಲಿ ಸಿ.ಎಂ ಹುದ್ದೆಗೆ ಆತಿಶಿ ರಾಜೀನಾಮೆ 9

ಏಕರೂಪದ ಕಾನೂನಿಗೆ ವಿಎಚ್‌ಪಿ ಕರೆ 9

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕೆಎಸ್‌ಐಐಡಿಸಿ | INVEST KARNATAKA

ವಿಮಾನಯಾನ ಕ್ಷೇತ್ರ ಆಧಾರಿತ ಕರ್ನಾಟಕ ಬೆಳವಣಿಗೆಯ ಬಲವರ್ಧನೆ

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ -2025ರ ಪ್ರತಿನಿಧಿಗಳನ್ನು ಕೆಎಸ್‌ಐಐಡಿಸಿ ಆಹ್ವಾನಿಸುತ್ತದೆ.

ಕೆಎಸ್‌ಐಐಡಿಸಿ ಸಾಧನೆಗಳು

- ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ
- ಕಲಬುರಗಿ ವಿಮಾನ ನಿಲ್ದಾಣ
- ಬೀದರ್ ವಿಮಾನ ನಿಲ್ದಾಣ
- ಶಿವಮೊಗ್ಗ ವಿಮಾನ ನಿಲ್ದಾಣ
- ವಿಜಯಪುರ ವಿಮಾನ ನಿಲ್ದಾಣ
- ಹಾಸನ ವಿಮಾನ ನಿಲ್ದಾಣ
- ಬೆಂಗಳೂರು ಸಿಗ್ನೇಚರ್ ಬಿಜಿನೆಸ್ ಪಾರ್ಕ್ (ಬಿಎಸ್‌ಬಿಪಿ)

ಶ್ರೀ ಎಂ.ಬಿ.ಪಾಟೀಲ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಅಧಿಕಾರಿಗಳೊಂದಿಗೆ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕುರಿತು ಚರ್ಚಿಸುತ್ತಿರುವುದು.

ವಿಮಾನಯಾನ ಕ್ಷೇತ್ರ ಬಲವರ್ಧನೆಗೆ ಕೆಎಸ್‌ಐಐಡಿಸಿಯು ಅತ್ಯುತ್ತಮ ಪರಿಸರ ವ್ಯವಸ್ಥೆಯನ್ನು ನಿರ್ಮಾಣ ಮಾಡಿದೆ

ಬೆಂಗಳೂರು ಅರಮನೆ, ಬೆಂಗಳೂರು
11 ರಿಂದ 14 ಫೆಬ್ರವರಿ 2025

ಛತ್ತೀಸಗಢ: ಚಕಮಕಿಯಲ್ಲಿ ಇಬ್ಬರು ಭದ್ರತಾ ಸಿಬ್ಬಂದಿ ಸಾವು, ಇನ್ನಿಬ್ಬರಿಗೆ ಗಾಯ

ಗುಂಡಿನ ದಾಳಿ: 31 ನಕ್ಸಲರ ಹತ್ಯೆ

ಪಿಟಿಐ/ಪ್ರಜಾವಾಣಿ ವಾರ್ತೆ

ಬಿಜಾಪುರ, (ಛತ್ತೀಸಗಢ): ಬಿಜಾಪುರ್ ಜಿಲ್ಲೆಯ ಇಂದ್ರಾವತಿ ರಾಷ್ಟ್ರೀಯ ಉದ್ಯಾನ ಅರಣ್ಯದಲ್ಲಿ ಭದ್ರತಾ ಸಿಬ್ಬಂದಿ ಜೊತೆಗೆ ನಡೆದ ಗುಂಡಿನ ಚಕಮಕಿಯಲ್ಲಿ 31 ನಕ್ಸಲರು ಭಾನುವಾರ ಹತರಾಗಿದ್ದಾರೆ. ಇದರೊಂದಿಗೆ ಈ ವರ್ಷ ಹತರಾದ ನಕ್ಸಲರ ಸಂಖ್ಯೆ 81ಕ್ಕೆ ಏರಿದೆ.

'ನಕ್ಸಲ್ ಸಂಘಟನೆಗಳ ವಿರುದ್ಧ ಅರಣ್ಯ ವಲಯದಲ್ಲಿ ಕೈಗೊಂಡಿದ್ದ ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿ ನಡೆಯಿತು' ಎಂದು ಬಸ್ತರ್ ವಲಯದ ಐಜಿಪಿ ಪಿ.ಸುಂದರರಾಜ್ ಅವರು ತಿಳಿಸಿದರು.

ಜಿಲ್ಲಾ ಮೀಸಲು ಪಡೆ, ವಿಶೇಷ ಕಾರ್ಯಪಡೆಯ ತಲಾ ಒಬ್ಬ ಸಿಬ್ಬಂದಿ ಗುಂಡಿನ ಚಕಮಕಿಯಲ್ಲಿ ಮೃತಪಟ್ಟರು. ಇನ್ನಿಬ್ಬರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಅವರು, ಅಪಾಯದಿಂದ ಪಾರಾಗಿದ್ದಾರೆ ಎಂದೂ ಐಜಿಪಿ ಸುದ್ದಿಗಾರರಿಗೆ ತಿಳಿಸಿದರು.

ಕಾರ್ಯಾಚರಣೆ ನಡೆದ ಸ್ಥಳವು ಛತ್ತೀಸಗಢ ಮತ್ತು ಮಹಾರಾಷ್ಟ್ರ–ತೆಲಂಗಾಣ ಗಡಿಗೆ ಹೊಂದಿಕೊಂಡಿದೆ. ಅಲ್ಲಿ ಎ.ಕೆ–47, ಎಸ್‌ಎಲ್‌ಆರ್, ಪಾಯಿಂಟ್ 303 ರೈಫಲ್, ಬ್ಯಾರಲ್ ಗ್ರೆನೇಡ್ ಲಾಂಚರ್‌ಗಳು, ಸ್ಫೋಟಕಗಳು ಸೇರಿದಂತೆ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರ ವಶಕ್ಕೆ ಪಡೆಯಲಾಗಿದೆ ಎಂದು ಅವರು ತಿಳಿಸಿದರು.

'ನಕ್ಸಲ್‌ಮುಕ್ತ' ಗುರಿ ಸಾಧನೆ ಯತ್ನದಲ್ಲಿ ದೊಡ್ಡ ಯಶಸ್ಸು– ಅಮಿತ್ ಶಾ

ನವದೆಹಲಿ (ಪಿಟಿಐ): 'ನಕ್ಸಲರನ್ನು 2026ರ ಮಾರ್ಚ್ 31ರೊಳಗೆ ಪೂರ್ಣ ನಿರ್ಮೂಲನೆ ಮಾಡುತ್ತೇವೆ. ಆ ಬಳಿಕ ಈ ಪಿಡುಗಿನಿಂದ ಜೀವಹಾನಿ ಆಗುವುದಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಇಲ್ಲಿ ಹೇಳಿದರು.

31 ನಕ್ಸಲರ ಹತ್ಯೆ ಕುರಿತ ಬೆಳವಣಿಗೆಗೆ 'ಎಕ್ಸ್'ನಲ್ಲಿ ಅವರು ಪ್ರತಿಕ್ರಿಯಿಸಿದ್ದಾರೆ. 'ನಕ್ಸಲ್‌ಮುಕ್ತ ಭಾರತ ನಿರ್ಮಾಣ' ಗುರಿ ಸಾಧನೆಯ ದಿಸೆಯಲ್ಲಿ ಛತ್ತೀಸಗಢದಲ್ಲಿ ಭದ್ರತಾ ಪಡೆಗಳು ದೊಡ್ಡ ಯಶಸ್ಸು ಸಾಧಿಸಿವೆ' ಎಂದು ಶ್ಲಾಘಿಸಿದ್ದಾರೆ.

> **ದೇಶ ಮತ್ತು ರಾಜ್ಯದಲ್ಲಿ ನಕ್ಸಲ್ ಪಿಡುಗಿನ ಅಂತ್ಯ ಖಚಿತ. ಮೋದಿ, ಶಾ ಅವರ ಮಾರ್ಗ ದರ್ಶನದಲ್ಲಿ 2026ರ ಮಾರ್ಚ್ ಒಳಗೆ ಇದು ಪೂರ್ಣ ನಿರ್ಮೂಲನೆ ಆಗಲಿದೆ**
> **ವಿಷ್ಣು ಸಿಂಗ್ ದೇವ್ ಸಾಯಿ**
> ಮುಖ್ಯಮಂತ್ರಿ, ಛತ್ತೀಸಗಢ

> **ಇದು ನಕ್ಸಲ್ ಆಂದೋಲನಕ್ಕೆ ಬಿದ್ದಿರುವ ದೊಡ್ಡಪೆಟ್ಟು. ನಕ್ಸಲ್ ಹೋರಾಟದ ವಿರುದ್ಧದ ಅಂತಿಮ ಹಂತದ ಕಾರ್ಯಾಚರಣೆ ಈಗ ನಡೆಯುತ್ತಿದೆ**
> **ದೇವೇಂದ್ರ ಫಡಣವೀಸ್**
> ಮುಖ್ಯಮಂತ್ರಿ, ಮಹಾರಾಷ್ಟ್ರ

'ಜಿಲ್ಲಾ ಮೀಸಲು ಪಡೆ, ವಿಶೇಷ ಕಾರ್ಯಪಡೆ ಮತ್ತು ಬಸ್ತರ್ ಫೈಟರ್, ಕೋಬ್ರಾ ಕಮಾಂಡೊಗಳು, ಕೇಂದ್ರ ಮೀಸಲು ಪಡೆ ಪೊಲೀಸರನ್ನು ಶೋಧ ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು. ಮೃತರು ನಕ್ಸಲ್ ಸಮವಸ್ತ್ರದಲ್ಲಿದ್ದರು' ಎಂದರು.

'ಚಕಮಕಿ ನಡೆದ ಪ್ರದೇಶದಲ್ಲಿ ವಿಸ್ತೃತವಾದ ಶೋಧ ಕಾರ್ಯ ನಡೆದಿದ್ದು, ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಈ ವರ್ಷ ಹತರಾಗಿರುವ 81 ನಕ್ಸಲರಲ್ಲಿ, 65 ಮಂದಿ ಏಳು ಜಿಲ್ಲೆಗಳ ವ್ಯಾಪ್ತಿಯುಳ್ಳ ಬಸ್ತರ್ ವಲಯದಲ್ಲಿಯೇ ಮೃತಪಟ್ಟಿದ್ದಾರೆ' ಎಂದರು.

ಚಕಮಕಿಯಲ್ಲಿ ಇಬ್ಬರು ಸಿಬ್ಬಂದಿ ಸಾವಿನ ಕುರಿತು ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ವಿಷ್ಣುಸಿಂಗ್ ದೇವ್ ಅವರು, 'ಹುತಾತ್ಮ ಸಿಬ್ಬಂದಿಯ ತ್ಯಾಗ ನಿರರ್ಥಕವಾಗುವುದಿಲ್ಲ. ನಕ್ಸಲ್ ಪಿಡುಗು ಕ್ಯಾನ್ಸರ್ ಇದ್ದಂತೆ. ಅದರ ನಿರ್ಮೂಲನೆ ಖಚಿತ' ಎಂದು ಹೇಳಿದರು.

ನಕ್ಸಲರಿಗೆ ಸುರಕ್ಷಿತ ತಾಣ ಎಂದು ಭಾವಿಸಲಾಗಿದ್ದ ರಾಷ್ಟ್ರೀಯ ಉದ್ಯಾನ ವಲಯವನ್ನು ಸುಮಾರು 650 ಮಂದಿ ಭದ್ರತಾ ಸಿಬ್ಬಂದಿ ವಿವಿಧ ದಿಕ್ಕುಗಳಿಂದ ಸುತ್ತುವರಿದು, ಕಾರ್ಯಾಚರಣೆ ನಡೆಸಿದರು ಎಂದು ಗೃಹ ಸಚಿವ ವಿಜಯ್ ಶರ್ಮಾ ಅವರು ಪ್ರತಿಕ್ರಿಯಿಸಿದರು.

ಉಪ ಠಾಣೆ ಮೇಲೆ ದಾಳಿ ಶಸ್ತ್ರಾಸ್ತ್ರ ಲೂಟಿ

ಇಂಫಾಲ್ (ಪಿಟಿಐ): 'ಮಣಿಪುರದ ತೌಬಾಲ್ ಜಿಲ್ಲೆಯ ಕಾಕ್ಮಯಿಯಲ್ಲಿ, ಅಪರಿಚಿತ ಬಂದೂಕುಧಾರಿಗಳು ಇಂಡಿಯಾ ರಿಸರ್ವ್ ಬೆಟಾಲಿಯನ್ (ಐಆರ್‌ಬಿ) ಉಪಠಾಣೆ ಮೇಲೆ ದಾಳಿ ಮಾಡಿ, ಶಸ್ತ್ರಾಸ್ತ್ರ ಲೂಟಿ ಮಾಡಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಶನಿವಾರ ರಾತ್ರಿ ಕೃತ್ಯ ನಡೆದಿದೆ. ಹಲವು ವಾಹನಗಳಲ್ಲಿ ಬಂದಿದ್ದ ಬಂದೂಕುಧಾರಿಗಳು, ಉಪಠಾಣೆಯಲ್ಲಿ ಇದ್ದ ಆರು ಎಸ್‌ಎಲ್‌ಆರ್., ಮೂರು ಎ.ಕೆ ರೈಫಲ್‌ಗಳು, 277 ಗುಂಡುಗಳು, 12 ಮ್ಯಾಗಜೀನ್ ದೋಚಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಡಿಜಿಟಲ್ ಅರೆಸ್ಟ್' ಹಾವಳಿ

682 ವಂಚನೆ ಪ್ರಕರಣ: ವಂಚಕರ ಪಾಲಾದ ₹135 ಕೋಟಿ

• ಕೆ.ಎಸ್.ಸುನಿಲ್

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷ 682 ಪ್ರಕರಣಗಳಲ್ಲಿ 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಸೈಬರ್ ವಂಚಕರು, ₹135.50 ಕೋಟಿ ದೋಚಿದ್ದಾರೆ. ಬೆಂಗಳೂರು ನಗರದಲ್ಲೇ 512 ಪ್ರಕರಣಗಳು ವರದಿಯಾಗಿದ್ದು, ಜನರು ₹62 ಕೋಟಿ ಕಳೆದುಕೊಂಡಿದ್ದಾರೆ.

ಈ ಪ್ರಕರಣಗಳಲ್ಲಿ ಪೊಲೀಸರು ಆರೋಪಿಗಳಿಂದ ₹12 ಕೋಟಿ ಮಾತ್ರ ಜಪ್ತಿ ಮಾಡಿದ್ದು, 36 ಜನರನ್ನು ಬಂಧಿಸಿದ್ದಾರೆ. 'ಡಿಜಿಟಲ್ ಅರೆಸ್ಟ್' ಹೆಸರಿನ ವಂಚನೆ ತಡೆಗಟ್ಟುವುದು ಮತ್ತು ಸೈಬರ್ ಕಳ್ಳರನ್ನು ಪತ್ತೆ ಹಚ್ಚುವುದು ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

ಟ್ರಾಯ್ ಅಧಿಕಾರಿಗಳು, ಸಿಬಿಐ, ಇ.ಡಿ ಅಧಿಕಾರಿಗಳು, ಮುಂಬೈ, ದೆಹಲಿ ಕ್ರೈಂ ಬ್ರಾಂಚ್ ಪೊಲೀಸರು, ವಿವಿಧ ರಾಜ್ಯಗಳ ಪೊಲೀಸರ ಹೆಸರಿನಲ್ಲಿ ಕರೆ ಮಾಡುವ ಸೈಬರ್ ವಂಚಕರು, 'ವಿದೇಶಕ್ಕೆ ಡ್ರಗ್ಸ್ ಪಾರ್ಸೆಲ್, ಹಣ ಅಕ್ರಮ ವರ್ಗಾವಣೆ ಪ್ರಕರಣ, ಭಯೋತ್ಪಾದನಾ ಚಟುವಟಿಕೆಗಳಿಗೆ ಸಿಮ್ ಕಾರ್ಡ್ ಬಳಕೆಯಾಗಿದೆ' ಎಂದು ಬೆದರಿಸಿ, ಹಣ ಸುಲಿಗೆ ಮಾಡುತ್ತಿರುವ ಪ್ರಕರಣಗಳು ನಿತ್ಯ ವರದಿಯಾಗುತ್ತಲೇ ಇವೆ.

ಅಂಕಿ ಅಂಶ

682
2024ರಲ್ಲಿ ರಾಜ್ಯದಲ್ಲಿ ದಾಖಲಾದ 'ಡಿಜಿಟಲ್ ಅರೆಸ್ಟ್' ವಂಚನೆ ಪ್ರಕರಣ

₹135.50 ಕೋಟಿ
ವಂಚನೆಯಾದ ಮೊತ್ತ

₹12 ಕೋಟಿ
ಜಪ್ತಿ ಮಾಡಿರುವ ಮೊತ್ತ

36
ಬಂಧಿತ ಆರೋಪಿಗಳ ಸಂಖ್ಯೆ

> **ಅನುಮಾನಾಸ್ಪದ ಕರೆಗಳು ಬಂದಾಗ ಪೊಲೀಸ್ ಠಾಣೆಗೆ ಮಾಹಿತಿ ನೀಡಬಹುದು ಅಥವಾ ಸಹಾಯವಾಣಿ ಸಂಖ್ಯೆ 1930ಕ್ಕೆ ತಕ್ಷಣ ಕರೆ ಮಾಡಿ ದೂರು ದಾಖಲಿಸಬಹುದು**
> **ಬಿ.ದಯಾನಂದ**
> ಬೆಂಗಳೂರು ನಗರ ಪೊಲೀಸ್ ಕಮಿಷನರ್

5ನೇ ಪುಟ ನೋಡಿ

'ಏರೊ ಇಂಡಿಯಾ' ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆಯಲಿರುವ ಏರೊ ಇಂಡಿಯಾ ವೈಮಾನಿಕ ಪ್ರದರ್ಶನದ 15ನೇ ಆವೃತ್ತಿಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೋಮವಾರ ಚಾಲನೆ ನೀಡಲಿದ್ದಾರೆ.

ಫೆ.10ರಿಂದ 14ರವರೆಗೆ ಐದು ದಿನ ನಡೆಯಲಿರುವ ಈ ಪ್ರದರ್ಶನಕ್ಕೆ 7 ಲಕ್ಷಕ್ಕೂ ಹೆಚ್ಚು ಜನರು ಭೇಟಿ ನೀಡುವ ಅಂದಾಜು ಇದೆ. ಇದಕ್ಕಾಗಿ ಬೆಂಗಳೂರಿನ ಯಲಹಂಕದಲ್ಲಿರುವ ವಾಯು ನೆಲೆಯ ವಿಶಾಲ ಮೈದಾನ ಸಜ್ಜಾಗಿದೆ.

ಮೊದಲ 3 ದಿನ ವಿವಿಧ ದೇಶಗಳ ರಕ್ಷಣಾ ಸಚಿವರು ಮತ್ತು ಅಧಿಕಾರಿಗಳ ಸಭೆ, ಉದ್ಯಮಿಗಳ ಮಾತುಕತೆ, ವಿಚಾರ ಸಂಕಿರಣ ಮತ್ತು ವಸ್ತುಪ್ರದರ್ಶನ ನಡೆಯಲಿವೆ. ಫೆ. 13 ಮತ್ತು 14ರಂದು ಪೂರ್ಣ ಪ್ರಮಾಣದ ವೈಮಾನಿಕ ಪ್ರದರ್ಶನ ನಡೆಯಲಿದೆ.

ಇನ್ನೊಂದು ಸುದ್ದಿ 5B

ಬಿರೇನ್ ಸಿಂಗ್ ರಾಜೀನಾಮೆ

ಇಂಫಾಲ್ (ಪಿಟಿಐ): ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಭಾನುವಾರ ರಾಜೀನಾಮೆ ನೀಡಿದ್ದಾರೆ.

ಈಶಾನ್ಯ ರಾಜ್ಯಗಳ ಉಸ್ತುವಾರಿ, ಬಿಜೆಪಿ ನಾಯಕ ಸಂಬಿತ್ ಪಾತ್ರಾ ಸೇರಿದಂತೆ ಒಟ್ಟು 14 ಶಾಸಕರ ಜೊತೆಗೂಡಿ ಬಿರೇನ್ ಸಿಂಗ್ ಅವರು ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರಿಗೆ ತಮ್ಮ ರಾಜೀನಾಮೆ ಪತ್ರ ನೀಡಿದರು. ಈ ವೇಳೆ ನಾಗಾ ಪೀಪಲ್ಸ್ ಪಾರ್ಟಿ ಶಾಸಕರೂ ಜೊತೆ ಇದ್ದರು.

'ಇಲ್ಲಿಯವರೆಗೆ ಮಣಿಪುರದ ಜನರ ಸೇವೆ ಸಲ್ಲಿಸಿದ್ದೇನೆ. ಇದು ಅತೀವ ಗೌರವದ ವಿಚಾರ. ಕೇಂದ್ರ ಸರ್ಕಾರಕ್ಕೆ ನಾನು ಋಣಿಯಾಗಿದ್ದೇನೆ' ಎಂದು ಪತ್ರದಲ್ಲಿ ಬಿರೇನ್ ಸಿಂಗ್ ಹೇಳಿದ್ದಾರೆ. ಭಾನುವಾರ ಬೆಳಿಗ್ಗೆ ಬಿರೇನ್ ಸಿಂಗ್ ಅವರು ದೆಹಲಿಗೆ ತೆರಳಿ, ವರಿಷ್ಠರೊಂದಿಗೆ ಮಾತುಕತೆ ನಡೆಸಿದ್ದರು. ಅಲ್ಲಿಂದ ವಾಪಸು ಬರುತ್ತಿದ್ದಂತೆಯೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಇನ್ನೊಂದು ಸುದ್ದಿ 9

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಭಾರತದ
ತಂತ್ರಜ್ಞಾನದ ಕೇಂದ್ರಬಿಂದುವಿನಲ್ಲಿ
ಪಾರಂಪಾರಿಕೆ ಹೆಮ್ಮೆಯನ್ನು ಅನುಭವಿಸಿ.

ಶೋರೂಮ್ ಉದ್ಘಾಟನೆ

ದಿನಾಂಕ : 10.02.2025, ಸೋಮವಾರ.
ಸಮಯ : ಬೆಳಗ್ಗೆ 10.00 ಗಂಟೆಗೆ.

ಸ್ಥಳ : 8, ಮೈನಾ ಆರ್ಕೇಡ್, ಎಸ್‌ಬಿಐ ಬ್ಯಾಂಕ್ ಬಳಿ, ಕಚೊಹಳ್ಳಿ ಕ್ರಾಸ್, ಮಾಗಡಿ ಮುಖ್ಯ ರಸ್ತೆ, ಚಿಕ್ಕಗೊಲ್ಲರಹಟ್ಟಿ, ಬೆಂಗಳೂರು - 560 091.

ಶೋರೂಂನ ಉದ್ಘಾಟನೆ
ಶ್ರೀ ಶ್ರೀ ಶ್ರೀ ವಿದ್ಯಾವಾಚಸ್ಪತಿ
ಡಾ||ವಿಶ್ವ ಸಂತೋಷ ಭಾರತಿ ಶ್ರೀಪಾದರು
ಪೀಠಾಧ್ಯಕ್ಷರು ಶ್ರೀ ಬಾರ್ಕೂರು ಮಹಾಸಂಸ್ಥಾನ

ದೀಪ ಬೆಳಗುವವರು: ಕುಮಾರಿ. ವಾಣಿಗೌಡ, ಕಾಮಿಡಿ ಕಿಲಾಡಿ ನಟಿ
ಮೊದಲ ಮಾರಾಟ: ಶ್ರೀ.ಮಿಮಿಕ್ರಿ ಗೋಪಿ., ಕನ್ನಡ ಚಲನಚಿತ್ರ ನಟ.

ನಿಮ್ಮ ಆಗಮನ... ನಮ್ಮ ಹೆಮ್ಮೆ ರಾಮ್‌ರಾಜ್ ಗ್ರೂಪ್

RAMRAJ ಕಾಟನ್
ಭಾರತೀಯ ಸಂಸ್ಕೃತಿ

SCAN QR CODE FOR STORE LOCATION

8, ಮೈನಾ ಆರ್ಕೇಡ್, ಎಸ್‌ಬಿಐ ಬ್ಯಾಂಕ್ ಬಳಿ, ಕಚೊಹಳ್ಳಿ ಕ್ರಾಸ್, ಮಾಗಡಿ ಮುಖ್ಯ ರಸ್ತೆ, ಚಿಕ್ಕಗೊಲ್ಲರಹಟ್ಟಿ, ಬೆಂಗಳೂರು - 560 091. CELL : 63825 27147.

BENGALURU : KG ROAD • SHIVAJI NAGAR • ULSOOR • GANDHI BAZAR • MALLESHWARAM • JAYANAGAR : 30TH CROSS ROAD SS PLAZA, 10TH B MAIN ROAD • KORAMANGALA • RAJAJI NAGAR • R.T. NAGAR • VIJAYANAGAR • BANASHANKARI YESHWANTHPUR • YELACHENAHALLI • UTTARAHALLI • HSR LAYOUT • RAMAMURTHY NAGAR • J.P. NAGAR • RR NAGAR MARATHAHALLI • KR PURAM • KENGERI • HESARAGATTA • YELHANKA • NELAMANGALA • DEVANAHALLI • CHINTAMANI KANAKAPURA • RAMNAGARA • TUMKUR • CHANDAPURA • CHAMBENAHALLI • ATTIBELE

ಯೂನಿವರ್ಸಲ್ ಸಂಸ್ಥೆಯೊಂದಿಗೆ
ನಿಮ್ಮ ಯಶಸ್ಸಿನ ಪಯಣ ಆರಂಭಿಸಿ

UNIVERSAL GROUP OF INSTITUTIONS @ BENGALURU

24 Years of EXCELLENCE | Produced 8025+ OFFICERS

ಪದವಿ ಜೊತೆಗೆ ಇಂಟಿಗ್ರೇಟೆಡ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

UNIVERSAL PRE-UNIVERSITY COLLEGE
COMMERCE, ARTS
with CLAT, IAS (CSAT), CUET Coaching

UNIVERSAL SCHOOL OF ADMINISTRATION
BSc (Environmental Science)
BA / B.Com
with IAS | IPS | KAS Coaching
M.A. in Political Science

KAS MAINS
Offline Test Series Papers 1, 2, 3, 4, & Essay
No. of Tests - 22
Original Price: ~~₹8999~~
Discounted Price: ₹5999
Early Bird Offer till February 17th, 2025

LIBRARY WITH HOSTEL FACILITY AVAILABLE FOR UPSC ASPIRANTS

DEGREE PROGRAMS WITH INTEGRATED TRAINING FOR IAS, IPS, KAS, AND OTHER COMPETITIVE EXAMS

SCAN FOR CAMPUS TOUR

Shri. R. Upendra Shetty
Founder Chairman

Contact our Vijayanagar Branch for IAS/IPS/KAS Coaching classes
Address: 2922/20, next to Canara Bank, near Attiguppe bus stop, RPC Layout, Vijayanagar, Bengaluru - 560040.
Join our Youtube Channel @ugibengaluru

For college admission enquiry call:
◦ 9686664985
◦ 6366816611
◦ 9686664983

ugibengaluru | ugibengaluru | ugibengaluru | ugibengaluru | ugibengaluru | universalinstitutions | UPSC IAS Current Affairs

ಮೆಟ್ರೊ: ಪ್ರಯಾಣ ದರ ಹೆಚ್ಚಳಕ್ಕೆ ಜನಾಕ್ರೋಶ

ಪ್ರಜಾವಾಣಿ ವಾರ್ತೆ

ನಮ್ಮ ಮೆಟ್ರೊ ಮೆಜೆಸ್ಟಿಕ್ ನಿಲ್ದಾಣದಲ್ಲಿ ಜನಸಂದಣಿ (ಸಾಂದರ್ಭಿಕ ಚಿತ್ರ)

ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣ ದರವನ್ನು ವಿಪರೀತ ಹೆಚ್ಚಳ ಮಾಡಿ ಪ್ರಯಾಣಿಕರನ್ನು ದೋಚುತ್ತಿದೆ ಎಂದು ಮೆಟ್ರೊ ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಬೆಲೆ ಏರಿಕೆ ಮಾಡಲೇ ಬೇಕಿದ್ದರೆ ಶೇಕಡ 10ರಷ್ಟು ಮಾಡಲಿ. ಅದು ಬಿಟ್ಟು ಮನಸ್ಸಿಗೆ ಬಂದಷ್ಟು ಮಾಡಿದ್ದಾರೆ. ಶೇ 47 ಎಂದು ಮೆಟ್ರೊದವರು ಹೇಳಿಕೊಂಡಿದ್ದರೂ ಶೇ 100ರಷ್ಟು ಹೆಚ್ಚಳವಾಗಿದೆ. ನನಗೆ ಚಲ್ಲಘಟ್ಟದಿಂದ ವಿಜಯನಗರಕ್ಕೆ ನಿನ್ನೆಯವರೆಗೆ ₹ 30 ವೆಚ್ಚವಾಗುತ್ತಿತ್ತು. ಈಗ ₹ 60 ಆಗಿದೆ. ಬಿಎಂಆರ್‌ಸಿಎಲ್ ಸುಳ್ಳು ಅಂಕಿ ಅಂಶ ನೀಡಿ ನಮ್ಮನ್ನು ಯಾಮಾರಿಸಿದೆ' ಎಂದು ಪ್ರಯಾಣಿಕ ವಿಜಯ್ ಆರೋಪಿಸಿದ್ದಾರೆ.

'ಕೆಂಗೇರಿಯಿಂದ ವೈಟ್‌ಫೀಲ್ಡ್‌ಗೆ ಪ್ರಯಾಣಿಸಲು ಸ್ಮಾರ್ಟ್‌ಕಾರ್ಡ್‌ನಲ್ಲಿ ₹ 57 ಕಡಿತವಾಗುತ್ತಿತ್ತು. ಇನ್ನು ಮುಂದೆ ₹ 90 ಕೊಡಬೇಕಂತೆ. ದಿನಕ್ಕೆ ₹ 180 ಎತ್ತಿಡಬೇಕು. ಬೆಲೆ ಏರಿಕೆಗೂ ಸರ್ಕಾರಕ್ಕೂ ಸಂಬಂಧವಿಲ್ಲ, ದರ ನಿಗದಿ ಸಮಿತಿಯ ನಿರ್ಧಾರ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಹಾಗಾದರೆ ಸಮಿತಿಯನ್ನು ರಚಿಸಿದ್ದು ಯಾರು' ಎಂದು ಸಂತೋಷ್ ಕುಮಾರ್ ಎಲ್.ಎಂ. ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನಿಸಿದ್ದಾರೆ.

'ಸಾರ್ವಜನಿಕ ಸಾರಿಗೆಯನ್ನು ಬಳಸಿ ಎಂದು ಮೈಕ್ ಸಿಕ್ಕಿದಾಗಲೆಲ್ಲ ರಾಜಕಾರಣಿಗಳು, ಅಧಿಕಾರಿಗಳು ಹೇಳುತ್ತಾರೆ. ಹಾಗೆ ಹೇಳುವವರಂತೂ ಬಳಸುತ್ತಿಲ್ಲ. ಬಸ್‌ಗಳಲ್ಲಿ ಓಡಾಡೋಣ ಎಂದರೆ ಇಲ್ಲಿನ ವಾಹನ ದಟ್ಟಣೆಯಲ್ಲಿ ಪ್ರಯಾಣದಲ್ಲಿಯೇ ಸಮಯ ಕಳೆದು ಹೋಗುತ್ತದೆ. ನಿಂತುಕೊಳ್ಳಲು ಜಾಗ ಇಲ್ಲದಿದ್ದರೂ ಮೆಟ್ರೊದಲ್ಲಿ ಸಂಚಾರ ಮಾಡುತ್ತಿದ್ದೆವು. ಇದೀಗ ದುಪ್ಪಟ್ಟು ದರ ಮಾಡಿದ್ದಾರೆ. ತಿಂಗಳಿಗೆ ₹ 2000 ಮೆಟ್ರೊ ಪ್ರಯಾಣ ವೆಚ್ಚಕ್ಕಾಗಿ ಇಡುತ್ತಿದ್ದೆ. ಇನ್ನುಮುಂದೆ ₹ 4000 ಬೇಕಾಗುತ್ತದೆ. ಹೆಚ್ಚುವರಿ ₹ 2000 ಎಲ್ಲಿಂದ ತರುವುದು' ಎಂದು ಎಲೆಕ್ಟ್ರಾನಿಕ್ ಸಿಟಿಯಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿರುವ ಸೃಜನ್ ಪಿ. ಪ್ರಶ್ನಿಸಿದರು.

'ಹೊಸಹಳ್ಳಿಯಿಂದ ಕಬ್ಬನ್ ಪಾರ್ಕ್‌ಗೆ ₹ 20 ಇದ್ದಿದ್ದು ₹ 40 (ಶೇ 100 ಹೆಚ್ಚಳ) ಆಗಿದೆ' ಎಂದು ಮನೋಜ್, 'ಯಶವಂತಪುರದಿಂದ ಸೆಂಟ್ರಲ್ ಕಾಲೇಜಿಗೆ ₹23.50 ಇದ್ದಿದ್ದು ₹40 (ಶೇ 70) ಏರಿಕೆಯಾಗಿದೆ' ಎಂದು ಕಾರ್ತಿಕ್ ತಿಳಿಸಿದ್ದು, 'ಇದಕ್ಕಿಂತ ಬೈಕ್‌ನಲ್ಲೇ ಓಡಾಡುವುದರಿಂದ ವೆಚ್ಚ ಕಡಿಮೆಯಾಗಲಿದೆ' ಎಂದು ತಿಳಿಸಿದರು.

'₹100 ಪೆಟ್ರೋಲ್ ಹಾಕಿದರೆ ನನ್ನ ಬೈಕ್‌ನಲ್ಲಿ 70 ಕಿ.ಮೀ. ಹೋಗಬಹುದು. ಮೆಟ್ರೊದಲ್ಲಿ ಹೋಗುವುದಕ್ಕಿಂತ ಇದೇ ಉತ್ತಮ' ಎಂದು ಆದಿತ್ಯ ಹೇಳಿದರು.

'ಪ್ರಯಾಣಿಕರಿಲ್ಲದೇ ನಷ್ಟವಾಗುತ್ತಿದ್ದರೆ ಬೇರೆ ಸಂಗತಿ. ದಟ್ಟಣೆ ಅವಧಿಯಲ್ಲಿ ನಿಲ್ಲಲೂ ಜಾಗವಿಲ್ಲದಷ್ಟು ಜನರು ಪ್ರಯಾಣಿಸುತ್ತಿರುತ್ತಾರೆ. ಬೇರೆ ಸಮಯದಲ್ಲಿಯೂ ಪ್ರಯಾಣಿಕರ ಕೊರತೆ ಇರುವುದಿಲ್ಲ. ಮತ್ತೆ ಹೇಗೆ ನಷ್ಟವಾಗುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಬಿಎಂಆರ್‌ಸಿಎಲ್ ನಮ್ಮ ಜೇಬಿಗೆ ಕತ್ತರಿ ಹಾಕಿದೆ' ಎಂದು ಪ್ರಯಾಣಿಕ ಯೋಗೀಶ್ ಅಸಮಾಧಾನ ವ್ಯಕ್ತಪಡಿಸಿದರು.

ಬಡವರ ಮೇಲೆ ಬರೆ: ಆರ್. ಅಶೋಕ ಟೀಕೆ

ಮೆಟ್ರೊ ಪ್ರಯಾಣ ದರವನ್ನು ಏಕಾಏಕಿ ಶೇ 50ರಷ್ಟು ಏರಿಕೆ ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರ ಜನಸಾಮಾನ್ಯರ ಗಾಯದ ಮೇಲೆ ಮತ್ತೊಂದು ಬರೆ ಎಳೆದಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಪೆಟ್ರೋಲ್, ಡೀಸೆಲ್, ಹಾಲು, ಬಸ್ಸಿನ ಪ್ರಯಾಣ ದರ ಏರಿಕೆಯಿಂದ ಜನರು ಕಂಗೆಟ್ಟಿರುವಾಗಲೇ ಮೆಟ್ರೊ ಪ್ರಯಾಣ ದರ ಏರಿಕೆ ಆಘಾತವುಂಟು ಮಾಡಿದೆ ಎಂದು ಅವರು 'ಎಕ್ಸ್' ನಲ್ಲಿ ಹೇಳಿದ್ದಾರೆ.

ದರ ಏರಿಕೆಯಿಂದ ಜನಸಾಮಾನ್ಯರಿಗೆ ಮೆಟ್ರೊ ಸಂಚಾರ ಕೈಗೆಟುಕದ ಸ್ಥಿತಿ ಎದುರಾಗಿದೆ. ಮೆಟ್ರೊ ಪ್ರಯಾಣಕ್ಕಿಂತ ಸ್ವಂತ ಸ್ಕೂಟರ್, ಬೈಕಿನ ಪ್ರಯಾಣವೇ ಜೇಬಿಗೆ ಹಿತ ಎನ್ನುವಂತಾಗಿದೆ. ಸಾರ್ವಜನಿಕ ಸಾರಿಗೆ ಪ್ರೋತ್ಸಾಹಿಸಿ, ಬೆಂಗಳೂರಿನ ಸಂಚಾರ ಸಮಸ್ಯೆ, ಪರಿಸರ ಮಾಲಿನ್ಯಕ್ಕೆ ಪರಿಹಾರ ಕಂಡುಕೊಳ್ಳಬೇಕಾದ ಸರ್ಕಾರ, ಜನರನ್ನು ಮೆಟ್ರೊದಿಂದ ವಿಮುಖರಾಗುವಂತೆ ಮಾಡುತ್ತಿದೆ. ಆದ್ದರಿಂದ ಮೆಟ್ರೊ ದರ ಏರಿಕೆಯ ನಿರ್ಧಾರ ಹಿಂಪಡೆಯಬೇಕು ಎಂದು ಅವರು ಆಗ್ರಹಿಸಿದ್ದಾರೆ.

'ಪ್ರಯಾಣದರ ಮಾತ್ರ ಪಡೆಯಲಿ'

ಸಾರ್ವಜನಿಕ ಸಾರಿಗೆಗಳು ಪ್ರಯಾಣಿಕರಿಂದ ಪ್ರಯಾಣ ಶುಲ್ಕವನ್ನಷ್ಟೇ ಪಡೆಯಬೇಕು. ಸಂಸ್ಥೆಯ ಬಂಡವಾಳ ಹೆಚ್ಚು ಮಾಡಿಕೊಳ್ಳಲು ಪ್ರಯಾಣಿಕರ ಮೇಲೆ ದರ ಏರಿಕೆಯ ಹೊರೆ ಹೇರಬಾರದು. ಆದರೆ, 'ನಮ್ಮ ಮೆಟ್ರೊ' ಸುಲಿಗೆ ಮಾಡಲು ಹೊರಟಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ ತಿಳಿಸಿದ್ದಾರೆ.

ವಾಣಿಜ್ಯ ಸಾರಿಗೆಗಿಂತ ಸಾರ್ವಜನಿಕ ಸಾರಿಗೆಯ ದರ ಯಾವಾಗಲೂ ಕಡಿಮೆ ಇರಬೇಕು. ಮೆಟ್ರೊ ವಿಸ್ತರಣೆಗೆ, ಮುಂದಿನ ಕಾರ್ಯಯೋಜನೆಗೆ ಹಣ ಹೊಂದಿಸಿಕೊಡುವುದು ಪ್ರಯಾಣಿಕರ ಜವಾಬ್ದಾರಿಯಲ್ಲ. ಅದನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದಿಂದ ಪಡೆಯಬೇಕು. ಇಲ್ಲವೇ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಪಡೆದುಕೊಳ್ಳಬೇಕು. ಪ್ರಯಾಣಿಕರು ತಾವು ಪ್ರಯಾಣಿಸಿದ ದೂರಕ್ಕೆ ಅನುಗುಣವಾಗಿ ಸೇವಾಶುಲ್ಕ ಮಾತ್ರ ಭರಿಸುವಂಥದ್ದು. ನಮ್ಮ ಮೆಟ್ರೊ ದುಬಾರಿ ದರ ಜಾರಿಗೆ ತಂದಿರುವುದು ಸಮರ್ಥನೀಯವೂ ಅಲ್ಲ, ಒಪ್ಪಿತವೂ ಅಲ್ಲ ಎಂದು ಹೇಳಿದ್ದಾರೆ.

ದೇಶದ ರಾಜಧಾನಿಯಾದ ದೆಹಲಿಯಲ್ಲಿಯೇ ಇಷ್ಟೊಂದು ದರ ಇಲ್ಲ. ಅಲ್ಲದೇ ಅಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ಕಲ್ಪಿಸುವ ಯೋಜನೆ ಜಾರಿಗೆ ತರುವ ಪ್ರಯತ್ನ ನಡೆಯುತ್ತಿದೆ. ಬೆಂಗಳೂರಿನಲ್ಲಿ ದರ ಹೆಚ್ಚಿಸಿರುವುದು ಜನರು ಈಗ ಖಾಸಗಿ ವಾಹನಗಳಿಗೆ ಮರಳುವಂತೆ ಮಾಡಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಭ್ರಷ್ಟಾಚಾರಿಗಳಿಗೆ ಶಿಕ್ಷೆ ವಿಳಂಬ ಸಂತೋಷ್ ಹೆಗ್ಡೆ ಬೇಸರ

ಕೆ.ಆರ್.ಪುರ: 'ಸಮಾಜದಲ್ಲಿ ದುರಾಸೆ ಕಡಿಮೆಯಾಗಿಲ್ಲ. ದುರಾಸೆಯಿಂದಾಗಿ ಭ್ರಷ್ಟಾಚಾರ ಮಾಡಿ ಜೈಲಿಗೆ ಹೋಗುವವರ ಸಂಖ್ಯೆ ಹೆಚ್ಚಿದೆ. ಆದರೆ ಅವರಿಗೆ ಶೀಘ್ರ ಶಿಕ್ಷೆಯಾಗುವುದಿಲ್ಲ' ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ಕೆ.ಆರ್. ಪುರ ಸಮೀಪದ ಮಹದೇವಪುರದಲ್ಲಿ ಕ್ಯಾಪಿಟಲ್ ಪಬ್ಲಿಕ್ ಶಾಲೆ ವತಿಯಿಂದ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಭ್ರಷ್ಟಾಚಾರ ಮಾಡಿ ಜೈಲು ಸೇರಿದರೂ, ಅಂಥವರಿಗೆ ಹದಿನೈದು ವರ್ಷವಾದರೂ ಶಿಕ್ಷೆ ಆಗುವುದಿಲ್ಲ, ಇದು ಬೇಸರದ ಸಂಗತಿ. ಬಾಲ್ಯದಿಂದಲೇ ಮಕ್ಕಳಿಗೆ ನೀತಿಪಾಠ ಹೇಳಿಕೊಡಬೇಕು' ಎಂದು ಸಲಹೆ ನೀಡಿದರು.

ಶಾಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಆರ್.ಕೆ.ರಮೇಶ್, ವ್ಯವಸ್ಥಾಪಕ ನಿರ್ದೇಶಕಿ ಸುಷ್ಮಾರಮೇಶ್, ಪ್ರಾಂಶುಪಾಲರು ಇದ್ದರು.

ನೌಕರರ ಗೃಹನಿರ್ಮಾಣ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ರಾಜರಾಜೇಶ್ವರಿನಗರ: ಬೆಂಗಳೂರು ವಿಶ್ವವಿದ್ಯಾಲಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2025-30ರ ಅವಧಿಗೆ ನಡೆದ ಕಾರ್ಯಕಾರಿ ಮಂಡಳಿಯ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಚ್. ಕೃಷ್ಣಪ್ಪ, ಉಪಾಧ್ಯಕ್ಷರಾಗಿ ಎಸ್.ಜಯದೇವಯ್ಯ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ಎಚ್.ಎಸ್.ಯೋಗೇಶ್, ಮಹಾಲಿಂಗಯ್ಯ. ಆರ್, ರಂಗದಾಮ, ನಂದೀಶ.ಎಂ.ಎಸ್, ಈಶ್ವರ.ಎಸ್, ಸುನಂದ. ಎನ್, ಸೌಭಾಗ್ಯ, ಮುತ್ತುರಾಯಪ್ಪ, ಗೋವಿಂದರಾಜು.ಕೆ.ಆರ್, ಮುರಳಿ ಎಸ್, ಶಿವಣ್ಣ.ಎಂ.ಎನ್ ಆಯ್ಕೆಯಾಗಿದ್ದಾರೆ.

ರಾಷ್ಟ್ರ ರಾಜಧಾನಿ ಪ್ರದೇಶ ಯೋಜನಾ ಮಂಡಳಿ

(ಭಾರತ ಸರಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಅಂಗಸಂಸ್ಥೆ)
1ನೇ ಮಹಡಿ, ಕೋರ್–4ಬಿ, ಇಂಡಿಯಾ ಹ್ಯಾಬಿಟ್ಯಾಟ್ ಸೆಂಟರ್, ಲೋಧಿ ರಸ್ತೆ, ನವದೆಹಲಿ–110003

ಕಡತ ಸಂ. 9188951

ರಾಷ್ಟ್ರ ರಾಜಧಾನಿ ಪ್ರದೇಶ ಯೋಜನಾ ಮಂಡಳಿಯಲ್ಲಿನ ಕೆಳಕಂಡ ಹುದ್ದೆಗಳಿಗೆ, ಕೆಳಗಿನ ವಿವರಗಳ ಪ್ರಕಾರ ಆಸಕ್ತಿಯುಳ್ಳ ಮತ್ತು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:–

ಹುದ್ದೆಯ ಹೆಸರು	ನೇಮಕಾತಿ ವಿಧಾನ	ವೇತನ ಶ್ರೇಣಿ
ಸ್ಟೆನೋಗ್ರಾಫರ್ ಗ್ರೇಡ್ ಸಿ	ನೇರ ನೇಮಕಾತಿ ಮೂಲಕ	ಹಂತ–7 (ರೂ.44,900–1,42,400) ವೇತನ ಶ್ರೇಡಿಯಲ್ಲಿ
ಸ್ಟೆನೋಗ್ರಾಫರ್ ಗ್ರೇಡ್ ಡಿ	ನೇರ ನೇಮಕಾತಿ ಮೂಲಕ	ಹಂತ–4 (ರೂ.25,500–81,100) ವೇತನ ಶ್ರೇಡಿಯಲ್ಲಿ
ಮಲ್ಟಿ ಟಾಸ್ಕಿಂಗ್ ಸ್ಟಾಫ್ (ಎಂಟಿಎಸ್)	ನೇರ ನೇಮಕಾತಿ ಮೂಲಕ	ಹಂತ–1 (ರೂ.18,000–56,900) ವೇತನ ಶ್ರೇಡಿಯಲ್ಲಿ

ನಿರ್ದಿಷ್ಟ ನಮೂನೆಯ ಅರ್ಜಿ ನಮೂನೆಯನ್ನು, ಎಲ್ಲಾ ರೀತಿಯಲ್ಲಿ ಸಂಪೂರ್ಣವಾಗಿ ಭರ್ತಿ ಮಾಡಿ ಮತ್ತು ಅಭ್ಯರ್ಥಿಯು ಅದಕ್ಕೆ ತನ್ನ ಸಹಿ ಹಾಕಿ, ಅದರೊಂದಿಗೆ ಸ್ವಯಂದೃಢೀಕೃತ ಪ್ರಮಾಣಪತ್ರಗಳ ಪ್ರತಿಗಳನ್ನು ಲಗತ್ತಿಸಿ, ಜೊತೆಗೆ ಎನ್‌ಸಿಆರ್ ಪ್ಲಾನಿಂಗ್ ಬೋರ್ಡ್ ಇವರ ಹೆಸರಿನಲ್ಲಿ ಮತ್ತು ನವದೆಹಲಿಯಲ್ಲಿ ಪಾವತಿಯಾಗುವಂತೆ ಪಡೆದಿರುವ ರೂ.100 ಮೌಲ್ಯದ ಐಪಿಒ/ಡಿಮಾಂಡ್ ಡ್ರಾಫ್ಟ್ (ಹಿಂದಿರುಗಿಸಲಾಗದ ಶುಲ್ಕ) ಅಡಕಗೊಳಿಸಿ, ಸದಸ್ಯ ಕಾರ್ಯದರ್ಶಿ, ಎನ್‌ಸಿಆರ್ ಪ್ಲಾನಿಂಗ್ ಬೋರ್ಡ್, 1ನೇ ಮಹಡಿ, ಕೋರ್–4ಬಿ, ಇಂಡಿಯಾ ಹ್ಯಾಬಿಟ್ಯಾಟ್ ಸೆಂಟರ್, ಲೋಧಿ ರಸ್ತೆ, ನವದೆಹಲಿ–110003 ವಿಳಾಸಕ್ಕೆ ತಲುಪುವಂತೆ ರವಾನಿಸತಕ್ಕದ್ದು. ಅರ್ಜಿ ಶುಲ್ಕವನ್ನು ಆನ್‌ಲೈನ್ ವಿಧಾನದಲ್ಲಿ ಕೂಡ ಪಾವತಿಸಬಹುದು.

ಹುದ್ದೆಗಳ ಸಂಖ್ಯೆ, ಅರ್ಹತಾ ಮಾನದಂಡ, ಶೈಕ್ಷಣಿಕ ವಿದ್ಯಾರ್ಹತೆಗಳು, ಮೀಸಲಾತಿ, ಪ್ರಾಯ, ಅರ್ಜಿ ನಮೂನೆ, ಆನ್‌ಲೈನ್ ಶುಲ್ಕ ಪಾವತಿ ಕುರಿತಾದ ವಿವರಗಳು ಮತ್ತು ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ ಇತ್ಯಾದಿ ವಿವರಗಳು ನಮ್ಮ https://ncrpb.nic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಮಂಡಳಿಯು ಯಾವುದೇ ಕಾರಣ ನೀಡದೆಯೆ ಮೇಲ್ಕಂಡ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳದಿರುವ ಹಕ್ಕು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
(ಸದಸ್ಯ ಕಾರ್ಯದರ್ಶಿ)

CBC 44103/12/0010/2425

ಹಳದಿ ಮಾರ್ಗಕ್ಕೆ ಬಂತು 2ನೇ ರೈಲು

ಪ್ರಜಾವಾಣಿ ವಾರ್ತೆ

'ನಮ್ಮ ಮೆಟ್ರೊ'ಹಳದಿ ಮಾರ್ಗದ ಸಂಚಾರಕ್ಕಾಗಿ ಹೆಬ್ಬಗೋಡಿ ಡಿಪೊಗೆ ಭಾನುವಾರ ಒಂದು ಸೆಟ್ ಬೋಗಿಗಳನ್ನು ತರಲಾಯಿತು

ಬೆಂಗಳೂರು: 'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿನ ಸಂಚಾರಕ್ಕಾಗಿ ಕೋಲ್ಕತ್ತದ ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಖಾನೆಯಿಂದ ತರಲಾದ ಚಾಲಕರಹಿತ ಮೆಟ್ರೊ ರೈಲಿನ ಒಂದು ಸೆಟ್ ಬೋಗಿಗಳು ಹೆಬ್ಬಗೋಡಿ ಡಿಪೊಗೆ ಭಾನುವಾರ ತಲುಪಿವೆ.

ಮೆಟ್ರೊ ಹಳದಿ ಮಾರ್ಗದ ಆರ್.ವಿ. ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರವರೆಗಿನ ನೂತನ ಮಾರ್ಗದಲ್ಲಿ ಚಾಲಕರಹಿತ ಮೆಟ್ರೊ ರೈಲು ಸಂಚರಿಸಲಿದೆ. ಹಳದಿ ಮಾರ್ಗಕ್ಕೆ ಮೊದಲ ರೈಲು ಚೀನಾದಿಂದ ಬಂದಿತ್ತು. ಇದೀಗ ಎರಡನೇ ರೈಲು ಟಿಆರ್‌ಎಸ್‌ಎಲ್‌ನಿಂದ ಬಂದಿದೆ.

ಹಳದಿ ಮಾರ್ಗದಲ್ಲಿ ಕೊನೇ ಹಂತದ ಸಿಗ್ನಲಿಂಗ್ ಪರೀಕ್ಷೆಗಳನ್ನು ನಡೆಸಲಾಗುವುದು. ಮಾರ್ಚ್ ಮೊದಲ ವಾರದಲ್ಲಿ ಇತರ ಪರೀಕ್ಷೆಗಳು ನಡೆಯಲಿವೆ. ಮೂರನೇ ರೈಲು ಮಾರ್ಚ್ ಅಂತ್ಯದ ಒಳಗೆ ಬರಲಿದ್ದು, ಆ ಬಳಿಕ ಸಂಚಾರ ಶುರುವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹಳದಿ ಮಾರ್ಗವು ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೊಸಿಸ್ ಫೌಂಡೇಷನ್ (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸ ರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್.ವಿ. ರಸ್ತೆ ನಿಲ್ದಾಣಗಳನ್ನು ಹೊಂದಿದೆ.

'20ಕ್ಕೆ ಸಿ.ಎಂ ಮನೆ ಚಲೊ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ನಿಗದಿ, ಉದ್ಯೋಗದಲ್ಲಿರುವವರನ್ನು ಕಾಯಂಗೊಳಿಸುವುದು ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಫೆ.20ರಂದು 'ಮುಖ್ಯಮಂತ್ರಿ ಮನೆಗೆ ಚಲೊ' ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಗೋಪಾಲಕೃಷ್ಣ ಹರಳಹಳ್ಳಿ ತಿಳಿಸಿದರು.

ಮಹದೇವಪುರ ಕ್ಷೇತ್ರದ ಬಿದರಹಳ್ಳಿಯ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ನೌಕರರ ಸಂಘ ಮತ್ತು ಸಿಐಟಿಯು ವತಿಯಿಂದ ಹಮ್ಮಿಕೊಂಡಿದ್ದ ಗ್ರಾಮ ಪಂಚಾಯಿತಿ ನೌಕರರ ಸರ್ವ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮ ಪಂಚಾಯಿತಿ ನೌಕರರು ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುತ್ತಿದ್ದಾರೆ. ನೀರು, ವಿದ್ಯುತ್ ದೀಪ ನಿರ್ವಹಣೆ, ಕಸ ವಿಲೇವಾರಿ, ಶೌಚಾಲಯ ಸ್ವಚ್ಛತೆ, ಕಂಪ್ಯೂಟರ್ ಆಪರೇಟರ್ ಹಾಗೂ ತೆರಿಗೆ ಸಂಗ್ರಹ ಸೇರಿ ವಿವಿಧ ವಿಭಾಗಗಳಲ್ಲಿ ದುಡಿಯುತ್ತಿರುವ 61 ಸಾವಿರ ನೌಕರರನ್ನು ಸರ್ಕಾರ ಕಾಯಂಗೊಳಿಸಿಲ್ಲ, ಅವರಿಗೆ ಉದ್ಯೋಗ ಭದ್ರತೆಯೂ ಇಲ್ಲ' ಎಂದರು.

ಪೂರ್ವ ತಾಲ್ಲೂಕು ಅಧ್ಯಕ್ಷ ಎಂ.ಶ್ರೀನಿವಾಸ್ ಮಾತನಾಡಿದರು.

ಎಲ್.ಎಸ್. ಶೇಷಗಿರಿ ರಾವ್ ಬಗ್ಗೆ ಎಚ್.ಎಸ್. ರಾಘವೇಂದ್ರ ರಾವ್ ಮೆಚ್ಚುಗೆ

'ಮಾರ್ಗದರ್ಶಕ ಮಾರ್ಗದಲ್ಲಿ ವಿಮರ್ಶೆ'

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಎಸ್‌ಆರ್‌ವಿಜಯಶಂಕರ ಅವರಿಗೆ 'ಪ್ರೊ.ಎಲ್‌ಎಸ್ ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ' ಹಾಗೂಬಾಬು ಕೃಷ್ಣಮೂರ್ತಿ ಅವರಿಗೆ 'ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಬೈರಮಂಗಲ ರಾಮೇಗೌಡ, ಟಿ.ಎನ್ ವಾಸುದೇವಮೂರ್ತಿ, ಪಿ.ವಿ. ನಾರಾಯಣ, ಪ್ರೊ.ಜಿ. ಅಶ್ವತ್ಥನಾರಾಯಣ, ಪರಿಷತ್ತಿನ ಗೌರವ ಕಾರ್ಯದರ್ಶಿ ಶಾಂತರಾಜು ಹಾಗೂ ಎಚ್.ಎಸ್ ರಾಘವೇಂದ್ರ ರಾವ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ವಿಮರ್ಶಕರಾದವರು ಪಂಡಿತ ಅಥವಾ ಮಾರ್ಗದರ್ಶಕ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ, ಪ್ರೊ.ಎಲ್.ಎಸ್. ಶೇಷಗಿರಿ ರಾವ್ ಅವರು ಈ ಎರಡೂ ಮಾರ್ಗಗಳ ಮೂಲಕ ವಿಮರ್ಶಾ ಪ್ರಕಾರಕ್ಕೆ ಕೊಡುಗೆ ನೀಡಿದರು' ಎಂದು ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಅಭಿಮತ ವ್ಯಕ್ತಪಡಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರೊ.ಎಲ್.ಎಸ್. ಶೇಷಗಿರಿರಾವ್ ಶತಮಾನೋತ್ಸವ ಸಮಾರಂಭ ಹಾಗೂ ಎಲ್.ಎಸ್.ಎಸ್. ಸಾಹಿತ್ಯ ಕುರಿತ ವಿಚಾರಸಂಕಿರಣ ಉದ್ಘಾಟಿಸಿ, ಮಾತನಾಡಿದರು.

'ಶೇಷಗಿರಿ ರಾವ್ ಅವರು ಅಕಾಡೆಮಿಕ್ ಬರವಣಿಗೆಯ ಲಕ್ಷಣ, ಒಳನೋಟವನ್ನು ಕಾಪಾಡಿಕೊಂಡೇ ಜನರಿಗೆ ಮಾರ್ಗದರ್ಶನ ಮಾಡುವ ರೀತಿಯಲ್ಲಿ ವಿಮರ್ಶೆ ಮಾಡಿದರು. ಈ ಮೂಲಕ ಅವರು ವಿಮರ್ಶೆಗೆ ಒಂದು ಮಾದರಿಯನ್ನು ರೂಪಿಸಿದರು. ಪರಿಚಯ, ಅನುವಾದ, ಅಧ್ಯಾಪನ ಹಾಗೂ ಜೋಡಿಸುವಿಕೆ ಈ ನಾಲ್ಕು ಕ್ಷೇತ್ರಗಳಲ್ಲಿ ಅವರು ಕೆಲಸ ಮಾಡಿದ್ದಾರೆ.ಅವರ ಸಾಹಿತ್ಯ ಎಲ್ಲರಿಗೂ ತಲುಪುವಂತಾಗಬೇಕು' ಎಂದು ಹೇಳಿದರು.

ಪ್ರತಿಷ್ಠಾನದ ನಿಕಟಪೂರ್ವ ಅಧ್ಯಕ್ಷರೂ ಆಗಿರುವ ಸಾಹಿತಿ ಆರ್. ಲಕ್ಷ್ಮೀನಾರಾಯಣ, 'ಶೇಷಗಿರಿರಾವ್ ಅವರು ಸಜ್ಜನಿಕೆ ಮತ್ತು ಸೌಜನ್ಯದ ಮೂರ್ತರೂಪವಾಗಿದ್ದರು. ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಅವರು, ಕನ್ನಡ ಬೆಳೆಸುವ ನಿಟ್ಟಿನಲ್ಲಿ ಮಾಡಿರುವ ಕಾರ್ಯಗಳು ಶ್ಲಾಘನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಳಿಕ ನಡೆದ ವಿಚಾರಗೋಷ್ಠಿಯಲ್ಲಿ 'ಕನ್ನಡ ವಿಮರ್ಶೆಗೆ ಪ್ರೊ.ಎಲ್.ಎಸ್.ಎಸ್. ಕೊಡುಗೆ' ವಿಷಯದ ಬಗ್ಗೆ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಟಿ.ಎನ್. ವಾಸುದೇವಮೂರ್ತಿ, 'ಗ್ರೀಕ್ ರಂಗಭೂಮಿ ಮತ್ತು ಇಂಗ್ಲಿಷ್ ಸಾಹಿತ್ಯ ಚರಿತ್ರೆ ಕುರಿತು ಪ್ರೊ.ಎಲ್.ಎಸ್.ಎಸ್. ಚಿಂತನೆ' ವಿಷಯದ ಬಗ್ಗೆ ವಿಮರ್ಶಕ ಎಸ್.ಆರ್. ವಿಜಯಶಂಕರ ಮಾತನಾಡಿದರು. ವಿದ್ವಾಂಸ ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು.

ಇದೇ ವೇಳೆ ಪ್ರತಿಷ್ಠಾನದ ವತಿಯಿಂದ ಎಸ್. ಆರ್. ವಿಜಯಶಂಕರ ಅವರಿಗೆ 'ಪ್ರೊ.ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ' ಹಾಗೂ ಪತ್ರಕರ್ತ ಬಾಬು ಕೃಷ್ಣಮೂರ್ತಿ ಅವರಿಗೆ 'ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು.

₹40 ಕೋಟಿ ಮೌಲ್ಯದ ಕೊಕೇನ್ ವಶ

ನವದೆಹಲಿ (ಪಿಟಿಐ): ಪ್ರತ್ಯೇಕ ಪ್ರಕರಣಗಳಲ್ಲಿ ಮಾದಕವಸ್ತು ಸಾಗಿಸುತ್ತಿದ್ದ ಮೂವರು ವಿದೇಶಿಯರನ್ನು ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಇಲಾಖೆ ಅಧಿಕಾರಿಗಳು ಬಂಧಿಸಿದ್ದು, ₹40 ಕೋಟಿ ಮೌಲ್ಯದ ಕೊಕೇನ್ ವಶಕ್ಕೆ ಪಡೆದಿದ್ದಾರೆ.

ಬ್ರೆಜಿಲ್‌ನ ಇಬ್ಬರು ಮಹಿಳೆಯರು, ಕೆನ್ಯಾದ ಒಬ್ಬ ಪುರುಷ ಬಂಧಿತರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊದಲ ಪ್ರಕರಣದಲ್ಲಿ ಸವ್ ಪಾಲೊದಿಂದ ಬಂದಿಳಿದಿದ್ದ ಬ್ರೆಜಿಲ್‌ನ 26 ವರ್ಷದ ಪ್ರಜೆಯನ್ನು ಬಂಧಿಸಲಾಗಿದೆ. ಆಕೆಯಿಂದ ತನಿಖೆ ವೇಳೆ 866 ಗ್ರಾಂ ಕೊಕೇನ್ ತುಂಬಿದ್ದ 98 ಮಾತ್ರೆಗಳನ್ನು ವಶಕ್ಕೆ ಪಡೆಯಲಾಯಿತು. ಇವುಗಳ ಮೌಲ್ಯ ₹12.99 ಕೋಟಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ, ಬ್ರೆಜಿಲ್‌ನಿಂದ ಬಂದಿಳಿದಿದ್ದ ಮತ್ತೊಬ್ಬ ಮಹಿಳೆಯಿಂದ 802 ಗ್ರಾಂ ಕೊಕೇನ್ ತುಂಬಿದ್ದ 100 ಮಾತ್ರೆಗಳನ್ನು ವಶಕ್ಕೆ ಪಡೆಯಲಾಯಿತು. ಇದರ ಮೌಲ್ಯ ₹12.03 ಕೋಟಿ. ಮೂರನೇ ಪ್ರಕರಣದಲ್ಲಿ ಇಥಿಯೋಪಿಯಾದಿಂದ ಬಂದಿಳಿದಿದ್ದ ಕೆನ್ಯಾದ ಪ್ರಜೆಯನ್ನು ಬಂಧಿಸಿದ್ದು, ಆತನಿಂದ 996 ಗ್ರಾಂ ಕೊಕೇನ್ ತುಂಬಿದ್ದ 67 ಮಾತ್ರೆಗಳನ್ನು ವಶಕ್ಕೆ ಪಡೆಯಲಾಯಿತು. ಇದರ ಒಟ್ಟು ಮೌಲ್ಯ ₹14.94 ಕೋಟಿ ಎಂದು ತಿಳಿಸಿದ್ದಾರೆ.

ವಿಖ್ಯಾತನಂದ ಶ್ರೀಗಳ ಪೀಠಾರೋಹಣ ವಾರ್ಷಿಕೋತ್ಸವ

ಫೆ.12ಕ್ಕೆ ರೇಣುಕಾ ಯಲ್ಲಮ್ಮ ಜಾತ್ರೆ

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಸೋಲೂರಿನ ರೇಣುಕಾ ಯಲ್ಲಮ್ಮದೇವಿ ಜಾತ್ರಾ ಮಹೋತ್ಸವ ಫೆ.12 ರಂದು ನಡೆಯಲಿದೆ. ಇದೇ ದಿನ ವಿಖ್ಯಾತನಂದ ಸ್ವಾಮೀಜಿ ತೃತೀಯ ಪೀಠಾರೋಹಣ ವಾರ್ಷಿಕೋತ್ಸವ ಹಾಗೂ ಆರೋಗ್ಯ ತಪಾಸಣಾ ಉಚಿತ ಶಿಬಿರ ಹಮ್ಮಿಕೊಳ್ಳಲಾಗಿದೆ.

ಸೋಲೂರಿನ ಆರ್ಯ ಈಡಿಗರ ಮಹಾಸಂಸ್ಥಾನ ಮಠದಲ್ಲಿ ಶನಿವಾರ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದ ದೇವಸ್ಥಾನದ ಪೀಠಾಧ್ಯಕ್ಷ ವಿಖ್ಯಾತನಂದ ಸ್ವಾಮೀಜಿ ಹಾಗೂ ರೇಣುಕಾ ಯಲ್ಲಮ್ಮ ದೇವಿ ಟ್ರಸ್ಟ್ ಅಧ್ಯಕ್ಷ ಜೆ.ಪಿ. ಸುಧಾಕರ್, ಜಾತ್ರಾ ಮಹೋತ್ಸವದಲ್ಲಿ ಐದು ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಬುಧವಾರ ಬೆಳಿಗ್ಗೆ 7.40ಕ್ಕೆ ಗಂಗಾ ಪೂಜೆ, ದೇವಿ ಆರಾಧನೆ, ಗುರು ಪೂಜೆ, ಶ್ರೀಗಳಿಗೆ ಪಾದಪೂಜೆ ನಡೆಯಲಿದೆ. ಬೆಳಿಗ್ಗೆ 11:30ಕ್ಕೆ ದೇವಸ್ಥಾನದ ಪ್ರಾಂಗಣದಲ್ಲಿ ವಿವಿಧ ಕಲಾತಂಡಗಳಿಂದ ಕಲಾ ಪ್ರದರ್ಶನ, ಶ್ರೀದೇವಿ ರೇಣುಕಾ ಯಲ್ಲಮ್ಮ ತಾಯಿ ಉತ್ಸವ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ನಡೆಯಲಿದೆ. ಮಧ್ಯಾಹ್ನ1ಕ್ಕೆ ಅನ್ನಸಂತರ್ಪಣೆ ನಡೆಯಲಿದೆ.

ಮಹಿಳೆಯರಿಗಾಗಿ ರೇಣುಕಾ ಯಲ್ಲಮ್ಮ ದೇವಿ ಭಕ್ತಿಗೀತೆಗಳ ಸ್ಪರ್ಧೆ ಏರ್ಪಡಿಸಲಾಗಿದೆ. ಜಾತ್ರೆಗೆ ಬರುವ ಭಕ್ತರಿಗೆ ಸೋಲೂರು ಬಸ್ ನಿಲ್ದಾಣದಿಂದ ಮಠದವರೆಗೂ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಆರೋಗ್ಯ ತಪಾಸಣೆ ಶಿಬಿರ

ಬುಧವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೂ ಆರೋಗ್ಯ ತಪಾಸಣೆ ಉಚಿತ ಶಿಬಿರ ನಡೆಯಲಿದೆ. ಕಣ್ಣು, ಹೃದಯ, ಕಿವಿ, ಮೂಗು, ಗಂಟಲು, ಚರ್ಮ, ಪ್ರಸೂತಿ, ಸ್ತ್ರೀರೋಗ, ನರರೋಗ, ಕೀಲು ಮತ್ತು ಮೂಳೆ ತಪಾಸಣೆ ತಜ್ಞರು ಭಾಗವಹಿಸಲಿದ್ದಾರೆ. ಉಚಿತ ಕನ್ನಡಕ ವಿತರಿಸಲಾಗುವುದು.

ಆರ್ಯ ಈಡಿಗರ ಮಹಾಸಂಸ್ಥಾನ ಮಠದ ಕಾರ್ಯದರ್ಶಿ ಧರ್ಮ ವಿಜೇತ್, ಖಜಾಂಚಿ ಹರೀಶ್, ಮೈಸೂರು ಜಿಲ್ಲಾ ಸಂಘದ ಶ್ರೀಕಾಂತ್, ಮಾಗಡಿ ತಾಲ್ಲೂಕು ಈಡಿಗರ ಸಂಘದ ಅಧ್ಯಕ್ಷ ಗೋಪಾಲ್, ಉಪಾಧ್ಯಕ್ಷ ಕುದೂರು ವೆಂಕಟೇಶ್, ಶಶಾಂಕ್ ಭಾಗವಹಿಸಿದ್ದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಅಇಂ(ವಿ)/ಪ್ರ(ನಿ)/ರಾಮನಗರವೃತ್ತ/ಕಾನಿಇಂ(ಕ)/ಸಕಾನಿಇಂ–1/ಕ–35/24–25/4688–90 ದಿ: 06.02.2025

ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಈ ಕೆಳಗಿನ ಕಾಮಗಾರಿಗಳಿಗೆ **ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ** ಬಿಡ್‌ಗಳನ್ನು ಆಹ್ವಾನಿಸಿದೆ:

(1) ಟಿ.ಎಲ್&ಎಸ್.ಎಸ್ ನೆಲಮಂಗಲ ವಿಭಾಗದ 400ಕೆವಿ ನೆಲಮಂಗಲ ಸ್ವೀಕರಣ ಕೇಂದ್ರದ ಸ್ವಿಚ್‌ಯಾರ್ಡ್‌ನಲ್ಲಿ ಬೆಳೆದ ಕಳೆಗಳನ್ನು ತಪ್ಪಿಸಲು 600ಕೆಜಿ (1ಕೆಜಿ ಪ್ಯಾಕೆಟ್) XLMera-71 ಸಮಾನ ಕಳೆ ನಾಶಕ ಕೆಮಿಕಲ್‌ನ್ನು ಪೂರೈಸುವುದು.

(2) ನೆಲಮಂಗಲ ಟಿ.ಎಲ್.ಎಂ ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ದೇವರಹೊಸಹಳ್ಳಿ ಗ್ರಾಮದಲ್ಲಿ, 66ಕೆವಿ ದಾಬಸ್‌ಪೇಟೆ–ಹಿರೆಹಳ್ಳಿ ಮಾರ್ಗದ ಗೋಪುರ ಸಂಖ್ಯೆ 35–36ರ ನಡುವಿನ ಮಧ್ಯದಲ್ಲಿ 66kV DD+0 KPTCL Design Narrow Based ಗೋಪುರವನ್ನು ಮಧ್ಯಾಂತರ ಗೋಪುರಗಳ ಅಳವಡಿಸಿ ಲಂಬಾಂತರ ಅಳತೆಯನ್ನು ಎತ್ತರಿಸುವುದು.(CALL2).

ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ನ "E Procurement KPTCL" ಹೈಪರ್‌ಲಿಂಕ್ ಅಥವಾ https://kppp.karnataka.gov.in ಇಲ್ಲಿಗೆ ದಿನಾಂಕ: 12.02.2025ರಂದು ಅಥವಾ ಆನಂತರ ಲಾಗಿನ್ ಆಗಿ ಪಡೆದುಕೊಳ್ಳಬಹುದು.

ಸಹಿ/–ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ನಿ), ರಾಮನಗರ ವೃತ್ತ, ಕವಿಪ್ರನಿನಿ, ಆರ್.ಆರ್. ನಗರ ಮೆಟ್ರೋ ನಿಲ್ದಾಣದ ಎದುರು, ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು–560 026, ದೂರವಾಣಿ: 080–29620155.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PERSONAL

Change of Name

CHANGE OF NAME

I, **Atulya,** daughter of Sanchita, residing at "SHIVASHAKTI" 2nd Floor, Door No. 28, 2nd Cross, Ramaiah Layout, Kacharkanahalli, St. Thomas Town, Bengaluru-560084, have changed my name to **ADWITEYA** vide affidavit dated 23-08-2016, sworn before Notary G Kaspar, Bengaluru.

Lost

LOST

I, **B Saraswathi,** Residing at 2/10, BDA Nisarga Apartment, 2nd Cross, 5th Phase, 5th Block, BSK 3 Stage, Bengaluru-560085, have lost my original BDA Site Allotment Letter **Document No / Identification No. BDA/ADM/DS-1/BSK6/01-02, Dt: 13-03-2002,** while in transit. Finders please contact: **8277477900**

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ

RECRUITMENT

BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY @ 550/-* PER SQCM SINGLE / DOUBLE / MULTIPLE COLUMN
*Conditions apply
www.dhclassifieds.com
BOOK NOW
For more details contact: 9901641752 9845114560

CONNECT

VEDANTA INSTITUTE BANGALORE

Timeless Truths for a changing world

Renunciation of Action in Wisdom

Bhagavad Gita Ch. 4 discourses by ***Sunandaji***

12 - 16 Feb 2025 | 6:45 - 8:00 pm
R V Teachers' College, Jayanagar 2nd Blk, Near Lalbagh Metro Station

All are welcome

JOB OPPORTUNITIES

Wanted

WANTED REBAR DETAILER for Bangalore Office. Experience 3 years. Call : 99866 11110. Email - Hannah

BUSINESS

Business Offers

Finance

URGENT LOAN Avail @ 3.5% per annum Personal- Business Housing- Project Take Over all types loan. Good Finance. Phone:: 7678360713.

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

ರಥಸಪ್ತಮಿ: 108 ಸೂರ್ಯ ನಮಸ್ಕಾರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಪ್ರಾಣಾಯಾಮ, ಧ್ಯಾನ, ಸೂರ್ಯ ನಮಸ್ಕಾರದಿಂದ ಆರೋಗ್ಯವಂತರಾಗಿ ಬದುಕಲು ಸಾಧ್ಯ ಎಂದು ಯೋಗ ಶಿಕ್ಷಕ ಅಮರಪ್ಪ ಮತ್ತು ಶಿಕ್ಷಕಿ ಪದ್ಮಕೃಷ್ಣ ಹೇಳಿದರು.

ಹೇರೋಹಳ್ಳಿಯ ಸಿಂಡಿಕೇಟ್ ಲೇಔಟ್‌ನ ಓಂ ಸೇವಾಕೇಂದ್ರದಲ್ಲಿ ರಥಸಪ್ತಮಿ ಅಂಗವಾಗಿ ಹಮ್ಮಿಕೊಂಡಿದ್ದ 24ನೇ ವರ್ಷದ 108 ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು

76 ವರ್ಷದ ರಾಮಕೃಷ್ಣ ಭಟ್ ಮಾತನಾಡಿ, ಪ್ರತಿನಿತ್ಯ ಪ್ರಾಣಾಯಾಮ, ಸೂರ್ಯನಮಸ್ಕಾರ ಮಾಡುವ ಮೂಲಕ ಆರೋಗ್ಯವಾಗಿದ್ದೇನೆ ಎಂದರು.

ಮರಿಯಪ್ಪನಪಾಳ್ಯದ ಸೇಂಟ್ ಫಿಲೋಮಿನಾ ಶಾಲೆಯ ಆವರಣದಲ್ಲಿ 108 ಸೂರ್ಯ ನಮಸ್ಕಾರ ನಡೆಯಿತು.

ಮುಖಂಡ ಜಯರಾಮು ಮಾತನಾಡಿ, ಕಲುಷಿತ ಗಾಳಿ, ನೀರು, ರಾಸಾಯನಿಕಯುಕ್ತ ಆಹಾರ ಸೇವನೆಯಿಂದ ಚಿಕ್ಕ ವಯಸ್ಸಿನಲ್ಲಿಯೇ ಬೊಜ್ಜು, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳು ಬರುತ್ತಿವೆ, ಮಿತ ಆಹಾರ, ಯೋಗ, ಧ್ಯಾನ, ಸೂರ್ಯ ನಮಸ್ಕಾರವೇ ಎಲ್ಲ ರೋಗಗಳಿಗೆ ಪರಿಹಾರ ಎಂದರು.

ಪತಂಜಲಿ ಯೋಗ ಶಿಕ್ಷಕರಾದ ಸರಸ್ವತಿ, ಲಿಂಗರಾಜು ಮಾರ್ಗದರ್ಶನ ದಲ್ಲಿ 108 ಸೂರ್ಯ ನಮಸ್ಕಾರ ನಡೆಯಿತು.

ಅನುಮತಿ ಪಡೆಯದ ಕಾರಣ ಕಾರ್ಯಕ್ರಮಕ್ಕೆ ಅವಕಾಶ ನಿರಾಕರಣೆ

ಎಡ್ ಶೀರನ್ ಗಾಯನಕ್ಕೆ ಪೊಲೀಸ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಗ್ಲೆಂಡ್‌ನ ಖ್ಯಾತ ಗಾಯಕ ಮತ್ತು ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತ ಎಡ್ ಶೀರನ್ ಅವರು ಅನುಮತಿ ಪಡೆಯದೇ ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಭಾನುವಾರ ಪ್ರಾರಂಭಿಸಿದ್ದ 'ಸ್ಟ್ರೀಟ್' ಸಂಗೀತ ಪ್ರದರ್ಶನವನ್ನು ಪೊಲೀಸರು ತಡೆದರು.

ನಗರದ ಚರ್ಚ್ ಸ್ಟ್ರೀಟ್‌ಗೆ ಬೆಳಿಗ್ಗೆ 11 ಗಂಟೆಗೆ ಬಂದ ಎಡ್ ಶೀರನ್ ಅವರು ರಸ್ತೆಬದಿ ತಮ್ಮ ಖ್ಯಾತ ಹಾಡು 'Shape Of You' ಹಾಡಲು ಆರಂಭಿಸಿದರು. ವಿಷಯ ತಿಳಿದು ಸ್ಥಳಕ್ಕೆ ಬಂದ ಕಬ್ಬನ್ ಪಾರ್ಕ್ ಪೊಲೀಸರು, ಗಾಯನ ನಿಲ್ಲಿಸುವಂತೆ ಶೀರನ್‌ಗೆ ಸೂಚಿಸಿದರು. ಹಾಡು ಮುಂದುವರಿಸಿದ ಕಾರಣ, ಸಂಗೀತ ಉಪಕರಣಗಳ ಕೇಬಲ್ ಸಂಪರ್ಕ ಕಡಿತಗೊಳಿಸಿ, ಕಾರ್ಯಕ್ರಮ ರದ್ದುಗೊಳಿಸಿದರು.

ಈ ಘಟನೆಗೆ ಸಂಬಂಧಿಸಿದ ವಿಡಿಯೊ ತುಣುಕುಗಳು ಜಾಲತಾಣ ಗಳಲ್ಲಿ ಹರಿದಾಡುತ್ತಿವೆ. ಸಂಗೀತ ಕಾರ್ಯಕ್ರಮ ನಿಲ್ಲಿಸಿದ ಪೊಲೀಸರ ವರ್ತನೆಯನ್ನು ಕೆಲವರು ಖಂಡಿಸಿದ್ದಾರೆ. ಗಾಯನ ನಿಲ್ಲಿಸುವ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಯೊಬ್ಬರು, ಶೀರನ್ ಅವರ ಸೌಂಡ್ ಬಾಕ್ಸ್‌ನ ಮೈಕ್ರೋಫೋನ್‌ಗಳನ್ನು ತೆಗೆದು ಹಾಕಿರುವುದು ವಿಡಿಯೊದಲ್ಲಿದೆ.



ಚರ್ಚ್‌ಸ್ಟ್ರೀಟ್‌ನಲ್ಲಿ ಎಡ್ ಶೀರನ್ ಅವರಿಂದ ಗಾಯನ (ಎಡಚಿತ್ರ) ಎಡ್ ಶೀರನ್ ಅವರ ಸಂಗೀತ ಕಾರ್ಯಕ್ರಮವನ್ನು ಪೊಲೀಸರು ತಡೆದರು

'ಎಡ್ ಶೀರನ್ ಅವರ ತಂಡದಿಂದ ಚರ್ಚ್ ಸ್ಟ್ರೀಟ್‌ನಲ್ಲಿ ಪ್ರದರ್ಶನ ನೀಡಲು ಅನುಮತಿ ಕೇಳಲಾಗಿತ್ತು. ಆದರೆ, ಚರ್ಚ್ ಸ್ಟ್ರೀಟ್ ಜನನಿಬಿಡ ಸ್ಥಳವಾಗಿದ್ದು, ಹೆಚ್ಚು ಜನಸಂದಣಿ ಉಂಟಾಗಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯುಂಟಾಗುವ ಸಾಧ್ಯತೆಯ ಕಾರಣದಿಂದ ಅನುಮತಿ ನಿರಾಕರಿಸಲಾಗಿತ್ತು. ಈ ಬಗ್ಗೆ ಯಾವುದೇ ದೂರು ದಾಖಲಾಗಿಲ್ಲ' ಎಂದು ಕಬ್ಬನ್ ಪಾರ್ಕ್ ಠಾಣೆಯ ಪೊಲೀಸರು ತಿಳಿಸಿದ್ದಾರೆ.

'ಸಾರ್ವಜನಿಕರೊಬ್ಬರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಕ್ರಮ ಕೈಗೊಂಡಿದ್ದೇವೆ. ಅನುಮತಿ ಪಡೆದಿದ್ದರೆ ಕಾರ್ಯಕ್ರಮಕ್ಕೆ ಅವಕಾಶ ನೀಡಲಾಗುತ್ತಿತ್ತು' ಎಂದು ಹೇಳಿದ್ದಾರೆ.

ಘಟನೆ ನಡೆದ ವೇಳೆ ಸ್ಥಳದಲ್ಲಿದ್ದ ಗಾಯಕ ಸಂಜಯ್ ಸುಕುಮಾರನ್, 'ಚರ್ಚ್ ಸ್ಟ್ರೀಟ್‌ನಲ್ಲಿ ಎಡ್ ಶೀರನ್ ಗಾಯನ ಶುರು ಮಾಡುತ್ತಿದ್ದಂತೆ ಪೊಲೀಸ್ ಅಧಿಕಾರಿಯೊಬ್ಬರು ಬಂದು ಕಾರ್ಯಕ್ರಮ ನಿಲ್ಲಿಸುವಂತೆ ಹೇಳಿದರು. ಬಳಿಕ ಸೌಂಡ್ ಬಾಕ್ಸ್‌ನ ಮೈಕ್ರೋಫೋನ್ ತೆಗೆದು ಹಾಕಿದರು. ಈ ರೀತಿಯ ಘಟನೆಗಳಿಂದ ಬೆಂಗಳೂರು ಜನರನ್ನು ನೋಡುವ ದೃಷ್ಟಿ ಬೇರೆ ರೀತಿ ಇರುತ್ತದೆ' ಎಂದು ಹೇಳಿದರು.

ಸಂಗೀತ ಕಾರ್ಯಕ್ರಮಗಳ ಭಾಗವಾಗಿ ಭಾರತ ಪ್ರವಾಸದಲ್ಲಿರುವ ಶೀರನ್, ಈಗಾಗಲೇ ಹೈದರಾಬಾದ್ ಹಾಗೂ ಚೆನ್ನೈನಲ್ಲಿ ಪ್ರದರ್ಶನ ನೀಡಿದ್ದಾರೆ.

ಮುಖ್ಯಾಂಶಗಳು

- ಚರ್ಚ್‌ಸ್ಟ್ರೀಟ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮ
- ಸಂಗೀತ ಕಾರ್ಯಕ್ರಮದ ಭಾಗವಾಗಿ ಭಾರತ ಪ್ರವಾಸ
- ಜಾಲತಾಣದಲ್ಲಿ ಹರಿದಾಡಿದ ಘಟನೆಯ ವಿಡಿಯೊ

ಪೊಲೀಸರ ಕರ್ತವ್ಯ ಶ್ಲಾಘಿಸಿದ ರಮ್ಯಾ

'ಬೆಂಗಳೂರಿನಲ್ಲಿ ಮತ್ತೊಂದು ಪುಷ್ಪ 2 ರೀತಿಯ ಘಟನೆಯನ್ನು ತಪ್ಪಿಸಿದ ಪೊಲೀಸರ ಕರ್ತವ್ಯವನ್ನು ಶ್ಲಾಘಿಸುತ್ತೇನೆ. ಸಾರ್ವಜನಿಕ ಕಾರ್ಯಕ್ರಮ ಗಳಿಗೆ ಪೊಲೀಸರ ಅನುಮತಿ ಪಡೆಯಬೇಕು. ಜೀವಗಳಿಗೆ ಅಪಾಯ ತಂದುಕೊಳ್ಳಬಾರದು' ಎಂದು ನಟಿ ದಿವ್ಯಸ್ಪಂದನಾ (ರಮ್ಯಾ) ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ದಲೈಲಾಮಾ ಸಹೋದರ ನಿಧನ

ಕೋಲ್ಕತ್ತ (ಪಿಟಿಐ): ಟಿಬೆಟನ್ ಧರ್ಮಗುರು ದಲೈಲಾಮಾ ಅವರ ಅಣ್ಣ ಗ್ಯಾಲೊ ಥೊಂಡುಪ್ (97) ಅವರು ಪಶ್ಚಿಮ ಬಂಗಾಳದ ಕಲಿಂಪೊಂಗ್‌ನಲ್ಲಿರುವ ನಿವಾಸದಲ್ಲಿ ನಿಧನರಾದರು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರ ಆರೋಗ್ಯ ಸ್ಥಿತಿ ಎರಡು ವಾರಗಳಿಂದ ಹದಗೆಟ್ಟಿತ್ತು. ಶನಿವಾರ ಕೊನೆಯುಸಿರೆಳೆದರು ಎಂದು ಹಿರಿಯ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.



ಗ್ಯಾಲೊ ಥೊಂಡುಪ್

ಕುಟುಂಬದ ಸದಸ್ಯರು ಬಂದ ಬಳಿಕ ಫೆ.11ರಂದು ಅಂತ್ಯಕ್ರಿಯೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ದಲೈಲಾಮಾ ಅವರು ಈಗ ಕರ್ನಾಟಕ ಭೇಟಿಯಲ್ಲಿದ್ದಾರೆ. ಗ್ಯಾಲೊ ಅವರು 1952ರಿಂದ ಕಲಿಂಪೊಂಗ್‌ನಲ್ಲಿ ನೆಲೆಸಿದ್ದರು.

SBI ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ಪ್ರಾದೇಶಿಕ ವ್ಯಾಪಾರ ಕಛೇರಿ 4, ಚಾಮರಾಜನಗರ, AO-5, ಮೈಸೂರು

ಗುತ್ತಿಗೆಗೆ ಅಗತ್ಯವಿರುವ ಸ್ಥಳಗಳು

ಎಸ್‌ಬಿಐ ಪ್ರಾದೇಶಿಕ ವ್ಯವಸ್ಥಾಪಕರು–4, ಚಾಮರಾಜನಗರ ಇವರು ಎಸ್‌ಬಿಐ ಬಿ ಎಂ ರಸ್ತೆ, ಬಿಡದಿ (40676) ಶಾಖೆಯ ಪರವಾಗಿ **ಸುಮಾರು 39.193 ಚದರ ಮೀಟರ್ (4200 ಚದರ ಅಡಿ +/– 20%)** ನಷ್ಟು ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ, ಸ್ಥಳದ ಮಾಲೀಕರು / ಪವರ್ ಆಫ್ ಅಟಾರ್ನಿ ಹೋಲ್ಡರ್‌ಗಳಿಂದ **ಎಸ್‌ಬಿಐ ಬಿ ಎಂ ರಸ್ತೆ, ಬಿಡದಿ (40676) ಶಾಖೆಗಾಗಿ ಬಿಡ್‌ಗಳನ್ನು ಆಹ್ವಾನಿಸಲಾಗಿದೆ, ಮುಖ್ಯ ರಸ್ತೆಗೆ ಆದ್ಯತೆ ನೀಡಲಾಗುತ್ತದೆ.** ಸ್ಥಳದಲ್ಲಿ ಸಾಕಷ್ಟು ವಿದ್ಯುತ್ ಲೋಡ್, ನೀರು ಸರಬರಾಜು, ಪಾರ್ಕಿಂಗ್ ಸ್ಥಳ, ಜನರೇಟರ್ ಇಡಲು ಸ್ಥಳ, ಇ–ಲಾಬಿ ಮತ್ತು ವಿ–ಸ್ಯಾಟ್, ಉತ್ತಮ ಮುಂಭಾಗ (ಉಚಿತ) ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಹೊಂದಿರಬೇಕು. ಸಂಪೂರ್ಣ ಸ್ಥಳವು ಒಂದೇ ಮಹಡಿಯಲ್ಲಿ ಮೇಲಾಗಿ ನೆಲ ಮಹಡಿಯಲ್ಲಿರಬೇಕು. ಸ್ಥಳವು ಸ್ವಾಧೀನ / ಉದ್ಯೋಗ ಅಥವಾ ಪ್ಲಾಟ್‌ಗೆ ಸಿದ್ಧವಾಗಿರಬೇಕು. ಆದಾಗ್ಯೂ, ಎಲ್ಲಾ ರೀತಿಯಲ್ಲೂ ಸರಿಯಾಗಿ ಪೂರ್ಣಗೊಳಿಸಿದ ಸ್ಥಳಗಳಿಗೆ ಆದ್ಯತೆ ನೀಡಲಾಗುವುದು. ವಿವರವಾದ ಪ್ಯಾರಾಮೀಟರ್‌ಗಳು, ನಿಯಮಗಳು, ಷರತ್ತುಗಳು ಮತ್ತು ಬೆಲೆ ಬಿಡ್‌ನ್ನು ಒಳಗೊಂಡಿರುವ ತಾಂತ್ರಿಕ ಬಿಡ್‌ನ ಸಲ್ಲಿಕೆ ಸ್ವರೂಪವನ್ನು SBI ವೆಬ್‌ಸೈಟ್ **www.sbi.co.in** or **www.statebankofindia.com** ನಿಂದ **10.02.2025** ರಿಂದ **25.02.2025** ರವರೆಗೆ ಡೌನ್‌ಲೋಡ್ ಮಾಡಬಹುದು. ಸರ್ಕಾರಿ ಇಲಾಖೆಗಳ ಸಾರ್ವಜನಿಕ ವಲಯದ ಘಟಕಗಳು/ಬ್ಯಾಂಕ್‌ಗಳ ಒಡೆತನದ ನಿವೇಶನಗಳಿಗೆ ಆದ್ಯತೆ ನೀಡಲಾಗುವುದು. ಎಲ್ಲಾ ರೀತಿಯಲ್ಲೂ ಮುಚ್ಚಿದ ಕವರ್‌ನಲ್ಲಿರುವ ಕೊಡುಗೆಗಳನ್ನು **ಪ್ರಾದೇಶಿಕ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪ್ರಾದೇಶಿಕ ವ್ಯಾಪಾರ ಕಛೇರಿ–4, ಶ್ರೀ ಲಕ್ಷ್ಮೀ ವೆಂಕಟೇಶ್ವರ ಕಾಂಪ್ಲೆಕ್ಸ್, ನಂಜನಗೂಡು ರಸ್ತೆ, ಚಾಮರಾಜನಗರ – 571313** ಇವರಿಗೆ ದಿನಾಂಕ **25.02.2025** ರಂದು **03:00** ಗಂಟೆಗೆ ಅಥವಾ ಅದಕ್ಕೂ ಮೊದಲು ಸಲ್ಲಿಸಬೇಕು. ಆದ್ದರಿಂದ ಯಾವುದೇ ಕಾರಣಗಳನ್ನು ನೀಡದೆಯೇ ಯಾವುದೇ ಅಥವಾ ಎಲ್ಲಾ ಕೊಡುಗೆಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು SBI ಕಾಯ್ದಿರಿಸಿಕೊಂಡಿದೆ. ದಲ್ಲಾಳಿಗಳಿಗೆ ಮನರಂಜನೆ ನೀಡಲಾಗುವುದಿಲ್ಲ.

ಸಹಿ/–ಪ್ರಾದೇಶಿಕ ವ್ಯವಸ್ಥಾಪಕರು, SBI RBO-4, ಚಾಮರಾಜನಗರ

FARNAZ

ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಸಶಸ್ತ್ರ ಮೀಸಲು ಪೊಲೀಸ್ ಪಡೆ ತರಬೇತಿ ಶಾಲೆಯಲ್ಲಿ ಆಯೋಜಿಸಿದ್ದ ಸಸಿನೆಡುವ ಕಾರ್ಯ ಕ್ರಮಕ್ಕೆ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ.ಸುಧೀಂದ್ರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ತರಬೇತಿ ಶಾಲೆಯಲ್ಲಿ 530 ಪೊಲೀಸ್ ಸಿಬ್ಬಂದಿ ತರಬೇತಿಯಲ್ಲಿ ನಿರತರಾಗಿದ್ದು, ತರಬೇತಿಯ ಅವಧಿಯಲ್ಲಿ ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಪೋಷಿಸಬೇಕು. ಮುಖ್ಯವಾಗಿ ಜೈವಿಕ ಇಂಧನ ಉತ್ಪಾದನೆಗೆ ಪೂರಕವಾದ ಹೊಂಗೆ, ಬೇವು, ಹಿಪ್ಪೆ ಇತ್ಯಾದಿ ಸಸಿಗಳನ್ನು ನೆಡಲು ಹೆಚ್ಚಿನ ಒತ್ತುನೀಡಬೇಕು ಎಂದು ತಿಳಿಸಿದರು.

ಈ ಸಸಿಗಳ ಬೀಜಗಳಿಂದ ಜೈವಿಕ ಇಂಧನ ಉತ್ಪಾದನೆ ಮಾಡಬಹುದಾಗಿದೆ. ಈ ಜೈವಿಕ ಇಂಧನವು ಹೊರದೇಶಗಳಿಂದ ರಫ್ತು ಮಾಡಿಕೊಳ್ಳಲಾಗುತ್ತಿರುವ ಡೀಸೆಲ್, ಪೆಟ್ರೋಲ್‌ನಂತಹ ಪಳೆಯುಳಿಕೆ ಇಂಧನಗಳ ಆಮದುಗಳನ್ನು ತಗ್ಗಿಸುವಲ್ಲಿ ನೆರವಾಗಲಿದೆ ಎಂದು ಹೇಳಿದರು.

ಯಲಹಂಕದ ಸಶಸ್ತ್ರ ಮೀಸಲು ಪೊಲೀಸ್ ಪಡೆ ತರಬೇತಿ ಶಾಲೆಯಲ್ಲಿ ಆಯೋಜಿಸಿದ್ದ ಸಸಿನೆಡುವ ಕಾರ್ಯಕ್ರಮಕ್ಕೆ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್‌ಈ. ಸುಧೀಂದ್ರ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು. ತರಬೇತಿ ಶಾಲೆಯ ಪ್ರಾಂಶುಪಾಲ ಎ.ಸಿ.ಮಂಜುನಾಥ್ ಇತರರು ಹಾಜರಿದ್ದರು

ಬ್ರೆಜಿಲ್ ದೇಶವು ಜೈವಿಕ ಇಂಧನ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಭಾರತವೂ ಈ ನಿಟ್ಟಿನಲ್ಲಿ ಮುಂದೆ ಸಾಗುತ್ತಿದೆ. ಈ ಗುರಿಯನ್ನು ಸಾಧಿಸುವ ದಿಸೆಯಲ್ಲಿ ಎಲ್ಲರ ಪರಿಶ್ರಮ ಅತ್ಯಗತ್ಯ. ಜೈವಿಕ ಇಂಧನ ಮಂಡಳಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ರಾಜ್ಯದಾದ್ಯಂತ ಸರ್ಕಾರಿ ಭೂಮಿಯಲ್ಲಿ ಮಳೆಗಾಲದ ಆರಂಭದಲ್ಲಿ ಹೊಂಗೆ, ಬೇವು, ಸೀಮರೂಬದಂತಹ ಸಸ್ಯಗಳನ್ನು ನೆಡಲು ಉದ್ದೇಶಿಸಲಾಗಿದೆ' ಎಂದರು.

ತರಬೇತಿ ಶಾಲೆಯ ಪ್ರಾಂಶುಪಾಲ ಎ.ಸಿ.ಮಂಜುನಾಥ್, ಇನ್‌ಸ್ಪೆಕ್ಟರ್ ಸಿದ್ದೇಶ್.ಎಚ್.ಆರ್, ಪ್ರಕೃತಿ ಪ್ರಸನ್ನ, ಬಿ-ಪ್ಯಾಕ್ ಸಂಸ್ಥೆಯ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

'ಪ್ರಾಯೋಗಿಕ ತರಬೇತಿ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸಾಯನ ವಿಜ್ಞಾನದ ಅಧ್ಯಯನ ಮತ್ತು ಪ್ರಯೋಗಗಳು ಶಾಲಾ ಮಟ್ಟದಿಂದಲೇ ಆರಂಭವಾಗಬೇಕು. ಪ್ರಾಯೋಗಿಕ ತರಬೇತಿ ಮತ್ತು ಶಿಬಿರ ಗಳಿಂದ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಆಳವಾದ ಸಂಶೋಧನೆ ಮತ್ತು ಅಧ್ಯಯನ ನಡೆಸಲು ಸಹಕಾರಿ ಆಗಲಿವೆ' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯದ ರಸಾಯನ ವಿಜ್ಞಾನ ವಿಭಾಗದ ಸಹಯೋಗದೊಂದಿಗೆ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ 'ಯೂಸುಫ್ ಹಮೀದ್ ರಸಾಯನ ವಿಜ್ಞಾನ ಶಿಬಿರ'ದಲ್ಲಿ ಮಾತನಾಡಿದರು.

'ವಿಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ವಿಪುಲ ಅವಕಾಶಗಳಿವೆ. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ವ್ಯವಸ್ಥಿತವಾದ ವಿಜ್ಞಾನದ ಅಡಿಪಾಯ ರೂಪಿಸಬೇಕಿದೆ. ಪ್ರಯೋಗಾಲಯಗಳಲ್ಲಿ ತರಬೇತಿಗಳನ್ನು ನೀಡಬೇಕು. ಆಗ ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ವಿಷಯದ ಮೇಲೆ ಆಸಕ್ತಿ ಮೂಡುತ್ತದೆ. ಈ ರೀತಿಯ ಶಿಬಿರಗಳಿಂದ ವಿದ್ಯಾರ್ಥಿಗಳಲ್ಲಿ ಕಲಿಕಾ ಆಸಕ್ತಿ ಮತ್ತು ಪ್ರಾಯೋಗಿಕ ಜ್ಞಾನ ಹೆಚ್ಚಾಗುತ್ತದೆ' ಎಂದರು.

ರಸಾಯನ ವಿಜ್ಞಾನ ಶಿಬಿರದಲ್ಲಿ ಭಾಗವಹಿಸಿದ್ದ ವಿವಿಧ ಶಾಲೆಗಳ ವಿದ್ಯಾರ್ಥಿಗಳು

ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ ಮುಖ್ಯಸ್ಥೆ ಶ್ವೇತಾ ರಾಘವನ್ ಮಾತನಾಡಿ 'ಈ ಶಿಬಿರದ ಮೂಲಕ ಕಠಿಣವೆನಿಸುವ ರಸಾಯನ ವಿಜ್ಞಾನದ ಪ್ರಯೋಗಗಳನ್ನು ಸರಳವಾಗಿ ವಿದ್ಯಾರ್ಥಿಗಳಿಗೆ ಕಲಿಸಲಾಗುವುದು' ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿತ್ತಾಧಿಕಾರಿ ಸುನೀತಾ, ರಸಾಯನ ವಿಜ್ಞಾನ ವಿಭಾಗದ ಮುಖ್ಯಸ್ಥ ಶಿವರಾಜ್ ವೈ., ಪುಟ್ಟಸ್ವಾಮಿ, ಶಿಬಿರ ಸಂಯೋಜಕ ಬಿಶ್ವಜಿತ್ ಪೌಲ್ ಉಪಸ್ಥಿತರಿದ್ದರು.

ರಸಾಯನ ವಿಜ್ಞಾನ ಶಿಬಿರದಲ್ಲಿ ಚಿಕ್ಕಬಳ್ಳಾಪುರ, ಚಿಂತಾಮಣಿ,- ಮಾಗಡಿ, ರಾಮನಗರ ಸೇರಿದಂತೆ ಬೆಂಗಳೂರು ಗ್ರಾಮಾಂತರ ಭಾಗದ 20 ಶಾಲೆಗಳಿಂದ 78 ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಶಿಕ್ಷಣ



ಹೇಗೆ ಅಧ್ಯಯನ ಮಾಡಬೇಕು ಎಂಬುದರ ಬಗ್ಗೆ ಸ್ಪಷ್ಟವಾದ ಒಳನೋಟಗಳಿದ್ದರೆ ಪರೀಕ್ಷೆಯೆಂಬುದು ಎಂದಿಗೂ ಕಷ್ಟವೆನಿಸದು. 'ಸ್ಮಾರ್ಟ್' ಅಧ್ಯಯನದ ತಂತ್ರಗಳನ್ನು ಹಂತ ಹಂತವಾಗಿ ಅಳವಡಿಸಿಕೊಂಡರೆ ಯಶಸ್ಸು ತಾನಾಗಿಯೇ ಲಭಿಸುತ್ತದೆ

ಪರೀಕ್ಷೆಗಳಿಗೆ ತಯಾರಾಗಲು 'SMART' ತಂತ್ರ

ಆರ್.ಬಿ.ಗುರುಬಸವರಾಜ

ಪರೀಕ್ಷೆಗೆ ತಯಾರಾಗುವ ಪ್ರತಿಯೊಬ್ಬರಿಗೂ ಹಿರಿಯರಾಗಲೀ, ಗುರುಗಳಾಗಲೀ ಹೇಳುವ ಮಾತೇನೆಂದರೆ ಬುದ್ಧಿವಂತಿಕೆಯಿಂದ ಅಧ್ಯಯನ ಮಾಡಿ. ಆದರೆ, ಬುದ್ಧಿವಂತಿಕೆಯಿಂದ ಹೇಗೆ ಅಧ್ಯಯನ ಮಾಡುವುದು ಎಂಬುದೇ ಬಹುತೇಕ ವಿದ್ಯಾರ್ಥಿಗಳ ಪ್ರಶ್ನೆ.

ಬುದ್ಧಿವಂತಿಕೆಯ ಅಧ್ಯಯನದ ವಿಧಾನವು ನಿಯಮಿತ ಅಧ್ಯಯನ, ಯೋಜಿತ ದಿನಚರಿ, ಗುಂಪು ಚರ್ಚೆಗಳು, ಮಾನಸಿಕ ಶಾಂತಿ ಮತ್ತು ಕೌಶಲ ಚಟುವಟಿಕೆಗಳಿಗೆ ಉತ್ತೇಜವನ್ನು ಒಳಗೊಂಡಿರುತ್ತದೆ.

ಪ್ರತಿ ವಿದ್ಯಾರ್ಥಿಗೆ ಯಾವಾಗ, ಏನನ್ನು ಅಧ್ಯಯನ ಮಾಡಬೇಕು ಎಂಬುದು ಗೊತ್ತಿದೆ. ಆದರೆ, ಹೇಗೆ ಅಧ್ಯಯನ ಮಾಡಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲು ಆಳವಾದ ಒಳನೋಟ ಮತ್ತು ಅನುಭವದ ಅಗತ್ಯವಿರುತ್ತದೆ.

ಶಾಲಾ ಜೀವನದಲ್ಲಿ ಅನೇಕ ವಿದ್ಯಾರ್ಥಿಗಳು ಪರಿಣಾಮಕಾರಿ ಕಲಿಕೆಯ ತಂತ್ರಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಪರೀಕ್ಷೆಗೆ ತಯಾರಾಗುವವರಿಗೆ ಇಲ್ಲೊಂದು 'ಸ್ಮಾರ್ಟ್' ಮಾರ್ಗವಿದೆ. ಈ ಮಾರ್ಗವನ್ನು ಅನುಸರಿಸಿದರೆ ನಿಮ್ಮ ನಿಜದ ಸಾಮರ್ಥ್ಯವನ್ನು ಅರ್ಥಮಾಡಿಕೊಂಡು, ಆರೋಗ್ಯಕರ ಸ್ಪರ್ಧೆಯಲ್ಲಿ ಯಶಸ್ಸುಗೊಳಿಸಲು ಸಾಧ್ಯವಾಗಬಹುದು.

ಸ್ಮಾರ್ಟ್ ತಂತ್ರಗಾರಿಕೆ

ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ನಂತರದ ನೀಟ್, ಜೆಇಇ ಸೇರಿ ಇನ್ನಿತರೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪಠ್ಯಕ್ರಮವು ವಿಶಾಲವಾಗಿದ್ದು, ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಅಧ್ಯಯನ ತಂತ್ರಗಾರಿಕೆ ಸೂಕ್ತವಾದುದು. SMART ಪದವನ್ನು ವಿಶ್ಲೇಷಿಸಿ ಅನುಸರಿಸಿದರೆ ಖಂಡಿತವಾಗಿಯೂ ಯಶಸ್ಸು ನಿಮ್ಮದಾಗುತ್ತದೆ.

S- Specific (ನಿರ್ದಿಷ್ಟತೆ)
M- Measurable (ಅಳೆಯಬಹುದಾದುದು)
A- Attainable(ಸಾಧಿಸಬಹುದಾದುದು)
R- Relevant (ಸಂಬಂಧಿತ ಅಂಶ)
T- Time-bound (ಸಮಯದ ಬದ್ಧತೆ)

S- Specific(ನಿರ್ದಿಷ್ಟ): ಅಧ್ಯಯನ ಪ್ರಾರಂಭಿಸುವ ಮೊದಲು ಏನನ್ನು ಓದಬೇಕು? ಎಂಬುದರ ಬಗ್ಗೆ ನಿರ್ದಿಷ್ಟತೆ ಇರಬೇಕು. ಆಯ್ಕೆ ಮಾಡಿಕೊಂಡ ಕಲಿಕಾಂಶದಲ್ಲಿ ಯಾವುದು ಪರೀಕ್ಷೆಗೆ ಉಪಯುಕ್ತ ಎಂಬ ಖಚಿತತೆ ಇರಬೇಕು. ಖಚಿತಪಡಿಸಿಕೊಂಡ ಅಂಶಕ್ಕೆ ಹೆಚ್ಚು ಒತ್ತು ಕೊಟ್ಟು ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕು. ಅಗತ್ಯವಿದ್ದಲ್ಲಿ ಟಿಪ್ಪಣಿ ಮಾಡಿಕೊಳ್ಳಬೇಕು.

M- Measurable(ಅಳೆಯಬಹುದಾದುದು): ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕಲಿಕಾಂಶವನ್ನು ಅಳೆಯಲು ಸೂಕ್ತ ಮಾಪನಗಳಿರಬೇಕು. ಅಧ್ಯಯನದ ವಿಷಯವನ್ನು ಮೌಲ್ಯಮಾಪನಕ್ಕೆ ಒಳಪಡಿಸಬೇಕು. ಅದು ಸ್ವಮೌಲ್ಯಮಾಪನವಾಗಿರಬಹುದು ಅಥವಾ ಎರಡನೇ ವ್ಯಕ್ತಿಯಿಂದಾಗುವ ಮೌಲ್ಯಮಾಪನವಾಗಿರಬಹುದು. ವಿಷಯವನ್ನು ಖಚಿತ ಮಾಪನಗಳೊಂದಿಗೆ ಅಳತೆಗೆ ಒಳಪಡಿಸಬೇಕು. ಇದರಿಂದ ಕಲಿಕಾ ನ್ಯೂನತೆಗಳ ಬಗ್ಗೆ ಸ್ಪಷ್ಟತೆ ದೊರೆಯುತ್ತದೆ. ಇದನ್ನು ಸರಿಪಡಿಸಿಕೊಂಡು ಪುನಃ ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು.

A-Attainable(ಸಾಧಿಸಬಹುದಾದುದು): ಸಾಧಿಸಲು ಸಾಧ್ಯವಾದ ಅಂಶವನ್ನು ಓದಲು ಆಯ್ಕೆ ಮಾಡಿಕೊಳ್ಳಬೇಕು. ಅಂದರೆ ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾದ ಅಧ್ಯಯನ ನಿಮಗೆ ಯಶಸ್ಸು ತಂದುಕೊಡುತ್ತದೆ. ನಿಗದಿತ ಸಮಯದಲ್ಲಿ ಅಧ್ಯಯನಕ್ಕೊಂದು ಎಲ್ಲೆ ಹಾಕಿಕೊಳ್ಳಬೇಕು. ನಿಗದಿತ ಸಮಯದಲ್ಲಿಯೇ ಅದನ್ನು ಪೂರೈಸುವ ಹಾಗೂ ಮೌಲ್ಯಮಾಪನಕ್ಕೆ ಒಳಪಡಿಸಿ ಕಲಿತದ್ದನ್ನು ಖಾತ್ರಿಪಡಿಸಿಕೊಳ್ಳುವ ಹಂಬಲ ಇರಬೇಕು. ಆಗ ಮಾತ್ರ ನಿಮ್ಮ ಗುರಿಯನ್ನು ಸಾಧಿಸಲು ಸಮರ್ಥರಾಗುತ್ತೀರಿ.

R- Relevant (ಸಂಬಂಧಿತ ಅಂಶ): ಅಧ್ಯಯನ ಮಾಡಿ ಖಾತ್ರಿಪಡಿಸಿಕೊಂಡ ಅಂಶವನ್ನು ಪ್ರಚಲಿತ ಘಟನೆಗಳೊಂದಿಗೆ ತೂಗಿ ನೋಡಬೇಕು. ಪ್ರಚಲಿತ ಅಂಶಗಳು ನಿಮ್ಮ ಜ್ಞಾನವನ್ನು ಒರೆಗೆ ಹಚ್ಚುವ ಸಹಸಂಬಂಧಿತ ಅಂಶಗಳಾಗಿವೆ. ಪ್ರಚಲಿತ ವಿಷಯಗಳಿಗಾಗಿ ದಿನಪತ್ರಿಕೆ ಹಾಗೂ ವೃತ್ತಪತ್ರಿಕೆಗಳ ಅಧ್ಯಯನ ಹೆಚ್ಚು ಪರಿಣಾಮಕಾರಿಯಾಗಿದೆ.

T- Time-bound (ಸಮಯ ಬದ್ಧತೆ): ನಿಗದಿತ ಗುರಿ ಸಾಧನೆಗೆ ಸಮಯಕ್ಕೆ ಬದ್ಧವಾಗಿ ಅಧ್ಯಯನ ಮಾಡುವುದು ಮಹತ್ವದ್ದು. ಅಧ್ಯಯನ ಮಾಡಲು ದೊರೆಯುವ ಸಮಯಕ್ಕೆ ಅನುಗುಣವಾಗಿ ದಿನಚರಿಯನ್ನು ಹೊಂದಿಸಿಕೊಳ್ಳಬೇಕು. ನಿಗದಿತ ವೇಳಾಪಟ್ಟಿಯಂತೆ ಅಧ್ಯಯನ ಮಾಡಬೇಕು. ಅಧ್ಯಯನದ ವೇಳೆ ಪ್ರತಿ ನಿಮಿಷವೂ ಅಮೂಲ್ಯ. ಅನಗತ್ಯ ಚಟುವಟಿಕೆಗಳಿಗೆ ಸಮಯವನ್ನು ವ್ಯರ್ಥಗೊಳಿಸದೆ ನಿಗದಿತ ಅಧ್ಯಯನಕ್ಕೆ ಮಾತ್ರ ಸಮಯವನ್ನು ಬದ್ಧತೆಯಿಂದ ಬಳಸಿಕೊಳ್ಳಬೇಕು. ಅಂದಾಗ ಮಾತ್ರ ಯಶಸ್ಸು ನಿಮ್ಮದಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯು ನಿಮ್ಮ ಸಾಮಾನ್ಯ ಶಾಲಾ ಅಥವಾ ಕಾಲೇಜು ಶಿಕ್ಷಣಕ್ಕಿಂತ ಭಿನ್ನವಾಗಿರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ದೀರ್ಘಾವಧಿಯ ಅಧ್ಯಯನದ ಅಗತ್ಯವಿದೆ. ಎಲ್ಲಾ ವಿಷಯಗಳನ್ನು ಒಂದೇ ಹಂತಕ್ಕೆ ಅಧ್ಯಯನ ಮಾಡಲು ಸಾಧ್ಯವಿಲ್ಲ. ಹಾಗಾಗಿ ಕಲಿಕೆಯ ಅಂಶವನ್ನು ಹಂತಹಂತವಾಗಿ ಆಯ್ಕೆ ಮಾಡಿಕೊಂಡು, ಸ್ಮಾರ್ಟ್ ತಂತ್ರ ಬಳಸಿ ಅಧ್ಯಯನ ಮಾಡಿ.

ಮಗ ಧೂಮಪಾನ ಮಾಡಿದರೆ ಏನು ಮಾಡಬಹುದು?

ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

● **ನನ್ನ ಮಗ ಕದ್ದು ಧೂಮಪಾನ ಮಾಡುತ್ತಾನೆ ಎಂಬ ಗುಮಾನಿ ಇದೆ. ಅದರಿಂದ ಅವನನ್ನು ಹೊರತರುವುದು ಹೇಗೆ?**

ಗುಮಾನಿ ಇದ್ದ ಮಾತ್ರಕ್ಕೆ ಅದು ನಿಜವಾಗಿರಲಿಕ್ಕಿಲ್ಲ. ಸುಮ್ಮನೆ ಚಿಂತಿಸಬೇಡಿ. ಮಾಡದ ತಪ್ಪಿಗೆ ಶಿಕ್ಷೆ ನೀಡುವುದಾಗಲಿ, ಹಂಗಿಸಿ ಮಾತನಾಡುವುದಾಗಲಿ ಮಾಡಬೇಡಿ. ಅವನು ಧೂಮಪಾನ ಮಾಡಿದ್ದು ನಿಜವಾಗಿದ್ದರೆ ಆಗಲೂ ಗದರಬೇಡಿ. ಹಾಳಾದೆ ಎಂದು ಕಿರುಚಾಡಬೇಡಿ. ಬೈದು, ಹೊಡೆದು ಮಾಡುವುದರಿಂದ ಇನ್ನೂ ಅವಮಾನವಾಗುತ್ತದೆ. ಆಗ ಅವನು ಇನ್ನೂ ಕೆರಳುತ್ತಾನೆ. ಮೊದಲಿಗೆ ಅವನ ಗೆಳೆಯರ ಹವ್ಯಾಸಗಳ ಬಗ್ಗೆ ತಿಳಿದುಕೊಳ್ಳಿ. ದುಶ್ಚಟಗಳಿರುವ ಗೆಳೆಯರ ಸಹವಾಸದಿಂದ ದೂರವಿರುವಂತೆ ಮನವೊಲಿಸಿ. ಸಜ್ಜನರ ಸಹವಾಸ ಹಾಗೂ ಸದಭಿರುಚಿಯ ಹವ್ಯಾಸಗಳ ಮಹತ್ವವನ್ನು ತಿಳಿಸಿ. ಇವೆಲ್ಲಕ್ಕಿಂತಲೂ ಮೊದಲು ಆಗಾಗ ಮಗನ ಎದುರು ಧೂಮಪಾನದಿಂದಾಗುವ ಅನಾಹುತಗಳ ಬಗ್ಗೆ ತೀರ ಸಹಜವಾಗಿ ಮಾತನಾಡಿ. ನೀವು ಧೂಮಪಾನ ಮಾಡುವ ಪಾಲಕರಾಗಿದ್ದರೆ ಹಾಗೆಲ್ಲ ಮಾತನಾಡುವುದು ಕಷ್ಟ. ಸಹಜವಾಗಿಯೇ ಮಗ ಧೂಮಪಾನಿಯಾಗುವ ಸಾಧ್ಯತೆಯೂ ಹೆಚ್ಚಾಗಿರುತ್ತದೆ.

ಮಕ್ಕಳು ಏಕೆ ಧೂಮಪಾನವನ್ನು ಶುರುಮಾಡುತ್ತಾರೆ ಎನ್ನುವುದನ್ನು ಪಾಲಕರು ಮೊದಲು ತಿಳಿದುಕೊಳ್ಳಬೇಕು. ಬಹುತೇಕ ಧೂಮಪಾನ ಮಾಡುವ ಪಾಲಕರ ಮಕ್ಕಳು ಸಹಜವಾಗಿ ಅದನ್ನು ಶುರುಮಾಡುತ್ತಾರೆ. ಸಹೋದರರಿಂದ, ಗೆಳೆಯರಿಂದ, ಸಿನಿಮಾಗಳಿಂದ ಪ್ರಭಾವಿತರಾಗಿ, ಕುತೂಹಲಕ್ಕಾಗಿಯೂ ಧೂಮಪಾನ ಮಾಡಬಹುದು. ಒತ್ತಡದಿಂದಲೂ, ಕೀಳರಿಮೆಯಿಂದಲೂ, ಸೋಲಿನ ಭಯದಿಂದಲೂ, ಖಿನ್ನತೆಯಿಂದಲೂ, ಸಿಗರೇಟಿನ ಆಕರ್ಷಣೆಯಿಂದಲೂ ಅಥವಾ ತಾನು ಧೂಮಪಾನ ಮಾಡುವುದರಿಂದ ಯಾರನ್ನೋ ಸೋಲಿಸಿದೆ, ತಾನು ಗೆದ್ದೆ ಎನ್ನುವ ಕ್ಷಣಿಕ ಸಮಾಧಾನಕ್ಕಾಗಿಯೂ ಧೂಮಪಾನ ಮಾಡಬಹುದು. ಹದಿಹರೆಯದಲ್ಲಿ ಈ ಚಟಕ್ಕೆ ಬೀಳುವವರ ಸಂಖ್ಯೆ ಹೆಚ್ಚು.

ಮಗನ ವಯಸ್ಸು, ಮನೆಯ ಪರಿಸರದ ಬಗ್ಗೆ ವಿವರಗಳನ್ನು ಕೊಟ್ಟಿಲ್ಲ. ಇರಲಿ; ನಿಮಗೆ ಒಬ್ಬನೇ ಮಗನಾಗಿದ್ದು, ಮೊದಲಿನಿಂದಲೂ ಅವನ ಎಲ್ಲ ತಪ್ಪುಗಳನ್ನೂ ಖಂಡಿಸುತ್ತಾ, ಆತ ತಪ್ಪನ್ನು ಮಾಡದೇ ಬೆಳೆಯಬೇಕು ಎನ್ನುವ ಆಸೆಯಿಂದ ಅವನಿಗೆ ಹೊಡೆದು, ಬಡಿದು, ಬೈಯ್ದು ಮಾಡಿದ್ದರೆ, ಆತ ಪರೀಕ್ಷೆಯಲ್ಲಿ ನಪಾಸಾದಾಗಲೂ, ನೀವು ಅವನನ್ನು ನಿಂದಿಸಿ ಶಿಕ್ಷಿಸಿದ್ದರೆ, ಆತ ಹದಿಹರೆಯಕ್ಕೆ ಬರುತ್ತಿದ್ದಂತೆಯೇ, ತೀವ್ರವಾದ ಮಾನಸಿಕ ಒತ್ತಡದಿಂದಾಗಿ ಧೂಮಪಾನವನ್ನು ಮಾಡಬಹುದು.

ಮಗ ಧೂಮಪಾನ ಮಾಡುತ್ತಿದ್ದಾನೆ ಎನ್ನುವುದನ್ನು ಪತ್ತೆ ಮಾಡಿ, ಅವನನ್ನು ಹೊಡೆದು ಬಡಿದು ಮನೆಯಿಂದ ಹೊರಗೆ ಹಾಕುವ ಮಾತನಾಡಬಹುದು. ಅವನನ್ನು ನಿಯಂತ್ರಿಸಲು ಪ್ರಯತ್ನಿಸಬಹುದು. ಹಾಗೆ ಮಾಡುವುದರಿಂದ ಅವನು ಸುಧಾರಿಸಲಿಕ್ಕಿಲ್ಲ. ಬದಲಾಗಿ ಆತ ಇನ್ನೂ ಕೆಟ್ಟ ಚಟಗಳಿಗೆ ದಾಸನಾಗಬಹುದು. ಪರಿಸ್ಥಿತಿ ಬಿಗಡಾಯಿಸುತ್ತದೆ. ಎಲ್ಲರ ಮನಸ್ಸಿನ ನೆಮ್ಮದಿ ಹಾಳಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳಿ.

ನೀವು ಕಳೆದು ಬಂದಿರುವ ಹದಿಹರೆಯದ ದಿನಗಳನ್ನು ಮರೆಯಬೇಡಿ. ಅವನು ಸಂಪೂರ್ಣ ಏಕಾಂಗಿಯಾಗದಂತೆ, ಕುಗ್ಗದಂತೆ ನೋಡಿಕೊಳ್ಳಿ. ಆತ ತನ್ನ ಸ್ವಾತಂತ್ರ್ಯಕ್ಕಾಗಿ ಚಡಪಡಿಸಬಹುದು. ಆತ ಅಂತರ್ಮುಖಿಯಾಗಿ ನರಳುತ್ತಿರಬಹುದು. ಇಂಥ ಸನ್ನಿವೇಶದಲ್ಲಿ ಮಗನಿಗೆ ಆಸರೆಯಾಗಿ, ಸಂತೈಸಿರಿ. ತಪ್ಪು ಮಾಡುತ್ತಾ ಕಲಿತುಕೊಳ್ಳುತ್ತಾ ಬೆಳೆಯುವುದನ್ನು ಪ್ರೋತ್ಸಾಹಿಸಿ. ಅವನ ಜೊತೆಗೆ ನೀವೂ ಹೊಸತನ್ನು ಕಲಿಯುತ್ತಿದ್ದೀರಿ ಎನ್ನುವುದನ್ನು ಗಮನಿಸಿ. ಅವನಿಗೆ ಸಿಗರೇಟಿನಿಂದ ಸಿಗುವುದಕ್ಕಿಂತ ಹೆಚ್ಚು ಭರವಸೆ ಹಾಗೂ ನೆಮ್ಮದಿ ನಿಮ್ಮಿಂದ, ಮನೆಯಲ್ಲಿ ಸಿಗುವಂತೆ ವರ್ತಿಸಿರಿ.

ವಿದ್ಯಾರ್ಥಿ ವೇತನ ಕೈಪಿಡಿ

ನರೋತ್ತಮ್ ಸೇಖ್ಸರಿಯಾ ಸ್ಕಾಲರ್‌ಶಿಪ್

ನರೋತ್ತಮ್ ಸೇಖ್ಸರಿಯಾ ಫೌಂಡೇಷನ್ ನೀಡುವ ನೆರವು ಇದಾಗಿದ್ದು, ದೇಶ ಮತ್ತು ವಿದೇಶಿ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಬಯಸುವ ಭಾರತೀಯ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡಲಿದೆ.

ಅರ್ಹತೆ: ಅರ್ಜಿದಾರರು ಭಾರತದ ಪ್ರಜೆಯಾಗಿರಬೇಕು. ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವೀಧರರಾಗಿರಬೇಕು. 2025ರ ಜನವರಿ 31ಕ್ಕೆ 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. 2025ರ ಶರತ್ಕಾಲದಲ್ಲಿ ಆರಂಭವಾಗುವ ಸ್ನಾತಕೋತ್ತರ ಪದವಿಯನ್ನು ಭಾರತದಲ್ಲಿ ಅಥವಾ ವಿದೇಶದಲ್ಲಿ ಉನ್ನತ ಶ್ರೇಣಿಯ ಸಂಸ್ಥೆಗಳಲ್ಲಿ ಪಡೆಯಲು ಯೋಜಿಸಿರಬೇಕು.

ಆರ್ಥಿಕ ಸಹಾಯ: ಮಾರ್ಗದರ್ಶನ ಬೆಂಬಲವನ್ನು ಒಳಗೊಂಡಂತೆ ಹಣಕಾಸಿನ ಸಹಾಯಕ್ಕಾಗಿ ಬಡ್ಡಿರಹಿತ ಸಾಲವನ್ನು ಈ ವಿದ್ಯಾರ್ಥಿವೇತನವು ನೀಡುತ್ತದೆ.

ಅರ್ಜಿ ಸಲ್ಲಿಸಲು ಕೊನೆ ದಿನ: 17-03-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಮಾಹಿತಿಗೆ: Short Url: www.b4s.in/pjvi/NSSP1

ಜೆಎನ್ ಟಾಟಾ ಎಂಡೋಮೆಂಟ್ ಲೋನ್ ಸ್ಕಾಲರ್‌ಶಿಪ್

ವಿದೇಶಗಳಲ್ಲಿ ಉನ್ನತ ಅಧ್ಯಯನ ಕೈಗೊಳ್ಳುವ ಆಸಕ್ತಿಯಿರುವ ಭಾರತೀಯ ವಿದ್ಯಾರ್ಥಿಗಳಿಂದ ಎಂಡೋಮೆಂಟ್ ಲೋನ್ ಸ್ಕಾಲರ್‌ಶಿಪ್‌ಗಾಗಿ(ಸಾಲಕ್ಕಾಗಿ) ಅರ್ಜಿ ಆಹ್ವಾನಿಸಿದೆ. ಲೋನ್ ಸ್ಕಾಲರ್‌ಶಿಪ್‌ಗೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಭಾಗಶಃ 'ಟ್ರಾವೆಲ್ ಗ್ರಾಂಟ್' ಮತ್ತು 'ಗಿಫ್ಟ್ ಅವಾರ್ಡ್'ಗೆ ಶಿಫಾರಸು ಮಾಡಬಹುದಾಗಿದ್ದು ಇದು ಅವರ ಸಾಗರೋತ್ತರ ಅಧ್ಯಯನದಲ್ಲಿನ ಅವರ ಶೈಕ್ಷಣಿಕ ಕಾರ್ಯಕ್ಷಮತೆಗೆ ಸಂಬಂಧಿಸಿದೆ.

ಅರ್ಹತೆ: ಕನಿಷ್ಠ ಯಾವುದಾದರೂ ಒಂದು ಪದವಿ ಪೂರ್ಣಗೊಳಿಸಿರಬೇಕು ಅಥವಾ ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ಕಾಲೇಜು/ಸಂಸ್ಥೆಯಲ್ಲಿ ಪದವಿಯ ಅಂತಿಮ ವರ್ಷದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ವಿದೇಶದಲ್ಲಿ ಸ್ನಾತಕೋತ್ತರ/ಡಾಕ್ಟರೇಟ್/ಪೋಸ್ಟ್ ಡಾಕ್ಟರಲ್ ಅಧ್ಯಯನಗಳನ್ನು ಮುಂದುವರಿಸಲು ಸಿದ್ಧರಿರಬೇಕು.

ಕೋರ್ಸ್‌ನ ಕನಿಷ್ಠ ಅವಧಿಯು 2 ವರ್ಷಗಳಾಗಿದ್ದು, ಲೋನ್ ಸ್ಕಾಲರ್‌ಶಿಪ್ ನೀಡುವ ವೇಳೆ, ಕೋರ್ಸ್ ಪೂರ್ಣಗೊಳಿಸಲು ಕನಿಷ್ಠ ಒಂದು ಪೂರ್ಣ ಶೈಕ್ಷಣಿಕ ವರ್ಷ ಬಾಕಿ ಇರುವ ವಿದ್ಯಾರ್ಥಿಗಳಿಗೆ ಮಾತ್ರ ಇದು ಅನ್ವಯಿಸುತ್ತದೆ. ಇದು ಸಾಮಾನ್ಯವಾಗಿ ಜುಲೈ ವೇಳೆಯಲ್ಲಿ ಜಾರಿಯಲ್ಲಿರುತ್ತದೆ.

ವಿದ್ಯಾರ್ಥಿಗಳು ತಮ್ಮ ಪದವಿ ಅಥವಾ ಸ್ನಾತಕೋತ್ತರ ಪದವಿಯಲ್ಲಿ ಸರಾಸರಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿ ಸಲ್ಲಿಸಲು ಗರಿಷ್ಠ ವಯಸ್ಸು 45 ವರ್ಷ (2025ರ ಜೂನ್ 30)

ಆರ್ಥಿಕ ಸಹಾಯ: ₹ 10 ಲಕ್ಷದವರೆಗಿನ ಲೋನ್ ಸ್ಕಾಲರ್‌ಶಿಪ್.

ಅರ್ಜಿ ಸಲ್ಲಿಸಲು ಕೊನೆಯ ದಿನ: 07-03-2025
ಅರ್ಜಿ ಸಲ್ಲಿಕೆಯ ವಿಧಾನ: ಆನ್‌ಲೈನ್
ಮಾಹಿತಿಗೆ: Short Url:www.b4s.in/pjvi/JNT9

ಕ್ವಾಡ್ ಫೆಲೋಷಿಪ್

ಕ್ವಾಡ್ ಫೆಲೋಶಿಪ್ 2025ಅನ್ನು ಆಸ್ಟ್ರೇಲಿಯಾ, ಭಾರತ, ಜಪಾನ್ ಮತ್ತು ಯುನೈಟೆಡ್ ಸ್ಟೇಟ್ಸ್‌ನ ಸರ್ಕಾರಗಳು ಪ್ರಾರಂಭಿಸಿದ್ದು, ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಎಜುಕೇಶನ್ (ಐಐಇ) ಇದನ್ನು ನಿರ್ವಹಿಸುತ್ತದೆ. ಈ ಕ್ವಾಡ್ ದೇಶಗಳ ಮತ್ತು ಹತ್ತು ಆಸಿಯಾನ್ (ಎಎಸ್‌ಇಎಎನ್) ಸದಸ್ಯ ರಾಷ್ಟ್ರಗಳ ಭವಿಷ್ಯದ ವಿಜ್ಞಾನಿಗಳು ಮತ್ತು ತಂತ್ರಜ್ಞರನ್ನು ಸಂಪರ್ಕಿಸುವ ಗುರಿಯನ್ನು ಇದು ಹೊಂದಿದ್ದು, 2025ರಿಂದ ಆರಂಭವಾಗುತ್ತದೆ.

ಅರ್ಹತೆ: ಭಾರತ ಸೇರಿದಂತೆ ನಿರ್ದಿಷ್ಟ ರಾಷ್ಟ್ರಕ್ಕೆ ಸಂಬಂಧಿಸಿದಂತೆ ಪೌರತ್ವ ಪಡೆದಿರಬೇಕು. ಅರ್ಜಿದಾರರು ಕನಿಷ್ಠ 18 ವರ್ಷ ವಯಸ್ಸಿನವರಾಗಿರಬೇಕು. 2025ರ ಆಗಸ್ಟ್‌ನೊಳಗೆ ಸ್ಟೆಮ್ ಕ್ಷೇತ್ರದಲ್ಲಿ ಪದವಿ ಅಥವಾ ತತ್ಸಮಾನ ಪದವಿಯನ್ನು ಪಡೆದಿರಬೇಕು. ವಿದ್ಯಾರ್ಥಿಗಳು ಪದವಿಪೂರ್ವ ಶೈಕ್ಷಣಿಕ ಸಾಧನೆಯಲ್ಲಿ ಅಸಾಧಾರಣ ದಾಖಲೆಯನ್ನು ಹೊಂದಿರುವವರಾಗಿರಬೇಕು.

ಆರ್ಥಿಕ ಸಹಾಯ:$40,000ದ ಒಂದು-ಬಾರಿಯ ಸ್ಟೈಪೆಂಡ್ ಮತ್ತು ಇತರ ಪ್ರಯೋಜನಗಳನ್ನು ಫೆಲೋಷಿಪ್ ಒದಗಿಸುತ್ತದೆ.

ಅರ್ಜಿ ಸಲ್ಲಿಸಲು ಕೊನೆ ದಿನ: 03-03-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಮಾಹಿತಿಗೆ : Short Url:www.b4s.in/pjvi/QUFD1

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

54) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಭಾರತದಲ್ಲಿ ಅರಣ್ಯ ಹೊಂದಿರುವ ಪ್ರದೇಶದಲ್ಲಿ ಕರ್ನಾಟಕದ ಸ್ಥಾನ ಯಾವುದು?
ಎ) 23 ಬಿ) 13
ಸಿ) 26 ಡಿ) 17
ಉತ್ತರ:– (ಬಿ) 13

2) ಸ್ವಸಹಾಯ ಸಮೂಹಗಳ ರಚನೆಯ ಉದ್ದೇಶ..........
ಎ) ನಗರಾಭಿವೃದ್ಧಿ ಬಿ) ಮಹಿಳಾ ಸಬಲೀಕರಣ
ಸಿ) ಕೈಗಾರಿಕೀರಣ ಡಿ) ವಿದೇಶಿ ವ್ಯಾಪಾರಕ್ಕೆ ಉತ್ತೇಜನ
ಉತ್ತರ:– (ಬಿ) ಮಹಿಳಾ ಸಬಲೀಕರಣ (ಆಗಸ್ಟ್ 2024)

3). ....ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ ಆಗಿದ್ದರು.
ಎ) ಸರೋಜಿನಿ ನಾಯ್ಡು ಬಿ) ವಿಜಯಲಕ್ಷ್ಮಿ ಪಂಡಿತ್
ಸಿ) ಲಕ್ಷ್ಮಿ ಸೆಹಗಲ್ ಡಿ) ಅನಿಬೆಸೆಂಟ್
ಉತ್ತರ:– (ಡಿ) ಅನಿಬೆಸೆಂಟ್

4) ಭಾರತದಲ್ಲಿಯೇ ಅತ್ಯಂತ ಎತ್ತರವಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆ
ಎ) ಭಾಕ್ರಾ-ನಂಗಲ್ ಯೋಜನೆ ಬಿ) ಕೋಸಿ ಯೋಜನೆ
ಸಿ) ದಾಮೋದರ ನದಿಕಣಿವೆ ಯೋಜನೆ
ಡಿ) ತುಂಗಭದ್ರಾ ಯೋಜನೆ
ಉತ್ತರ:– ಭಾಕ್ರಾನಂಗಲ್ ಯೋಜನೆ (ಆಗಸ್ಟ್ 2024)

5) ಭಾರತದಿಂದ ಆಭ್ರಕದ ರಫ್ತು ಪ್ರಮಾಣ ಕಡಿಮೆಯಾಗುತ್ತಿರಲು ಕಾರಣ...............
ಎ) ಅಭ್ರಕ ನಿಕ್ಷೇಪಗಳು ಖಾಲಿಯಾಗುತ್ತಿವೆ
ಬಿ) ಚೀನಾ ಅತ್ಯಂತ ಹೆಚ್ಚು ಅಭ್ರಕ ತಯಾರಿಸುತ್ತಿದೆ.
ಸಿ) ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ
ಡಿ) ಅಭ್ರಕದ ಬೆಲೆ ದುಬಾರಿಯಾಗುತ್ತಿದೆ
ಉತ್ತರ:– (ಸಿ) ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ

6) ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು,. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು.
ಮೇಲಿನ ಟಿಪ್ಪಣಿ ಯಾರಿಗೆ ಸರಿಹೊಂದುತ್ತದೆ?
ಎ) ನಾಲ್ವಡಿ ಕೃಷ್ಣರಾಜ ಒಡೆಯರು
ಬಿ) ಜಯಚಾಮರಾಜ ಒಡೆಯರ್
ಸಿ) ರಾಜ ಒಡೆಯರ್ ಡಿ) ಮೇಲಿನ ಯಾರೂ ಅಲ್ಲ
ಉತ್ತರ:– (ಎ) ನಾಲ್ವಡಿ ಕೃಷ್ಣರಾಜ ಒಡೆಯರು

7) ಗಿರೀಶನು ಖರೀದಿಯಲ್ಲಿ ತನಗಾದ ಅನ್ಯಾಯದ ವಿರುದ್ಧ ರಾಜ್ಯ ಗ್ರಾಹಕ ಆಯೋಗಕ್ಕೆ ದೂರು ಸಲ್ಲಿಸಿರುವನು, ಅವನಿಗಾದ ಅನ್ಯಾಯದ ಮೌಲ್ಯವು..................... (ಆಗಸ್ಟ್ 2024)
ಎ) ಒಂದು ಕೊಟಿ ರೂಪಾಯಿಗಳಿಗಿಂತ ಹೆಚ್ಚು
ಬಿ) ಇಪತ್ತು ಲಕ್ಷದಿಂದ ಒಂದುಕೋಟಿ ರೂಪಾಯಿಗಳು
ಸಿ) ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆ
ಡಿ) ಹತ್ತು ಲಕ್ಷದಿಂದ ಇಪ್ಪತ್ತು ಲಕ್ಷ ರೂಪಾಯಿಗಳು
ಉತ್ತರ:– (ಬಿ) ಇಪತ್ತು ಲಕ್ಷದಿಂದ ಒಂದುಕೋಟಿ ರೂಪಾಯಿಗಳು

8) ಭಾರತದಲ್ಲಿ ಮೊದಲ ವೈಸರಾಯ್ ಆಗಿ ನೇಮಕವಾದವರು ಯಾರು?
.ಎ) ಲಾರ್ಡ್ ಕ್ಯಾನಿಂಗ್ ಬಿ) ಲಾರ್ಡ್ ಮಿಂಟೊ
ಸಿ) ಲಾರ್ಡ್ ವಾರನ್ ಹೇಸ್ಟಿಂಗ್
ಡಿ) ಲಾರ್ಡ್ ಮೆಟ್ಕಾಫ್
ಉತ್ತರ:–(ಎ) ಲಾರ್ಡ್ ಕ್ಯಾನಿಂಗ್

9) ಭಾರತದಲ್ಲಿ ಮೊಟ್ಟಮೊದಲು ಆಧುನಿಕ ಯೋಜನೆಯ ಬಗ್ಗೆ ಚಿಂತಿಸಿ ಅದರ ಬಗ್ಗೆ ಪುಸ್ತಕವೊಂದನ್ನು ಬರೆದವರು ಯಾರು?
ಎ) ಡಾ॥ ಎಂ. ಎಸ್. ಸ್ವಾಮಿನಾಥನ್
ಬಿ) ಜವಾಹರ್ ಲಾಲ್ ನೆಹರು
ಸಿ) ಇಂದಿರಾ ಗಾಂಧಿ
ಡಿ) ಸರ್ ಎಂ. ವಿಶ್ವೇಶ್ವರಯ್ಯನವರು.
ಉತ್ತರ:– (ಡಿ) ಸರ್ ಎಂ. ವಿಶ್ವೇಶ್ವರಯ್ಯನವರು

10) ಹೊಂದಿಸಿ ಬರೆಯಿರಿ:–

ಪಟ್ಟಿ–1	ಪಟ್ಟಿ–2
(1). ನೀಲಿ ಕ್ರಾಂತಿ	ಎ) ಮೀನುಗಳ ಉತ್ಪಾದನೆ
(2). ಹಳದಿ ಕ್ರಾಂತಿ	ಬಿ) ಎಣ್ಣೆ ಬೀಜಗಳ ಉತ್ಪಾದನೆ
(3) ಬಿಳಿ ಕ್ರಾಂತಿ	ಸಿ) ಹಾಲು ಉತ್ಪಾದನೆ
(4). ಬೆಳ್ಳಿ ಕ್ರಾಂತಿ	ಡಿ) ಮಾಂಸದ ಉತ್ಪಾದನೆ
(5). ಬಂಗಾರ ಕ್ರಾಂತಿ	ಇ) ಹಣ್ಣು/ಹೂಗಳ ಉತ್ಪಾದನೆ
(6). ಕೆಂಪು ಕ್ರಾಂತಿ	ಎಫ್) ಮೊಟ್ಟೆಗಳ ಉತ್ಪಾದನೆ

ಉತ್ತರ:– 1)ಎ 2)ಬಿ 3–ಸಿ 4–ಎಫ್ 5–ಇ 6–ಡಿ

11) ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ ಯಾವುದು?
ಎ) ಕಾಜಿರಂಗ ನ್ಯಾಷನಲ್ ಪಾರ್ಕ್–ಅಸ್ಸಾಂ.
ಬಿ) ಹಜಾರಿಭಾಗ ನ್ಯಾಷನಲ್ ಪಾರ್ಕ್– ಬಿಹಾರ.
ಸಿ) ಗಿರ್ ನ್ಯಾಷನಲ್ ಪಾರ್ಕ್‌ಗುಜರಾತ.
ಡಿ) ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನ– ಉತ್ತರಾಂಚಲ
ಉತ್ತರ:–(ಡಿ) ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನ– ಉತ್ತರಾಂಚಲ

12) ಮಕ್ಕಳ ಸಹಾಯವಾಣಿ ಸಂಖ್ಯೆ ಯಾವುದು?
ಎ) 1089 ಬಿ) 1098
ಸಿ) 101 ಡಿ) 108
ಉತ್ತರ:–(ಬಿ) 1098

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

11) ದಸ್ತಕ್ ಅನ್ನು ದುರುಪಯೋಗಪಡಿಸಿಕೊಂಡ ಪರಿಣಾಮ ಯಾವ ಯುದ್ಧಗಳು ನಡೆದವು?
ಉತ್ತರ:– ಪ್ಲಾಸಿ ಮತ್ತು ಬಕ್ಸಾರ್ ಕದನಗಳು

12) ಭಾರತದಲ್ಲಿ ಮಹಲ್ವಾರಿ ಪದ್ಧತಿ ಪ್ರಯೋಗಿಸಿದವರು ಯಾರು?
ಉತ್ತರ:– ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

13) ಮೈಸೂರಿಗೆ ಬಂದಿದ್ದ ವಿವೇಕಾನಂದರಿಗೆ ಆಶ್ರಯ ನೀಡಿ ಅವರು ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ಹೋಗಲು ಸಹಾಯ ಮಾಡಿದವರು ಯಾರು?
ಉತ್ತರ:– ಚಾಮರಾಜೇಂದ್ರ ಒಡೆಯರ್

14) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?
ಉತ್ತರ:– ಮಾರ್ತಾಂಡ ವರ್ಮ

15) ಎರಡನೆಯ ಕಾರ್ನಾಟಿಕ್ ಯುದ್ಧವು ಯಾವ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು?
ಉತ್ತರ:– ಎರಡನೆಯ ಕಾರ್ನಾಟಿಕ್ ಯುದ್ಧವು 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು.

16) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ಯಾರು?
ಉತ್ತರ:– 'ಅಸಫ್ ಜಾ'

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC MATHS

REVISION : MODEL QUESTIONS

38. Consider the experiment of tossing two fair coins simultaneously, find the probability that both are head given that at least one of them is a head.

Ans:- S = {HH, HT, TH, TT} & events A = {HH}; B={HH, HT, TH}

$A \cap B = \{HH\}$ $P(A \cap B) = \frac{1}{4}$ $P(B) = \frac{1}{4}$ $P(A) = \frac{1}{4}$

$$P(A/B) = \frac{P(A \cap B)}{P(B)} = \frac{\frac{1}{4}}{\frac{3}{4}} = \frac{1}{3}$$

39) in the blanks by choosing the appropriate answer from those given in the bracket (-1, 0, 1, 2, 3, 5,)

1) The value of $\cos\left(\frac{\pi}{3} + \sin^{-1}\left(\frac{1}{2}\right)\right) =$ ________

Ans:- 0

2. The number of points at which f(x)=[x], where [x] is greatest integer function is discontinuous in the interval (-2, 2) is ________

Ans:- 3

3.

$$\int_0^{\frac{\pi}{2}} \left(\sin^2 \frac{x}{2} - \cos^2 \frac{x}{2}\right) dx =$$

Ans:- -1

4.
If $(2\vec{a} - 3\vec{b}) \times (3\vec{a} - 2\vec{b}) = \lambda(\vec{a} \times \vec{b})$ **then the value of λ is** ______

Ans:- 9

5. Probability of solving a specific problem independently by A and B are 1/2 and 1/3 respectively. If both try to solve the problem then the probability that the problem is solved is $k/3$ **, then the value of k is** ________

Ans:- 2

40) Find 'k' if area of the triangle with vertices (2,-6) , (5,4) and (k,4) is 35 square units.

Ans:-

Given, the vertices of the triangle are (2, -6), (5, 4) and (k, 4);

$$\Delta \text{ Area of} = \Delta = \frac{1}{2}\begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix}$$

$x_1 = 2, y_1 = 6, x_2 = 5, y_2 = 4, x_3 = k, y_3 = 4$

Δ Area of ± 35

$$\pm 35 = \frac{1}{2}[2(4-4) + 6(5-k) + k(120-4k)$$

$$\Rightarrow \pm 35 = \frac{1}{2}[2 \times 0 + 6(5-k) + 1(20-4k)]$$

$$\Rightarrow \pm 70 = 6(5-k) + 20 - 4k$$

$$\Rightarrow \pm 70 = 30 - 6k + 20 - 4k$$

$$\Rightarrow \pm 70 = 50 - 10k$$

$$\Rightarrow \pm 70 = 5 - k$$

$7 = 5 - k$

$\Rightarrow k = 5 - 7$

$k = -2$

$-7 = 5 - k$

$\Rightarrow -12 = -k$

41) Prove that the function : N → Y defined by f(x) = x^2 where Y = (y : y = x^2, x ε N} is invertible also write the inverse of f(x).

Ans:- Let $x^2 = y : x = \sqrt{y}$

Define $g : Y \Rightarrow N$ by $g(y) = \sqrt{y}$, $y \in Y$

Consider $gof(x) = g[f(x)] = g(x^2) = \sqrt{x^2} = x = I_N$

Consider $fog(y) = f(g(y)) = f\left(\sqrt{y}\right) = \left(\sqrt{y}\right)^2 = y = I_y$

$\therefore$ gof (x) = I_N and fog(x) = I_Y hence inverse of f exist and its inverse is g (x)

$\Rightarrow f^1(x) = \sqrt{x}$

42. If $A = \begin{bmatrix} 1 & 2 \\ 2 & 1 \end{bmatrix}, B = \begin{bmatrix} 2 & 0 \\ 1 & 3 \end{bmatrix}, C = \begin{bmatrix} 1 & 1 \\ 2 & 3 \end{bmatrix}$

Calculate AB, AC, A(B + C)

Verify that AB + AC = A(B + C)

$$\text{Ans :- } AC = \begin{bmatrix} 1 & 2 \\ 2 & 1 \end{bmatrix}\begin{bmatrix} 1 & 1 \\ 2 & 3 \end{bmatrix} = \begin{bmatrix} 1+4 & 1+6 \\ 2+2 & 2+3 \end{bmatrix} = \begin{bmatrix} 5 & 7 \\ 4 & 5 \end{bmatrix}$$

$$BC = \begin{bmatrix} 2 & 0 \\ 1 & 3 \end{bmatrix}\begin{bmatrix} 1 & 1 \\ 2 & 3 \end{bmatrix} = \begin{bmatrix} 2+0 & 2+0 \\ 1+6 & 1+9 \end{bmatrix} = \begin{bmatrix} 2 & 2 \\ 7 & 10 \end{bmatrix}$$

$$AC + BC = \begin{bmatrix} 5 & 7 \\ 4 & 5 \end{bmatrix} + \begin{bmatrix} 2 & 2 \\ 7 & 10 \end{bmatrix} = \begin{bmatrix} 7 & 9 \\ 11 & 5 \end{bmatrix} \text{.........(1)}$$

$$A + B = \begin{bmatrix} 1 & 2 \\ 2 & 1 \end{bmatrix} + \begin{bmatrix} 2 & 0 \\ 1 & 3 \end{bmatrix} = \begin{bmatrix} 3 & 2 \\ 3 & 4 \end{bmatrix}$$

$$(A+B)C = \begin{bmatrix} 3 & 2 \\ 3 & 4 \end{bmatrix}\begin{bmatrix} 1 & 1 \\ 2 & 3 \end{bmatrix} = \begin{bmatrix} 7 & 9 \\ 11 & 15 \end{bmatrix} \text{.............(2)}$$

From (1) and (2) (Ab + AC) = A(B+C)

42. Solve the following system of equations by matrix method: x + y + z = 6 y = 3z = 11 x – 2y + z = 0.

$$\text{Ans :- } A = \begin{bmatrix} 1 & 1 & 1 \\ 0 & 1 & 3 \\ 1 & -2 & 1 \end{bmatrix}; X = \begin{bmatrix} x \\ y \\ z \end{bmatrix} \text{ and } B = \begin{bmatrix} 6 \\ 11 \\ 0 \end{bmatrix}$$

AX = B

$$|A| = \begin{vmatrix} 1 & 1 & 1 \\ 0 & 1 & 3 \\ 1 & -2 & 1 \end{vmatrix} = 1(1+6) - 1(0-3) + (0-0) = 9$$

$$\text{adj}A = \begin{bmatrix} \begin{vmatrix} 1 & 3 \\ -2 & 1 \end{vmatrix} & -\begin{vmatrix} 3 & -3 \\ -1 & 1 \end{vmatrix} & \begin{vmatrix} 3 & 0 \\ -1 & 3 \end{vmatrix} \\ -\begin{vmatrix} -3 & 2 \\ 3 & 1 \end{vmatrix} & \begin{vmatrix} 7 & 2 \\ -1 & 1 \end{vmatrix} & -\begin{vmatrix} 7 & -3 \\ -1 & 3 \end{vmatrix} \\ \begin{vmatrix} -3 & 2 \\ 0 & -3 \end{vmatrix} & -\begin{vmatrix} 7 & 2 \\ 3 & -3 \end{vmatrix} & \begin{vmatrix} 7 & -3 \\ 3 & 0 \end{vmatrix} \end{bmatrix}^T = \begin{vmatrix} 7 & 3 & -1 \\ -3 & 0 & 3 \\ 2 & -3 & 1 \end{vmatrix}^T$$

(Contd...)

ತಿ.ನರಸೀಪುರದಲ್ಲಿರುವ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನಕ್ಕೆ ಸಕಲ ಸಿದ್ಧತೆ

13ನೇ ಕುಂಭಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯ ತಿ.ನರಸೀಪುರದಲ್ಲಿರುವ ತ್ರಿವೇಣಿ ಸಂಗಮದಲ್ಲಿ ಸೋಮವಾರ (ಫೆ.10) ಮೂರು ದಿನಗಳ ಕುಂಭಮೇಳ ಆರಂಭವಾಗಲಿದ್ದು, ಲಕ್ಷಾಂತರ ಭಕ್ತರು ಪುಣ್ಯಸ್ನಾನ ಮಾಡಲಿದ್ದಾರೆ.

ದಕ್ಷಿಣ ಪ್ರಯಾಗ ಎಂದೇ ಖ್ಯಾತಿ ಪಡೆದಿರುವ ತಿರುಮಕೂಡಲಿನಲ್ಲಿ ನಡೆಯುತ್ತಿರುವ 13ನೇ ಕುಂಭಮೇಳ ಇದಾಗಿದೆ. ಜೀವನದಿಗಳಾದ ಕಾವೇರಿ, ಕಪಿಲಾ ಹಾಗೂ ಗುಪ್ತಗಾಮಿನಿಯಾಗಿ ಹರಿಯುವ 'ಸ್ಫಟಿಕ' ನದಿಯ ಸಂಗಮದಲ್ಲಿ ಜನರು ಮಿಂದೇಳಲಿದ್ದಾರೆ.

ಜಿಲ್ಲಾಡಳಿತದ ಎಲ್ಲ ಸಿದ್ಧತೆಗಳು ಪೂರ್ಣಗೊಂಡಿವೆ. ಭಾನುವಾರವೂ ನದಿ ಸಂಗಮದಲ್ಲಿ ಭಕ್ತರು ಪುಣ್ಯಸ್ನಾನ ಮಾಡಿ, ಗುಂಜಾ ನರಸಿಂಹಸ್ವಾಮಿ, ಅಗಸ್ತೇಶ್ವರ ಸ್ವಾಮಿ ದೇಗುಲಗಳಲ್ಲಿ ಪೂಜೆ ಸಲ್ಲಿಸಿದರು.

ಮೈಸೂರು ಜಿಲ್ಲೆ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ನಡೆಯಲಿರುವ ಕುಂಭಮೇಳಕ್ಕೆ ಅಂತಿಮ ಸಿದ್ಧತೆಗಳು ಭಾನುವಾರ ಭರದಿಂದ ನಡೆದವು

ಸೋಮವಾರ ಬೆಳಿಗ್ಗೆ 9ಕ್ಕೆ ಅಗಸ್ತ್ಯೇಶ್ವರ ಸ್ವಾಮಿ ದೇಗುಲದಲ್ಲಿ ಅನುಜ್ಞೆ, ಪುಣ್ಯಾಹ, ಗಣಹೋಮ, ಪೂರ್ಣಾಹುತಿ, ಅಭಿಷೇಕ, ಮಹಾಮಂಗಳಾರತಿ ನೆರವೇರಲಿದೆ. ಸಂಜೆ 5 ಗಂಟೆಗೆ ಧಾರ್ಮಿಕ ಸಭೆ, ಅತಿಥಿಗಳಿಂದ ಉದ್ಘಾಟನೆ ಮತ್ತು ಧ್ವಜಾರೋಹಣ ನೆರವೇರಲಿದೆ.

ನದಿ ತಟದಲ್ಲಿ ಸ್ವಾಮೀಜಿಗಳಿಗೆ ಕುಟೀರ ವ್ಯವಸ್ಥೆ ಮಾಡಲಾಗಿದ್ದು, ಸಾಧುಗಳು–ಮಠಾಧೀಶರಿಗೆ ನಡುಹೊಳೆ ಬಸಪ್ಪನ ಸನ್ನಿಧಿಯಲ್ಲಿ ಸ್ನಾನಕ್ಕೆ ಸ್ಥಳ ಮೀಸಲಿರಿಸಲಾಗಿದೆ. ಅತಿ ಗಣ್ಯರ ಸ್ನಾನಕ್ಕೆ ಪ್ರತ್ಯೇಕ ಸ್ಥಳವನ್ನು ನಿಗದಿ ಮಾಡಲಾಗಿದೆ.

12ರಂದು ಬೆಳಿಗ್ಗೆ 9ರಿಂದ 9.30ರೊಳಗೆ ಪವಿತ್ರ ಕುಂಭಸ್ನಾನ ನಡೆಯಲಿದ್ದು, ಅಹಿತಕರ ಘಟನೆಗಳು ನಡೆಯದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗಿದೆ. ನದಿ ಪಾತ್ರದ ಹಲವೆಡೆ ಮುಳುಗುತಜ್ಞರು, ತೆಪ್ಪ– ದೋಣಿ ನಿಯೋಜಿಸಲಾಗಿದೆ. ಅಗ್ನಿಶಾಮಕ ದಳ ಹಾಗೂ ನೂರಾರು ಪೊಲೀಸರು ಸರ್ವ ಸನ್ನದ್ಧರಾಗಿದ್ದಾರೆ. ಸರ್ಕಾರ ಕುಂಭಮೇಳಕ್ಕೆ ₹6 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ಸುಗ್ರೀವಾಜ್ಞೆ ವಾಪಸಿಗೆ ಕಾಂಗ್ರೆಸ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಲಗಾರರಿಗೆ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರರು ಕಿರುಕುಳ ನೀಡುವುದನ್ನು ತಪ್ಪಿಸಲು ರಾಜ್ಯ ಸರ್ಕಾರ ರೂಪಿಸಿದ್ದ ಸುಗ್ರೀವಾಜ್ಞೆಯನ್ನು ಬಿಜೆಪಿಯವರು ರಾಜ್ಯಪಾಲರ ಮೇಲೆ ಒತ್ತಡ ಹೇರಿ ವಾಪಸು ಕಳುಹಿಸುವಂತೆ ಮಾಡಿದ್ದಾರೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸುಗ್ರೀವಾಜ್ಞೆ ಜಾರಿಗೆ ಬಂದರೆ ರಾಜ್ಯ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬಹುದೆಂದು ಈ ಕೆಲಸ ಮಾಡಿದ್ದಾರೆ' ಎಂದು ದೂರಿದರು.

ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಚ್.ಎಂ. ರೇವಣ್ಣ ಮಾತನಾಡಿ, 'ಸಾಲಗಾರರಿಗೆ ರಕ್ಷಣೆ ನೀಡಲು ಸುಗ್ರೀವಾಜ್ಞೆ ಅತೀ ಅಗತ್ಯವಾಗಿತ್ತು. ರಿಸರ್ವ್ ಬ್ಯಾಂಕಿನ ನಿಯಮಗಳಿಗೆ ಅಡಿಯಲ್ಲಿ ಈ ಸುಗ್ರೀವಾಜ್ಞೆಯನ್ನು ಸಿದ್ಧಪಡಿಸಲಾಗಿತ್ತು. ಆದರೆ, ಅದನ್ನು ವಾಪಸ್ ಕಳುಹಿಸಿರುವ ರಾಜ್ಯಪಾಲರ ನಡೆದ ಒಪ್ಪುವಂಥದ್ದಲ್ಲ' ಎಂದರು.

ಕಾರ್ಡ್ ಬದಲು ತಾತ್ಕಾಲಿಕ ಪತ್ರ ನೀಡುತ್ತಿರುವ ಆರ್‌ಟಿಒಗಳು

ಪೂರೈಕೆಯಾಗದ ಆರ್.ಸಿ ಕಾರ್ಡ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ವಾಹನ ಮಾಲೀಕರಿಗೆ ನೀಡುವ ನೋಂದಣಿ ಪ್ರಮಾಣಪತ್ರ ಕಾರ್ಡ್ (ಆರ್‌ಸಿ ಕಾರ್ಡ್), ಚಾಲನಾ ಪರವಾನಗಿ (ಡಿಎಲ್) ಕಾರ್ಡ್ ಸಿಗುತ್ತಿಲ್ಲ. ಮೂರು ತಿಂಗಳಿನಿಂದ ತಾತ್ಕಾಲಿಕವಾಗಿ ಪತ್ರ ನೀಡಲಾಗುತ್ತಿದೆ.

ಕಾರ್ಡ್ ಪೂರೈಸುವ ಗುತ್ತಿಗೆಯನ್ನು ರೋಸ್‌ಮೆರ್ಟ ಟೆಕ್ನಾಲಜಿ ಸಂಸ್ಥೆ ಪಡೆದುಕೊಂಡಿತ್ತು. ಅದರ ಅವಧಿ 15 ವರ್ಷಗಳಾಗಿದ್ದು, 2024ರ ಫೆಬ್ರುವರಿಯಲ್ಲಿ ಕೊನೆಗೊಂಡಿತ್ತು. ಹೊಸ ಟೆಂಡರ್ ಪ್ರಕ್ರಿಯೆ ಆರಂಭವಾಗಿತ್ತು. ಪೂರೈಸಲಾರದ ಷರತ್ತುಗಳನ್ನು ಟೆಂಡರ್‌ನಲ್ಲಿ ವಿಧಿಸಲಾಗಿದೆ ಎಂದು ಪ್ರಕ್ರಿಯೆಯಲ್ಲಿ ಭಾಗವಹಿಸದ ಕಂಪನಿಯೊಂದು ನ್ಯಾಯಾಲಯದ ಮೆಟ್ಟಿಲೇರಿತ್ತು. ಇದರಿಂದ ಕಾರ್ಡ್ ವಿತರಣೆ ಸ್ಥಗಿತಗೊಂಡಿತ್ತು.

ಆರ್‌ಸಿ, ಡಿಎಲ್ ಪಡೆಯುವವರಿಗೆ ತೊಂದರೆ ಆಗಬಾರದು ಎಂಬ ಕಾರಣಕ್ಕೆ ಮತ್ತೆ ಮೂರು ತಿಂಗಳು ಕಾರ್ಡ್ ಪೂರೈಸಲು ಹಿಂದಿನ ಗುತ್ತಿಗೆದಾರರಿಗೆ ಹೆಚ್ಚುವರಿ ಅವಧಿ ನೀಡಲಾಗಿತ್ತು. ಆದರೂ, ಕಾರ್ಡ್ ದೊರೆಯದೇ ವಾಹನ ಚಾಲಕರು, ಮಾಲೀಕರು ಪರದಾಡುತ್ತಿದ್ದಾರೆ.

'ನನ್ನ ವಾಹನಕ್ಕೆ ಸಂಬಂಧಿಸಿ ಆರ್‌ಸಿ ಕಾರ್ಡ್ ಇನ್ನೂ ದೊರತಿಲ್ಲ. ಶಿವಮೊಗ್ಗ ಆರ್‌ಟಿಒ ಕಚೇರಿಯಲ್ಲಿ ವಿಚಾರಿಸಿದಾಗ ಕಾರ್ಡ್‌ಗಳು ಬರುತ್ತಿಲ್ಲ ಎಂಬ ಉತ್ತರ ಬಂತು. ತಾತ್ಕಾಲಿಕವಾಗಿ ಈ ನೋಂದಣಿಗೆ ಸಂಬಂಧಿಸಿ ಈ ಪತ್ರ ಇಟ್ಟುಕೊಳ್ಳಿ ಎಂದು ವಾಹನದ ಮಾಹಿತಿ ಇರುವ ಪತ್ರ ನೀಡಿದ್ದಾರೆ. ಆದರೆ, ಇದು ಮೂಲ ನೋಂದಣಿ ಪತ್ರಕ್ಕೆ ಬದಲಿ ಅಲ್ಲ ಎಂದು ಬರೆದಿದೆ. ಮಾನ್ಯತೆ ಇಲ್ಲದಿದ್ದರೆ ಈ ಪತ್ರ ಏಕೆ ನೀಡಬೇಕು' ಎಂದು ಶಿವಮೊಗ್ಗದ ಸುಧೀರ್ ಪ್ರಶ್ನಿಸಿದರು.

ವಾಹನ ಚಾಲನಾ ಪರವಾನಗಿ

'ಕಾರ್ಡ್‌ಗಳು ಅಗತ್ಯ ಇರುವಷ್ಟು ಪೂರೈಕೆ ಆಗದ್ದರಿಂದ ಸಮಸ್ಯೆಯಾಗಿದೆ. ಬಂದ ಕಾರ್ಡ್‌ಗಳನ್ನು ವಿತರಿಸುತ್ತಿದ್ದೇವೆ. ಉಳಿದವರಿಗೆ ವಾಹನದ ವಿವರಗಳುಳ್ಳ ಪತ್ರವನ್ನು ನೀಡುತ್ತಿದ್ದೇವೆ' ಎಂದು ಬೆಂಗಳೂರಿನ ಪ್ರಾದೇಶಿಕ ಸಾರಿಗೆ ಅಧಿಕಾರಿಯೊಬ್ಬರು ತಿಳಿಸಿದರು.

ಮುದ್ರಣ ಪ್ರಗತಿಯಲ್ಲಿ: 'ಕೆಲವರು ಕೋರ್ಟ್ ಮೆಟ್ಟಿಲೇರಿದ್ದರಿಂದ ಸಮಸ್ಯೆಯಾಗಿತ್ತು. ಈಗ ಕಾರ್ಡ್‌ಗಳು ಮುದ್ರಣವಾಗುತ್ತಿವೆ. ಆದ್ಯತೆ ಮೇರೆಗೆ ಮೊದಲು ವಾಣಿಜ್ಯ ವಾಹನಗಳ ಆರ್‌ಸಿ ಕಾರ್ಡ್ ನೀಡುತ್ತಿದ್ದೇವೆ. ನಿತ್ಯ ಸುಮಾರು 17 ಸಾವಿರ ಕಾರ್ಡ್ ಒದಗಿಸಲಾಗುತ್ತಿದೆ. ಅದರಲ್ಲಿ 13 ಸಾವಿರ ಹೊಸತು ಮತ್ತು ಹಿಂಬಾಕಿ ಪ್ರಕರಣಗಳಲ್ಲಿ 4,000 ಕಾರ್ಡ್‌ಗಳನ್ನು ನಿತ್ಯ ನೀಡಲಾಗುತ್ತಿದೆ. ನಾಲ್ಕೈದು ದಿನಗಳಲ್ಲಿ ಬಾಕಿ ಇರುವ ಎಲ್ಲ ಕಾರ್ಡ್‌ಗಳ ಪೂರೈಕೆಯಾಗಲಿದೆ' ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ಮಾಹಿತಿ ನೀಡಿದರು.

ಕೋರ್ಟ್‌ನಲ್ಲಿ ಪ್ರಕರಣ ಇತ್ಯರ್ಥವಾಗಿ ಹೊಸ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಸರ್ಕಾರದ ಅನುಮೋದನೆ ಸಿಕ್ಕಿದ ಮೇಲೆ ಸ್ಮಾರ್ಟ್ ಚಾಲನಾ ಪರವಾನಗಿ (ಡಿಎಲ್), ನೋಂದಣಿ ಪ್ರಮಾಣಪತ್ರ ಕಾರ್ಡ್ ನೀಡುವ ಪ್ರಕ್ರಿಯೆ ಆರಂಭವಾಗಲಿದೆ ಎಂದು ತಿಳಿಸಿದರು.

13ರ ಒಳಗೆ ವಿತರಣೆ ಪೂರ್ಣ: ಸಚಿವ

ರಾಮಲಿಂಗಾ ರೆಡ್ಡಿ

'ಕೆಲವರು ಕೋರ್ಟ್ ಮೆಟ್ಟಿಲೇರಿದ್ದು ಸೇರಿ ಕೆಲವು ಕಾರಣಗಳಿಂದ ಕಾರ್ಡ್ ವಿತರಣೆಗೆ ತೊಡಕಾಗಿತ್ತು. ಈಗ ಕಾರ್ಡ್ ವಿತರಣೆ ಮಾಡಲಾಗುತ್ತಿದ್ದು, ಫೆ.13ರ ಒಳಗೆ ಬಾಕಿ ಇರುವ ಎಲ್ಲರಿಗೂ ಆರ್‌ಸಿ, ಡಿಎಲ್ ಕಾರ್ಡ್‌ಗಳ ವಿತರಣೆ ಪೂರ್ಣಗೊಳ್ಳಲಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

'ಹಾಲಿನ ಪ್ರೋತ್ಸಾಹಧನ ₹2 ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದಿಂದ ಹಾಲಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ಮುಂಬರುವ ಬಜೆಟ್‌ನಲ್ಲಿ ಪ್ರತಿ ಲೀಟರ್ ₹2ರಂತೆ ಹೆಚ್ಚಿಸಿ ಘೋಷಣೆ ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ ಗೂಳಿಗೌಡ ಮನವಿ ಮಾಡಿದ್ದಾರೆ.

'ವಿವಿಧ ಜಿಲ್ಲೆಗಳ 16 ಹಾಲು ಒಕ್ಕೂಟಗಳಿಗೆ ಪ್ರತಿ ದಿನ ಸುಮಾರು 15.26 ಲಕ್ಷ ರೈತರು ಹಾಲು ಮಾರಾಟ ಮಾಡುತ್ತಿದ್ದಾರೆ. ಪ್ರತಿ ದಿನ ಸರಾಸರಿ 83 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಸದ್ಯ ಪ್ರತಿ ಲೀಟರ್ ಹಾಲಿಗೆ ₹ 5 ಪ್ರೋತ್ಸಾಹ ಧನ ನೀಡುತ್ತಿದ್ದು, ಹೆಚ್ಚುವರಿಯಾಗಿ ₹ 2ರಂತೆ ನೀಡಬೇಕು' ಎಂದು ಅವರು ಮನವಿ ಮಾಡಿದ್ದಾರೆ.

'ಬೇಸಿಗೆಯಲ್ಲಿ ಹಸಿ ಮೇವು ಸಿಗದ ಕಾರಣ ಹಾಲು ಉತ್ಪಾದನೆ ಕಡಿಮೆಯಾಗುತ್ತಿದೆ. ಪಶು ಆಹಾರದ ಬೆಲೆ ಕೂಡ ಇತ್ತೀಚೆಗೆ ಹೆಚ್ಚಿದೆ. ಇದರಿಂದ ಪ್ರತಿ ಕ್ವಿಂಟಲ್ ಪಶು ಆಹಾರದ ಮೇಲೆ ₹ 100 ರಿಯಾಯಿತಿ ನೀಡಿ ಮಾರಾಟ ಮಾಡಿದರೆ ರೈತರಿಗೆ ಅನುಕೂಲ ಆಗಲಿದೆ. ಹೀಗಾಗಿ, ಪಶುಆಹಾರಕ್ಕೆ ಸಬ್ಸಿಡಿ ಅಥವಾ ರಿಯಾಯಿತಿಯನ್ನು ಬಜೆಟ್‌ನಲ್ಲಿ ಘೋಷಿಸಬೇಕು' ಎಂದೂ ಅವರು ಕೋರಿದ್ದಾರೆ.

'ಕಳೆದ ತಿಂಗಳಿಗೆ ಹೋಲಿಸಿದರೆ ಈ ತಿಂಗಳ ಸರಾಸರಿ ಹಾಲು ಉತ್ಪಾದನೆಯ ಪ್ರಮಾಣ ಸುಮಾರು 7 ಲಕ್ಷ ಲೀಟರ್ ಇಳಿಕೆಯಾಗಿದೆ. ಪ್ರೋತ್ಸಾಹಧನ ಹೆಚ್ಚಿಸುವ ಮೂಲಕ ಹೈನುಗಾರರಿಗೆ ನೆರವು ನೀಡಬೇಕಿದೆ' ಎಂದೂ ಅವರು ಹೇಳಿದ್ದಾರೆ.

ಉತ್ತರ ಪ್ರದೇಶದ ಪ್ರಯಾಗರಾಜ್ ಕುಂಭಮೇಳದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪತ್ನಿ ಉಷಾ ಅವರೊಂದಿಗೆ ಭಾನುವಾರ ಪುಣ್ಯಸ್ನಾನ ಮಾಡಿದರು

'ಯುಜಿಸಿ ಕರಡು ನಿಯಮ' ಪರಿಷ್ಕರಣೆಗೆ ಆಗ್ರಹ

ಗೊಂದಲ ಪರಿಹರಿಸಲು ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಕರಡು ನಿಯಮಗಳು 2025'ರಲ್ಲಿ ಹಲವು ಗೊಂದಲ ಹಾಗೂ ಅಸ್ಪಷ್ಟ ಅಂಶಗಳಿದ್ದು, ಅವುಗಳಿಗೆ ಸ್ಪಷ್ಟನೆ ನೀಡಬೇಕು' ಎಂದು ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ ಯುಜಿಸಿಯನ್ನು ಆಗ್ರಹಿಸಿದೆ.

ವೇದಿಕೆಯ ಅಧ್ಯಕ್ಷ ಪ್ರೊ. ಎಸ್. ಚಂದ್ರಶೇಖರ್ ಶೆಟ್ಟಿ ಮತ್ತು ಕಾರ್ಯದರ್ಶಿ ಎಚ್. ಮಹೇಶಪ್ಪ ಅವರು ಈ ಸಂಬಂಧ ಯುಜಿಸಿ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದಾರೆ.

ಕುಲಪತಿ ಹಾಗೂ ಅಧ್ಯಾಪಕರ ನೇಮಕಾತಿಯ ಅರ್ಹತೆ, ರಾಜ್ಯ ಸರ್ಕಾರದ ಪ್ರಾತಿನಿಧ್ಯ, ಪದವಿ ವ್ಯಾಸಂಗದಲ್ಲಿ ಗೊಂದಲಕಾರಿ ಅಂಶಗಳಿವೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದು, ಅವುಗಳಿಗೆ ಸ್ಪಷ್ಟನೆ ನೀಡುವಂತೆ ಕೋರಿದ್ದಾರೆ.

ಮೀಸಲಾತಿ ನೀತಿ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಪದಾಧಿಕಾರಿಗಳು, 'ಮೂರು ವರ್ಷಗಳ ಪದವಿ ಮತ್ತು ಎರಡು ವರ್ಷಗಳ ಸ್ನಾತಕೋತ್ತರ ಪದವೀಧರ ಅಭ್ಯರ್ಥಿಗಳಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತದೆಯೆ? ಇಲ್ಲವೆ? ಎಂಬ ಬಗ್ಗೆ ಕರಡು ನಿಯಾಮವಳಿಯಲ್ಲಿ ಸ್ಪಷ್ಟ ಮಾಹಿತಿ ಇಲ್ಲ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ನ್ಯಾಷನಲ್ ಕ್ರೆಡಿಟ್ ಫ್ರೇಮ್‌ವರ್ಕ್ (ಎನ್‌ಸಿಆರ್‌ಎಫ್) ಎಂಬ ಹೊಸ ನಿಯಮಗಳು ಸೆಮಿಸ್ಟರ್ ಮತ್ತು ಆಯ್ಕೆ ಆಧಾರಿತ ಕ್ರೆಡಿಟ್ ಸಿಸ್ಟಮ್ (ಸಿಬಿಸಿಎಸ್) ಅಭ್ಯರ್ಥಿಗಳನ್ನು ಬೋಧನಾ ಹುದ್ದೆಗಳಿಗೆ ಅನರ್ಹಗೊಳಿಸಬಹುದು. ಹಾಗೇನಾದರೂ ಆದಲ್ಲಿ ಆ ಅಭ್ಯರ್ಥಿಗಳ ಭವಿಷ್ಯವೇನು' ಎಂದು ಅವರು ಪ್ರಶ್ನಿಸಿದ್ದಾರೆ.

'ರಾಷ್ಟ್ರೀಯ ಶಿಕ್ಷಣ ನೀತಿ 2020' ಅನ್ನು ಇನ್ನೂ ಜಾರಿಗೆ ತರದ ರಾಜ್ಯಗಳು ಈ ಕರಡು ನೀತಿಯಿಂದ ತೊಂದರೆ ಎದುರಿಸಬೇಕಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿರುವ ವೇದಿಕೆಯವರು, 'ಇದು ಅನೇಕ ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ಹುದ್ದೆಯ ಆಕಾಂಕ್ಷಿಗಳನ್ನು ಅವಕಾಶ ವಂಚಿತರನ್ನಾಗಿಸುವ ಸಾಧ್ಯತೆ ಇದೆ' ಎಂದು ಹೇಳಿದ್ದಾರೆ.

'ಕರಡು ನಿಯಮಗಳಲ್ಲಿರುವ ಮೀಸಲಾತಿ ಅಂಶಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಮಹಿಳೆಯರು, ಗ್ರಾಮೀಣ ಮತ್ತು ಅಂಗವಿಕಲ ಅಭ್ಯರ್ಥಿಗಳ ಮೀಸಲಾತಿಗೆ ಸಮಸ್ಯೆಯಾಗಲಿದೆ. ವಿಶ್ವವಿದ್ಯಾಲಯದ ವಿವಿಧ ಸಮಿತಿಗಳಿಂದ ರಾಜ್ಯ ಸರ್ಕಾರದ ನಾಮನಿರ್ದೇಶಿತ ಸದಸ್ಯರನ್ನು ಹೊರಗಿಡುವುದರ ಬಗ್ಗೆಯೂ ನಮ್ಮ ಆಕ್ಷೇಪವಿದೆ ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಇಂಥ ಅಸ್ಪಷ್ಟ ಮಾಹಿತಿ ಇರುವ ಕಾರಣ, ಎಲ್ಲಾ ರಾಜ್ಯಗಳೊಂದಿಗೆ ಮತ್ತು ಸಂಬಂಧಿಸಿದ ಎಲ್ಲ ಭಾಗಿದಾರರೊಂದಿಗೆ ಚರ್ಚಿಸಿ ಕರಡು ನಿಯಮಗಳನ್ನು ಮಾರ್ಪಡಿಸಬೇಕು, ಇಲ್ಲವೇ ಹಿಂಪಡೆಯಬೇಕು' ಎಂದು ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಬುಡಕಟ್ಟು, ಅರಣ್ಯಾಧಾರಿತ ಬುಡಕಟ್ಟು ಮುಖಂಡರ ಸಭೆ ನಿರ್ಣಯ

ಆದಿವಾಸಿಗಳೆಂದು ಘೋಷಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇರುವ ಜೇನು ಕುರುಬ, ಕೊರಗ, ಇರುಳಿಗ, ಸೋಲಿಗ ಸೇರಿದಂತೆ ನೈಜ ಬುಡಕಟ್ಟು ನಿವಾಸಿಗಳನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಪಟ್ಟಿಯಿಂದ ಕೈಬಿಟ್ಟು, 'ಆದಿವಾಸಿಗಳು' ಎಂದು ಘೋಷಿಸುವಂತೆ ಈ ಸಮುದಾಯಗಳ ಸಂಘಟನೆಗಳ ಪ್ರಮುಖರ ಸಭೆ ರಾಜ್ಯ ಸರ್ಕಾರವನ್ನು ಆಗ್ರಹಪಡಿಸಿದೆ.

ನಗರದ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ಆಯೋಜಿಸಿದ್ದ ಈ ಸಭೆಯಲ್ಲಿ ರಾಜ್ಯದ 12 ಅರಣ್ಯ ಆಧಾರಿತ ಮೂಲ ಆದಿವಾಸಿ ಬುಡಕಟ್ಟುಗಳ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ರಾಷ್ಟ್ರೀಯ ಕಾನೂನು ಶಾಲೆಯ ಸಾಮಾಜಿಕ ಒಳಗೊಳ್ಳುವಿಕೆ ಕೇಂದ್ರದ ಆರ್.ವಿ. ಚಂದ್ರಶೇಖರ್ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದರು.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮ ವ್ಯಾಪ್ತಿಯಿಂದಲೂ ಮೂಲ ಆದಿವಾಸಿಗಳನ್ನು ಕೈಬಿಟ್ಟು, ಹಿಂದೆ ಇದ್ದ ಆದಿವಾಸಿ ಅಭಿವೃದ್ಧಿ ಮಂಡಳಿಯನ್ನು ಪುನರ್ ರಚಿಸಬೇಕು. ಮಹದೇಶ್ವರ ಬೆಟ್ಟದಲ್ಲಿ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಈ ನಿಗಮದ ಸ್ಥಾಪನೆ ಘೋಷಿಸಬೇಕು ಮತ್ತು ಆದಿವಾಸಿಗಳಿಗೆ ಮೂಲಸೌಕರ್ಯ ಒದಗಿಸುವ ಕುರಿತು ನಿರ್ಣಯ ಕೈಗೊಳ್ಳಬೇಕು' ಎಂದು ನಿರ್ಣಯದಲ್ಲಿ ಒತ್ತಾಯಿಸಲಾಗಿದೆ.

'ಈಗ ಇರುವ ಮೂಲ ಆದಿವಾಸಿಗಳ ಅಧ್ಯಯನ ಕೇಂದ್ರವನ್ನು ಕರ್ನಾಟಕ ಆದಿವಾಸಿಗಳ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಾಗಿ ಘೋಷಿಸಿ, ಬಜೆಟ್‌ನಲ್ಲಿ ₹5 ಕೋಟಿ ಅನುದಾನ ನೀಡಬೇಕು. ನಿಗಮ ಹಾಗೂ ಅಧ್ಯಯನ ಮತ್ತು ತರಬೇತಿ ಸಂಸ್ಥೆಗೆ ಮೂಲ ಆದಿವಾಸಿ ಸಮುದಾಯಗಳ ಉನ್ನತ ಶಿಕ್ಷಣ ಪಡೆದವರನ್ನು, ಅನುಭವಿ ಅಧಿಕಾರಿಗಳನ್ನು ಅಧ್ಯಕ್ಷರಾಗಿ ನೇಮಿಸಬೇಕು. ಮೂಲ ಆದಿವಾಸಿಗಳಿಗೆ ಪ್ರಾತಿನಿಧ್ಯ ನೀಡಬೇಕು' ಎಂದು ಆಗ್ರಹಿಸಲಾಗಿದೆ.

ಆದಿವಾಸಿ ಬುಡಕಟ್ಟು ಮಕ್ಕಳಿಗಾಗಿ ನಿರ್ಮಿಸಿರುವ ಆಶ್ರಮ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ರಕ್ಷಣೆಯ ಕೊರತೆಯಿದ್ದು, ಈ ಸಂಬಂಧ ಶಾಲೆಗಳಲ್ಲಿರುವ ಮೂಲಸೌಲಭ್ಯಗಳನ್ನು ಕುರಿತು ಅಧ್ಯಯನ ಮಾಡಲು ಸಮಿತಿ ರಚಿಸಬೇಕು ಎಂದು ಸಭೆ ಆಗ್ರಹಿಸಿದೆ.

‘ಬುದ್ಧಾಕ್ಷರ ಸಂಸ್ಕೃತಿ ಹೃದಯಸ್ಥ ಆಗಲಿ’

ಅಕ್ಷರ ಹಬ್ಬದ ಸಮಾರೋಪ ಸಮಾರಂಭದಲ್ಲಿ ಚಿಂತಕ ಬರಗೂರು ಅಭಿಮತ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಅಕ್ಷರ ಸಂಸ್ಕೃತಿ ಹಲವು ಬಿಕ್ಕಟ್ಟು, ಸವಾಲುಗಳನ್ನು ಎದುರಿಸುತ್ತಿದೆ. ಹೊಡಿ, ಬಡಿ, ಕಡಿ ಎಂದು ಹೇಳಲು ಹಿಂಜರಿಕೆಯೇ ಇಲ್ಲವಾಗಿದೆ. ಲಿಖಿತವಾಗಿ ಲಜ್ಜೆಗೆಡದ ಬರಹ ಹಾಗೂ ಮೌಖಿಕವಾಗಿ ನಾಗರ ಹಾವಿನ ನಾಲಿಗೆಯಂತೆ ಆಗದ ಅಕ್ಷರ ಸಂಸ್ಕೃತಿ ನಮ್ಮದಾಗಬೇಕು’ ಎಂದು ಚಿಂತಕ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಇಲ್ಲಿನ ಬಾಪೂಜಿ ಎಂಬಿಎ ಕಾಲೇಜು ಸಭಾಂಗಣದಲ್ಲಿ ದಾವಣಗೆರೆ ಸಾಹಿತ್ಯ ವೇದಿಕೆ ಹಾಗೂ ಅರಸೀ ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ ಮೂರು ದಿನಗಳ ‘ರಾಷ್ಟ್ರೀಯ ಅಕ್ಷರ ಹಬ್ಬ’ದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ‘ಮಾತು ರಕ್ತಸಿಕ್ತ, ಅಮಾನವೀಯ ಆಗುತ್ತಿರುವ ದುರಂತ ಕಾಲಘಟ್ಟದಲ್ಲಿ ನಾವಿದ್ದೇವೆ. ಮಾತು ಮಲಿನಗೊಳಿಸುವ ಶಕ್ತಿಗಳು ವಿಜೃಂಭಿಸುತ್ತಿವೆ. ಈ ಭಾಷಿಕ ಭ್ರಷ್ಟಾಚಾರವನ್ನು ವಿರೋಧಿಸುತ್ತಾ ಬುದ್ಧಾಕ್ಷರ ಸಂಸ್ಕೃತಿಯನ್ನು ಹೃದಯಸ್ಥ ಮಾಡಿಕೊಳ್ಳಬೇಕು’ ಎಂದು ಅವರು ಪ್ರತಿಪಾದಿಸಿದರು.

‘ಜಾತಿ, ಧರ್ಮ, ವರ್ಗ ಹಾಗೂ ವರ್ಣಗಳ ವಿಭಜಿತ ಸಮಾಜದಲ್ಲಿ ಬದುಕುತ್ತಿದ್ದೇವೆ. ದ್ವೇಷ ಜೀವನ ವಿಧಾನವಾಗಿದೆ. ಬೌದ್ಧಿಕ ವಲಯವೂ ವಿಭಜನೆಗೊಂಡು ಪಕ್ಷದ ವಕ್ತಾರರಾಗಿರುವ ವಿಪರ್ಯಾಸ ಮತ್ತು ವೈರುಧ್ಯಗಳ ಸಮಾಜ ನಿರ್ಮಾಣವಾಗಿದೆ.

ದಾವಣಗೆರೆಯಲ್ಲಿ ನಡೆದ ಮೂರು ದಿನಗಳ ‘ರಾಷ್ಟ್ರೀಯ ಅಕ್ಷರ ಹಬ್ಬ’ದ ಸಮಾರೋಪ ಸಮಾರಂಭದಲ್ಲಿ ರೈತ ನಾಯಕ ತೇಜಸ್ವಿ ಪಟೇಲ್, ಚಿಂತಕ ಬರಗೂರು ರಾಮಚಂದ್ರಪ್ಪ, ಪತ್ರಕರ್ತರಾದ ಶಿವಾನಂದ ತಗಡೂರು, ಸದಾನಂದ ಹೆಗಡೆ, ಸಾಹಿತಿ ಎ.ಬಿ.ರಾಮಚಂದ್ರಪ್ಪ ಹಾಜರಿದ್ದರು

ವೈರುಧ್ಯಗಳ ಜೊತೆಗೆ ಅನುಸಂಧಾನ ನಡೆಸುವ ಸಾಹಸ ಮಾಡಬೇಕಿದೆ. ಸಂತೆಯೊಳಗೆ ಇದ್ದೂ ಸಂತನಾಗುವುದನ್ನು ಸಾಹಿತಿಯು ಕಲಿಯಬೇಕಿದೆ’ ಎಂದು ಅವರು ಕಿವಿಮಾತು ಹೇಳಿದರು.

‘ಪ್ರಪಂಚದ ಯಾವ ಭಾಗದಲ್ಲಿಯೂ ಅನಕ್ಷರಸ್ಥರಿಲ್ಲ. ಅಕ್ಷರ ಎಂಬುದು ಲಿಖಿತವೂ ಹೌದು, ಮೌಖಿಕವೂ ಹೌದು. ಜನಸಾಮಾನ್ಯರ ಮೌಖಿಕಾಕ್ಷರ ಪರಂಪರೆಯಲ್ಲಿ ಸಮೃದ್ಧ ಸಾಹಿತ್ಯವಿದೆ. ಇದು ನಿಜವಾದ ಕನಸುಗಳನ್ನು ಬಿತ್ತಿದೆ’ ಎಂದು ಹೇಳಿದರು.

‘ಇತ್ತೀಚೆಗೆ ಸಾಹಿತ್ಯದ ಹಬ್ಬ, ಉತ್ಸವಗಳು ಹೆಚ್ಚಾಗಿವೆ. ಇಂತಹ ಉತ್ಸವಗಳಿಗೆ ಪಾರದರ್ಶಕತೆ, ಪರಿಕಲ್ಪನೆ ಹಾಗೂ ಕೇಂದ್ರ ಆಶಯ ಮುಖ್ಯ. ಸಾಹಿತ್ಯ ಲೋಲುಪತೆ ಆಗಬಾರದು ಎಂಬುದು ನನ್ನ ನಂಬಿಕೆ. ಹೀಗಾಗಿ, ಸ್ಟಾರ್ ಹೋಟೆಲ್‌ಗಳಲ್ಲಿ ನಡೆಯುವ ಉತ್ಸವಗಳಲ್ಲಿ ನಾನು ಪಾಲ್ಗೊಳ್ಳುತ್ತಿಲ್ಲ’ ಎಂದು ನುಡಿದರು.

‘ಕುಂಭಮೇಳದಲ್ಲಿ ಮುಳುಗಿದರೆ ಪಾಪ ನಿವಾರಣೆಯಾಗುತ್ತದೋ ಏನೊ ಗೊತ್ತಿಲ್ಲ. ಆದರೆ, ಪುಸ್ತಕ ಮೇಳದಲ್ಲಿ ಮುಳುಗೆದ್ದರೆ ಪಾಪ ನಿವಾರಣೆ ಆಗುವುದು ನಿಶ್ಚಿತ. ಮಕ್ಕಳಿಗೆ ಇದನ್ನು ಹೇಳಿಕೊಡದೇ ಹೋದರೆ ಅವರು ಕೃತಕ ಬುದ್ಧಿಮತ್ತೆ (ಆರ್ಟಿಫೀಷಿಯಲ್ ಇಂಟೆಲಿಜೆನ್ಸ್) ತರಹ ಆಗುವ ಅಪಾಯವಿದೆ’ ಎಂದು ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಕಳವಳ ವ್ಯಕ್ತಪಡಿಸಿದರು.

‘ಸಾಹಿತ್ಯ ಮತ್ತು ಪತ್ರಿಕೆಗಳು ಜನರ ಅಗತ್ಯ ವಸ್ತುಗಳ ಪಟ್ಟಿಯಲ್ಲಿಲ್ಲ. ಬದುಕಿಗೆ ಇವು ಕೂಡ ಅಗತ್ಯ ಎಂಬುದನ್ನು ಒತ್ತಿ ಹೇಳಲು ಇಂತಹ ಉತ್ಸವಗಳ ಅಗತ್ಯವಿದೆ. ಸಾಹಿತ್ಯದತ್ತ ಮಕ್ಕಳನ್ನು ಕರೆತರಬೇಕಿದೆ. ಇಲ್ಲವಾದರೆ ದೊಡ್ಡ ಓದುಗ ವರ್ಗವನ್ನು ಕನ್ನಡ ಭಾಷೆ ಕಳೆದುಕೊಳ್ಳುವ ಸಾಧ್ಯತೆ ಇದೆ’ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯೆ ದಾಕ್ಷಾಯಣಿ ಹುಡೇದ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಸಾಹಿತಿ ಎ.ಬಿ. ರಾಮಚಂದ್ರಪ್ಪ, ಪತ್ರಕರ್ತ ಸದಾನಂದ ಹೆಗಡೆ ಅವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

‘ರೂಪಾಂತರಗೊಂಡ ಅಸ್ಪೃಶ್ಯತೆ ವೈರಸ್’

ಆ ಕಾಲದ ಅಸ್ಪೃಶ್ಯತೆ ಢಾಳಾಗಿ ಕಾಣದಿರಬಹುದು. ಆದರೆ, ಈ ವೈರಸ್ ರೂಪಾಂತರಗೊಂಡಿದೆ. ಇದನ್ನು ನಿವಾರಿಸುವ ಕಡೆಗೆ ಸಾಹಿತಿಗಳು ಗಮನ ಹರಿಸಬೇಕು ಎಂದು ರೈತ ಹೋರಾಟಗಾರ ತೇಜಸ್ವಿ ಪಟೇಲ್ ಅವರು ಸಲಹೆ ನೀಡಿದರು.

‘ಸ್ವಾತಂತ್ರ್ಯ ಚಳವಳಿ, ತುರ್ತು ಪರಿಸ್ಥಿತಿ ಕಾಲಘಟ್ಟದಲ್ಲಿ ಸಾಹಿತಿಗಳು ನಿರ್ವಹಿಸಿದ ಜವಾಬ್ದಾರಿ ಈಗ ಕಾಣುತ್ತಿಲ್ಲ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಹೊಸ ರೀತಿಯಲ್ಲಿ ಜನರಿಗೆ ಕಟ್ಟಿಕೊಡುವ ಅಗತ್ಯವಿದೆ’ ಎಂದು ಅವರು ಪ್ರತಿಪಾದಿಸಿದರು.

ಕಟ್ಟಡವೇರಿದ ಆರೋಪಿ: ಆತ್ಮಹತ್ಯೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಧಾರವಾಡ: ನ್ಯಾಯಾಧೀಶರ ಮುಂದೆ ಹಾಜರುಪಡಿಸಲು ಕರೆದೊಯ್ಯುವಾಗ ತಪ್ಪಿಸಿಕೊಂಡು ಮೂರಂತಸ್ತಿನ ಕಟ್ಟಡ ಏರಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆಯೊಡ್ಡಿದ ಆರೋಪಿಯನ್ನು ಪೊಲೀಸರು ಉಪಾಯದಿಂದ ಕೆಳಗಿಳಿಸಿದ್ದಾರೆ.

ಪ್ರಕರಣವೊಂದರಲ್ಲಿ ಜಾಮೀನು ರಹಿತ ವಾರಂಟ್ ಜಾರಿಯಾಗಿದ್ದ ಆರೋಪಿ ವಿಜಯ್ ಉಣಕಲ್ ಎಂಬಾತನನ್ನು ಅಣ್ಣಿಗೇರಿ ಪೊಲೀಸರು ಭಾನುವಾರ ಧಾರವಾಡಕ್ಕೆ ಕರೆತರುವಾಗ ಆತ ತಪ್ಪಿಸಿಕೊಂಡಿದ್ದ. ಮಲಪ್ರಭಾ ನಗರದಲ್ಲಿ ಕಟ್ಟಡ ಏರಿ, ನ್ಯಾಯಾಧೀಶರನ್ನು ಸ್ಥಳಕ್ಕೆ ಕರೆಸುವಂತೆ ಒತ್ತಾಯಿಸಿದ್ದ. ತಪ್ಪಿದರೆ ಕಟ್ಟಡದಿಂದ ಬಿದ್ದು ಸಾಯುವುದಾಗಿ ಹೆದರಿಸಿದ್ದ. ಪೊಲೀಸರು ಉಪಾಯವಾಗಿ

ಮೂರಂತಸ್ತಿನ ಕಟ್ಟಡ ಏರಿದ್ದ ಆರೋಪಿಯನ್ನು ಉಪಾಯದಿಂದ ಕೆಳಗಿಳಿಸಿ ಕರೆತಂದ ಪೊಲೀಸರು

ಆತನನ್ನು ಕೆಳಗಿಳಿಸಿ ಜೈಲಿಗೆ ಕಳಿಸಿದ್ದಾರೆ.

‘ಕೋಟ್ ಧರಿಸಿದ್ದ ಅತಿಥಿ ಉಪನ್ಯಾಸಕರೊಬ್ಬರನ್ನು ಆರೋಪಿಗೆ ತೋರಿಸಿ ನ್ಯಾಯಾಧೀಶರು ಬಂದಿರುವುದಾಗಿ ಹೇಳಿ ಕೆಳಕ್ಕೆ ಇಳಿಸಿದೆವು’ ಎಂದು ಎಸಿಪಿ ಪ್ರಶಾಂತ ಸಿದ್ಧನಗೌಡರ ತಿಳಿಸಿದರು.

ಆರೋಪಿಯನ್ನು ಜೈಲಿಗೆ ಕಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಡ್ಡಿ ದಂಧೆ: ಮನೆ ಮೇಲೆ ದಾಳಿ, ₹26.50 ಲಕ್ಷ ವಶ

ಪ್ರಜಾವಾಣಿ ವಾರ್ತೆ

ಗದಗ: ಅವಳಿ ನಗರದಲ್ಲಿ ಅಕ್ರಮವಾಗಿ ಬಡ್ಡಿ ದಂಧೆ ನಡೆಸುತ್ತಿದ್ದ ವ್ಯಕ್ತಿಗಳ ಮನೆ ಮೇಲೆ ದಾಳಿ ನಡೆಸಿರುವ ಪೊಲೀಸರು ಹಣ, ಖಾಲಿ ಚೆಕ್, ಖಾಲಿ ಬಾಂಡ್, ಹಣ ಎಣಿಸುವ ಯಂತ್ರಗಳು ಹಾಗೂ ಆರು ಮಂದಿ ರೌಡಿಶೀಟರ್‌ಗಳು ಸೇರಿದಂತೆ ಒಟ್ಟು 11 ಮಂದಿಯನ್ನು ಭಾನುವಾರ ವಶಕ್ಕೆ ಪಡೆದಿದ್ದಾರೆ.

ಗದಗ ಶಹರ ಪೊಲೀಸ್ ಠಾಣೆ, ಬೆಟಗೇರಿ ಪೊಲೀಸ್ ಠಾಣೆ ಹಾಗೂ ಬೆಟಗೇರಿ ಬಡಾವಣೆ ಪೊಲೀಸರು ಅವಳಿ ನಗರದಲ್ಲಿ ಏಕಕಾಲಕ್ಕೆ 12 ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಈ ವೇಳೆ ₹26.50 ಲಕ್ಷ ಹಣ ಪತ್ತೆಯಾಗಿದೆ.

‘ಅವಳಿ ನಗರದಲ್ಲಿ ಕೆಲವು ವ್ಯಕ್ತಿಗಳು ಸಾಲ ಕೊಟ್ಟು ವಸೂಲಿ ನೆಪದಲ್ಲಿ ಕಿರುಕುಳ ನೀಡುತ್ತಿದ್ದಾರೆ ಎಂಬ ದೂರುಗಳು ಬಂದಿದ್ದವು. ಭಾನುವಾರ 12 ಕಡೆಗಳಲ್ಲಿ ದಾಳಿ ನಡೆಸಿ, ಪರಿಶೀಲಿಸಿದ್ದೇವೆ. ಕೆಲವು ವ್ಯಕ್ತಿಗಳ ಬಳಿ ದಾಖಲೆ ಇಲ್ಲದ ಹಣ, ಖಾಲಿ ಚೆಕ್‌ಗಳು, ರಿಜಿಸ್ಟರ್‌ಗಳು ಸಿಕ್ಕಿವೆ. ಅವುಗಳನ್ನು ವಶಪಡಿಸಿಕೊಂಡು ಮುಂದಿನ ಕಾನೂನು ಪ್ರಕ್ರಿಯೆ ಕೈಗೊಳ್ಳಲಾಗುವುದು’ ಎಂದು ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ತಿಳಿಸಿದ್ದಾರೆ.

ವಿಮಾನಗಳ ಮೇಲೆ ಡ್ರೋನ್ ದಾಳಿ: ಬೆದರಿಕೆ ಸಂದೇಶ

ದೇವನಹಳ್ಳಿ: ಬೆಂಗಳೂರು, ಚೆನ್ನೈ, ಕೇರಳದ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗುವ ವಿಮಾನಗಳ ಮೇಲೆ ಡ್ರೋನ್ ದಾಳಿ ನಡೆಸುವುದಾಗಿ ಶನಿವಾರ ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಇ–ಮೇಲ್ ಬೆದರಿಕೆ ಸಂದೇಶ ಬಂದಿದೆ.

‘ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದೇನೆ. ಅದಕ್ಕೆ ಅವರು ಉತ್ತರ ನೀಡದಿದ್ದರೆ ಡ್ರೋನ್ ಮೂಲಕ ಬಾಂಬ್ ದಾಳಿ ನಡೆಸುತ್ತೇನೆ’ ಎಂದು ಬೆದರಿಕೆ ಒಡ್ಡಲಾಗಿದೆ. ಮಹಾಂತೇಶ್ ಎಂಬ ಹೆಸರಿನಲ್ಲಿ ಇ-ಮೇಲ್ ಬಂದಿದ್ದು, ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಹುಂಡಿ ಹಣಕ್ಕಾಗಿ 2 ಟ್ರಸ್ಟ್‌ಗಳ ಸದಸ್ಯರ ನಡುವೆ ವಾಗ್ವಾದ, ಹಲ್ಲೆ

ಪ್ರಜಾವಾಣಿ ವಾರ್ತೆ

ಹೊಳೆಹೊನ್ನೂರು (ಶಿವಮೊಗ್ಗ ಜಿಲ್ಲೆ): ಸಮೀಪದ ಹಕ್ಕಿಪಿಕ್ಕಿ ಕ್ಯಾಂಪ್‌ನಲ್ಲಿರುವ ಚರ್ಚ್‌ನಲ್ಲಿ ಹುಂಡಿ ಹಣದ ವಿಚಾರವಾಗಿ ಎರಡು ಟ್ರಸ್ಟ್‌ಗಳ ಸದಸ್ಯರ ನಡುವೆ ವಾಗ್ವಾದ ನಡೆದಿದ್ದು, ಹಲ್ಲೆಗೆ ಕಾರಣವಾಗಿದೆ.

ಹಕ್ಕಿಪಿಕ್ಕಿ ಕ್ಯಾಂಪ್‌ನಲ್ಲಿರುವ ಚರ್ಚ್ ಹಳೆಯ ಮತ್ತು ಹೊಸ ಟ್ರಸ್ಟ್ ಒಳಗೊಂಡಿದೆ. ‘ಭಕ್ತರು ಚರ್ಚ್‌ನ ಹುಂಡಿಗೆ ಹಾಕುವ ಕಾಣಿಕೆ ಹಣ ನಮಗೇ ಸೇರಬೇಕು’ ಎಂದು ಎರಡೂ ಬಣದವರು ವಾಗ್ವಾದ ನಡೆಸಿದ್ದಾರೆ. ಹಣ ದುರ್ಬಳಕೆಯಾಗಿದೆ ಎಂದು ಪರಸ್ಪರ ಆರೋಪಿಸಿ ಚರ್ಚ್‌ನಲ್ಲಿ ದಾಂದಲೆ ನಡೆಸಿದ್ದಾರೆ. ಈ ಸಂದರ್ಭ ಹಲ್ಲೆ ನಡೆಸಲಾಗಿದ್ದು, ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡೂ ಬಣದವರು ಪಟ್ಟಣದ ಪೊಲೀಸ್ ಠಾಣೆಗೆ ದೂರು– ಪ್ರತಿದೂರು ನೀಡಿದ್ದಾರೆ. ಚರ್ಚ್ ಹುಂಡಿಯ ಹಣ ಪ್ರಾರ್ಥನಾ ಸಭೆಗೆ ಹಾಗೂ ಚರ್ಚ್ ಅಭಿವೃದ್ಧಿ ಮತ್ತು ನಿರ್ವಹಣೆಗೆ ಬಳಕೆಯಾಗಬೇಕೆಂಬುದು ಭಕ್ತರ ಆಗ್ರಹವಾಗಿದೆ. ಶಿವಮೊಗ್ಗದಿಂದ ದುಷ್ಕರ್ಮಿಗಳನ್ನು ಕರೆಸಿ ಹಲ್ಲೆ ನಡೆಸಲಾಗಿದೆ ಎಂದು ಕ್ಯಾಂಪ್‌ನ ನಿವಾಸಿಗಳು ಆರೋಪಿಸಿದ್ದಾರೆ.

ಕಾಶಿ: ನದಿಯಲ್ಲಿ ಮುಳುಗಿ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ನವನಗರ ನಿವಾಸಿ, ಜಿಲ್ಲಾ ಪಂಚಾಯಿತಿ ಹೊರಗುತ್ತಿಗೆ ನೌಕರ ಸತೀಶ ಜೋಶಿ (43) ಕಾಶಿಯಲ್ಲಿ ನದಿಯಲ್ಲಿ ಸ್ನಾನ ಮಾಡುವಾಗ ಮುಳುಗಿ ಭಾನುವಾರ ಮೃತಪಟ್ಟಿದ್ದಾರೆ.

ಸತೀಶ ಜೋಶಿ

ಅವರಿಗೆ ಪತ್ನಿ, ಇಬ್ಬರು ಪುತ್ರರಿದ್ದಾರೆ. ‘ಸ್ನೇಹಿತರೊಂದಿಗೆ ಪ್ರಯಾಗ್‌ರಾಜ್ ಕುಂಭಮೇಳಕ್ಕೆ ತೆರಳಿದ್ದ ಅವರು, ನಂತರ ಕಾಶಿಗೆ ತೆರಳಿದ್ದರು. ನದಿಯಲ್ಲಿ ಸ್ನಾನ ಮಾಡುವಾಗ ಮುಳುಗಿ ಮೃತಪಟ್ಟಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ತಿಳಿಸಿದರು.

ಇಶಾನ್ ಘೋಷ್‌ಗೆ ‘ಸ್ವರ ಭಾರತಿ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಂಗೀತ ಭಾರತಿ ಪ್ರತಿಷ್ಠಾನವು ಇಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಮಟ್ಟದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸ್ಪರ್ಧೆ ‘ಪಿ. ದಯಾನಂದ ಪೈ ಎಸ್‌ಬಿಎಫ್ ಯುವ ಮಹೋತ್ಸವ 2025’ರ ಹಾಡುಗಾರಿಕೆಯಲ್ಲಿ ಕೋಲ್ಕತ್ತದ ಇಶಾನ್ ಘೋಷ್ ಹಾಗೂ ವಾದ್ಯ ಸಂಗೀತ ವಿಭಾಗದಲ್ಲಿ ನವದೆಹಲಿಯ ಮಾಧವ ಕಾಲ್ರ (ಸರೋದ್) ಮೊದಲ ಬಹುಮಾನ ಗೆದ್ದು ‘ಸ್ವರ ಭಾರತಿ’ ಪ್ರಶಸ್ತಿಗೆ ಭಾಜನರಾದರು.

ಹಾಡುಗಾರಿಕೆ ಸ್ಪರ್ಧೆಯಲ್ಲಿ ಯಲ್ಲಾಪುರದ ವಿಭಾ ಹೆಗಡೆ ದ್ವಿತೀಯ ಸ್ಥಾನ ಹಾಗೂ ಕೋಲ್ಕತ್ತದ ಮಿತ್ರಾ ಭಟ್ಟಾಚಾರ್ಯ ತೃತೀಯ ಸ್ಥಾನ ಪಡೆದರು. ವಾದ್ಯ ವಿಭಾಗದ ಸ್ಪರ್ಧೆಯಲ್ಲಿ ಪುಣೆಯ ಆದಿತ್ಯ ಅಭಿಜಿತ್ ದೇಶಪಾಂಡೆ ದ್ವಿತೀಯ ಸ್ಥಾನ, ಪಾಣೆಮಂಗಳೂರಿನ ಕಾರ್ತಿಕ್ ಭಟ್ ತೃತೀಯ ಸ್ಥಾನ ಪಡೆದರು.

ಮೊದಲ ಸ್ಥಾನ ಪಡೆದವರಿಗೆ ₹60 ಸಾವಿರ, ದ್ವಿತೀಯ ಸ್ಥಾನ ಪಡೆದವರಿಗೆ ₹40 ಸಾವಿರ, ತೃತೀಯ ಸ್ಥಾನ ಪಡೆದವರಿಗೆ ₹20 ಸಾವಿರ ನಗದು ನೀಡಲಾಯಿತು. ಬಾನ್ಸುರಿ ವಾದಕ ಪಂ. ರೋನು ಮುಜುಮ್ದಾರ್, ಸಿತಾರ್ ವಾದಕ ಉಸ್ತಾದ್ ರಫೀಕ್ ಖಾನ್, ಗಾಯಕರಾದ ಶಶಾಂಕ್ ಮಕ್ತೇದಾರ್, ಪಂ.ಜಯತೀರ್ಥ ಮೇವುಂಡಿ, ವಿದುಷಿ ಪೂರ್ಣಿಮಾ ಭಟ್ ಕುಲಕರ್ಣಿ, ತಬಲಾ ವಾದಕ ಯಶವಂತ್ ವೈಷ್ಣವ್ ತೀರ್ಪುಗಾರರಾಗಿದ್ದರು.

ಅಕ್ಟೋಬರ್ ತಿಂಗಳಲ್ಲಿ ನಾಟಿ ಮಾಡಿದ್ದ ಸ್ವಯಂ ಸೇವಕರು

ಭತ್ತ ಕಟಾವು ಮಾಡಿದ ಸಾವಿರ ಜನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಾಲ್ಕು ಎಕರೆಯಲ್ಲಿ ಬೆಳೆದ ಭತ್ತದ ಫಸಲು ಒಂದು ಗಂಟೆಯಲ್ಲೇ ಕಟಾವು
- ಪಲ್ಲಕ್ಕಿ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಫಸಲು

ಉಜಿರೆ (ದಕ್ಷಿಣ ಕನ್ನಡ): ಇಲ್ಲಿನ ಬೆಳಾಲು ಗ್ರಾಮದ ಅನಂತೋಡಿಯ ಅನಂತಪದ್ಮನಾಭ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸಹಯೋಗದಲ್ಲಿ ನಾಲ್ಕು ಎಕರೆ ಗದ್ದೆಯಲ್ಲಿ ಬೆಳೆಸಿದ್ದ ಭತ್ತದ ಫಸಲನ್ನು ಸುಮಾರು ಒಂದು ಸಾವಿರ ಸ್ವಯಂ ಸೇವಕರು ಭಾನುವಾರ ಒಂದೇ ಗಂಟೆಯಲ್ಲಿ ಕಟಾವು ಮಾಡಿದರು.

‘ಬದುಕು ಕಟ್ಟೋಣ’ ತಂಡದ ನೇತೃತ್ವದಲ್ಲಿ ಉಜಿರೆ ಎಸ್‌ಡಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ, ಕ್ರೀಡಾಸಂಘ, ಬೆಳ್ತಂಗಡಿ ರೋಟರಿ ಕ್ಲಬ್ ಹಾಗೂ ತಾಲ್ಲೂಕು ಪತ್ರಕರ್ತರ ಸಂಘದಿಂದ ‘ಯುವಸಿರಿ– ರೈತ ಭಾರತದ ಐಸಿರಿ’ ಕಾರ್ಯಕ್ರಮದ ಮೂಲಕ 2024ರ ಅ. 20ರಂದು ಸುಮಾರು 500 ವಿದ್ಯಾರ್ಥಿಗಳು ನೇಜಿ ನಾಟಿ ಮಾಡಿದ್ದರು. ಆ ಗದ್ದೆಯಲ್ಲಿ ಭಾನುವಾರ ಕಟಾವು ಸಂಭ್ರಮ ನಡೆಯಿತು.

ಪೈರು ಕಟಾವು ಮಾಡಲು ಸ್ವಯಂ ಸೇವಕರಿಗೆ ಕತ್ತಿ ಮತ್ತು ತಲೆಗೆ ಇಟ್ಟುಕೊಳ್ಳಲು ಒಂದು ಸಾವಿರ ಅಡಿಕೆ ಹಾಳೆಯ ಟೊಪ್ಪಿ ವಿತರಿಸಲಾಯಿತು. ಗದ್ದೆಯಿಂದ ಪೈರನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತರಲಾಯಿತು.

‘ಅಕ್ಕಿಯನ್ನು ದೇವರ ನೈವೇದ್ಯಕ್ಕೆ ವಿನಿಯೋಗಿಸಲಾಗುವುದು. ಬೈಹುಲ್ಲನ್ನು ಕಳೆಂಜದ ಗೋ ಶಾಲೆಗೆ ನೀಡಲಾಗುವುದು. ಪ್ರತಿ ವರ್ಷ ಲೋಕಕಲ್ಯಾಣಕ್ಕಾಗಿ ಕೃಷಿ ಕಾಯಕ ಮಾಡಲಾಗುವುದು’ ಎಂದು ಬದುಕು ಕಟ್ಟೋಣ ತಂಡದ ರೂವಾರಿ ಉಜಿರೆಯ ಮೋಹನ ಕುಮಾರ್ ಮತ್ತು ರಾಜೇಶ್ ಪೈ ತಿಳಿಸಿದರು.

ಅನಂತೋಡಿ ದೇವಸ್ಥಾನದ ಆವರಣದಲ್ಲಿ ಪೈರಿನಿಂದ ಭತ್ತವನ್ನು ಬೇರ್ಪಡಿಸಲಾಯಿತು

ಧರ್ಮಸ್ಥಳದ ಹೇಮಾವತಿ ವೀ. ಹೆಗ್ಗಡೆ ಮಾತನಾಡಿ, ‘ಅನ್ನಬ್ರಹ್ಮನ ಸೇವೆ ಪವಿತ್ರವಾಗಿದ್ದು, ಬರಡು ಭೂಮಿಯಾಗಿದ್ದ ಗದ್ದೆಯನ್ನು ಹಸನು ಮಾಡಿ ಬೆಳೆ ಬೆಳೆದ ಯುವಕರ ಸೇವೆ ಶ್ಲಾಘನೀಯ’ ಎಂದು ಅವರು ಹೇಳಿದರು.

ಅಕ್ಟೋಬರ್‌ನಲ್ಲಿ ನಡೆದಿದ್ದ ಭತ್ತದ ನಾಟಿ ಕುರಿತು ‘ಬೆಳಾಲು ಭತ್ತದ ಕೃಷಿ’ ಎಂಬ ಕಿರು ಚಿತ್ರವನ್ನು ಹರೀಶ್ ಮತ್ತು ಸ್ಮಿತೇಶ್ ನಿರ್ದೇಶನದಲ್ಲಿ ನಿರ್ಮಿಸಲಾಗಿತ್ತು. ಇದಕ್ಕೆ ಜಾಗತಿಕ ಮಟ್ಟದಲ್ಲಿ ನಾಲ್ಕು ಪ್ರಶಸ್ತಿಗಳು ಲಭಿಸಿವೆ.

ಮುಂದಿನ ವಾರಾಂತ್ಯದೊಳಗೆ ರಾಜ್ಯ ಬಿಜೆಪಿ ಘಟಕಕ್ಕೆ ಹೊಸ ಅಧ್ಯಕ್ಷರ ಆಯ್ಕೆ ಪ್ರಕಟ ಸಾಧ್ಯತೆ

ಬಿ.ವೈ. ವಿಜಯೇಂದ್ರ ದಿಢೀರ್ ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ವರಿಷ್ಠರು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ದೆಹಲಿಗೆ ಕರೆಸಿಕೊಂಡಿದ್ದಾರೆ.

ವಿಜಯೇಂದ್ರ

ಭಾನುವಾರ ಬೆಳಿಗ್ಗೆ ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ವಾಲ್ಮೀಕಿ ಗುರುಪೀಠದ ಕಾರ್ಯಕ್ರಮಕ್ಕೆ ಹೊರಟಿದ್ದ ವಿಜಯೇಂದ್ರ ಅವರಿಗೆ ದೆಹಲಿಯಿಂದ ಕರೆ ಬಂದ ಕಾರಣ ತಕ್ಷಣವೇ ಬೆಂಗಳೂರಿಗೆ ವಾಪಸ್ ಬಂದು ಸಂಜೆ 4.30 ರ ವಿಮಾನದಲ್ಲಿ ದೆಹಲಿಗೆ ತೆರಳಿದರು.

ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಯ್ಕೆ ಸಂಬಂಧ ಚರ್ಚೆ ನಡೆಸಲು ವಿಜಯೇಂದ್ರ ಅವರನ್ನು ಕರೆಸಿಕೊಳ್ಳಲಾಗಿದೆ. ಅಲ್ಲದೇ, ವಿವಿಧ ನಾಯಕರ ಅಭಿಪ್ರಾಯ ಕೇಳುವ ಮೂಲಕ ಒಮ್ಮತ ಮೂಡಿಸುವ ಕಸರತ್ತಿನಲ್ಲಿ ವರಿಷ್ಠರು ತೊಡಗಿದ್ದಾರೆ ಎಂದು ಮೂಲಗಳು ಹೇಳಿವೆ.

ದೆಹಲಿಯಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಅವರ ಗೃಹಪ್ರವೇಶ ಸೋಮವಾರ ನಡೆಯಲಿದ್ದು, ವಿಜಯೇಂದ್ರ ಭಾಗವಹಿಸುವ ಸಾಧ್ಯತೆ ಇದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಹ ಹೋಗುತ್ತಿದ್ದಾರೆ. ಬಿ.ಶ್ರೀರಾಮುಲು ಅವರೂ ವರಿಷ್ಠರನ್ನು ಭೇಟಿ ಮಾಡುವ ಸಂಬಂಧ ದೆಹಲಿಗೆ ಹೋಗುತ್ತಿದ್ದಾರೆ.

ಮುಂದಿನ ವಾರಾಂತ್ಯದ ಒಳಗೆ ಹೊಸ ಅಧ್ಯಕ್ಷರ ಆಯ್ಕೆ ಪ್ರಕಟವಾಗಲಿದೆ. ಹಲವರ ವಿರೋಧ, ಆಕ್ಷೇಪದ ಮಧ್ಯೆಯೂ, ವಿಜಯೇಂದ್ರ ಅವರನ್ನೇ ಅಧ್ಯಕ್ಷರನ್ನಾಗಿ ಮುಂದುವರೆಸುವ ಸಾಧ್ಯತೆ ಇದೆ. ಅಧ್ಯಕ್ಷರಾಗಿ ಆಯ್ಕೆ ಆದ ಬಳಿಕ ರಾಜ್ಯದಲ್ಲಿ ಎಲ್ಲವನ್ನೂ ನಿಭಾಯಿಸಿಕೊಂಡು ಹೋಗಬೇಕು. ದೆಹಲಿಗೆ ದೂರು ಹೊತ್ತುಕೊಂಡು ಬರುವವರನ್ನೂ ನಿಯಂತ್ರಿಸಬೇಕು. ದಿಟ್ಟ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಸಂಘಟನೆ ಬಲಪಡಿಸಬೇಕು ಎಂಬುದಾಗಿ ಕಟ್ಟುನಿಟ್ಟಿನ ಸೂಚನೆ ಕೊಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಮುಂದಿನ ದಿನಗಳಲ್ಲಿ ಸಂಪೂರ್ಣ ಹೊಸ ತಲೆಮಾರಿನ ಯುವ ನಾಯಕರನ್ನು ಬೆಳೆಸುವ ನಿಟ್ಟಿನಲ್ಲಿ ಆದ್ಯತೆ ನೀಡಲಿದ್ದಾರೆ. ಅಧಿಕಾರ ಅನುಭವಿಸಿಯೂ ಪಕ್ಷದ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳದ, ಹೆಸರು ಕೆಡಿಸಿಕೊಂಡ ಮತ್ತು ಕೆಲಸ ಮಾಡದ ನಾಯಕರನ್ನು ಕಡ್ಡಾಯ ನಿವೃತ್ತಿಗೊಳಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಬಿಜೆಪಿ ಬಣ ರಾಜಕೀಯ ಮೈತ್ರಿ ಮೇಲೆ ಪರಿಣಾಮ ಬೀರದು’

ಹುಬ್ಬಳ್ಳಿ: ‘ಬಿಜೆಪಿಯಲ್ಲಿನ ಬಣ ರಾಜಕೀಯ ಆ ಪಕ್ಷದ ಆಂತರಿಕ ವಿಷಯ. ಅದರಿಂದ ಮೈತ್ರಿ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.



ಕುಮಾರಸ್ವಾಮಿ

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳುವಂತೆ ಬಿಜೆಪಿಯ ಸ್ನೇಹಿತರಿಗೆ ಹೇಳಿದ್ದೇನೆ. ಅಲ್ಲಿನ ಗೊಂದಲಗಳನ್ನು ನಿವಾರಿಸುವಷ್ಟು ಆ ಪಕ್ಷದ ವರಿಷ್ಠರು ಬಲಿಷ್ಠರಾಗಿದ್ದಾರೆ. ಎಲ್ಲರೂ ಒಟ್ಟಾಗಿದ್ದು, ಎಲ್ಲವೂ ಸುಗಮವಾಗಿ ಬಗೆಹರಿಯುವ ವಿಶ್ವಾಸ ಇದೆ’ ಎಂದರು.

‘ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶ ಮೊದಲೇ ನಿರೀಕ್ಷಿಸಿದಂತೆ ಬಂದಿದೆ. ಆಮ್ ಆದ್ಮಿ ಪಕ್ಷ ಭ್ರಷ್ಟಾಚಾರ ನಿರ್ಮೂಲನೆಗಾಗಿ ಹೋರಾಟ ಮಾಡುತ್ತ ಅಧಿಕಾರಕ್ಕೆ ಬಂದಿತ್ತು. ನಂತರ ಆ ಪಕ್ಷದವರೇ ಭ್ರಷ್ಟಾಚಾರದಲ್ಲಿ ಸಿಲುಕಿ ದೆಹಲಿಯ ಜನರ ಭಾವನೆಗೆ ಧಕ್ಕೆ ತಂದಿದ್ದರು. ಮೂಲಸೌಕರ್ಯ ಸಮಸ್ಯೆ ಸಹ ಜನರ ಅಸಮಾಧಾನಕ್ಕೆ ಕಾರಣವಾಗಿತ್ತು. ದೆಹಲಿ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಜನ ಬಿಜೆಪಿಗೆ ಅಧಿಕಾರ ನೀಡಿದ್ದಾರೆ’ ಎಂದು ಹೇಳಿದರು.

‘ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗುವ ವಿಷಯ ಸದ್ಯ ನಮ್ಮ ಮುಂದೆ ಇಲ್ಲ. ಪಕ್ಷ ಸಂಘಟನೆ ಆಗಬೇಕು ಎಂಬುದು ಎಲ್ಲರ ಭಾವನೆ. ಸಂಸತ್ ಅಧಿವೇಶನ ಮುಗಿದ ನಂತರ ಈ ಬಗ್ಗೆ ಚರ್ಚಿಸಲಾಗುವುದು’ ಎಂದರು.

ನಂತರ ರಾಣೆಬೆನ್ನೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಕುಮಾರಸ್ವಾಮಿ, ‘ದೇಶದಲ್ಲಿ ಸಂವಿಧಾನದ ಬಗ್ಗೆ ದೊಡ್ಡ ಮಟ್ಟದಲ್ಲಿ ಚರ್ಚೆಗಳು ಆಗುತ್ತಿವೆ. ಸಂವಿಧಾನ ಬದಲಾವಣೆ ಮಾಡುತ್ತಾರೆ ಅಂತ ಒಂದು ರಾಜಕೀಯ ಪಕ್ಷದ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಆದರೆ ಸಂವಿಧಾನ ಬದಲಾವಣೆ ಸಾಧ್ಯವಿಲ್ಲ’ ಎಂದು ಹೇಳಿದರು.

ವರಿಷ್ಠರ ಭೇಟಿಗೆ ಮತ್ತೆ ದೆಹಲಿಗೆ: ಯತ್ನಾಳ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ಮತ್ತೊಮ್ಮೆ ದೆಹಲಿಗೆ ತೆರಳಲಿದ್ದೇವೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

‘ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರದ ವಿರುದ್ಧದ ಹೋರಾಟ ಮುಂದುವರಿಯಲಿದೆ. ರಾಜ್ಯವನ್ನು ಭ್ರಷ್ಟಾಚಾರ ಮುಕ್ತ ಮಾಡುವ ಅಗತ್ಯವಿದೆ. ಇದಕ್ಕೆ ಪ್ರಯತ್ನಿಸುತ್ತಿದ್ದೇವೆ’ ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

‘ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರ ಗೃಹಪ್ರವೇಶವೂ ದೆಹಲಿಯಲ್ಲಿದೆ. ಇದಕ್ಕೆ ಆಹ್ವಾನ ಬಂದಿದೆ. ಆಗ ಪಕ್ಷದ ವರಿಷ್ಠರು ಸಿಗುತ್ತಾರೊ ಇಲ್ಲವೊ ಎಂಬುದನ್ನು ನಿಮಗೆ (ಮಾಧ್ಯಮ) ಏಕೆ ಹೇಳಲಿ’ ಎಂದು ಸುದ್ದಿಗಾರರ ವಿರುದ್ಧ ಹರಿಹಾಯ್ದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಹಾಗೂ ರಾಜ್ಯದ ಮುಖ್ಯಮಂತ್ರಿ ಆಗುವ ಅರ್ಹತೆ ನನಗೂ ಇದೆ. ಪಕ್ಷದ ಒಡೆದ ಮನಸುಗಳನ್ನು ಒಂದುಗೂಡಿಸುವ ನಿಟ್ಟಿನಲ್ಲಿ ಮಾಜಿ ಸಚಿವ ಬಿ.ಶ್ರೀರಾಮುಲು ಯಾತ್ರೆ ಕೈಗೊಳ್ಳುವ ನಿರ್ಧಾರವನ್ನು ಸ್ವಾಗತಿಸುವೆ. ಅವರು ರಾಜ್ಯ ಘಟಕದ ಅಧ್ಯಕ್ಷ ಅಥವಾ ಮುಖ್ಯಮಂತ್ರಿಯಾಗುವ ಅವಕಾಶ ಬಂದರೆ ಬೆಂಬಲಕ್ಕೆ ನಿಲ್ಲುವೆ’ ಎಂದು ಪ್ರತಿಕ್ರಿಯೆ ನೀಡಿದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ನಾನು ಯಾರ ಹೆಸರನ್ನೂ ಸೂಚಿಸಿಲ್ಲ. ಈ ವಿಚಾರದಲ್ಲಿ ಪಕ್ಷದ ಹೈಕಮಾಂಡ್ ಉತ್ತಮ ತೀರ್ಮಾನ ಕೈಗೊಳ್ಳಲಿದೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ದೆಹಲಿ ಚುನಾವಣೆ ಮುಗಿದಿದೆ. ಪಕ್ಷ ಸಂಘಟನೆಗೆ ವರಿಷ್ಠರು ಹೆಚ್ಚು ಸಮಯ ನೀಡುವ ಸಾಧ್ಯತೆ ಇದೆ. ಶೀಘ್ರದಲ್ಲೇ ಎಲ್ಲವೂ ಸುಖಾಂತ್ಯ ಕಾಣಲಿದೆ’ ಎಂದು ಪತ್ರಕರ್ತರಿಗೆ ಹೇಳಿದರು.

> **ದುಷ್ಟಶಕ್ತಿಗಳು ಎಷ್ಟೇ ಪ್ರಯತ್ನಿಸಿದರೂ ಬಿ.ವೈ. ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಕೆಳಗಿಸಲು ಸಾಧ್ಯವಿಲ್ಲ. 12ಕ್ಕೆ ಬೆಂಗಳೂರಿನಲ್ಲಿ ಸಭೆ ಮಾಡಲಿದ್ದೇವೆ**
> **ಎಂ.ಪಿ.ರೇಣುಕಾಚಾರ್ಯ**
> ಮಾಜಿ ಸಚಿವ

ಡಿಜಿಟಲ್ ಅರೆಸ್ಟ್ ಹಾವಳಿ

ಒಂದನೇ ಪುಟದಿಂದ...

ಉದ್ಯಮಿಗಳು, ಸರ್ಕಾರಿ ನೌಕರರು, ಸಾಫ್ಟ್‌ವೇರ್ ಉದ್ಯೋಗಿಗಳು, ವ್ಯಾಪಾರಿಗಳು, ವಿದೇಶಿ ಪ್ರಜೆಗಳು ವಂಚಕರ ಬಲೆಗೆ ಬಿದ್ದು ಹಣ ಕಳೆದುಕೊಳ್ಳುತ್ತಿದ್ದಾರೆ.

ಕೆಲ ದಿನಗಳ ಹಿಂದೆ ಬೆಂಗಳೂರಿನ ಸಾಫ್ಟ್‌ವೇರ್ ಎಂಜಿನಿಯರ್‌ರೊಬ್ಬರನ್ನು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಒಂದು ತಿಂಗಳು ಕಾಡಿದ್ದ ಸೈಬರ್ ವಂಚಕರು, ₹11.83 ಕೋಟಿ ವರ್ಗಾವಣೆ ಮಾಡಿಸಿಕೊಂಡಿದ್ದರು. ವ್ಯಕ್ತಿಯೊಬ್ಬರು ಡಿಜಿಟಲ್ ಅರೆಸ್ಟ್ ವಂಚನೆಯಲ್ಲಿ ಅತ್ಯಧಿಕ ಮೊತ್ತ ಕಳೆದುಕೊಂಡ ಪ್ರಕರಣ ಇದಾಗಿದೆ.

ಇದು ಉದಾಹರಣೆಯಷ್ಟೆ, ಮಂಗಳೂರು, ಮೈಸೂರು, ತುಮಕೂರು, ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧ ನಗರಗಳಲ್ಲಿ ವಂಚಕರ ಜಾಲಕ್ಕೆ ಬಿದ್ದು, ಹಲವರು ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದಾರೆ. ಮತ್ತೆ ಕೆಲವರು ಕೋಟ್ಯಂತರ ರೂಪಾಯಿ ಕಳೆದುಕೊಂಡಿದ್ದಾರೆ.

ವಂಚನೆ ಹೇಗೆ?: ‘ಇಂಟರ್‌ನೆಟ್ ಕರೆ ಮಾಡುವ ವಂಚಕರು, ಫೆಡೆಕ್ಸ್ ಅಥವಾ ಕೊರಿಯರ್ ಕಂಪನಿ ಅಧಿಕಾರಿ ಎಂದು ಪರಿಚಯ ಮಾಡಿಕೊಂಡು, ‘ನಿಮ್ಮ ಹೆಸರಿನಲ್ಲಿ ವಿದೇಶಕ್ಕೆ ಪಾರ್ಸೆಲ್ ಹೋಗುತ್ತಿದೆ. ಅದರಲ್ಲಿ ಡ್ರಗ್ಸ್, ಸಿಮ್ ಕಾರ್ಡ್, ಪಾಸ್‌ಪೋರ್ಟ್, ನಗದು ಪತ್ತೆಯಾಗಿದೆ. ಈ ಪ್ರಕರಣವನ್ನು ಸಿಬಿಐ ಅಥವಾ ಮುಂಬೈ ಕ್ರೈಂ ಬ್ರಾಂಚ್ ಪೊಲೀಸರಿಗೆ ವರ್ಗಾವಣೆ ಮಾಡುತ್ತಿದ್ದೇವೆ’ ಎಂದು ಹೇಳಿ ಕರೆ ಸ್ಥಗಿತಗೊಳಿಸುತ್ತಾರೆ’ ಎಂದು ಸೆನ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ಕೆಲ ಸಮಯದ ಬಳಿಕ ಪೊಲೀಸ್ ಅಧಿಕಾರಿಗಳ ಹೆಸರಿನಲ್ಲಿ ಮತ್ತೆ ಕರೆ ಮಾಡಿ, ‘ನಿಮ್ಮ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ‘ಡಿಜಿಟಲ್ ಅರೆಸ್ಟ್ ಮಾಡುತ್ತಿದ್ದೇವೆ’ ಎಂದು ಬೆದರಿಸುತ್ತಾರೆ. ಯಾರೊಂದಿಗೂ ಮಾತನಾಡುವಂತಿಲ್ಲ, ಎಲ್ಲಿಗೂ ಹೋಗುವಂತಿಲ್ಲ, ಮನೆಯಲ್ಲಿಯೇ ಇರಬೇಕು ಎಂದು ಸೂಚಿಸುತ್ತಾರೆ. ನಂತರ ಈ ಪ್ರಕರಣದಿಂದ ಪಾರು ಮಾಡಬೇಕಾದರೆ ಕೇಂದ್ರ ಸರ್ಕಾರದ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿದರೆ, ತನಿಖೆ ಬಳಿಕ ವಾಪಸ್ ನೀಡುತ್ತೇವೆ ಎನ್ನುತ್ತಾರೆ. ವಂಚಕರು ತಮ್ಮ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿಸಿಕೊಂಡು ಮೋಸ ಮಾಡುತ್ತಾರೆ. ಈ ಹಣವನ್ನು ಕ್ರಿಪ್ಟೊ ಕರೆನ್ಸಿಗೆ ಬದಲಾವಣೆ ಮಾಡಿ ಸುಳಿವು ಸಿಗದಂತೆ ತಲೆಮರೆಸಿಕೊಳ್ಳುತ್ತಾರೆ’ ಎಂದು ವಿವರಿಸಿದರು.

‘ಡಿಜಿಟಲ್ ಅರೆಸ್ಟ್ ಎಂಬುದೇ ಇಲ್ಲ’



ಬಿ.ದಯಾನಂದ

‘ಕಾನೂನಿನ ವ್ಯಾಪ್ತಿಯಲ್ಲಿ ‘ಡಿಜಿಟಲ್ ಅರೆಸ್ಟ್’ ಪ್ರಕ್ರಿಯೆಯೇ ಇಲ್ಲ. ಸಿಬಿಐ, ಇ.ಡಿ., ಯಾವುದೇ ರಾಜ್ಯದ ಪೊಲೀಸರು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ವಶಕ್ಕೆ ಪಡೆಯಲು ಅವಕಾಶವಿಲ್ಲ’ ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಸ್ಪಷ್ಟಪಡಿಸಿದರು.

‘ಯಾವುದೇ ತನಿಖಾ ಸಂಸ್ಥೆ ವಿಡಿಯೊ ಕರೆ ಮಾಡಿ ತನಿಖೆ ನಡೆಸುವುದಿಲ್ಲ. ಮೊದಲು ನೋಟಿಸ್ ನೀಡಿ ಅಥವಾ ನೇರವಾಗಿ ವಶಕ್ಕೆ ಪಡೆದು, ಬಳಿಕ ಬಂಧಿಸಲು ಮಾತ್ರ ಕಾನೂನಿನಲ್ಲಿ ಅವಕಾಶ ಇದೆ. ಬಂಧಿಸಿದ ಆರೋಪಿಗಳನ್ನು 24 ಗಂಟೆಯೊಳಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕೆಂಬ ಕಾನೂನು ಇದೆ’ ಎಂದು ತಿಳಿಸಿದರು.

ರಥೋತ್ಸವ ದಾವಣಗೆರೆ ಜಿಲ್ಲೆಯ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಭಾನುವಾರ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಅಂಗವಾಗಿ ರಥೋತ್ಸವ ನಡೆಯಿತು ಪ್ರಜಾವಾಣಿ ಚಿತ್ರ: ಸತೀಶ ಬಡಿಗೇರ್

ಸಚಿವ ಡಾ.ಎಚ್‌ಸಿ.ಮಹದೇವಪ್ಪ ಹೇಳಿಕೆ

‘ವಾಲ್ಮೀಕಿ– ಅಯೋಧ್ಯೆ ರಾಮ ಬೇರೆ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ವಾಲ್ಮೀಕಿಯ ಶ್ರೀರಾಮನೇ ಬೇರೆ, ಅಯೋಧ್ಯೆಯ ಶ್ರೀರಾಮನೇ ಬೇರೆ. ವಾಲ್ಮೀಕಿಯಿಂದ ಶ್ರೀರಾಮನೋ, ಶ್ರೀರಾಮನಿಂದ ವಾಲ್ಮೀಕಿಯೋ ಎಂಬ ಕುರಿತು ಚಿಂತನೆ ಮಾಡುವ ಅಗತ್ಯವಿದೆ’ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟರು.

ಮಹದೇವಪ್ಪ

ಹರಿಹರ ತಾಲ್ಲೂಕಿನ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಭಾನುವಾರ ನಡೆದ ಜಾತ್ರಾ ಮಹೋತ್ಸವದಲ್ಲಿ ಮಾತನಾಡಿದ ಅವರು, ‘ವಾಲ್ಮೀಕಿ ಶ್ರೀರಾಮನ ಸೃಷ್ಟಿಕರ್ತ. ಅಯೋಧ್ಯೆಯ ರಾಮ ಹಾಗೂ ವಾಲ್ಮೀಕಿಯ ರಾಮರಾಜ್ಯದ ಪರಿಕಲ್ಪನೆಯ ನಡುವೆ ವ್ಯತ್ಯಾಸಗಳಿವೆ’ ಎಂದು ಪ್ರತಿಪಾದಿಸಿದರು.

‘ವಾಲ್ಮೀಕಿ ರಾಮಾಯಣದಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಿದಾಗ ಇಡೀ ಜಗತ್ತು ಸಂತೋಷಪಟ್ಟಿತ್ತು. ಪಟ್ಟಾಭಿಷೇಕವಾದಾಗ ಹಾಗೂ ವನವಾಸಕ್ಕೆ ತೆರಳುವಾಗ ಶ್ರೀರಾಮ ಸ್ಥಿತಪ್ರಜ್ಞನಾಗಿದ್ದನು. ಯಥಾಸ್ಥಿತಿವಾದವನ್ನು ಧರ್ಮ ಪ್ರತಿಪಾದಿಸುತ್ತದೆ ಎಂಬುದನ್ನು ಈ ಮೂಲಕ ವಾಲ್ಮೀಕಿ ತೋರಿಸಿಕೊಟ್ಟಿದ್ದಾರೆ’ ಎಂದು ಹೇಳಿದರು.

ದಲಿತ ಸಮಾವೇಶ

‘ಗೃಹ ಸಚಿವ ಜಿ.ಪರಮೇಶ್ವರ ಸಾರಥ್ಯದಲ್ಲಿ ದಲಿತ ಸಮಾವೇಶ ನಡೆಯಲಿದೆ. ಇದರ ರೂಪರೇಷವನ್ನು ಪರಮೇಶ್ವರ ಸಿದ್ಧಪಡಿಸಲಿದ್ದಾರೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

‘ಇದು ಎಸ್‌ಸಿ ಅಥವಾ ಎಸ್‌ಟಿ ಸಮುದಾಯಕ್ಕೆ ಸೀಮಿತವಾದ ಸಮಾವೇಶವಲ್ಲ. ಧ್ವನಿ ಇಲ್ಲದ ಸಮುದಾಯಗಳಲ್ಲಿ ಅರಿವು ಮೂಡಿಸಲು ಸಮಾವೇಶ ಆಯೋಜಿಸಲಾಗುತ್ತಿದೆ. ಕಾಂಗ್ರೆಸ್ ನೇತೃತ್ವದಲ್ಲಿಯೇ ಇದು ನಡೆಯಲಿದೆ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಗೋಪ್ಯ ಚರ್ಚೆ

ಹರಿಹರ ತಾಲ್ಲೂಕಿನ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಗೃಹ ಸಚಿವಜಿ. ಪರಮೇಶ್ವರ ನೇತೃತ್ವದಲ್ಲಿ ಸಚಿವರು ಸಭೆ ನಡೆಸಿದ್ದಾರೆ.

ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ಸಚಿವರಾದ ಸತೀಶ ಜಾರಕಿಹೊಳಿ, ಎಚ್.ಸಿ.ಮಹದೇವಪ್ಪ ಅವರೊಂದಿಗೆ ಗೋಪ್ಯ ಮಾತುಕತೆ ನಡೆಸಿದರು.

ಬಳ್ಳಾರಿ ಸಂಸದ ತುಕಾರಾಂ, ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಪಾಲ್ಗೊಂಡಿದ್ದರು.

> **ಇವಿಎಂನಿಂದ ಬಿಜೆಪಿ ಗೆಲ್ಲುತ್ತಿದೆ. ಅನುಮಾನ ಮೂಡಬಾರದು ಎಂಬ ಕಾರಣಕ್ಕೆ ಕರ್ನಾಟಕ ಹೊರತುಪಡಿಸಿ ಅಲ್ಲಲ್ಲಿ ಕೈಚಳಕ ತೋರಲಾಗುತ್ತಿದೆ**
> **ಶಿವರಾಜ ತಂಗಡಿಗಿ**
> ಕನ್ನಡ ಮತ್ತು ಸಂಸ್ಕೃತಿ ಸಚಿವ

ಜಾತಿ ಗಣತಿ ವರದಿ ಬಿಡುಗಡೆಗೆ ಅಡ್ಡಿ ಏಕೆ?

ಹರಿಹರ (ದಾವಣಗೆರೆ ಜಿಲ್ಲೆ): ಜನಸಂಖ್ಯೆ ಆಧರಿಸಿ ಮೀಸಲಾತಿ ನಿಗದಿ ಮಾಡುವ ನಿಟ್ಟಿನಲ್ಲಿ ಜಾತಿ ಗಣತಿ ವರದಿ ಬಹಿರಂಗ ಅಗತ್ಯ. ಆ ಮೂಲಕ ಆಯಾ ಸಮುದಾಯಗಳಿಗೆ ಸೌಲಭ್ಯ ನೀಡಬೇಕು. ಕೆಲವರು ಜಾತಿಗಣತಿಗೆ ಅನಗತ್ಯವಾಗಿ ವಿರೋಧ ಮಾಡುತ್ತಿರುವುದು ಏಕೆ ಎಂಬುದು ಅರ್ಥವಾಗುತ್ತಿಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ತಾಲ್ಲೂಕಿನ ರಾಜನಹಳ್ಳಿ ವಾಲ್ಮೀಕಿ ಜಾತ್ರೆಯಲ್ಲಿ ಭಾನುವಾರ ಜನಜಾಗೃತಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಜಾತಿ ಜನಗಣತಿ ನಡೆಸಿದಾಗ ವಿರೋಧಿಸದವರು, ವರದಿ ಬಿಡುಗಡೆಗೆ ಮಾತ್ರ ಅಡ್ಡಿ ಪಡಿಸುತ್ತಿರುವುದು ಏಕೆ? ಎಂದು ಅವರು ಪ್ರಶ್ನಿಸಿದರು.

ಕಾಲಕ್ರಮೇಣ ಸಹಜವಾಗಿಯೇ ಕೆಲವು ಸಮುದಾಯದ ಜನಸಂಖ್ಯೆ ಹೆಚ್ಚಾಗಿರುತ್ತದೆ. ಹಾಗೆಯೇ ಕಡಿಮೆಯೂ ಆಗಿರಬಹುದು. ರಾಜ್ಯದ ಎಲ್ಲಾ ಸಮುದಾಯದವರಿಗೆ ಸಾಮಾಜಿಕ ನ್ಯಾಯ ಒದಗಿಸಲು ಜಾತಿ ಜನಗಣತಿ ಆಧಾರವಾಗಿದೆ. ಎಷ್ಟೇ ವಿರೋಧ ಎದುರಾದರೂ ಜಾತಿ ಜನಗಣತಿ ವರದಿಯನ್ನು ಬಿಡುಗಡೆ ಮಾಡಲು ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ’ ಎಂದು ಅವರು ದೃಢವಾಗಿ ಹೇಳಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

INVEST KARNATAKA
KIADB LAND OF OPPERTUNITIES (A Government of Karnataka Undertaking)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಜಾಗತಿಕ ಹೂಡಿಕೆದಾರರ ಸಮಾವೇಶ-2025ರ ಪ್ರತಿನಿಧಿಗಳನ್ನು ಕೆಐಎಡಿಬಿ ಆಹ್ವಾನಿಸುತ್ತದೆ

ಸಮರ್ಥ, ಸಮಗ್ರ, ಸದೃಢ ಮತ್ತು ತಂತ್ರಜ್ಞಾನ ಆಧಾರಿತ ಭವಿಷ್ಯವನ್ನು ಮರು ಕಲ್ಪಿಸಲು ಜಾಗತಿಕ ಕೈಗಾರಿಕಾ ಪ್ರವರ್ತಕರೆಲ್ಲರೂ ಸೇರುವ ತಾಣ ಇದಾಗಿದೆ.
ಜಾಗತಿಕ ಹೂಡಿಕೆದಾರರ ಸಮಾವೇಶ –2025ರಲ್ಲಿ ನೀವೂ ಭಾಗವಹಿಸಿ ಹೊಸ ಅವಕಾಶಗಳನ್ನು, ಜಾಗತಿಕ ಪಾಲುದಾರಿಕೆಯನ್ನು ಬೆಳೆಸಿಕೊಳ್ಳಿ ಮತ್ತು ಕರ್ನಾಟಕದ ಪರಿವರ್ತನಾತ್ಮಕ ಪ್ರಗತಿಯಲ್ಲಿ ಭಾಗಿಯಾಗಿ.

ಶ್ರೀ ಎಂ.ಬಿ. ಪಾಟೀಲ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಅಧಿಕಾರಿಗಳೊಡನೆ ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿರುವುದು.

ಪ್ರಗತಿಯ ಮರುಕಲ್ಪನೆ

ಇನ್ವೆಸ್ಟ್ ಕರ್ನಾಟಕ 2025 | ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ | ಬೆಂಗಳೂರು ಅರಮನೆ ಬೆಂಗಳೂರು 12 ರಿಂದ 14 ಫೆಬ್ರವರಿ 2025

ಉದ್ಘಾಟನೆ: 11 ಫೆಬ್ರವರಿ 2025, ಸಂಜೆ 4 ಗಂಟೆ

ಕೆಐಎಡಿಬಿಯು ಕರ್ನಾಟಕದಾದ್ಯಂತ ಸ್ಮಾರ್ಟ್, ಸಮನ್ವಯ, ಸದೃಢ, ಸಮಗ್ರ ಕೈಗಾರಿಕಾ ಮೂಲಸೌಲಭ್ಯ ಸೃಷ್ಟಿಸಲು ಕಂಕಣಬದ್ಧವಾಗಿದೆ.



ಕೆಐಎಡಿಬಿ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶದಲ್ಲಿ ಅವಕಾಶ ಪಡೆಯುವುದರಿಂದ ದೊರೆಯುವ ಅನುಕೂಲಗಳು

- ತನ್ನ ಕೈಗಾರಿಕಾ ಪ್ರದೇಶಗಳಲ್ಲಿ ಅತ್ಯುತ್ತಮ ಮೂಲಸೌಲಭ್ಯ ಮತ್ತು ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸುವುದು.
- ಸ್ವಾಧೀನಪಡೆದ ಹತ್ತು ವರ್ಷ ಪೂರ್ಣಗೊಂಡಾಗ ಅಥವಾ ಕಾರ್ಯಾಚರಣೆ ಪ್ರಾರಂಭವಾಗಿ ಎರಡು ವರ್ಷ ಪೂರ್ಣಗೊಂಡಾಗ ಇದರಲ್ಲಿ ಯಾವುದು ಮೊದಲೋ ಅದರಂತೆ ಶುದ್ಧ ಕ್ರಯಪತ್ರದ ಮೇಲೆ ಕೈಗಾರಿಕಾ ಜಮೀನು/ ನಿವೇಶನಗಳ ನೀಡಿಕೆ.
- ತನ್ನ ಕೈಗಾರಿಕಾ ಪ್ರದೇಶದಲ್ಲಿ ಋಣಭಾರ ರಹಿತ ಜಮೀನನ್ನು ಒದಗಿಸುವುದು.
- ಮೂಲಸೌಲಭ್ಯಗಳ ನಿರಂತರ ನಿರ್ವಹಣೆ ಮತ್ತು ಮೇಲ್ದರ್ಜೆಗೇರಿಸುವಿಕೆ.
- ಉಪಯುಕ್ತ ಮೂಲಸೌಲಭ್ಯಗಳ ಅಭಿವೃದ್ಧಿಗಾಗಿ ಕೈಗಾರಿಕಾ ಪ್ರದೇಶಗಳ ಅಧಿಸೂಚನೆ ಮಾಡುವುದು.
- ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಪೂರಕವಾದ ಎಲ್ಲ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಾತಾವರಣ ಸೃಷ್ಟಿ.

ಕೈಗಾರಿಕಾ ಪ್ರದೇಶಗಳಲ್ಲಿ ನಾವು ಒದಗಿಸುವ ಸೌಲಭ್ಯಗಳು

ಪ್ರಮುಖ ಮೂಲಸೌಲಭ್ಯ	ಪೂರಕ ಮೂಲಸೌಲಭ್ಯ	ಸಾಮಾಜಿಕ
• ಕೈಗಾರಿಕಾ ನಿವೇಶನಗಳು • ಪ್ರತ್ಯೇಕ ನೀರು ಸರಬರಾಜು • ರಸ್ತೆ ಸಂಪರ್ಕ • ಘನತ್ಯಾಜ್ಯ ವಿಲೇವಾರಿ • ಬೀದಿ ದೀಪಗಳು • ವಿದ್ಯುತ್ ಸರಬರಾಜು	• ಗ್ಯಾಸ್, ಟೆಲಿಕಾಂ, ಸಾಮಾನ್ಯ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕ, ಘನತ್ಯಾಜ್ಯ ನಿರ್ವಹಣೆ, ಇತರೆ ಉಪಯುಕ್ತತೆಗಳು, ಸಾಮಾನ್ಯ ಸೌಲಭ್ಯ ಕೇಂದ್ರಗಳು ಮತ್ತು ಟೂಲ್ ರೂಮ್ಸ್	• ಹಸಿರು ತಾಣಗಳು ಮತ್ತು ಉದ್ಯಾನಗಳು • ವಾಣಿಜ್ಯ ಸ್ಥಳ • ಕೌಶಲ್ಯ ಉನ್ನತೀಕರಣ ಕೇಂದ್ರಗಳು • ಸಾರ್ವಜನಿಕ ಸೌಲಭ್ಯಗಳು, ಬ್ಯಾಂಕುಗಳು, ಆಸ್ಪತ್ರೆಗಳು, ಪೊಲೀಸ್ ಠಾಣೆಗಳು, ಅಗ್ನಿಶಾಮಕ ಕೇಂದ್ರಗಳು, ಸಮುದಾಯ ಭವನಗಳು, ಇತ್ಯಾದಿಗಳಿಗೆ ಸ್ಥಳಾವಕಾಶ.

ಸ್ವಾಧೀನಪಡಿಸಿಕೊಂಡಿರುವ ಮತ್ತು ಹಂಚಿಕೆ ಮಾಡಿರುವ ಜಮೀನು
ಕೈಗಾರಿಕಾ ಪ್ರದೇಶಗಳು: 215 ಸ್ಥಳಗಳಲ್ಲಿ
ಏಕ ಘಟಕ ಸಂಕೀರ್ಣಗಳು (ಎಸ್‌ಯುಸಿ): 625 ಸ್ಥಳಗಳಲ್ಲಿ
ಜಮೀನಿನ ವಿಸ್ತೀರ್ಣ ಎಕರೆಗಳಲ್ಲಿ:
ಕೈಗಾರಿಕಾ ಪ್ರದೇಶಗಳು: 86,850
ಏಕ ಘಟಕ ಸಂಕೀರ್ಣಗಳು (ಎಸ್‌ಯುಸಿ): 79,020
ಕೈಗಾರಿಕಾ ಘಟಕಗಳು: 24,215

ಇಲ್ಲಿ ನೋಂದಾಯಿಸಿಕೊಳ್ಳಿ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತಕರ್ತವ್ಯ

ಫೇಸ್‌ಬುಕ್ ಜಾಹೀರಾತು ನಂಬಿ ಮೋಸ ಹೋದ ಮಹಿಳೆ • ಸೆನ್ ಠಾಣೆಯಲ್ಲಿ ಪ್ರಕರಣ ದಾಖಲು

ಹೂಡಿಕೆ ನೆಪದಲ್ಲಿ ₹5.67 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರು ಮಾರುಕಟ್ಟೆ ಕುರಿತು ಫೇಸ್‌ಬುಕ್‌ನಲ್ಲಿ ಬಂದ ಜಾಹೀರಾತು ನೋಡಿ ಮಹಿಳೆಯೊಬ್ಬರು ₹5.67 ಕೋಟಿ ಹೂಡಿಕೆ ಮಾಡಿ, ಸೈಬರ್ ವಂಚನೆಗೆ ಒಳಗಾಗಿದ್ದಾರೆ.

ಖಾಸಗಿ ಕಂಪನಿಯೊಂದರ ಮಾನವ ಸಂಪನ್ಮೂಲ ಅಧಿಕಾರಿ (ಎಚ್‌ಆರ್) ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದಿದ್ದ ಸಂತ್ರಸ್ತೆ ನೀಡಿರುವ ದೂರು ಆಧರಿಸಿ ಆರೋಪಿಗಳಾದ ವೀರೇಶ್ ಗುಪ್ತಾ, ಆಯಾನ್ ಜೋಸೆಫ್ ವಿರುದ್ಧ ನಗರದ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿದ್ಯಾಗಿರಿ ಲೇಔಟ್ ನಿವಾಸಿಯಾಗಿರುವ ಮಹಿಳೆ, ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಉದ್ದೇಶಕ್ಕೆ ಡಿ ಮ್ಯಾಟ್ ಖಾತೆ ತೆರೆದಿದ್ದರು. ಫೇಸ್‌ಬುಕ್‌ನಲ್ಲಿ ಬಂದ ಷೇರು ಮಾರುಕಟ್ಟೆ ಕುರಿತ ಲಿಂಕ್ ಕ್ಲಿಕ್ ಮಾಡಿದಾಗ, ವಿರೇಶ್ ಗುಪ್ತಾ ಎಂಬಾತನ ಮೊಬೈಲ್ ನಂಬರ್ ಲಭ್ಯವಾಗಿದೆ. ಕೆಲ ಹೊತ್ತಿನ ಬಳಿಕ ವಿರೇಶ್ ಎರಡು ನಂಬರ್‌ಗಳಿಂದ ಸಂದೇಶ ಕಳುಹಿಸಿ, ಆದಿತ್ಯಾ ಬಿರ್ಲಾ ಮತ್ತು ಸ್ಟಾಕ್ ಫ್ಲೆನ್ಸಿ ಎಂಬ ಕಂಪನಿಯಲ್ಲಿ ಹೂಡಿಕೆ ಮಾಡುವಂತೆ ಸಲಹೆ ನೀಡಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

‘ಈ ಸಂಬಂಧ 1812 ಆದಿತ್ಯಾ ಬಿರ್ಲಾ, ಸ್ಟಾಕ್ ಫ್ರೆನ್ಸಿ ಎಂಬ 35 ಸದಸ್ಯರಿದ್ದ ವಾಟ್ಸ್‌ಆ್ಯಪ್ ಗುಂಪಿಗೆ ಸೇರಿಸಿದ. ಮತ್ತೊಂದು ಗುಂಪಿನಲ್ಲಿ ಆಯಾನ್ ಜೋಸೆಫ್ ಹಾಗೂ ಇತರರು, ತಾವು ಸೂಚಿಸಿದ ಷೇರಿನಲ್ಲಿ ಹೂಡಿಕೆ ಮಾಡುವಂತೆ ಸಲಹೆ ನೀಡಿದರು. ಅದರಂತೆ 2024ರ ಡಿಸೆಂಬರ್ 10ರಿಂದ 2025ರ ಜನವರಿ 31ರವರೆಗೂ ವಿವಿಧ ಬ್ಯಾಂಕ್‌ಗಳ ಖಾತೆಯಿಂದ ₹2.37 ಕೋಟಿ ಸೇರಿ ಹಂತ ಹಂತವಾಗಿ ₹5.67 ಕೋಟಿಗಳನ್ನು ಹೂಡಿಕೆ ಮಾಡಿದ್ದಾರೆ. ತಮ್ಮ ಬ್ಯಾಂಕ್ ಖಾತೆಯಲ್ಲಿ ಹಣ ಖಾಲಿಯಾದ ಬಳಿಕ ಪತಿ ಹಾಗೂ ಪುತ್ರನ ಖಾತೆಯಲ್ಲಿದ್ದ ಹಣವನ್ನು ವರ್ಗಾಯಿಸಿದ್ದಾರೆ’ ಎಂದು ಹೇಳಿದರು.

‘ಕೆಲ ದಿನಗಳ ಹಿಂದೆ ಹಣ ಹಿಂಪಡೆಯಲು ಪ್ರಯತ್ನ ಮಾಡಿದಾಗ ಸಾಧ್ಯವಾಗಲಿಲ್ಲ. ವಂಚಕರು ಷೇರು ಮಾರುಕಟ್ಟೆ ನೆಪದಲ್ಲಿ ಹೂಡಿಕೆ ಮಾಡಿಸಿಕೊಂಡು ವಂಚನೆ ಮಾಡಿದ್ದಾರೆ. ಹಾಗಾಗಿ ವೀರೇಶ್ ಗುಪ್ತಾ ಮತ್ತು ಆಯಾನ್ ಜೋಸೆಫ್ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹಣಕಾಸಿನ ವಿಚಾರಕ್ಕೆ ವೈಷಮ್ಯ: ಕೊಲೆ

ಬೆಂಗಳೂರು: ಹಣಕಾಸಿನ ವಿಚಾರದಲ್ಲಿ ಉಂಟಾದ ವೈಷಮ್ಯದಿಂದ ಪರಿಚಯಸ್ಥರೇ ಟಾಟಾ ಏಸ್ ಚಾಲಕನ ಕೊಲೆ ಮಾಡಿರುವ ಘಟನೆ ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯ ಹೆಗಡೆ ನಗರದ ಆಕಾಶವಾಣಿ ಲೇಔಟ್‌ನಲ್ಲಿ ನಡೆದಿದೆ.

ಸಂಪಿಗೆಹಳ್ಳಿ ನಿವಾಸಿ ಸೈಯದ್ ಮೆಹಬೂಬ್ (42) ಕೊಲೆಯಾದ ವ್ಯಕ್ತಿ. ಕೃತ್ಯ ಎಸಗಿದ ತಮಿಳುನಾಡಿನ ಖಾಲಿಯಾ ಮತ್ತು ಸ್ಥಳೀಯ ನಿವಾಸಿ ರಾಜು ಎಂಬುವವರ ಪತ್ತೆಗೆ ಶೋಧ ನಡೆದಿದೆ ಎಂದು ಪೊಲೀಸರು ಹೇಳಿದರು.

‘ಕೆಲ ವರ್ಷಗಳಿಂದ ಸೈಯದ್ ಮೆಹಬೂಬ್ ಅವರು ಎಂ-ಸ್ಯಾಂಡ್, ಜೆಲ್ಲಿ ಮತ್ತು ಮರಳು ವ್ಯಾಪಾರ ಮಾಡುತ್ತಿದ್ದರು. ಖಾಲಿಯಾ ಟಾಟಾ ಏಸ್‌ಗೆ ಜೆಲ್ಲಿ, ಮರಳು ತುಂಬುವ ಮತ್ತು ಇಳಿಸುವ ಕೆಲಸ ಮಾಡುತ್ತಿದ್ದ. ರಾಜು ಸಹ ಜೆಲ್ಲಿ ಕಲ್ಲು ಮಾರಾಟ ಮಾಡುತ್ತಿದ್ದ. ಕೆಲ ದಿನದ ಹಿಂದೆ ಸೈಯದ್ ಮೆಹಬೂಬ್ ಮತ್ತು ಆರೋಪಿಗಳ ನಡುವೆ ಹಣಕಾಸಿನ ವಿಚಾರಕ್ಕೆ ಜಗಳ ನಡೆದಿತ್ತು’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಶನಿವಾರ ಬೆಳಿಗ್ಗೆ ಮೆಹಬೂಬ್‌ಗೆ ಕರೆ ಮಾಡಿದ ರಾಜು, ಬಾಡಿಗೆ ಇದ್ದು, ಅಂಗಡಿ ಬಳಿ ಬರುವಂತೆ ಹೇಳಿದ್ದಾನೆ. ಸ್ಥಳಕ್ಕೆ ಹೋದಾಗ ಮೂವರ ನಡುವೆ ಹಣಕಾಸಿನ ವಿಚಾರಕ್ಕೆ ಜಗಳ ನಡೆದಿದೆ. ಅದು ವಿಕೋಪಕ್ಕೆ ಹೋದಾಗ ಚಾಕುವಿನಿಂದ ಮೆಹಬೂಬ್‌ನ ಹೊಟ್ಟೆಗೆ ಇರಿದು ಇಬ್ಬರೂ ಪರಾರಿಯಾಗಿದ್ದಾರೆ. ಬಳಿಕ ಸ್ಥಳೀಯರು ಮೆಹಬೂಬ್ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ’ ಎಂದು ಹೇಳಿದರು.

ಸೈಬರ್ ವಂಚನೆ: ಶೇ 14ರಷ್ಟು ಪ್ರಕರಣಗಳಲ್ಲಿ ಎಫ್‌ಐಆರ್

ಅಪರಾಧ ಸುದ್ದಿ

ಬೆಂಗಳೂರು: ರಾಜ್ಯದಲ್ಲಿ ಸೈಬರ್ ವಂಚನೆ ಪ್ರಕರಣಗಳಲ್ಲಿ ಲಕ್ಷಾಂತರ ಮಂದಿ ಹಣ ಕಳೆದುಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್‌ಗೆ (ಎನ್‌ಸಿಆರ್‌ಪಿ) ಬಂದ ಒಟ್ಟು ದೂರುಗಳಲ್ಲಿ ಶೇಕಡ 14ರಷ್ಟು ಕರೆಗಳಿಗೆ ಸಂಬಂಧಿಸಿದಂತೆ ಮಾತ್ರ ಎಫ್‌ಐಆರ್ ದಾಖಲಿಸಲಾಗುತ್ತಿದೆ ಎಂಬುದು ‘ಪ್ರಜಾವಾಣಿ’ಗೆ ದೊರೆತ ಇತ್ತೀಚಿನ ಅಂಕಿ ಅಂಶಗಳಲ್ಲಿದೆ.

ಮಾಹಿತಿಯ ಪ್ರಕಾರ, ಸಹಾಯವಾಣಿ 1930ಕ್ಕೆ 2024ರಲ್ಲಿ (ನವೆಂಬರ್ 30ರವರೆಗೆ) 148,865 ಕರೆಗಳು ಬಂದಿವೆ. ಆದರೆ. ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಕಳೆದ ವರ್ಷ ಕೇವಲ 20,875 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.

ಸೈಬರ್ ವಂಚನೆ ಕುರಿತ ದೂರುಗಳನ್ನು ಸ್ವೀಕರಿಸಲು ಆರಂಭಿಸಿರುವ ಸಹಾಯವಾಣಿಯಿಂದ ಆರೋಪಿಗಳ ಪತ್ತೆಗೆ ಹಾಗೂ ಹಣ ಜಪ್ತಿ ಮಾಡಲು ಸಹಕಾರಿಯಾಗುತ್ತದೆ.

ಸೈಬರ್ ಅಪರಾಧ ತಡೆಗೆ ರಾಜ್ಯದಲ್ಲಿ ಡಿಜಿಪಿ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ಸೈಬರ್ ಅಪರಾಧ ಘಟಕ ತೆರೆಯುವ ಪ್ರಸ್ತಾವ ಸರ್ಕಾರದ ಮುಂದಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ಹೇಳಿದ್ದರು.

ಎಫ್‌ಐಆರ್ ದಾಖಲಾಗುವ ಪ್ರಕರಣಗಳ ಸಂಖ್ಯೆ ಕಡಿಮೆ ಇರುವ ಕಾರಣ ಕರ್ನಾಟಕದಲ್ಲಿ 2021ರಿಂದ ಸೈಬರ್ ಅಪರಾಧಗಳಿಂದಾಗಿ ನಾಲ್ಕರಿಂದ ಐದು ಪಟ್ಟು ವಂಚನೆ ಮೊತ್ತ ಹೆಚ್ಚಾಗಿದೆ. ರಾಜ್ಯದಲ್ಲಿ 2023ರಲ್ಲಿ ₹662 ಕೋಟಿ, 2024ರಲ್ಲಿ ₹2,900 ಕೋಟಿಯನ್ನು ಸೈಬರ್ ವಂಚಕರು ಲಪಟಾಯಿಸಿದ್ದಾರೆ ಎಂಬುದು ಅಂಕಿಅಂಶಗಳಲ್ಲಿದೆ.

ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ಮಲ್ಲೇಶ್ವರದ ರಾಮ ಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 60ನೇ ನಾದಜ್ಯೋತಿ ಸಂಗೀತ ಸಂಭ್ರಮದಲ್ಲಿ (ಕುಳಿತವರು) ಎಂ.ಬಿ. ಹರಿಹರನ್ ಅವರಿಗೆ ‘ನಾದಜ್ಯೋತಿ ಪುರಸ್ಕಾರ’, ಟಿ.ಎಸ್. ಸತ್ಯವತಿ ಅವರಿಗೆ ‘ಕಲಾಜ್ಯೋತಿ ಪ್ರಶಸ್ತಿ’, ಎಸ್. ಶೇಷಗಿರಿ ರಾವ್ ಅವರಿಗೆ ‘ಜೀವಮಾನ ಸಾಧನೆ ಪುರಸ್ಕಾರ’, ಎಸ್. ಅಶೋಕ್ ಅವರಿಗೆ ‘ನಾದಜ್ಯೋತಿ ಪುರಸ್ಕಾರ’ ಪ್ರದಾನ ಮಾಡಲಾಯಿತು. ಸ್ವಾಗತ ಸಮಿತಿ ಅಧ್ಯಕ್ಷ ಎಸ್. ಶಂಕರ್, ಜಂಟಿ ಕಾರ್ಯದರ್ಶಿ ಸಿ. ರಮೇಶ್, ಕಾಡುಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ, ಡಾ. ರಾಜ್‌ಕುಮಾರ್ ಐ ಬ್ಯಾಂಕ್‌ನ ನಿರ್ದೇಶಕ ಎಂ.ಕೆ. ಕೃಷ್ಣ, ಟ್ರಸ್ಟಿಗಳಾದ ಶ್ರೀನಿವಾಸ್ ಕುಮಾರ್, ಎಂ.ಡಿ. ಜಯಸಿಂಹ, ಪ್ರಗಲ್ಭ ಆರ್.ಎಸ್., ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಬೈಕ್‌ಗೆ ಲಾರಿ ಡಿಕ್ಕಿ: ದಂಪತಿ ಮರಣ

ಬೆಂಗಳೂರು: ಕೆಂಗೇರಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ದ್ವಿಚಕ್ರ ವಾಹನಕ್ಕೆ ಸಿಮೆಂಟ್ ಮಿಕ್ಸರ್ ಲಾರಿ ಡಿಕ್ಕಿ ಹೊಡೆದು ದಂಪತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೆ.ಜಿ.ಹಳ್ಳಿಯ ಅಬ್ದುಲ್ ಬಾಷಾ (68) ಮತ್ತು ಅವರ ಪತ್ನಿ ಸಬಾನಾ ಬೇಗಂ (55) ಮೃತರು. ಘಟನೆ ಸಂಬಂಧ ಲಾರಿ ಚಾಲಕ ಜಾರ್ಖಂಡ್‌ನ ಪ್ರೀತಮ್ ಚೌಹಾಣ್ (35) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಕೆ.ಜಿ.ಹಳ್ಳಿಯಿಂದ ಉತ್ತರಹಳ್ಳಿಯ ಕೋಣಸಂದ್ರದ ದರ್ಗಾಕ್ಕೆ ದ್ವಿಚಕ್ರ ವಾಹನದಲ್ಲಿ ಅಬ್ದುಲ್ ಬಾಷಾ ಮತ್ತು ಸಬಾನಾ ಬೇಗಂ ದಂಪತಿ ಹೋಗುತ್ತಿದ್ದರು. ಅದೇ ಮಾರ್ಗದಲ್ಲಿ ಲಾರಿ ಸಹ ಹೋಗುತ್ತಿತ್ತು. ಮಧು ಪೆಟ್ರೋಲ್ ಬಂಕ್‌ನ ಕೋಡಿಪಾಳ್ಯದ ಸರ್ಕಲ್ ಬಳಿ ಅಬ್ದುಲ್ ಬಾಷಾ ಅವರು ಬಲಕ್ಕೆ ಬೈಕ್ ತಿರುಗಿಸಿದ್ದಾರೆ. ಹಿಂದಿನಿಂದ ವೇಗವಾಗಿ ಬರುತ್ತಿದ್ದ ಲಾರಿ ಡಿಕ್ಕಿ ಹೊಡೆದಿದೆ. ಕೆಳಗೆ ಬಿದ್ದ ದಂಪತಿ ಮೇಲೆ ಲಾರಿ ಚಕ್ರಗಳು ಹರಿದು, ತೀವ್ರ ರಕ್ತಸ್ರಾವದಿಂದ ಮೃತಪಟ್ಟರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬೈಕ್‌ಗೆ ಡಿಕ್ಕಿ ಹೊಡೆದ ಬಳಿಕ, ಲಾರಿ ನಿಯಂತ್ರಿಸಲು ಸಾಧ್ಯವಾಗದೆ ಸುಮಾರು 200 ಮೀಟರ್ ದೂರದವರೆಗೆ ಬೈಕ್ ಅನ್ನು ಚಾಲಕ ಎಳೆದೊಯ್ದಿದ್ದಾನೆ. ಅಪಘಾತದ ದೃಶ್ಯ ಸಮೀಪದ ಅಂಗಡಿಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

ಪ್ರತ್ಯೇಕ ಅಪಘಾತ: 3 ಸಾವು

ನೆಲಮಂಗಲ: ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಭಾನುವಾರ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಮೂವರು ಮೃತಪಟ್ಟಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್, ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕಾಶಪ್ಪ (45), ಹನುಮಂತ (55) ಎಂಬುವರು ಮೃತಪಟ್ಟಿದ್ದಾರೆ. ಅಪಘಾತದಿಂದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಒಂದು ಗಂಟೆಗೂ ಹೆಚ್ಚು ಕಾಲ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಯಾದಗಿರಿ ಜಿಲ್ಲೆಯ ಕಾಶಪ್ಪ ಅವರು ನಗರದಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಬೆಂಗಳೂರಿನಿಂದ ತುಮಕೂರಿಗೆ ಹೋಗುತ್ತಿದ್ದ ಬಸ್ ಬೊಮ್ಮನಹಳ್ಳಿ ಸಮೀಪ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಕಾಶಪ್ಪ ಸ್ಥಳದಲ್ಲೇ ಮೃತಪಟ್ಟರೆ, ಮತ್ತೊಬ್ಬರು ಆಸ್ಪತ್ರೆಯಲ್ಲಿ ಸಾವಿಗೀಡಾದರು. ನೆಲಮಂಗಲ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಸಂಬಂಧಿಕರಿಗೆ ಮೃತ ದೇಹಗಳನ್ನು ಹಸ್ತಾಂತರಿಸಲಾಯಿತು.

ಮತ್ತೊಂದು ಪ್ರಕರಣದಲ್ಲಿ ದಾಬಸ್‌ಪೇಟೆಯಿಂದ ನೆಲಮಂಗಲಕ್ಕೆ ಬರುವಾಗ ತಿಪ್ಪಗೊಂಡನಹಳ್ಳಿ ಸಿದ್ಧಾರ್ಥ ಆಸ್ಪತ್ರೆಯ ಸಮೀಪ ಕೆಎಸ್‌ಆರ್‌ಟಿಸಿ ಬಸ್, ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಪೆಮ್ಮನಹಳ್ಳಿಯ ಕೆಂಪಗಂಗಯ್ಯ (54) ಮೃತಪಟ್ಟಿದ್ದಾರೆ. ಘಟನೆಯಲ್ಲಿ ಚಂದ್ರಕಲಾ(48) ಅವರಿಗೆ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಲವು ವ್ಯಕ್ತಿಗಳ ಕರೆ ವಿವರ ಪಡೆದಿರುವ ಐಶ್ವರ್ಯಾಗೌಡ

ಸಿಡಿಆರ್ ಪ್ರಕರಣ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮವಾಗಿ ಹಲವು ವ್ಯಕ್ತಿಗಳ ಮೊಬೈಲ್ ಕರೆಗಳ ವಿವರ (ಸಿಡಿಆರ್) ಪಡೆದಿರುವ ಐಶ್ವರ್ಯಾಗೌಡ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಜಯನಗರ ವಿಭಾಗದ ಎಸಿಪಿ ಚಂದನ್ ಕುಮಾರ್ ನೇತೃತ್ವದ ತಂಡ, ಅಧಿಕಾರಿಗಳ ವಿಚಾರಣೆ ಆರಂಭಿಸಿದೆ.

2021ರಿಂದ 2023ರವರೆಗೆ ಎರಡು ಮೊಬೈಲ್ ಸಂಖ್ಯೆಗಳ ಹಾಗೂ 2021–2024ರವರೆಗೆ ಎರಡು ಮೊಬೈಲ್ ಸಂಖ್ಯೆಗಳನ್ನು ಸೇರಿ ನಾಲ್ವರ ಸಿಡಿಆರ್ ವಿವರಗಳನ್ನು ಐಶ್ವರ್ಯಾ ಗೌಡ ಪಡೆದಿದ್ದಾರೆ. ಇದರಲ್ಲಿ ತನಗೆ ಸಾಲ ನೀಡಿದ್ದವರು ಹಾಗೂ ರಾಜಕೀಯ ಮುಖಂಡರ ಸಿಡಿಆರ್ ಇವೆ. ಇದಕ್ಕಾಗಿ ಕೆಲವು ಪೊಲೀಸ್ ಅಧಿಕಾರಿಗಳನ್ನು ಬಳಸಿಕೊಂಡಿದ್ದಾರೆ ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ಸಿಡಿಆರ್ ತೆಗೆದುಕೊಳ್ಳಲು ಅಧಿಕಾರಿಗಳು ಸಹಕಾರ ನೀಡಿರುವುದನ್ನು ತಿಳಿದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಕೆಂಡಾಮಂಡಲ ಆಗಿದ್ದಾರೆ. ಹಾಗಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಅಧಿಕಾರಿಗಳನ್ನು ಕರೆಸಿ ವಿಚಾರಣೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

‘ಸಿಡಿಆರ್ ಒಬ್ಬ ವ್ಯಕ್ತಿಯ ವೈಯಕ್ತಿಕ ಮಾಹಿತಿ ಆಗಿದ್ದು, ಅದನ್ನು ಅಪರಾಧ ಕೃತ್ಯದ ತನಿಖೆಯ ಸಂದರ್ಭದಲ್ಲಿ ತನಿಖಾ ಸಂಸ್ಥೆಗಳು ಮಾತ್ರ ಪಡೆಯಬಹುದಾಗಿದೆ. ಐಶ್ವರ್ಯಾಗೌಡ ಅವರು ಯಾವ ಕಾರಣಕ್ಕೆ ಸಿಡಿಆರ್ ಪಡೆದುಕೊಂಡಿದ್ದಾರೆ ಮತ್ತು ಅದನ್ನು ಯಾವ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದ್ದರು ಎನ್ನುವುದರ ಕುರಿತು ತನಿಖೆ ನಡೆಯುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಬ್ಯಾಟರಾಯನಪುರ ಉಪ ವಿಭಾಗದ ಎಸಿಪಿ ಭರತ್ ರೆಡ್ಡಿ ಅವರು ದೂರುದಾರರಾಗಿರುವ ಕಾರಣ ತನಿಖೆಯ ಹೊಣೆಯನ್ನು ಚಂದನ್ ಕುಮಾರ್ ಅವರಿಗೆ ವಹಿಸಿ ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್ ಆದೇಶ ಹೊರಡಿಸಿದ್ದರು.

ಮಗನನ್ನು ಹೊಡೆದು ಕೊಂದ ತಂದೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಯಾದಾದ್ರಿ ಭುವನಗಿರಿ ಜಿಲ್ಲೆಯ ಚೌಟುಪ್ಪಲ್ ನಗರದಲ್ಲಿ ತಂದೆಯೇ ಮಗನನ್ನು ಹೊಡೆದು ಕೊಂದಿದ್ದಾರೆ.

ಒಂಬತ್ತನೇ ತರಗತಿ ಓದುತ್ತಿದ್ದ ಬಾಲಕ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಶನಿವಾರ ರಾತ್ರಿ ಮನೆಗೆ ವಾಪಸ್ ಬಂದಿದ್ದ. ಈ ಸಂದರ್ಭದಲ್ಲಿ ಆತನ ತಂದೆ ‘ತಡವಾಗಿ ಬಂದಿದ್ದೇಕೆ’ ಎಂದು ಪ್ರಶ್ನಿಸಿ ಬಾಲಕನ ಎದೆಯ ಭಾಗಕ್ಕೆ ಹೊಡೆದಿದ್ದಾರೆ ಎಂದು ತನಿಖೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

ಕೂಡಲೇ ಬಾಲಕನನ್ನು ಆಸ್ಪತ್ರೆಗೆ ಹೊತ್ತೊಯ್ಯಲಾಗಿತ್ತಾದರೂ ಮಾರ್ಗಮಧ್ಯೆ ಆತ ಮೃತಪಟ್ಟಿದ್ದಾನೆ. ಘಟನೆ ವೇಳೆ ಆರೋಪಿಯು ಮದ್ಯ ಕುಡಿದಿದ್ದರು ಎಂದು ಹೇಳಲಾಗಿದೆ. ಬಾಲಕನ ತಾಯಿ ನೀಡಿದ ದೂರಿನ ಮೇಲೆ ಆರೋಪಿ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ. ಸದ್ಯ ಆರೋಪಿ ತಲೆಮರೆಸಿಕೊಂಡಿದ್ದು, ತನಿಖೆ ನಡೆಯುತ್ತಿದೆ ಎಂದರು.

ನಕಲಿ ಪಾಸ್‌ಪೋರ್ಟ್: ಬಂಧನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ನಕಲಿ ಪಾಸ್‌ಪೋರ್ಟ್ ಬಳಸಿ ಲಂಡನ್‌ನಿಂದ ಏರ್ ಇಂಡಿಯಾ ವಿಮಾನದಲ್ಲಿ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶುಕ್ರವಾರ ರಾತ್ರಿ ಬಂದಿಳಿದ ಪ್ರಯಾಣಿಕನನ್ನು ವಿಮಾನ ನಿಲ್ದಾಣ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಆರೋಪಿ ತಮಿಳುನಾಡಿನ ಗೋಬಿ ಜನವೀರನ್ ಇಮಿಗ್ರೇಷನ್ ಪರಿಶೀಲನೆ ವೇಳೆ ಅಧಿಕಾರಿಗಳ ಕೈಗೆ ಸಿಕ್ಕಿ ಬಿದ್ದಿದ್ದಾನೆ. ಪಾಸ್‌ಪೋರ್ಟ್ ಕಳವಾದ ಕಾರಣ ಎಮರ್ಜೆನ್ಸಿ ಸರ್ಟಿಫಿಕೇಟ್ ಮೂಲಕ ಭಾರತಕ್ಕೆ ಬಂದಿರುವುದಾಗಿ ಆರೋಪಿ ತಿಳಿಸಿದ್ದಾನೆ.

ಚೆನ್ನೈನಿಂದ 2017ರ ನವೆಂಬರ್‌ನಲ್ಲಿ ಮತುಮತಿ ರಾಮಸ್ವಾಮಿ ಎಂಬ ಪಾಸ್‌ಪೋರ್ಟ್ ಬಳಸಿ ವಿದೇಶಕ್ಕೆ ಹೋಗಿ ಬಂದಿರುವುದಾಗಿ ವಿಚಾರಣೆ ವೇಳೆ ತಿಳಿದು ಬಂದಿದೆ. ನಕಲಿ ಪಾಸ್‌ಪೋರ್ಟ್ ಬಳಕೆ ಆರೋಪದ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ.

ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ವಿಮಾನ ನಿಲ್ದಾಣದ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ದಂಪತಿ ವಿರುದ್ಧ ಎಫ್‌ಐಆರ್

ಅಧಿಕ ಬಡ್ಡಿ ನೀಡುವಂತೆ ಕಿರುಕುಳ ನೀಡುತ್ತಿದ್ದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಡೆದಿದ್ದ ₹1.60 ಲಕ್ಷ ಸಾಲಕ್ಕೆ ಬಡ್ಡಿ ರೂಪದಲ್ಲಿ ₹3.80 ಲಕ್ಷ ಪಾವತಿಸಿದ್ದರೂ ಮತ್ತೆ ಬಡ್ಡಿ ನೀಡುವಂತೆ ಕಿರುಕುಳ ನೀಡುತ್ತಿದ್ದ ಆರೋಪದ ಮೇಲೆ ದಂಪತಿ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಹಕಾರ ಸಂಘಗಳ ಉಪ ರಿಜಿಸ್ಟ್ರಾರ್ ಗಂಗಾಧರ್ ದೂರಿನ ಮೇರೆಗೆ ಶಶೀಂದ್ರಾ ಮತ್ತು ಅಶೋಕ್ ದಂಪತಿ ವಿರುದ್ಧ ಅಕ್ರಮ ಹಣ ವರ್ಗಾವಣೆ ಕಾಯ್ದೆ, ಅಧಿಕ ಬಡ್ಡಿ ವಸೂಲಿ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

‘ಸಿದ್ಧಾಪುರ ಕೆ.ಎಂ.ಕಾಲೊನಿ ನಿವಾಸಿ ಸಮ್ರೀನ್ ತಾಜ್ ಅವರು ತಂಗಿಯ ಮದುವೆಗಾಗಿ ಸಂಬಂಧಿ ಮೊಹಮ್ಮದ್ ರಫೀಕ್ ಅವರ ಸಹಾಯದಿಂದ ಶಶೀಂದ್ರಾ ಅವರಿಂದ 2021ರ ಜುಲೈನಲ್ಲಿ ಮಾಸಿಕ ಶೇಕಡ 5ರ ಬಡ್ಡಿ ದರದಲ್ಲಿ ₹1.60 ಲಕ್ಷ ಸಾಲ ಪಡೆದುಕೊಂಡಿದ್ದರು. ಸಾಲ ಪಡೆಯುವಾಗ ಖಾಲಿ ಚೆಕ್ ಸಹ ನೀಡಿದ್ದರು. ಬಳಿಕ ಪ್ರತಿ ತಿಂಗಳು ₹8 ಸಾವಿರದಂತೆ ಒಂದೂವರೆ ವರ್ಷ ಸುಮಾರು ₹1.44 ಲಕ್ಷ ಹಣವನ್ನು ಶಶೀಂದ್ರಾಗೆ ನೀಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬಡ್ಡಿ ಕಟ್ಟುವುದು ವಿಳಂಬವಾದಾಗ ಶಶೀಂದ್ರಾ, ಸಮ್ರೀನ್‌ಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ದೂರಲಾಗಿದೆ. ಬಳಿಕ ಸಮ್ರೀನ್ ಅವರು ಶಶೀಂದ್ರಾ ಅವರ ಮನೆಗೆ ತೆರಳಿ, ಬಡ್ಡಿ ಕಟ್ಟಲು ಆಗುತ್ತಿಲ್ಲ. ಅಸಲು ಹಣವನ್ನು ಮಾತ್ರ ಕಟ್ಟಿ ತೀರಿಸುವುದಾಗಿ ಮನವಿ ಮಾಡಿದ್ದಾರೆ. ಯಾವುದೇ ಕಾರಣಕ್ಕೂ ಬಡ್ಡಿ ಬಿಡುವುದಿಲ್ಲ ಎಂದು ಶಶೀಂದ್ರಾ ಹೇಳಿದ್ದಾರೆ. ಬಳಿಕ ಸಮ್ರೀನ್ ಪ್ರತಿ ತಿಂಗಳು ₹10 ಸಾವಿರ ಅಸಲು ಮತ್ತು ₹5 ಸಾವಿರ ಬಡ್ಡಿ ಸೇರಿ ₹15 ಸಾವಿರ ಕಟ್ಟುವುದಾಗಿ ಒಪ್ಪಿಕೊಂಡಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘2024ರ ಮೇ 24ರವರೆಗೆ ಬಡ್ಡಿ ರೂಪದಲ್ಲಿ ಒಟ್ಟು ₹1.86 ಲಕ್ಷ ಪಾವತಿಸಲಾಗಿದೆ. ಈ ನಡುವೆ ತೆರಿಗೆ ಪಾವತಿಸಬೇಕೆಂದು ಶಶೀಂದ್ರಾ ನನ್ನ ಬಳಿ ₹50 ಸಾವಿರ ಪಡೆದಿದ್ದಾರೆ. ಸಾಲ ಪಡೆಯುವಾಗ ಸಂಬಂಧಿ ರಫೀಕ್ ನೀಡಿದ್ದ ಖಾಲಿ ಚೆಕ್ ಅನ್ನು ಶಶೀಂದ್ರಾ ದುರುಪಯೋಗಪಡಿಸಿಕೊಂಡು ₹4 ಲಕ್ಷ ಬರೆದುಕೊಂಡು ಬ್ಯಾಂಕ್‌ಗೆ ಹಾಕಿ ಬೌನ್ಸ್ ಮಾಡಿದ್ದಾರೆ’ ಎಂದು ಆರೋಪಿಸಿರುವ ಸಮ್ರೀನ್, ಶಶೀಂದ್ರಾ ಹಾಗೂ ಅಶೋಕ್ ದಂಪತಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸಹಕಾರ ಸಂಘಗಳ ಉಪ ರಿಜಿಸ್ಟ್ರಾರ್ ಅವರಿಗೆ ದೂರು ನೀಡಿದ್ದರು.

ಭದ್ರತಾ ಸಿಬ್ಬಂದಿಗೆ ಚಾಕು ಇರಿತ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಭದ್ರತಾ ಸಿಬ್ಬಂದಿಯೊಬ್ಬರನ್ನು ಅಡ್ಡಗಟ್ಟಿದ ವ್ಯಕ್ತಿ, ಚಾಕುವಿನಿಂದ ಇರಿದು ಪರಾರಿಯಾಗಿರುವ ಘಟನೆ ಇಂದಿರಾನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಉತ್ತರ ಪ್ರದೇಶ ನಿವಾಸಿ ಮಹೇಶ್ ಅವರು ಚಾಕು ಇರಿತಕ್ಕೆ ಒಳಗಾಗಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಣ್ಣ ಪ್ರಮಾಣದ ಗಾಯವಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

‘ಕೆಲಸ ಮುಗಿಸಿಕೊಂಡು ಮಹೇಶ್ ಅವರು ರಾತ್ರಿ ಮನೆಗೆ ನಡೆದುಕೊಂಡು ಹೋಗುತ್ತಿದ್ದರು. ಇಂದಿರಾನಗರದ 10ನೇ ಮುಖ್ಯ ರಸ್ತೆಯಲ್ಲಿ ಮದ್ಯ ಸೇವಿಸಿದ್ದ ಕದಂಬ ಎಂಬ ವ್ಯಕ್ತಿ ಎದುರಾಗಿ, ಅವರೊಂದಿಗೆ ಜಗಳ ತೆಗೆದಿದ್ದಾನೆ. ಏಕಾಏಕಿ ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಇಂದಿರಾನಗರದಲ್ಲಿ ವಾಸಿಸುವ ಕದಂಬ ಎಂಬ ವ್ಯಕ್ತಿ ಮದ್ಯದ ಅಮಲಿನಲ್ಲಿ ಚಾಕುವಿನಿಂದ ಇರಿದಿದ್ದಾನೆ. ಆರೋಪಿಯ ಸುಳಿವು ಲಭ್ಯವಾಗಿದ್ದು, ಶೀಘ್ರ ಬಂಧಿಸಲಾಗುವುದು. ಯಾವ ಕಾರಣಕ್ಕೆ ಕೃತ್ಯ ಎಸಗಿದ್ದಾನೆ ಎಂಬುದು ಗೊತ್ತಾಗಿಲ್ಲ’ ಎಂದು ಹೇಳಿದ್ದಾರೆ.

ಕರ್ನಾಟಕ ನ್ಯಾಯಾಂಗ ಅಕಾಡೆಮಿ ಬೆಳ್ಳಿ ಮಹೋತ್ಸವ ಅಂಗವಾಗಿ ಭಾನುವಾರ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎಸ್‌ವಿಎನ್ ಭಟ್ಟಿ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಅಕಾಡೆಮಿಯ ಸದಸ್ಯರಾದ ಶ್ರೀನಿವಾಸ್ ಹರೀಶ್ ಕುಮಾರ್, ಸುನಿಲ್ ದತ್ತ ಯಾದವ್, ಎಸ್.ಆರ್. ಕೃಷ್ಣ ಕುಮಾರ್, ಅನು ಶಿವರಾಮನ್, ಅಕಾಡೆಮಿಯ ಅಧ್ಯಕ್ಷರು ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

‘ಕೌಶಲದೊಂದಿಗೆ ಮೌಲ್ಯವನ್ನೂ ಕಾಪಿಟ್ಟುಕೊಳ್ಳಿ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಜ್ಞಾನ ಹಾಗೂ ಕೌಶಲ ಸಂಪಾದಿಸಿದರೆ ಹಣ ತಂತಾನೆ ಒದಗಿ ಬರುತ್ತದೆ. ದುಡ್ಡಿನ ಹಿಂದೆ ಓಡುವ ಅವಶ್ಯಕತೆ ಸೃಷ್ಟಿಯಾಗುವುದಿಲ್ಲ’ ಎಂದು ಹೈ ಕೋರ್ಟ್ ನ್ಯಾಯಮೂರ್ತಿ ವಿಜಯ್ ಕುಮಾರ್ ಎ ಪಾಟೀಲ್ ಹೇಳಿದರು.

ಕೆ.ಎಲ್.ಇ ಕಾನೂನು ಪದವಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ವಕೀಲಿ ವೃತ್ತಿ ಅತ್ಯಂತ ವಿಶಿಷ್ಟ ಕ್ಷೇತ್ರ. ಇದನ್ನು ಆರಿಸಿಕೊಂಡವರು ಕೌಶಲದೊಂದಿಗೆ ಮೌಲ್ಯಗಳನ್ನು ಕಾಪಿಟ್ಟುಕೊಳ್ಳಬೇಕು ಎಂದು ಹೇಳಿದರು.

ಪ್ರಾಂಶುಪಾಲ ಪ್ರೊ.ಜೆ.ಎಂ.ಮಲ್ಲಿಕಾರ್ಜುನಯ್ಯ ಮಾತನಾಡಿದರು. ಇದೇ ವೇಳೆ 104 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕುಂದು ಕೊರತೆ — ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

ಹಾಳಾದ ರಸ್ತೆ, ವಾಹನ ಸಂಚಾರ ದುಸ್ತರ

ಇಮ್ಮಡಿಹಳ್ಳಿ ಕೈತೋಟ ಮಾರ್ಗದ ರಸ್ತೆಯ ದುಃಸ್ಥಿತಿ

ಇಮ್ಮಡಿಹಳ್ಳಿ ಕೈತೋಟ ಮಾರ್ಗದ ರಸ್ತೆ ಸಂಪೂರ್ಣ ಹಾಳಾಗಿದ್ದು, ವಾಹನ ಸಂಚಾರವೇ ದುಸ್ತರವಾಗಿದೆ. ಈ ರಸ್ತೆ ವೈಟ್‌ಫೀಲ್ಡ್, ನಾಗೊಂಡನಹಳ್ಳಿ, ಚನ್ನಸಂದ್ರ, ಹಾರೋಹಳ್ಳಿ, ವರ್ತೂರು ಸೇರಿದಂತೆ ಹಲವಾರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುವುದರಿಂದ, ದೂಳಿನ ಸಮಸ್ಯೆ ಹೆಚ್ಚಾಗಿದೆ. ಇದರಿಂದ ಸ್ಥಳೀಯ ನಿವಾಸಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಈ ಭಾಗದಲ್ಲಿ ಅಪಾರ್ಟ್‌ಮೆಂಟ್‌ಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಯಾವುದೇ ರೀತಿಯ ಮೂಲಸೌಕರ್ಯಗಳಿಲ್ಲ. ಬಿಬಿಎಂಪಿಗೆ ಪ್ರತಿವರ್ಷ ತೆರಿಗೆ ಪಾವತಿಸಲಾಗುತ್ತದೆ. ಆದರೆ, ಸೌಲಭ್ಯ ಮಾತ್ರ ಮರೀಚಿಕೆ ಆಗಿದೆ.

ರಾಜ್ ಕುಮಾರ್ ಕೆ., ರಾಮಗೊಂಡನಹಳ್ಳಿ

‘ರಸ್ತೆ ದುರಸ್ತಿಗೊಳಿಸಿ’

ಸಹಕಾರ ನಗರ ಹಾಗೂ ರಾಜೀವ್ ಗಾಂಧಿ ನಗರಕ್ಕೆ ಸಂಪರ್ಕ ಕಲ್ಪಿಸುವ ರೈಲ್ವೆ ಅಂಡರ್ ಪಾಸ್ ನಿರ್ಮಾಣವಾಗಿ ಸುಮಾರು ಎಂಟು ವರ್ಷಗಳೇ ಕಳೆದಿವೆ. ಅಂಡರ್ ಪಾಸ್ ನಿರ್ಮಾಣ ಮಾಡುವ ಸಂದರ್ಭದಲ್ಲಿ ಇಲ್ಲಿನ ರಸ್ತೆ ಅಗೆದು ಹಾಕಲಾಗಿತ್ತು. ಈ ರಸ್ತೆಯನ್ನು ಇದುವರೆಗೂ ಸರಿಪಡಿಸಿಲ್ಲ. ಈ ಭಾಗದ ಜನರ ನಿತ್ಯದ ಕಷ್ಟ ಕೇಳುವವರೇ ಇಲ್ಲ. ರಸ್ತೆ ದುರಸ್ತಿಗೊಳಿಸುವಂತೆ ಜನಪ್ರತಿನಿಧಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಶಿವಶಂಕರ್, ರಾಜೀವ್ ಗಾಂಧಿ ನಗರ


ಸಹಕಾರನಗರದಿಂದ ಇಂದಿರಾನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ದುಃಸ್ಥಿತಿ

‘ಬಾಗಿದ ಮರ ತೆರವುಗೊಳಿಸಿ’

ಬಸವನಗುಡಿಯ ದೊಡ್ಡಬಸವಣ್ಣ ದೇವಸ್ಥಾನದ ರಸ್ತೆಯಲ್ಲಿ ಆಲದ ಮರ ಬಾಗಿದೆ

ಬಸವನಗುಡಿಯ ದೊಡ್ಡ ಬಸವಣ್ಣ ದೇವಸ್ಥಾನದ ರಸ್ತೆಯಲ್ಲಿರುವ ಶೇಖರ್ ಆಸ್ಪತ್ರೆಯ ಮುಂಭಾಗದಲ್ಲಿ ಬೃಹತ್ ಆಲದ ಮರವೊಂದು ಬಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗುತ್ತಿದೆ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನ ಆಗಿಲ್ಲ. ಈ ಮರ ಬಿದ್ದು ಯಾವುದೇ ರೀತಿಯ ಅವಘಡಗಳು ಸಂಭವಿಸುವ ಮುನ್ನ ಬಿಬಿಎಂಪಿ ಸಿಬ್ಬಂದಿ ಇದನ್ನು ತೆರವುಗೊಳಿಸುವ ಕೆಲಸ ಮಾಡಬೇಕು.

ಎಸ್. ಶ್ರೀನಿವಾಸ್. ಹನುಮಂತನಗರ

‘ರಸ್ತೆ ಗುಂಡಿ ಮುಚ್ಚಿ’

ನಗರದ ಲೇಡಿ ಕರ್ಜನ್ ರಸ್ತೆಯಲ್ಲಿ ಬೃಹತ್ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಆದರೆ ರಸ್ತೆಯಲ್ಲಿ ಗುಂಡಿ ಬಿದ್ದ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತವೆ. ದ್ವಿಚಕ್ರ ವಾಹನ ಸವಾರರು ಈ ಗುಂಡಿಯಲ್ಲಿ ಬಿದ್ದು ಕೈ ಕಾಲು ಮುರಿದು-ಕೊಂಡಿದ್ದಾರೆ. ಬಿಬಿಎಂಪಿ ಕೂಡಲೇ ಈ ರಸ್ತೆಗುಂಡಿ ಮುಚ್ಚಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಗಿರೀಶ್ ಕುಮಾರ್, ವಾಹನ ಸವಾರ

ಲೇಡಿ ಕರ್ಜನ್ ರಸ್ತೆಯಲ್ಲಿ ಗುಂಡಿ ಬಿದ್ದಿದೆ

‘ನವರಂಗ್ ಸರ್ಕಲ್‌ನಲ್ಲಿ ಸಿಗ್ನಲ್ ಸಮಸ್ಯೆ’

ನವರಂಗ್ ಸರ್ಕಲ್ ಬಳಿ ಇತ್ತೀಚೆಗೆ ಎಐ ಆಧಾರಿತ ಸಿಗ್ನಲ್‌ಗಳನ್ನು ಅಳವಡಿಸಲಾಗಿದ್ದು, ಸಂಚಾರ ದಟ್ಟಣೆ ನಿವಾರಿಸಬೇಕಾದ ಸಿಗ್ನಲ್ ಈಗ ಸಮಸ್ಯೆ ಬಿಗಡಾಯಿಸಲು ಕಾರಣವಾಗುತ್ತಿದೆ. ಈ ಭಾಗದಲ್ಲಿ ಒಂದೇ ಕಡೆ ಮೂರು ಸಿಗ್ನಲ್‌ಗಳನ್ನು ಅಳವಡಿಸಿದ ಪರಿಣಾಮ ಈ ಸಮಸ್ಯೆ ಸೃಷ್ಟಿಯಾಗಿದೆ. ನಿತ್ಯವೂ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ವಾಹನಗಳು ಈ ರಸ್ತೆಯ ಮೂಲಕವೇ ಬೆಂಗಳೂರು ನಗರಕ್ಕೆ ಬಂದು, ಹೋಗುತ್ತವೆ. ಈ ರಸ್ತೆಯು ಕಿರಿದಾಗಿದ್ದು, ಬೇಗನೆ ಸಂಚಾರ ದಟ್ಟಣೆ ಉಂಟಾಗುತ್ತದೆ. ಇದರಿಂದ ಬೇರೆ ಊರುಗಳಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಬೇರೆ ಊರುಗಳಿಗೆ ತೆರಳುವ ಪ್ರಯಾಣಿಕರಿಗೆ ಸಮಸ್ಯೆ ಆಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಅಗತ್ಯವಿರುವ ಸ್ಥಳಗಳಲ್ಲಿ ಮಾತ್ರ ಸಿಗ್ನಲ್‌ಗಳನ್ನು ಅಳವಡಿಸಬೇಕು.

ಪೂಜಾ ಕಲಬುರಗಿ, ಪ್ರಯಾಣಿಕರು

ನವರಂಗ್ ಸರ್ಕಲ್ ಹತ್ತಿರ ಅಳವಡಿಸಿರುವ ಸಿಗ್ನಲ್

‘ವಾಹನ ನಿಲುಗಡೆಗೆ ಪಾದಚಾರಿ ಮಾರ್ಗದ ಅತಿಕ್ರಮಣ’

ಚಾಮರಾಜಪೇಟೆ ವಿಶಾಲನ್ ಮಾಲ್ ಪಕ್ಕದಲ್ಲಿರುವ ಬಸ್ ತಂಗುದಾಣದ ಹತ್ತಿರ ಇರುವ ಪಾದಚಾರಿ ಮಾರ್ಗದಲ್ಲಿ ಆಟೊ, ಕಾರುಗಳನ್ನು ನಿಲುಗಡೆ ಮಾಡುವುದರಿಂದ ಸಾರ್ವಜನಿಕರು ಬಿಎಂಟಿಸಿ ಬಸ್‌ಗಳನ್ನು ಹತ್ತುವುದಕ್ಕೆ ಸಮಸ್ಯೆ ಆಗುತ್ತಿದೆ. ಪಾದಚಾರಿ ಮಾರ್ಗದಲ್ಲಿ ಸಾರ್ವಜನಿಕರ ಓಡಾಟಕ್ಕೂ ಸಮಸ್ಯೆ ಆಗಿದೆ. ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುವುದರಿಂದ ಸಾರ್ವಜನಿಕರು ನಡುರಸ್ತೆಯ ಮೂಲಕ ಬಸ್ ತಂಗುದಾಣಕ್ಕೆ ಬರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ವರಲಕ್ಷ್ಮಿ, ಚಾಮರಾಜಪೇಟೆ

ಚಾಮರಾಜಪೇಟೆ ಪಾದಚಾರಿ ಮಾರ್ಗದಲ್ಲಿ ಆಟೊ, ಕಾರನ್ನು ನಿಲುಗಡೆ ಮಾಡಿರುವುದು

ಏರೊ ಇಂಡಿಯಾಗೆ ಇಂದು ಚಾಲನೆ • ರಕ್ಷಣಾ ಪರಿಕರ: ₹30,000 ಕೋಟಿ ರಫ್ತು ನಿರೀಕ್ಷೆ

ವೈಮಾನಿಕ ಪ್ರದರ್ಶನಕ್ಕೆ ನಗರ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಡುಗರ ಹೃದಯಬಡಿತ ಹೆಚ್ಚಿಸುವ ವೈಮಾನಿಕ ಕಸರತ್ತು, ವೈಮಾನಿಕ ಮತ್ತು ಬಾಹ್ಯಾಕಾಶ ಉದ್ದಿಮೆ, ಉದ್ಯಮಿಗಳ ಮುಖಾಮುಖಿಗೆ ವೇದಿಕೆ ಆಗಲಿರುವ ದೇಶದ ಬೃಹತ್ ವೈಮಾನಿಕ ಪ್ರದರ್ಶನ, 'ಏರೊ ಇಂಡಿಯಾ–2025' ಸೋಮವಾರ ಆರಂಭವಾಗಲಿದೆ.

ರಾಜನಾಥ್

ಬೆಂಗಳೂರು ಏರ್ ಷೋ ಎಂದೇ ಖ್ಯಾತವಾಗಿರುವ ವೈಮಾನಿಕ ಪ್ರದರ್ಶನದ 15ನೇ ಆವೃತ್ತಿ ಎಲ್ಲ ರೀತಿಯಲ್ಲೂ ಹಿಂದೆಂದಿಗಿಂತ ದೊಡ್ಡದಾಗಿ ಇರಲಿದೆ. ಯಲಹಂಕದಲ್ಲಿ ಇರುವ ವಾಯುಪಡೆಯ ವಿಶಾಲ ಮೈದಾನದಲ್ಲಿ ಪ್ರದರ್ಶನಕ್ಕೆ ಎಲ್ಲ ಸಿದ್ಧತೆಗಳೂ ಅಂತಿಮವಾಗಿವೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ವೈಮಾನಿಕ ಪ್ರದರ್ಶನದ ರೂಪುರೇಷೆಗಳ ಮಾಹಿತಿ ನೀಡಿದರು. 'ಇದು ಕೇವಲ ತಂತ್ರಜ್ಞಾನ–ಕೌಶಲ ತೋರಿಸಲು ಇರುವ ಪ್ರದರ್ಶನವಲ್ಲ. ಬದಲಿಗೆ ಕೋಟ್ಯಂತರ ಯುವಮನಸುಗಳಲ್ಲಿ ಸ್ಫೂರ್ತಿಯ ಸೆಲೆ ಬಿತ್ತುವ ವೇದಿಕೆ ಆಗಲಿದೆ' ಎಂದರು.

'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ, ಬಾಹ್ಯಾಕಾಶ ಸಂಶೋಧನೆಯಲ್ಲಿ ಭಾರತವು ಸ್ವಾಲಂಬನೆ ಸಾಧಿಸುತ್ತಿರುವುದರ ಪ್ರತೀಕವಾಗಿ ಈ ಪ್ರದರ್ಶನ ನಿಲ್ಲಲಿದೆ. ಹೆಸರಾಂತ ಜಾಗತಿಕ ಉದ್ಯಮಗಳ ನೂರಕ್ಕೂ ಹೆಚ್ಚು ಸಿಇಒಗಳು ಭಾಗಿಯಾಗಲಿದ್ದಾರೆ. ಬೆಂಗಳೂರಿನಂತಹ ವೈಮಾನಿಕ, ಬಾಹ್ಯಾಕಾಶ ಸಂಶೋಧನೆ ಮತ್ತು ನವೋದ್ಯಮಗಳ ಕೇಂದ್ರದಲ್ಲಿ ಹೂಡಿಕೆ ಸಾಧ್ಯತೆಗಳ ಬಗ್ಗೆ ಮಾತುಕತೆಗಳಿಗೆ ಇದು ವೇದಿಕೆಯಾಗಲಿದೆ' ಎಂದರು.

'ರಕ್ಷಣಾ ಪರಿಕರ ಮತ್ತು ಉಪಕರಣಗಳ ಕ್ಷೇತ್ರದಲ್ಲಿ ನಾವು ಅತಿಹೆಚ್ಚು ಆಮದು ಮಾಡಿಕೊಳ್ಳುವ ದೇಶವೆನಿಸಿದ್ದೇವೆ. ಇದು ಹೆಮ್ಮೆಯ ವಿಚಾರವಲ್ಲ. ಆದರೆ ಪ್ರತಿವರ್ಷ ಆಮದು ಪ್ರಮಾಣ ಇಳಿಕೆಯಾಗುತ್ತಿದೆ. ಜತೆಗೆ ರಕ್ಷಣಾ ಪರಿಕರಗಳ ರಫ್ತು ಏರಿಕೆಯಾಗುತ್ತಿದೆ. 2025–26ನೇ ಸಾಲಿನಲ್ಲಿ ಈ ರಫ್ತು ಮೊತ್ತ ₹30,000 ಕೋಟಿ ದಾಟಲಿದೆ ಎಂದು ಅಂದಾಜಿಸಲಾಗಿದೆ. ಇಂಥ ವಹಿವಾಟಿಗೆ ಪೂರಕವಾಗಿ ಪ್ರಾತ್ಯಕ್ಷಿಕೆ, ಮಾತುಕತೆ ವೈಮಾನಿಕ ಪ್ರದರ್ಶನವು ಅವಕಾಶ ನೀಡಲಿದೆ' ಎಂದರು.

ಹಿಂದೆಂದಿಗಿಂತ ದೊಡ್ಡ ಷೋ

42,438 ಚದರ ಮೀಟರ್ (35,000 ಚ.ಮೀ) ಏರೊ ಇಂಡಿಯಾ ನಡೆಯಲಿರುವ ಪ್ರದೇಶದ ವಿಸ್ತೀರ್ಣ		**7+** ಲಕ್ಷ (7 ಲಕ್ಷ) ಮಂದಿ ಭೇಟಿ ನೀಡುವ ನಿರೀಕ್ಷೆ
70+ (67) ವೈಮಾನಿಕ ಕಸರತ್ತುಗಳು	**30+** (23) ವೈಮಾನಿಕ ಸ್ಥಿರ ಪ್ರದರ್ಶನ	**900+** (809) ಪ್ರದರ್ಶನ ಮಳಿಗೆಗಳ ಸಂಖ್ಯೆ
80 ದೇಶಗಳ ರಕ್ಷಣಾ ಇಲಾಖೆ ಅಧಿಕಾರಿಗಳು ಭಾಗಿ	**26** ದೇಶಗಳ ರಕ್ಷಣಾ ಸಚಿವರು ಭಾಗಿ	**100+** ಕಂಪನಿಗಳ ಸಿಇಒಗಳು ಭಾಗಿಯಾಗುವ ನಿರೀಕ್ಷೆ

* ಆವರಣದಲ್ಲಿ ಇರುವುದು 2023ರ ಏರೊ ಇಂಡಿಯಾದ ವಿವರಗಳು

ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಮತ್ತು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಏರೊ ಇಂಡಿಯಾ ವೈಮಾನಿಕ ಪ್ರದರ್ಶನದ ಪೂರ್ವಭಾವಿಯಾಗಿ ಭಾನುವಾರ ಲಘು ಯುದ್ಧ ವಿಮಾನ ತೇಜಸ್ ಎಂಕೆ–1ಎನಲ್ಲಿ ಹಾರಾಟ ನಡೆಸಿದರು. ಅದಕ್ಕೂ ಮುನ್ನ ವಿಮಾನದ ಮೇಲೆ ನಿಂತು ಚಿತ್ರ ತೆಗೆಸಿಕೊಂಡರು. ಎಂಜಿನ್ ಹೊರತುಪಡಿಸಿ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ತೇಜಸ್‌ನಲ್ಲಿ ಸೇನಾಪಡೆಗಳ ಮುಖ್ಯಸ್ಥರು ಜಂಟಿ ಹಾರಾಟ ನಡೆಸಿದ್ದು ಇದೇ ಮೊದಲು — ಪಿಟಿಐ ಚಿತ್ರ

ತೇಜಸ್ ಪೂರೈಕೆಗೆ ಒತ್ತು: ರಾಜನಾಥ್

'ದೇಶೀಯವಾಗಿ ವಿನ್ಯಾಸ ಮಾಡಿರುವ ಅಮೆರಿಕದ ಎಂಜಿನ್ ಬಳಸುತ್ತಿರುವ ಲಘು ಯುದ್ಧ ವಿಮಾನ (ಎಲ್‌ಸಿಎ) ತೇಜಸ್ ಪೂರೈಕೆಯನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಕೆಲಸಗಳು ನಡೆಯುತ್ತಿವೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ತೇಜಸ್‌ನಲ್ಲಿ ಬಳಕೆಯಾಗುತ್ತಿರುವ ಎಂಜಿನ್ ಅಮೆರಿಕದ್ದು. ಆ ಎಂಜಿನ್ ಪೂರೈಕೆ ಹೆಚ್ಚಿಸುವ ಸಂಬಂಧ ಮಾತುಕತೆ ನಡೆದಿದೆ. ನಂತರ ತಯಾರಿಕಾ ಕಾರ್ಯವೂ ಕ್ಷಿಪ್ರವಾಗಲಿದೆ. 2025–26ನೇ ಸಾಲಿನಲ್ಲಿ ತೇಜಸ್ ಪೂರೈಕೆ ಕಾಲಮಿತಿಗೆ ಬದ್ಧವಾಗಿರಲಿದ್ದೇವೆ' ಎಂದು ರಕ್ಷಣಾ ಇಲಾಖೆ ಅಧಿಕಾರಿಗಳು ಪ್ರಶ್ನೆಗೆ ಉತ್ತರಿಸಿದರು.

ಅಮೆರಿಕ ಮತ್ತು ರಷ್ಯಾದ 5ನೇ ತಲೆಮಾರಿನ ಯುದ್ಧವಿಮಾನಗಳು ಪ್ರದರ್ಶನದಲ್ಲಿ ಭಾಗಿಯಾಗಲಿವೆ. ಅವುಗಳ ಖರೀದಿ ಸಂಬಂಧ ಮಾತುಕತೆ ನಡೆಯಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಲು ಅಧಿಕಾರಿಗಳು ನಿರಾಕರಿಸಿದರು.

ಬೆಂಗಳೂರಿನಲ್ಲಿ ಫೆ. 10ರಂದು ಪ್ರಾರಂಭಗೊಳ್ಳಲಿರುವ 'ಏರೊ ಇಂಡಿಯಾ–2025' ವೈಮಾನಿಕ ಪ್ರದರ್ಶನದ ಪ್ರತೀಕವಾಗಿ ನಗರದ ತಾಜ್ ವೆಸ್ಟೆಂಡ್ ಹೋಟೆಲ್ ಬಳಿ ವಿಮಾನದ ಪ್ರತಿಕೃತಿ ರೂಪಿಸುವುದರಲ್ಲಿ ಕಲಾವಿದರೊಬ್ಬರು ಭಾನುವಾರ ನಿರತರಾಗಿದ್ದ ದೃಶ್ಯ

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಆಕರ್ಷಣೆಗಳು

- ಸೂರ್ಯಕಿರಣ್ ತಂಡದ ವೈಮಾನಿಕ ಕಸರತ್ತು
- ಎಲ್‌ಸಿಎ ತೇಜಸ್ ಎಂಕೆ–1ಎ, ಎಚ್‌ಎಎಲ್ ನಿರ್ಮಿತ ಎಚ್‌ಟಿಟಿ–40 ತರಬೇತಿ ವಿಮಾನ
- ಅಮೆರಿಕದ ಎಫ್–35, ಬಿ–1ಬಿ ಲ್ಯಾನ್ಸರ್ ಬಾಂಬರ್, ಡಾರ್ನಿಯರ್ ವಿಮಾನ
- ರಷ್ಯಾದ ಸುಖೋಯ್–57 5ನೇ ತಲೆಮಾರಿನ ಯುದ್ಧವಿಮಾನ

ಕಾರ್ಯಕ್ರಮ ವಿವರ

ಫೆ.10: ಉದ್ಘಾಟನೆ, ವೈಮಾನಿಕ ಪ್ರದರ್ಶನ, ವಿಚಾರ ಸಂಕಿರಣ
ಫೆ.11: ಯುದ್ಧ ವಿಮಾನಗಳ ಪ್ರದರ್ಶನ, ವಿವಿಧ ದೇಶಗಳ ರಕ್ಷಣಾ ಇಲಾಖೆ ಅಧಿಕಾರಿಗಳು ಮತ್ತು ರಕ್ಷಣಾ ಸಚಿವರ ಸಭೆ, ಸಿಇಒಗಳ ಸಭೆ
ಫೆ.12: ಸಿಇಒ, ನವೋದ್ಯಮಿ ಮತ್ತು ಉದ್ಯಮಿಗಳ ಮುಖಾಮುಖಿ ಮಾತುಕತೆ, ವಿಚಾರ ಸಂಕಿರಣ, ಸಮಾರೋಪ
ಫೆ.13–14: ಸಾರ್ವಜನಿಕರಿಗೆ ವೈಮಾನಿಕ ಪ್ರದರ್ಶನ

'ಕಾರಂತರಿಂದ ರಂಗಭೂಮಿಗೆ ಆಧುನಿಕ ಸ್ಪರ್ಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ರಂಗಭೂಮಿಗೆ ಬಿ.ವಿ. ಕಾರಂತ ಅವರು ಆಧುನಿಕ ಸ್ಪರ್ಶ ನೀಡಿದರು. ಅವರಂಥ ರಂಗ ನಿರ್ದೇಶಕರು ದೇಶದಲ್ಲಿ ಮತ್ತೊಬ್ಬರು ಬಂದಿಲ್ಲ' ಎಂದು ಬೆನಕ ತಂಡದ ಮುಖ್ಯಸ್ಥರೂ ಆಗಿರುವ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಅಭಿಪ್ರಾಯ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯ, ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ನಾಟಕ ಶಾಲೆ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಜಂಟಿಯಾಗಿ ಹಮ್ಮಿಕೊಂಡಿರುವ 'ಭಾರತ ರಂಗ ಮಹೋತ್ಸವ' ಅಂತರರಾಷ್ಟ್ರೀಯ ನಾಟಕೋತ್ಸವದಲ್ಲಿ ಬೆನಕ ತಂಡಕ್ಕೆ ಸುವರ್ಣ ಮಹೋತ್ಸವ ಗೌರವವನ್ನು ನಗರದಲ್ಲಿ ಮಂಗಳವಾರ ಸಮರ್ಪಿಸಲಾಯಿತು.

ಗೌರವ ಸ್ವೀಕರಿಸಿ ಮಾತನಾಡಿದ ನಾಗಾಭರಣ, 'ಕನ್ನಡ ರಂಗಭೂಮಿಗೆ ಬಿ.ವಿ. ಕಾರಂತ ಅವರು ನೀಡಿದ ಕೊಡುಗೆ ಅನನ್ಯ. ರಂಗ ಸಂಗೀತಕ್ಕೆ ಅವರು ಹೊಸ ಆಯಾಮ ನೀಡಿದರು. ವೃತ್ತಿ ಮತ್ತು ಹವ್ಯಾಸಿ ರಂಗಭೂಮಿ ನಡುವೆ ಸೇತುವೆಯಂತೆ ಕಾರ್ಯ ನಿರ್ವಹಿಸಿದರು. ಬೆಂಗಳೂರು, ನವದೆಹಲಿ ಸೇರಿ ದೇಶದ ವಿವಿಧೆಡೆ ಅವರ ನಾಟಕಗಳು ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿವೆ' ಎಂದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, 'ರಂಗಭೂಮಿಯ ಬೆಳವಣಿಗೆಗೆ ಬೆನಕ ತಂಡ ದೊಡ್ಡ ಕೊಡುಗೆ ನೀಡಿದೆ. ಬಿ.ವಿ. ಕಾರಂತ ಅವರ ಕನಸುಗಳಿಂದ ನಿರ್ಮಾಣವಾದ ಈ ತಂಡ, ಅವರ ಎಲ್ಲ ನಾಟಕಗಳನ್ನು ಪ್ರಯೋಗ ಮಾಡಿದೆ. ಅವರನ್ನು 50 ವರ್ಷಗಳಿಂದ ಜೀವಂತವಾಗಿರಿಸಿದೆ' ಎಂದರು.

ಬಳಿಕ ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಪ್ರಸ್ತುತ ಪಡಿಸಿದ 'ತಾಜಮಹಲ್ ಕ ಟೆಂಡರ್' ಹಿಂದಿ ನಾಟಕ ಪ್ರದರ್ಶನವಾಯಿತು. ಇದನ್ನು ಚಿತ್ತರಂಜನ್ ತ್ರಿಪಾಠಿ ನಿರ್ದೇಶಿಸಿದ್ದರು.

ರಾಮನಗರದ ಜಾನಪದ ಲೋಕದಲ್ಲಿ ಭಾನುವಾರ ನಡೆದ ಮಹಿಳಾ ಜಾನಪದ ಲೋಕೋತ್ಸವ – 2025 ಸಮಾರೋಪ ಸಮಾರಂಭದಲ್ಲಿ ಜಾನಪದದ ವಿವಿಧ ಕಲಾ ಪ್ರಕಾರಗಳಲ್ಲಿ ಸಾಧನೆ ಮಾಡಿದ ಕಲಾವಿದರು ಹಾಗೂ ಜಾನಪದ ವಿದ್ವಾಂಸರಿಗೆ 'ಜಾನಪದ ಲೋಕ ಪ್ರಶಸ್ತಿ' ಪ್ರದಾನ ಮಾಡಲಾಯಿತು

ರಾಮನಗರ: ಮಹಿಳಾ ಜಾನಪದ ಲೋಕೋತ್ಸವ ಸಮಾರಂಭ

19 ಮಂದಿಗೆ ಜಾನಪದ ಲೋಕ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ರಾಮನಗರ: ಜಾನಪದದ ವಿವಿಧ ಕಲಾ ಪ್ರಕಾರಗಳಲ್ಲಿ ಸಾಧನೆ ಮಾಡಿದ ಕಲಾವಿದರು ಹಾಗೂ ಜಾನಪದ ವಿದ್ವಾಂಸರು ಸೇರಿದಂತೆ 19 ಮಂದಿಗೆ ಇಲ್ಲಿನ ಜಾನಪದ ಲೋಕದಲ್ಲಿ ಭಾನುವಾರ ನಡೆದ ಮಹಿಳಾ ಜಾನಪದ ಲೋಕೋತ್ಸವ-2025 ಸಮಾರೋಪ ಸಮಾರಂಭದಲ್ಲಿ ಜಾನಪದ ಲೋಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಂಜೆ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಹಾಗೂ ಪರಿಷತ್ತಿನ ಮಹಾ ಪೋಷಕರೂ ಆಗಿರುವ ನಿರ್ಮಲಾನಂದನಾಥ ಸ್ವಾಮೀಜಿ, ರಾಮನಗರ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ ಅವರು ಜಾನಪದ ವಿದ್ವಾಂಸರಾದ ಡಾ. ಚಕ್ಕೆರೆ ಶಿವಶಂಕರ್, ಡಾ. ಕ್ಯಾತನಹಳ್ಳಿ ರಾಮಣ್ಣ ಸೇರಿದಂತೆ 19 ಮಂದಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿಯು ₹10 ಸಾವಿರದಿಂದ ₹25 ಸಾವಿರದವರೆಗಿನ ನಗದು ಪುರಸ್ಕಾರ ಹಾಗೂ ಫಲಕ ಒಳಗೊಂಡಿದೆ. ಇದೇ ಸಂದರ್ಭದಲ್ಲಿ ಪದ್ಮಶ್ರೀ ಪುರಸ್ಕಾರಕ್ಕೆ ಪಾತ್ರವಾಗಿರುವ ಸಾಹಸ ಕಲಾವಿದ ಹಾಸನ ರಘು ಹಾಗೂ ಗಿರಿಜನ ಲೋಕದ ನಿರ್ಮಾಣಕಾರ ಹರ್ಷ ಸೊಲಬಕ್ಕನವರ ಅವರನ್ನು ಸನ್ಮಾನಿಸಲಾಯಿತು.

ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ. ಬೋರಲಿಂಗಯ್ಯ, ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್, ಆಡಳಿತಾಧಿಕಾರಿ ನಂದಕುಮಾರ್ ಹೆಗಡೆ, ಕರ್ನಾಟಕ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ನಾಗೇಶ್ ವಿ. ಬೆಟ್ಟಕೋಟೆ, ಬುಡಕಟ್ಟು ಕಲಾವಿದೆ ರತ್ನಮ್ಮ ಹಾಗೂ ಇತರರು ಇದ್ದರು.

ನಗರದಲ್ಲಿ ಇಂದು

ಭಗವಾನ್ ವಿಶ್ವಕರ್ಮ ಬ್ರಹ್ಮ ರಥೋತ್ಸವ, ವಿಶ್ವಕರ್ಮ ಜನಜಾಗೃತಿ ಸಮಾವೇಶ: ಬೆಳಿಗ್ಗೆ 7.30ರಿಂದ ವಿಶ್ವಕರ್ಮ ಬ್ರಹ್ಮ ರಥೋತ್ಸವ: ಸ್ಥಳ: ಕಾಳಿಕಾಂಬಾ ಕಮ್ಮಠೇಶ್ವರ ಸ್ವಾಮಿ ದೇವಸ್ಥಾನ, ನಗರ್ತಪೇಟೆ, ಸಂಜೆ 4ಕ್ಕೆ ವಿಶ್ವಕರ್ಮ ಜನಜಾಗೃತಿ ಸಮಾವೇಶ: ಸಾನ್ನಿಧ್ಯ: ಶಿವಸುಜ್ಞಾನಮೂರ್ತಿ ಸ್ವಾಮೀಜಿ, ಕಾಳಹಸ್ತೇಂದ್ರ ಸ್ವಾಮೀಜಿ, ನೀಲಕಂಠಾಚಾರ್ಯ ಸ್ವಾಮೀಜಿ, ಬುದ್ಧಾತ್ಮಾನಂದ ಸರಸ್ವತಿ ಸ್ವಾಮೀಜಿ, ಸುಜ್ಞಾನಮೂರ್ತಿ ಸ್ವಾಮೀಜಿ, ಸುಬ್ಬರಾಯಾಚಾರ್ ಸ್ವಾಮೀಜಿ, ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಚಂದ್ರಶೇಖರ ಕಂಬಾರ, ದಿನೇಶ್ ಗುಂಡೂರಾವ್, ಆಯೋಜನೆ: ವಿಶ್ವಕರ್ಮ ಸೇವಾ ಸಮಿತಿ, ಸ್ಥಳ: ಪುರಭವನ, ಜೆ.ಸಿ. ರಸ್ತೆ

ಗವಿಗಂಗಾಧರೇಶ್ವರ ಬ್ರಹ್ಮರಥೋತ್ಸವ: ಬೆಳಿಗ್ಗೆ 10.30ಕ್ಕೆ ಅಭಿಷೇಕ, ಗಜವಾಹನೋತ್ಸವ, ಸಂಜೆ 6.30ಕ್ಕೆ ಗಿರಿಜಾಕಲ್ಯಾಣೋತ್ಸವ, ಆಯೋಜನೆ ಮತ್ತು ಸ್ಥಳ: ಗವಿಗಂಗಾಧರೇಶ್ವರ ದೇವಸ್ಥಾನ, ಗವಿಪುರ, ಗುಟ್ಟಹಳ್ಳಿ, ಹನುಮಂತನಗರ

'ಚಿಣ್ಣರ ಚಂದ್ರ' ಕನ್ನಡ ಮಕ್ಕಳ ಚಿತ್ರಯಾತ್ರೆಯ ಉದ್ಘಾಟನೆ: ಮಧು ಬಂಗಾರಪ್ಪ, ಅತಿಥಿಗಳು: ತಿಮ್ಮಯ್ಯ ಪುರ್ಲೆ, ನಾಗೇಶ್, ಚಂದ್ರಶೇಖರ್ ನುಗ್ಲಿ, ಉಪಸ್ಥಿತಿ: ಕೆ.ಜಿ. ಆಂಜನಪ್ಪ, ಎಚ್.ಕೆ. ತಾರಾನಾಥ್, ಕೆ.ಜಿ. ರಘುಚಂದ್ರ, ಸಿ.ಬಿ. ಅಶೋಕ, ಆಯೋಜನೆ: ಬದಲಾವಣೆಯತ್ತ ಬಳಗ, ಶಾಲೆಯಿಂದ ಶಾಲೆಗೆ ಚಿತ್ರಯಾತ್ರ, ಸ್ಥಳ: ಚಾಮುಂಡೇಶ್ವರಿ ಸ್ಟುಡಿಯೊ, ಕನ್ನಿಂಗ್‌ಹ್ಯಾಂ ರಸ್ತೆ, ವಸಂತನಗರ, ಮಧ್ಯಾಹ್ನ 2.45



60ನೇ ನಾದಜ್ಯೋತಿ ಸಂಗೀತ ಸಂಭ್ರಮ–2025: ಗಾಯನ: ಜಿ. ರವಿಕುಮಾರ್, ಪಿಟೀಲು: ವೈಭವ್ ರಮಣಿ, ಮೃದಂಗ: ಸಿ. ಚೆಲುವರಾಜ್, ಖಂಜೀರಾ: ಸಿ.ಪಿ. ವ್ಯಾಸವಿಠಲ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ, ಸಂಜೆ 6ರಿಂದ

ಕಾಯಕ ಶರಣರ ಜಯಂತಿಯ ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಬಸವಹರಳಯ್ಯ ಸ್ವಾಮೀಜಿ, ಗುರು ಮಾತಾ ನಂದತಾಯಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5ರಿಂದ

ತೊ. ನಂಜುಂಡಸ್ವಾಮಿ ನೆನಪಿನ ಗೌರವ ಪ್ರಶಸ್ತಿ ಕಾರ್ಯಕ್ರಮ: ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಶ್ರೀನಿವಾಸ ಜಿ. ಕಪ್ಪಣ್ಣ, ಗಂಗಾಧರ, ಶಶಿಧರ ಅಡಪ, ಆರ್. ನರೇಂದ್ರ ಬಾಬು, ಆಯೋಜನೆ: ತೊ. ನಂಜುಂಡಸ್ವಾಮಿ ಗೆಳೆಯರ ಬಳಗ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 5ರಿಂದ

ಇಂಡಿಯಾ ಎನರ್ಜಿ ನೆಟ್‌ವರ್ಕ್ ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ ರೋಲ್ ಆಫ್ ನ್ಯೂಕ್ಲಿಯರ್ ಪವರ್ ಇನ್ ಇಂಡಿಯಾಸ್ ಎನರ್ಜಿ ಟ್ರಾನ್ಸಿಶನ್ ಕಾರ್ಯಾಗಾರದಲ್ಲಿ ಶಾಮಸುಂದರ್ ಅವರು ಅನುವಾದಿಸಿರುವ 'ವಿಕಿರಣದ ಅಕಾರಣ ಭಯ' ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಕೇಂದ್ರ ಪರಮಾಣು ಇಂಧನ ಇಲಾಖೆ ಮುಖ್ಯಸ್ಥ ಎ.ಕೆ. ನಾಯಕ್, ಇಂಡಿಯಾ ಎನರ್ಜಿ ನೆಟ್‌ವರ್ಕ್‌ನ ಉಮೇಶಚಂದ್ರ, ಗಡಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ, 'ಅದಮ್ಯ ಚೇತನ'ದ ತೇಜಸ್ವಿ ಅನಂತಕುಮಾರ್ ಉಪಸ್ಥಿತರಿದ್ದರು

ಟೆನಿಸ್: ಜೀವಿತ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎಸ್. ಜೀವಿತ್ 14 ವರ್ಷದೊಳಗಿನವರ ಎಂಎಟಿ–ಎಐಟಿಎ ರಾಷ್ಟ್ರೀಯ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಮಂಡ್ಯದ 13 ವರ್ಷದ ಎಸ್. ಜೀವಿತ್ ಫೈನಲ್‌ನಲ್ಲಿ 6–7 (3–7), 6–1, 6–2ರಿಂದ ಅರವ್ ಮುಳಾಯ್ ವಿರುದ್ಧ ಜಯ ಸಾಧಿಸಿದರು.

ಬಾಲಕರ ಡಬಲ್ಸ್ ವಿಭಾಗದಲ್ಲಿ ಕರ್ನಾಟಕದ ರುನ್ಮಾನ್ ಮಹೇಶ್ ಮತ್ತು ತಮಿಳುನಾಡಿದ ಇಶಾನ್ ಸುದರ್ಶನ್ ಜೋಡಿ 5–7, 6–2, 10–6 ರಿಂದ ಅರವ್ ಮುಳಾಯ್ (ಮಹಾರಾಷ್ಟ್ರ) ಮತ್ತು ನಿಕುಂಜ್ ಖುರಾನಾ (ತೆಲಂಗಾಣ) ಅವರನ್ನು ಮಣಿಸಿ ಚಾಂಪಿಯನ್ ಆಯಿತು.

ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಕರ್ನಾಟಕದ ಪದ್ಮಪ್ರಿಯ ರಮೇಶ್‌ಕುಮಾರ್ ಮತ್ತು ಕೃಷ್ಣ ಗೌತಮ್ 6–2, 6–3ರಿಂದ ತಮಿಳುನಾಡಿನ ಮಿತ್ರವಿಂದಾ ಸತೀಶ್ ಮತ್ತು ತನುಶ್ರೀ ಸತೀಶ್ ಅವರನ್ನು ಸೋಲಿಸಿದರು.

ಪ್ರಶಸ್ತಿಯೊಂದಿಗೆ ಎಸ್.ಜೀವಿತ್

'ಪ್ರಾಣ ಹೋದರೂ ಜಮೀನು ಕೊಡೆವು'

ರೈತರ, ವ್ಯವಸಾಯಗಾರರ ಸಂಯುಕ್ತ ಹೋರಾಟ ಸಮಿತಿ ಸದಸ್ಯರ ನಿರ್ಣಯ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ರಾಜ್ಯ ಸರ್ಕಾರ ವಿದೇಶ ಹಾಗೂ ಹೊರ ರಾಜ್ಯದ ಬಂಡವಾಳಗಾರರಿಗೆ ಇಲ್ಲಿ ಉದ್ಯಮ ಆರಂಭಿಸಲು ಫಲವತ್ತಾದ ಕೃಷಿ ಭೂಮಿಯನ್ನು ನೀಡಲು ಮುಂದಾಗಿದೆ. ನಮ್ಮ ಪ್ರಾಣ ಹೋದರೂ ಅನ್ನ ಬೆಳೆಯುವ ಜಮೀನನ್ನು ಕೊಡುವುದಿಲ್ಲ' ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರೈತ ಸಂಘಟನೆಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಹಳ್ಳಿಕೆರೆ ಭಾಗ್ಯರಾಜ್ ತಿಳಿಸಿದರು.

ದಾಬಸ್‌ಪೇಟೆ, ಆನೇಕಲ್ ಮತ್ತು ನರಸಾಪುರ ಭಾಗಗಳ ರೈತರ ಮತ್ತು ವ್ಯವಸಾಯಗಾರರ ಸಂಯುಕ್ತ ಹೋರಾಟ ಸಮಿತಿ ಭಾನುವಾರ ಇಲ್ಲಿ ಏರ್ಪಡಿಸಿದ್ದ ರೈತರ ಸಭೆಯಲ್ಲಿ ಅವರು ಮಾತನಾಡಿದರು.

ಕೋಲಾರ ಜಿಲ್ಲೆಯ ರೈತ ಮುಖಂಡ ಆರ್.ಗೋಪಾಲ್ ಮಾತನಾಡಿ, 'ಸರ್ಕಾರ ರೈತರ ಜಮೀನನ್ನು ಬಲವಂತವಾಗಿ ಕಿತ್ತುಕೊಂಡು ಉಳ್ಳವರಿಗೆ ಕೊಡಲು ಹೊರಟಿದೆ. ಇದರ ವಿರುದ್ಧ ಹೋರಾಟ ಮಾಡುವ ರೈತರನ್ನು ಕುತಂತ್ರಗಳು ಮೂಲಕ ಹತ್ತಿಕ್ಕುವ ಕೆಲಸ ಮಾಡುತ್ತಿದೆ. ರೈತರು ಒಗ್ಗೂಡಿದರೆ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬಹುದು. ಆದ್ದರಿಂದ ರೈತರು ಯಾವುದೇ ಕಾರಣಕ್ಕೂ ಹೋರಾಟದಿಂದ ಹಿಂದೆ ಸರಿಯಬಾರದು' ಎಂದು ಹೇಳಿದರು.

ದಾಬಸ್‌ಪೇಟೆಯಲ್ಲಿ ನಡೆದ ಸಭೆಯಲ್ಲಿ ದಾಬಸ್‌ಪೇಟೆ, ಆನೇಕಲ್ ಮತ್ತು ನರಸಾಪುರ ಭಾಗಗಳ ರೈತರ ಮತ್ತು ವ್ಯವಸಾಯಗಾರರ ಸಂಯುಕ್ತ ಹೋರಾಟ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು

ಆರೋಪಗಳೇನು?

- ವಿದೇಶಿ, ಹೊರ ರಾಜ್ಯದ ಬಂಡವಾಳಗಾರರಿಗೆ ರೈತರ ಜಮೀನು
- ಮಾಲೂರಿನಲ್ಲಿ 1,400 ಎಕರೆ, ಆನೇಕಲ್‌ನಲ್ಲಿ 1,050 ಎಕರೆ ಭೂ ಸ್ವಾಧೀನಕ್ಕೆ ಚಿಂತನೆ

ಭೂಮಿ ಕಳೆದುಕೊಂಡ ರೈತರು ಬೀದಿಗೆ ಬೀಳುತ್ತಿದ್ದಾರೆ. ವಾಮ ಮಾರ್ಗದಲ್ಲಿ ರೈತರ ಜಮೀನು ಕಬಳಿಸುವ ಸರ್ಕಾರದ ವಿರುದ್ಧ ಎಲ್ಲಾ ರೈತರು ಹೋರಾಡಬೇಕು ಎಂದು ರಾಜ್ಯ ರೇಷ್ಮೆ ಬೆಳೆಗಾರರ ಮತ್ತು ರೇಷ್ಮೆಗೂಡು ಸಾಗಾಣಿಕೆಗಾರ ಸಂಘದ ಅಧ್ಯಕ್ಷ ಶಿಡ್ಲಘಟ್ಟ ತಾಲ್ಲೂಕಿನ ಮುಳ್ಳೂರು ಶಿವಣ್ಣ ಸಲಹೆ ನೀಡಿದರು.

ಆನೇಕಲ್‌ನ ಹಂದೇನಹಳ್ಳಿಯ ರೈತ ಮೋಹನ್ ಮಾತನಾಡಿ, 'ಹಂದೇನಹಳ್ಳಿ ವ್ಯಾಪ್ತಿಯಲ್ಲಿ ಸರ್ಕಾರ ಕರ್ನಾಟಕ ಕೈಗಾರಿಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮೂಲಕ 1,050 ಎಕರೆ ಕೃಷಿ ಭೂಮಿ ಸ್ವಾಧೀನಕ್ಕೆ ಮುಂದಾಗಿದೆ. ಇದರ ವಿರುದ್ಧ ನಾವು ಈಗಾಗಲೇ ಹೋರಾಟ ಆರಂಭಿಸಿದ್ದೇವೆ. ನಮ್ಮ ಹೋರಾಟ ನಿಲ್ಲದು ಎಂದರು.

ಮಾಲೂರು ತಾಲ್ಲೂಕಿನ ನರಸಾಪುರದಲ್ಲಿಯೂ ಕೆಐಎಡಿಬಿ ಹೆಸರಲ್ಲಿ 1,400 ಎಕರೆ ರೈತರ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ಹೊರಟಿದೆ. ಭೂಮಿಯನ್ನೇ ನಂಬಿ ಬದುಕುತ್ತಿದ್ದ ರೈತರು ಬೀದಿಗೆ ಬೀಳುತ್ತಿದ್ದಾರೆ. ಮೂರು ಭಾಗಗಳ ರೈತರು ಇದರ ವಿರುದ್ಧ ಒಗ್ಗೂಡಿ ಹೋರಾಟ ಮಾಡಬೇಕು' ಎಂದರು.

ನೆಲಮಂಗಲ ತಾಲ್ಲೂಕಿನ ಹನುಮಂತಪುರದ ರೈತಪರ ಹೋರಾಟಗಾರ ವಿಜಯ್ ಕುಮಾರ್ 'ಮುಂದಿನ ದಿನಗಳಲ್ಲಿ ಹೋರಾಟದ ರೂಪು ರೇಷೆ ಕುರಿತು ಚರ್ಚಿಸಲು ಮೂರು ಭಾಗದ ರೈತರನ್ನೊಳಗೊಂಡ ಆರು ಸದಸ್ಯರ ಸಮಿತಿಯನ್ನು ರಚಿಸಿಕೊಂಡಿದ್ದೇವೆ. ಅದರ ಮೂಲಕ ಎಲ್ಲಾ ರೈತರನ್ನು ಒಗ್ಗೂಡಿಸಿಕೊಂಡು ಹೋರಾಟ ಮಾಡಲಾಗುವುದು ಎಂದರು.

ರೈತ ಹೋರಾಟಗಾರರಾದ ರಾಜೇಶ್, ನರಸಿಂಹಯ್ಯ, ಚಂದ್ರಾರೆಡ್ಡಿ, ದಾಬಸ್ ಪೇಟೆ, ಆನೇಕಲ್ ಮತ್ತು ನರಸಾಪುರ ಹಾಗೂ ನೂರಾರು ಹೋರಾಟಗಾರರು ಭಾಗವಹಿಸಿದ್ದರು.

ಒಳ ಮೀಸಲಾತಿ ಜಾರಿ ಮಾಡದಿದ್ದರೆ ಹೋರಾಟ: ಎ.ನಾರಾಯಣಸ್ವಾಮಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಒಳ ಮೀಸಲಾತಿ ವಿಚಾರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ದಿಕ್ಕು ತಪ್ಪಿಸುವ ಕೆಲಸ ಮಾಡಿವೆ' ಎಂದು ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ಹೇಳಿದರು.

ಮಹದೇವಪುರ ಕ್ಷೇತ್ರದ ಹೂಡಿಯ ತಿಗಳರಪಾಳ್ಯ ಗ್ರಾಮದಲ್ಲಿ ಒಳ ಮೀಸಲಾತಿ ಜಾರಿಗೊಳಿಸುವ ಕುರಿತು ಹಮ್ಮಿಕೊಂಡಿದ್ದ ಜನಜಾಗೃತಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಒಳ ಮೀಸಲಾತಿ ಕೊಡುವುದು ಚುನಾಯಿತ ಸರ್ಕಾರಗಳ ಜವಾಬ್ದಾರಿ ಮತ್ತು ಕರ್ತವ್ಯ ಎಂದು ಸುಪ್ರೀಂಕೋರ್ಟ್ ಹೇಳಿದೆ. ಆದರೆ ರಾಜಕೀಯ ಪಕ್ಷಗಳು ಓಟು ಹಾಕಿಸಿಕೊಂಡು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿವೆ ಎಂದರು.

ಮಾದಿಗ ಸಮುದಾಯ ಮುಖ್ಯ ವಾಹಿನಿಗೆ ಬರಲು ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಬೇಕು. ಇಲ್ಲದಿದ್ದರೆ ಬೆಂಗಳೂರಿನಲ್ಲಿರುವ 15 ಲಕ್ಷಕ್ಕೂ ಹೆಚ್ಚಿರುವ ಸಮುದಾಯವನ್ನು ಒಟ್ಟುಗೂಡಿಸಿ ಹೋರಾಟ ಮಾಡಲಾಗುವುದು ಎಂದರು.

ರಾಜ್ಯ ಬಿಜೆಪಿ ಎಸ್.ಸಿ.ಮೋರ್ಚಾ ಉಪಾಧ್ಯಕ್ಷ ಹೆಚ್.ವಿ.ಮಂಜುನಾಥ್ ಮಾತನಾಡಿ, ಒಳ ಮೀಸಲಾತಿ ಜಾರಿಗೊಳಿಸುವ ಉದ್ದೇಶದಿಂದ ಸಮಾಜವನ್ನು ಸಂಘಟಿಸುತ್ತಿದ್ದೇವೆ. ಒಳ ಮೀಸಲಾತಿಯನ್ನು ಯಾರು ವಿರೋಧಿಸುತ್ತಾರೆ ಅಂತಹವರಿಗೆ ತಕ್ಕಪಾಠ ಕಲಿಸುತ್ತೇವೆ ಎಂದರು.

ತಿಗಳರಪಾಳ್ಯ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಜನಜಾಗೃತಿ ಸಭೆಯಲ್ಲಿ ಮಾಜಿ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಮಾತನಾಡಿದರು. ರಾಜ್ಯ ಬಿಜೆಪಿ ಎಸ್.ಸಿ.ಮೋರ್ಚಾ ಉಪಾಧ್ಯಕ್ಷ ಹೆಚ್.ವಿ.ಮಂಜುನಾಥ್, ಹೂಡಿ ರಾಮಚಂದ್ರ ಇದ್ದರು.

'ನೆನಪಿನ ಅಂಗಳದಲ್ಲಿ..' ಕಾರ್ಯಕ್ರಮದಲ್ಲಿ ಅಂಕಣಕಾರ ಎ. ಸೂರ್ಯಪ್ರಕಾಶ್

'ಪತ್ರಕರ್ತರನ್ನು ರೂಪಿಸಿದ ಕಲೆಗಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕ್ರಿಯಾಶೀಲ ಪತ್ರಕರ್ತರಾಗಿದ್ದ ವಿ.ಎನ್. ಸುಬ್ಬರಾವ್ ಅವರಿಗೆ ಪತ್ರಕರ್ತರನ್ನು ರೂಪಿಸುವ ಕಲೆಗಾರಿಕೆ ಕರಗತವಾಗಿತ್ತು. ಹಾಗಾಗಿ ಅವರ ಗರಡಿಯಲ್ಲಿ ಅನೇಕ ಪತ್ರಕರ್ತರು ಬೆಳೆದಿದ್ದರು' ಎಂದು ಅಂಕಣಕಾರ ಎ.ಸೂರ್ಯಪ್ರಕಾಶ್ ತಿಳಿಸಿದರು.

ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ ಭಾನುವಾರ ಆಯೋಜಿಸಲಾಗಿದ್ದ 'ನೆನಪಿನ ಅಂಗಳದಲ್ಲಿ ವಿ.ಎನ್.ಸುಬ್ಬರಾವ್' ವಿಶೇಷ ಚಿಂತನಾ ಸಮಾವೇಶ'ದಲ್ಲಿ ಅವರು ಮಾತನಾಡಿದರು.

ಪತ್ರಿಕೋದ್ಯಮದ ಹಲವು ಆಯಾಮಗಳನ್ನು ಸುಬ್ಬರಾವ್ ಅರಿತಿದ್ದರು. ತಾವು ಬೆಳೆದು ಇತರರನ್ನು ಬೆಳೆಸಿದ್ದರು ಎಂದು ನೆನಪು ಮಾಡಿಕೊಂಡರು.

ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನುಂ ಮಾತನಾಡಿ, 'ಸುಬ್ಬರಾವ್ ಅವರು ಪತ್ರಿಕೋದ್ಯಮ ಕ್ಷೇತ್ರದ ದಂತಕಥೆ. ತಾನು ಕಲಿತಿರುವುದನ್ನು ಪೂರ್ಣವಾಗಿ ಬೇರೆಯವರಿಗೆ ದಾಟಿಸುವ ಗುಣ ಅವರಲ್ಲಿತ್ತು. ಪ್ರತಿಯೊಬ್ಬರನ್ನು ಗೌರವಿಸುತ್ತಿದ್ದರು' ಎಂದು ಹೇಳಿದರು.

ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಆರ್. ರಮೇಶ್ ಕುಮಾರ್ ಮಾತನಾಡಿ, 'ಪತ್ರಿಕೆಯ ಹಲವು ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಿ ಅತ್ಯುತ್ತಮ ಅನುಭವವನ್ನು ಸುಬ್ಬರಾವ್ ಪಡೆದುಕೊಂಡಿದ್ದರು. ಅದನ್ನು ಧಾರಾಳವಾಗಿ ಬೇರೆಯವರಿಗೆ ಕಲಿಸಿದ್ದರು' ಎಂದು ಅವರು ಸ್ಮರಿಸಿದರು.

ಪತ್ರಕರ್ತ ಶೇಷಚಂದ್ರಿಕ, ಲೋಕ ಶಿಕ್ಷಣ ಟ್ರಸ್ಟ್ ಸಲಹೆಗಾರ ಹುಣಸವಾಡಿ ರಾಜನ್, ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷ ಎಚ್.ಎನ್. ನರಹರಿರಾವ್, ಕಲಾ ವಿಮರ್ಶಕಿ ವಿಜಯಾ, ಪತ್ರಕರ್ತ ಈಶ್ವರ ದೈತೋಟ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

'ನೆನಪಿನ ಅಂಗಳದಲ್ಲಿ ವಿ.ಎನ್. ಸುಬ್ಬರಾವ್' ಕಾರ್ಯಕ್ರಮದಲ್ಲಿ ವಿ.ಎನ್. ಸುಬ್ಬರಾವ್ ಅವರ ಭಾವಚಿತ್ರಕ್ಕೆ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನುಂ, ವಿಧಾನಸಭೆ ಮಾಜಿ ಅಧ್ಯಕ್ಷ ರಮೇಶ್ ಕುಮಾರ್, ಪತ್ರಕರ್ತರಾದ ಎ. ಸೂರ್ಯಪ್ರಕಾಶ್, ಶೇಷಚಂದ್ರಿಕ, ರಂಗ ವಿಮರ್ಶಕಿ ವಿಜಯಮ್ಮ, ಅಕಾಡೆಮಿ ಅಧ್ಯಕ್ಷ ಎಚ್.ಎನ್. ನರಹರಿರಾವ್ ಮತ್ತು ಟ್ರಸ್ಟಿ ಎನ್. ಶಶಿಧರ್ ಪುಷ್ಪ ನಮನ ಸಲ್ಲಿಸಿದರು — ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಕಲಿತಿರುವುದನ್ನು ಪೂರ್ಣವಾಗಿ ದಾಟಿಸುವ ಗುಣ ಇತ್ತು: ಆಯೇಷಾ
- ಪತ್ರಿಕೋದ್ಯಮದ ಹಲವು ಆಯಾಮಗಳು ಕರಗತ: ಸೂರ್ಯಪ್ರಕಾಶ್

ಕೊಟ್ಟಿಗೆಪಾಳ್ಯ: ಬಸ್ ತಂಗುದಾಣ ಅವ್ಯವಸ್ಥೆಯ ಆಗರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕಿತ್ತು ಹೋಗಿರುವ ಚಾವಣಿ, ಕುಳಿತುಕೊಳ್ಳಲು ಆಸನದ ವ್ಯವಸ್ಥೆಯೇ ಇಲ್ಲ, ಮಳೆ ಬಂದಾಗ ಸೋರುತ್ತದೆ...

ಇದು ಮಾಗಡಿ ಮುಖ್ಯರಸ್ತೆಯ ಕೊಟ್ಟಿಗೆಪಾಳ್ಯದಲ್ಲಿರುವ ಬಸ್ ತಂಗುದಾಣದ ಅವ್ಯವಸ್ಥೆ. ಇದು ಹೆಸರಿಗಷ್ಟೇ ತಂಗುದಾಣವಾಗಿದೆ. ಆದರೆ, ಪ್ರಯಾಣಿಕರಿಗೆ ಯಾವುದೇ ಸೌಲಭ್ಯಗಳಿಲ್ಲ.

ಪ್ರತಿನಿತ್ಯ ನೂರಾರು ಪ್ರಯಣಿಕರು ಇದೇ ತಂಗುದಾಣದಿಂದ ತಾವರೆಕೆರೆ, ಬ್ಯಾಡರಹಳ್ಳಿ,ಎಲೆಕೊಡಿಗೇಹಳ್ಳಿ, ಹೊನ್ನಗನಹಟ್ಟಿ, ಕಾಚೋಹಳ್ಳಿ, ಮಾಚೋಹಳ್ಳಿಗಳ ಕಡೆಗೆ ಪ್ರಯಾಣಿಸುತ್ತಾರೆ. ನೂರಾರು ವಿದ್ಯಾರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯ ಸೇರಿದಂತೆ ಹಲವು ಶಾಲಾ–ಕಾಲೇಜುಗಳಿಗೆ ಹೋಗುತ್ತಾರೆ. ನಿಲ್ಲುವುದಕ್ಕೂ ಸರಿಯಾದ ಸೂರಿಲ್ಲದ ಕಾರಣ, ಬೇಸಿಗೆಯಲ್ಲಿ ಪ್ರಯಾಣಿಕರು ನೆರಳಿಗಾಗಿ ಹುಡುಕಾಟ ನಡೆಸುತ್ತಾರೆ.

'ಆಸನ ವ್ಯವಸ್ಥೆಗಳಿಲ್ಲದ ಕಾರಣ, ಬಸ್‌ಗಾಗಿ ಕಾಯುವ ವಯಸ್ಸಾದವರು, ಅಂಗವಿಕಲರು ಪರದಾಡುತ್ತಾರೆ. ವಿದ್ಯುತ್ ದೀಪದ ವ್ಯವಸ್ಥೆ ಇಲ್ಲದ್ದರಿಂದ ಸಂಜೆ ವೇಳೆ ಬರುವ ಪ್ರಯಾಣಿಕರು, ವಿಶೇಷವಾಗಿ ಹೆಣ್ಣು ಮಕ್ಕಳು ಭಯದಲ್ಲಿಯೇ ಬಸ್ ಬರುವಿಕೆಗಾಗಿ ಕಾಯುವಂತಾಗಿದೆ' ಎಂದು ನಾಗರಿಕರು ದೂರುತ್ತಾರೆ.

ಬಿಬಿಎಂಪಿಯ ಮುಖ್ಯ ಆಯುಕ್ತರು, ಸಾರ್ವಜನಿಕರ ಕುಂದುಕೊರತೆ ಕೇಳಲು ಇಲ್ಲಿನ ವಲಯ ಆಯುಕ್ತರ ಕಚೇರಿಯಲ್ಲಿ 'ಆಯುಕ್ತರ ನಡೆ ವಲಯದ ಕಡೆಗೆ' ಎಂಬ ಹೆಸರಿನಲ್ಲಿ ಸಭೆ ನಡೆಸುತ್ತಾರೆ. ಅದರ ಬದಲು, ಇಂಥ ಸಮಸ್ಯೆ ಕಡೆಗೆ ಗಮನ ಹರಿಸಲಿ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸುಭಾಷಿತ

ನಿನ್ನ ಕೆಲಸಗಳನ್ನು ನೀನು ಮಾಡುತ್ತಾ ಹೋಗು. ಆಗ ಜಗತ್ತೇ ನಿನ್ನನ್ನು ಅನುಕರಿಸುತ್ತದೆ. ಜಗತ್ತನ್ನು ನೀನು ಅನುಕರಿಸಲು ಹೋಗಬೇಡ. ಅದರಲ್ಲಿ ಸ್ವಂತಿಕೆ ಇರುವುದಿಲ್ಲ.

–ಜಿ.ಪಿ.ರಾಜರತ್ನಂ

ತಾನೇ ಸೃಷ್ಟಿಸಿಕೊಂಡ ತೊಡಕುಗಳು ಎಎಪಿ ಸೋಲಿಗೆ ಮುಖ್ಯ ಕಾರಣ

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ಕಠಿಣ ಸವಾಲು ಎದುರಿಸುತ್ತಿದೆ ಅಥವಾ ಅದು ಗೆಲ್ಲುವ ಸಾಧ್ಯತೆಯೇ ಇಲ್ಲ ಎಂದು ಭಾವಿಸಿದ್ದವರು ಕೂಡ ಆ ಪಕ್ಷವು ಈ ರೀತಿಯಲ್ಲಿ ಕುಸಿದು ಹೋಗುತ್ತದೆ ಎಂದು ಅಂದಾಜು ಮಾಡಿರಲಿಲ್ಲ. ಬಿಜೆಪಿಯ ದೊಡ್ಡ ಗೆಲುವು ಕೂಡ ಅಚ್ಚರಿದಾಯಕವೇ ಆಗಿದೆ. ಎಎಪಿಯು ತನಗೆ ತಾನೇ ಹಲವು ತೊಡಕುಗಳನ್ನು ಸೃಷ್ಟಿಸಿಕೊಂಡಿತ್ತು. ಭ್ರಷ್ಟಾಚಾರ ವಿರೋಧಿ ನೀತಿಯನ್ನು ಮುಂಚೂಣಿಯಲ್ಲಿ ಇರಿಸಿಕೊಂಡು ಈ ಪಕ್ಷವು ದೆಹಲಿ ರಾಜಕಾರಣವನ್ನು ಪ್ರವೇಶಿಸಿತ್ತು, ರಾಜಕಾರಣ ಮತ್ತು ಆಡಳಿತವನ್ನು ಶುದ್ಧೀಕರಿಸುವುದಾಗಿ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದ ಮೇಲೆ ಜನಕಲ್ಯಾಣದ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿತ್ತು ಮತ್ತು ಅವು ಜನರಿಗೆ ಪ್ರಿಯವೂ ಆಗಿದ್ದವು. ಈ ಪಕ್ಷಕ್ಕೆ ವರ್ಚಸ್ವಿ ನಾಯಕತ್ವ ಇತ್ತು, ಭೂತಕಾಲದ ಹೊರೆಯೇನೂ ಇಲ್ಲದ ಮುಖಂಡರು ಇದ್ದರು. ಆದರೆ, ಕ್ರಮೇಣ ನೀತಿಯು ಸೊರಗುತ್ತಾ ಹೋಯಿತು, ಆರೋಗ್ಯ ಮತ್ತು ಶಿಕ್ಷಣದಂತಹ ಕ್ಷೇತ್ರಗಳಲ್ಲಿ ಮಾಡಿದ ಸುಧಾರಣೆಗಳ ಹೊಸ ಯೋಜನೆಗಳು ಇಲ್ಲದೆ ಜನಪ್ರಿಯತೆ ಕಳೆದುಕೊಳ್ಳುತ್ತಾ ಹೋದವು. ಕುಡಿಯುವ ನೀರು ಪೂರೈಕೆ, ತ್ಯಾಜ್ಯ ವಿಲೇವಾರಿ ಮತ್ತು ಯಮುನಾ ನದಿ ಸ್ವಚ್ಛಗೊಳಿಸುವಂತಹ ವಿಚಾರಗಳಲ್ಲಿ ಎಎಪಿ ನೇತೃತ್ವದ ಸರ್ಕಾರ ಯಶಸ್ಸು ಕಾಣಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಭ್ರಷ್ಟಾಚಾರದ ಆರೋಪಗಳು ಎಎಪಿ ನಾಯಕರ ಬಗ್ಗೆ ಇದ್ದ ವಿಶ್ವಾಸಾರ್ಹತೆಯನ್ನು ಕುಸಿಯುವಂತೆ ಮಾಡಿದವು. ಕೇಳಿಬಂದ ಆರೋಪಗಳು ಸತ್ಯವೇ ಅಥವಾ ಸುಳ್ಳೇ ಎಂಬುದು ಬೇರೆ ವಿಷಯವಾದರೂ ಒಂದು ಜನವರ್ಗ ಪಕ್ಷದಿಂದ ದೂರ ಸರಿಯಲು ಅವು ಸಾಕಾದವು. ಅರವಿಂದ ಕೇಜ್ರಿವಾಲ್ ಸೇರಿ ಮುಂಚೂಣಿ ನಾಯಕರು ಜೈಲು ಸೇರಿದ್ದು ಕುಸಿತಕ್ಕೆ ವೇಗ ಕೊಟ್ಟಿತು. ಎಎಪಿಗೆ ಪ್ರಾದೇಶಿಕ ಪಕ್ಷವೊಂದರ ಬೇರುಗಳಾಗಲೀ, ಗಟ್ಟಿಯಾದ ಸಿದ್ಧಾಂತವಾಗಲೀ ಇರಲಿಲ್ಲ. ಪಕ್ಷವು ಕೆಲವು ನೀತಿಗಳನ್ನು ಮಾತ್ರ ನೆಚ್ಚಿಕೊಂಡಿತ್ತು ಮತ್ತು ಈ ಬಗ್ಗೆ ಜನರಲ್ಲಿ ಇದ್ದ ಮನೋಭಾವ ಭಿನ್ನವಾಗಿತ್ತು.

'ಇಂಡಿಯಾ' ಮೈತ್ರಿಕೂಟದ ಮೇಲೆ ಈ ಫಲಿತಾಂಶದ ಪರಿಣಾಮ ಏನು ಎಂಬುದು ಇನ್ನಷ್ಟೇ ತಿಳಿಯಬೇಕಿದೆ

ಈಗ, ಗೆದ್ದಿರುವ ಬಿಜೆಪಿ ಮತ್ತು ಸೋತಿರುವ ಎಎಪಿ ನಡುವಣ ಮತ ಪ್ರಮಾಣದ ವ್ಯತ್ಯಾಸ ಶೇಕಡ 2ರಷ್ಟು ಮಾತ್ರ. ಆದರೆ, ಕಳೆದ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಎಎಪಿ ಕಳೆದುಕೊಂಡಿರುವ ಮತ ಪ್ರಮಾಣ ಸುಮಾರು ಶೇ 10ರಷ್ಟು. ಎರಡು ಪಕ್ಷಗಳ ನಡುವಣ ನೇರ ಹೋರಾಟವಾದ ಕಾರಣಕ್ಕೆ ಬಿಜೆಪಿಯ ಗೆಲುವು ಇನ್ನಷ್ಟು ದೊಡ್ಡದಾಗಿ ಕಾಣಿಸುತ್ತಿದೆ. ಅತ್ಯಂತ ವ್ಯವಸ್ಥಿತವಾದ ಚುನಾವಣಾ ಪ್ರಚಾರವು ಬಿಜೆಪಿ ಗೆಲುವಿನ ಹೆಗ್ಗುರುತು. ಸಣ್ಣ ಸಣ್ಣ ವಿಚಾರಗಳಿಗೂ ಆ ಪಕ್ಷವು ಆದ್ಯತೆ ನೀಡುತ್ತದೆ. ಜನರನ್ನು ಮೋಡಿ ಮಾಡುವ ನರೇಂದ್ರ ಮೋದಿ ಅವರಂತಹ ವಾಕ್ಚತುರರ ನೆರವು ಆ ಪಕ್ಷಕ್ಕೆ ಇದೆ. ಎಎಪಿ ನೇತೃತ್ವದ ಸರ್ಕಾರದ ಮೇಲೆ ನಿರಂತರವಾದ ಆರೋಪಗಳನ್ನು ಮಾಡುತ್ತಾ ಹಲವು ತಿಂಗಳ ಮೊದಲೇ ಬಿಜೆಪಿ ಚುನಾವಣಾ ಪ್ರಚಾರವನ್ನು ಆರಂಭಿಸಿತ್ತು. ಜನರ ಮನಮುಟ್ಟುವಂತಹ ವಿಚಾರಗಳನ್ನು ಆ ಪಕ್ಷವು ಪ್ರಚಾರಕ್ಕೆ ಬಳಸಿಕೊಂಡಿತು. ಎಎಪಿ ನೀಡಿದ್ದ ಕೊಡುಗೆಗಳನ್ನು ಮುಂದುವರಿಸುವ ಭರವಸೆಯನ್ನು ನೀಡಿತು. ಆದಾಯ ತೆರಿಗೆ ವಿನಾಯಿತಿಯಲ್ಲಿ ದೊಡ್ಡ ಮಟ್ಟದ ಏರಿಕೆಯು ಮಧ್ಯಮ ವರ್ಗದ ಜನರೇ ಹೆಚ್ಚಾಗಿರುವ ದೆಹಲಿಯಂತಹ ನಗರದ ಮತದಾರರ ಮೇಲೆ ಪ್ರಭಾವ ಬೀರಿರಬಹುದು. ಎಲ್ಲ ವರ್ಗದ ಜನರನ್ನೂ ಮೋಡಿ ಮಾಡುವುದರಲ್ಲಿ ಬಿಜೆಪಿ ಯಶಸ್ವಿಯಾಗಿದೆ ಎಂಬುದನ್ನು ಫಲಿತಾಂಶವು ತೋರಿಸುತ್ತಿದೆ. ಎಎಪಿ ನೇತೃತ್ವದ ದೆಹಲಿ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ನಿರಂತರವಾಗಿ ಸಂಘರ್ಷ ನಡೆಯುತ್ತಲೇ ಇತ್ತು. ದೆಹಲಿ ಸರ್ಕಾರದ ಕಾರ್ಯನಿರ್ವಹಣೆಯೇ ಕಷ್ಟಕರ ಎನ್ನುವಂತಹ ಸ್ಥಿತಿ ನಿರ್ಮಾಣ ಆಗಿತ್ತು. ಹಾಗಾಗಿ, ಡಬಲ್ ಎಂಜಿನ್ ಸರ್ಕಾರ ಎಂಬ ಘೋಷಣೆಯು ಜನರ ಮೇಲೆ ಪ್ರಭಾವ ಬೀರಿರುವ ಸಾಧ್ಯತೆ ಇದೆ.

ಕಾಂಗ್ರೆಸ್ ಪಕ್ಷಕ್ಕೆ ಒಂದು ಸ್ಥಾನವನ್ನೂ ಗೆಲ್ಲುವುದಕ್ಕೆ ಸಾಧ್ಯವಾಗಿಲ್ಲ. ಆದರೆ, ಆ ಪಕ್ಷ ಗಳಿಸಿದ ಮತ ಪ್ರಮಾಣದಲ್ಲಿ ಸ್ವಲ್ಪ ಏರಿಕೆ ಆಗಿದೆ. ಕಾಂಗ್ರೆಸ್ ಜೊತೆಗೆ ಮೈತ್ರಿ ಸಾಧ್ಯವಾಗಿದ್ದರೆ ಎಎಪಿಯ ಸ್ಥಿತಿ ಈಗಿರುವುದಕ್ಕಿಂತ ಉತ್ತಮವಾಗಿರುತ್ತಿತ್ತು ಎಂದು ಹೇಳಲಾಗುತ್ತಿದೆ. ಮತದಾರರ ಆಯ್ಕೆಯನ್ನು ಈ ರೀತಿಯ ಲೆಕ್ಕಾಚಾರದ ಮೂಲಕ ಅಳೆಯಲು ಸಾಧ್ಯವಿಲ್ಲ. ಅದೇನೇ ಇದ್ದರೂ ಎಎಪಿಗೆ ನೆರವಾಗುವುದು ಕಾಂಗ್ರೆಸ್ ಪಕ್ಷಕ್ಕೆ ಬೇಕಾಗಿರಲಿಲ್ಲ. ಎಎಪಿಗೆ ಹಾನಿ ಉಂಟು ಮಾಡಿ ಅದರ ಬಲ ಕುಗ್ಗಿಸುವುದು ತನ್ನ ಹಿತಾಸಕ್ತಿಗೆ ಪೂರಕ ಎಂಬ ಭಾವನೆ ಕಾಂಗ್ರೆಸ್‌ನಲ್ಲಿ ಇತ್ತು. ಬಿಜೆಪಿಯೇತರ ಪಕ್ಷಗಳ ಕೂಟವಾಗಿರುವ 'ಇಂಡಿಯಾ' ಮೇಲೆ ಈ ಫಲಿತಾಂಶದ ಪರಿಣಾಮ ಏನು ಎಂಬುದು ಇನ್ನಷ್ಟೇ ತಿಳಿಯಬೇಕಿದೆ.

ದಿನದ ಟ್ವೀಟ್

ಕೆಪಿಎಸ್‌ಸಿ: ಗೊಂದಲ ಬಗೆಹರಿಸಿ

...ಕೆಪಿಎಸ್‌ಸಿ ದಕ್ಷತೆ, ಪ್ರಾಮಾಣಿಕತೆ ಮೆರೆಯುವಲ್ಲಿ ನಿರಂತರವಾಗಿ ವಿಫಲವಾಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿ ಮೇಲೆ ಯಾವುದೇ ಕ್ರಮ ಕೈಗೊಳ್ಳದಿರುವುದು ಗೊಂದಲಗಳು ತಲೆ ಎತ್ತಲು ಎಡೆಮಾಡಿಕೊಟ್ಟಿದೆ. ನಾಡಿನ ಪ್ರತಿಭಾನ್ವಿತ ಹಾಗೂ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಸರ್ಕಾರ ತುರ್ತಾಗಿ ಕ್ರಮ ಜರುಗಿಸಲಿ.

ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಕಿಡಿನುಡಿ

'ನಮ್ಮ ಮೆಟ್ರೊ' ಪ್ರಯಾಣ ದರ ಏರಿಕೆಯ ಈ ಹೊರೆಗೆ, ಮೆಟ್ರೊದ ಯಾವ ಮಾರ್ಗವೂ ನಿಗದಿತ ಸಮಯಕ್ಕೆ ಕಾರ್ಯಾರಂಭ ಆಗದಿದ್ದುದೇ ಕಾರಣ. ಈ ವಿಳಂಬದ ಹೊಣೆಯನ್ನು ಯಾರು ಹೊರುತ್ತಾರೆ? ಬಿಎಂಆರ್‌ಸಿಎಲ್ ಅಧಿಕಾರಿಗಳೇ, ಮುಖ್ಯಮಂತ್ರಿಯೇ, ಡಿ.ಕೆ.ಶಿವಕುಮಾರ್ ಅವರೇ ಅಥವಾ ಪ್ರಧಾನಿಯವರೇ? ಪ್ರತಿ ಬಾರಿ ಏನೇ ಸಂಭವಿಸಿದರೂ ದರ ಹೆಚ್ಚಳದ ಮೂಲಕ ಅನ್ಯಾಯವಾಗಿ ಶ್ರೀಸಾಮಾನ್ಯನನ್ನು ಶಿಕ್ಷಿಸಲಾಗುತ್ತದೆ.

ಶ್ರೀವತ್ಸ ಸಿ.

25 ವರ್ಷಗಳ ಹಿಂದೆ

ಗುರುವಾರ, 10-2-2000

• ನಾಮಪತ್ರ ತಿರಸ್ಕರಿಸದಿರಲು ಆದೇಶ

ಬೆಂಗಳೂರು, ಫೆ. 9– ತಮ್ಮ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದ ಗ್ರಾಮ ಪಂಚಾಯಿತಿ ಚುನಾವಣಾ ಅಭ್ಯರ್ಥಿಗಳ ನಾಮಪತ್ರಗಳನ್ನು ತಿರಸ್ಕರಿಸದಂತೆ ಹೈಕೋರ್ಟ್ ಇಂದು ಚುನಾವಣಾಧಿಕಾರಿಗಳಿಗೆ ಆದೇಶ ನೀಡಿದೆ.

'ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನಾನು ಗೆಲ್ಲಲಿ ಅಥವಾ ಸೋಲಲಿ, ಫಲಿತಾಂಶ ಪ್ರಕಟವಾದ ಆರು ತಿಂಗಳ ಒಳಗಾಗಿ ನನ್ನ ಕುಟುಂಬದವರಿಗೆ ಶೌಚಾಲಯ ನಿರ್ಮಿಸಲು ಬದ್ಧನಾಗಿರುತ್ತೇನೆ' ಎಂದು ಸಂಬಂಧಪಟ್ಟ ಚುನಾವಣಾ ಅಧಿಕಾರಿಗಳ ಸಮ್ಮುಖದಲ್ಲಿ ಘೋಷಣೆ ಸಲ್ಲಿಸುವ ಎಲ್ಲ ಅಭ್ಯರ್ಥಿಗಳಿಗೂ ಪ್ರಸಕ್ತ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಲು ಅನುಮತಿ ನೀಡಬಹುದೆಂದು ನ್ಯಾಯಮೂರ್ತಿ ಟಿ.ಎಸ್.ಠಾಕೂರ್ ಅವರು ಆದೇಶ ನೀಡಿದ್ದಾರೆ.

• ಅಸ್ವಸ್ಥ ಹೆಗಡೆ ನವದೆಹಲಿಯಲ್ಲಿ ಆಸ್ಪತ್ರೆಗೆ ದಾಖಲು

ನವದೆಹಲಿ, ಫೆ. 9– ಜನತಾದಳ (ಯು) ನಾಯಕ ರಾಮಕೃಷ್ಣ ಹೆಗಡೆ ಅವರಿಗೆ ತೀವ್ರ ಎದೆನೋವು ಕಾಣಿಸಿಕೊಂಡಿದ್ದರಿಂದ ಅವರು ಇಲ್ಲಿನ ಎಸ್ಕಾರ್ಟ್ ಆಸ್ಪತ್ರೆಗೆ ದಾಖಲಾಗಿದ್ದು, ನಾಳೆ ಆಸ್ಪತ್ರೆಯಿಂದ ಮನೆಗೆ ಮರಳಲಿರುವುದಾಗಿ ಮೂಲಗಳು ತಿಳಿಸಿವೆ.

ಬಳ್ಳಾರಿ ಲೋಕಸಭೆ ಉಪಚುನಾವಣೆ ಪ್ರಚಾರಕ್ಕೆಂದು ನಿನ್ನೆ ಸಂಜೆ ಇಲ್ಲಿಂದ ಬೆಂಗಳೂರಿಗೆ ತೆರಳಲು ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗ ಅವರಿಗೆ ಎದೆನೋವು ಕಾಣಿಸಿಕೊಂಡಿತು. ಅವರು ಈಗ ಗುಣಮುಖರಾಗುತ್ತಿರುವುದಾಗಿ ಗೊತ್ತಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 10-2-1975

• ಏನು ರಹಸ್ಯ: ನೋಡಿಬಿಡೋಣ

ಮಂಡ್ಯ, ಫೆ. 9– ಅಧಿಕಾರದಲ್ಲಿರುವ ಪಕ್ಷದ ಮುಂದಾಳುಗಳು ಮತ್ತು ಹಿಂಬಾಲಕರು 'ರಹಸ್ಯ' ಸಭೆ ನಡೆಸುತ್ತಿದ್ದಾರೆ ಎಂದ ಮೇಲೆ ಪತ್ರಕರ್ತರಿಗೆ ಕುತೂಹಲ ಕೆರಳುವುದಷ್ಟೇ ಅಲ್ಲ, 'ಇದೇನು ರಹಸ್ಯ; ನೋಡಿಬಿಡೋಣ' ಎಂಬ ಛಲವೂ ಬಂದುಬಿಡುವುದು ಸಹಜ.

ಮಂಡ್ಯ ಜಿಲ್ಲೆಯ ಕಾಂಗ್ರೆಸ್ಸಿಗರ 'ರಹಸ್ಯ' ಶಿಬಿರ ಫೆ. 7 ಮತ್ತು 8ರಂದು ಶ್ರೀರಂಗಪಟ್ಟಣದ ಕೃಷ್ಣಮೂರ್ತಿ ಬಂಗಲೆಯಲ್ಲಿ ನಡೆಯಿತು. 'ರಹಸ್ಯ' ಶಿಬಿರದ 'ಡಬಲ್ ಕಾಲಂ' ವರದಿಗಳೂ ಪತ್ರಿಕೆಗಳಲ್ಲಿ ಬಂದವು.

ರಹಸ್ಯ ಶಿಬಿರದೊಳಕ್ಕೆ ರಹಸ್ಯವಾಗಿ ಹೊಕ್ಕಿಬಿಟ್ಟಿದ್ದ ಮಂಡ್ಯದ ಕೆಲವು ಪತ್ರಕರ್ತರನ್ನು ನೋಡಿದ ಮಂಡ್ಯದ ಹಲವು ಕಾಂಗ್ರೆಸ್ ಮುಂದಾಳುಗಳಿಗೆ ಮೊದಲು ಸ್ವಲ್ಪ ಕಸಿವಿಸಿಯಾದರೂ 'ಇದು ನಮ್ಮ ಪಕ್ಷಕ್ಕೆ ಸಂಬಂಧಿಸಿದ ಶಿಬಿರ. ನಿಮ್ಮನ್ನು ಅಧಿಕೃತವಾಗಿ ಆಹ್ವಾನಿಸಲಾಗಲಿಲ್ಲ' ಎಂದರು.

'ರಹಸ್ಯ' ಶಿಬಿರದ ಕಲಾಪವನ್ನು ರಹಸ್ಯವಾಗಿಡಲು ಭಾರಿ ಬಂದೋಬಸ್ತ್ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ತಿಳಿದಿದ್ದ ಕಾರ್ಯಕರ್ತರಿಗೆ ಮಾತ್ರ ಬ್ಯಾಡ್ಜ್‌ಗಳನ್ನು ಕೊಡಲಾಗಿತ್ತು. ಬ್ಯಾಡ್ಜ್ ಇಲ್ಲದವರನ್ನು ಶಿಬಿರದಿಂದ ಹೊರಕ್ಕೆ ಬಿಡುತ್ತಿರಲಿಲ್ಲ.

ಫೆ. 8ರಂದು ಶಿಬಿರದೊಳಕ್ಕೆ ಹೋಗಲು ಯತ್ನಿಸಿದ ಮಂಡ್ಯದ ಕೆಲವು ಪತ್ರಕರ್ತರು ತಮ್ಮ ಯತ್ನದಲ್ಲಿ ವಿಫಲಗೊಂಡರು. ಆದರೆ ಶಿಬಿರದ ಪೆಂಡಾಲ್‌ನಲ್ಲಿ ಆಗುತ್ತಿದ್ದ ಚರ್ಚೆ ಧ್ವನಿವರ್ಧಕಗಳ ಮೂಲಕ ಹೊರಕ್ಕೆ ಕೇಳುತ್ತಿತ್ತು.

ಭಾಷೆ ಬೆಳೆಯಲು ಬೇಕಿರುವುದು ಭಾವುಕ ಆವೇಶವಲ್ಲ, ಅರಿವಿನ ಇಚ್ಛಾಶಕ್ತಿ

ಭಾಷಾ ಸಾಮರ್ಥ್ಯ ಮತ್ತು ಅಂಧನಂಬಿಕೆ

ವಿಶ್ಲೇಷಣೆ

ಪ್ರೊ. ಎಸ್.ಜಿ.ಸಿದ್ಧರಾಮಯ್ಯ

ಇಂದಿನ ಶಿಕ್ಷಣದ ಕುರಿತು ಮಾತನಾಡುವ ಸಂದರ್ಭದಲ್ಲಿ ಭಾಷೆಯ ಬಗ್ಗೆ ಪ್ರಸ್ತಾಪಿಸದೆ ಏನನ್ನೂ ಮಾತನಾಡಲಾಗುವುದಿಲ್ಲ. ಏಕೆಂದರೆ ಭಾಷೆಯ ಬಗ್ಗೆ ಜನಸಾಮಾನ್ಯರಿಗಷ್ಟೇ ಅಲ್ಲ ಶಿಕ್ಷಣ ಪಡೆದವರಲ್ಲೂ ಹೆಚ್ಚಿನವರಲ್ಲಿ ಕೆಲವು ತಪ್ಪುಕಲ್ಪನೆಗಳಿವೆ. ಭಾಷೆ ಎಂಬುದು ಭಾವ- ಬುದ್ಧಿಯ ಸಂವಹನ ಮಾಧ್ಯಮ ಎಂಬ ಅರಿವಿಗಿಂತ ಭಿನ್ನವಾಗಿ ಭಾಷೆಯೇ ಬುದ್ಧಿವಂತಿಕೆ ಎಂಬ ಕುರುಡು ನಂಬಿಕೆ ಬೇರೂರಿ ಬೆಳೆದಿದೆ. ಈ ನಂಬಿಕೆ ಎಲ್ಲ ಭಾಷೆಗಳ ಬಗೆಗೂ ಅಲ್ಲ, ಅದು ಒಂದು ಭಾಷೆಯ ಬಗ್ಗೆ ಅಥವಾ ಕೆಲವು ಭಾಷೆಗಳ ಬಗ್ಗೆ ಮಾತ್ರ ಇರುವ ಅಂಧನಂಬಿಕೆ.

ಈಗ ಕನ್ನಡಿಗರಿಗೇ ಸೀಮಿತವಾದ ನೆಲೆಯಲ್ಲಿ ಯೋಚಿಸುವುದಾದರೆ, ಬಹುತೇಕ ಕನ್ನಡಿಗರಿಗೆ ಇಂಗ್ಲಿಷ್ ಬಗ್ಗೆ ಇರುವ ಭಾವನೆ ಅಂಥದ್ದು. ಇಂಗ್ಲಿಷ್ ಮಾತನಾಡಿದರೆ ಸಾಕು, ಅವರೆದುರಿಗೆ ಎಂಥ ಪ್ರಬುದ್ಧ ಕನ್ನಡ ಪಂಡಿತನೂ ಕೀಳರಿಮೆಯಲ್ಲಿ ನರಳುತ್ತಾನೆ. ಇಂಗ್ಲಿಷ್ ಭಾಷೆಯೇ ಬುದ್ಧಿವಂತಿಕೆ ಎಂದು ನಂಬಿದ ಅಂಧಶ್ರದ್ಧೆಯ ದಾಸ್ಯಬುದ್ಧಿಯೇ ಇದಕ್ಕೆ ಕಾರಣ. ಅದೇ ರೀತಿ ಸಂಸ್ಕೃತ ಭಾಷೆಯ ಬಗೆಗೂ ಇಂಥದ್ದೇ ಕೆಲವು ತಪ್ಪು ನಂಬಿಕೆಗಳು ಬೇರೂರಿ ಬೆಳೆದಿವೆ. ಹೀಗಾಗಿ, ಈ ಎರಡೂ ಭಾಷೆಗಳ ಎದುರಲ್ಲಿ ಬಹುತೇಕ ಕನ್ನಡಿಗರು ಕೀಳರಿಮೆಯಲ್ಲಿ ನರಳುತ್ತಾರೆ.

ತಾವು ತಮ್ಮ ನೆಲದ ನುಡಿಯಲ್ಲಿ ಎಷ್ಟೇ ಪರಿಣತಿ ಪಡೆದಿದ್ದರೂ ಅವರೆದುರು ನಾಲ್ಕು ಜನ ಇಂಗ್ಲಿಷಿನಲ್ಲಿ ಮಾತನಾಡುವುದಕ್ಕೆ ತೊಡಗಿದರೆ ಸಾಕು ಅವರು ಏನೂ ಗೊತ್ತಿಲ್ಲದ ಮೂಕಪ್ರೇಕ್ಷಕರಂತೆ ನಡೆದುಕೊಳ್ಳುತ್ತಾರೆ. ಇದಕ್ಕೆ ಕನ್ನಡದ ಬಗ್ಗೆ ಅವರಿಗಿರುವ ಕೀಳರಿಮೆಯ ಭಾವವೂ ಕಾರಣ. ಇಂಗ್ಲಿಷ್ ಬಗ್ಗೆ ಅವರಿಗಿರುವ ಮೇಲರಿಮೆಯ ಭಯವೂ ಕಾರಣ. ಇದು ಎರಡು ನೆಲೆಗಳಲ್ಲಿ ವಿವರಿಸಿಕೊಳ್ಳಬೇಕಾದ ಸಮಸ್ಯೆ. ಒಂದು, ಜನಸಾಮಾನ್ಯರ ನೆಲೆ. ಇದು ಇಂಗ್ಲಿಷ್ ಗೊತ್ತಿಲ್ಲದ ಕನ್ನಡ ಜನರ ಮನೋ ಅರಿಮೆಯ ಸ್ಥಿತಿ. ಇನ್ನೊಂದು, ಇಂಗ್ಲಿಷ್ ಕಲಿತವರು. ಆ ಮುಖೇನ ಕನ್ನಡದ ಬಗ್ಗೆ ಉಪೇಕ್ಷಿತ ಭಾವ ತಳೆದವರು. ಇಂಗ್ಲಿಷ್ ಭಾಷೆಯೇ ಶ್ರೇಷ್ಠ, ಮಿಕ್ಕೆಲ್ಲವೂ ಗೌಣ ಎಂಬ ಮೇಲರಿಮೆಯ ಅಹಂಕಾರಿ ಅಕ್ಷರಜ್ಞಾನಿಗಳು. ಇಂಥವರಿಂದಾಗಿ ಇಂದು ಶಿಕ್ಷಣ ಕ್ಷೇತ್ರದಲ್ಲಿ ಭಾಷಾ ಕಲಿಕೆ, ಭಾಷಾ ಮಾಧ್ಯಮದಲ್ಲಿ ಶಿಕ್ಷಣ ಬೋಧನೆ ಈ ಬಗ್ಗೆ ಗೊಂದಲಗಳುಂಟಾಗಿವೆ. ಇಂಥ ತಪ್ಪುಗ್ರಹಿಕೆಯ ಪರಿಣಾಮದಿಂದಾಗಿ ಇಡೀ ಶಿಕ್ಷಣ ಕ್ಷೇತ್ರ ನಾಶವಾಗಿದೆ.

ಅನ್ನದ ಭಾಷೆ ಎಂಬ ಪದ ಇತ್ತೀಚೆಗೆ ಹೆಚ್ಚು ಪ್ರಯೋಗದಲ್ಲಿದೆ. ಕನ್ನಡಕ್ಕೆ ಸಂಬಂಧಿಸಿದಂತೆ ಮಾತನಾಡುವಾಗ, ಕನ್ನಡ ಅನ್ನದ ಭಾಷೆಯಾಗಬೇಕು ಎನ್ನುತ್ತಾರೆ. ಇಂಗ್ಲಿಷ್ ಈಗಾಗಲೇ ಅನ್ನದ ಭಾಷೆಯಾಗಿದೆ ಎಂಬುದು ಅವರ ವಾದ. ಅಂದರೆ, ಬಿಳಿ ಕಾಲರಿನ ಕೆಲಸ ಗಿಟ್ಟಿಸಿಕೊಳ್ಳುವುದಕ್ಕೆ ಇಂಗ್ಲಿಷ್ ಸಮರ್ಥ, ಕನ್ನಡ ಸಮರ್ಥವಲ್ಲ ಎಂಬ ಹಿನ್ನೆಲೆಯಲ್ಲಿ ಈ ಪದ ಪ್ರಯೋಗ ನಡೆದಿದೆ. ಆದರೆ ಇಂಗ್ಲಿಷ್ ಭಾಷೆಯ ಬಳಕೆಯೇ ಇಲ್ಲದಿದ್ದ ಚೀನಾ, ಜಪಾನ್, ಜರ್ಮನಿ ಇಂಥ ದೇಶಗಳಲ್ಲಿ ಜನರ ಅನ್ನದ ಭಾಷೆ ಯಾವುದಿತ್ತು? ಈ ಹಿನ್ನೆಲೆಯಲ್ಲಿ ಯೋಚಿಸಿದರೆ, ಇಂಗ್ಲಿಷ್ ಭಾಷೆ ಮಾತನಾಡುವವರು ಮಾತ್ರ ಅನ್ನ ತಿನ್ನುತ್ತಾರೆ, ಮಿಕ್ಕವರು ಊಟವನ್ನೇ ಮಾಡುವುದಿಲ್ಲ ಎಂಬ ಅರ್ಥವೇ?

ಕೆಲವು ಉಪಯೋಗಿ ಹುದ್ದೆಗಳಿಗೆ ನಾವು ಸೃಷ್ಟಿಸಿರುವ ಭಾಷಿಕ ವಾತಾವರಣದ ಕಾರಣದಿಂದಾಗಿ ಭಾಷೆಗಳಿಗೆ ಈ ಬಗೆಯ ಭ್ರಮಾತ್ಮಕ ನಂಟು ಬೆಳೆದಿದೆ. ಭಾಷೆಯ ಬೆಳವಣಿಗೆ ಎಂಬುದು ಜನರ ಇಚ್ಛಾಶಕ್ತಿಗೆ ಸಂಬಂಧಿಸಿದುದು. ಸಮೃದ್ಧವಾಗಿ ಬೆಳೆದಿದ್ದ ಸಂಸ್ಕೃತ ಮೃತವಾಗಲು ಅಂದರೆ ಜನರ ಆಡುಭಾಷೆಯಾಗಿ ಉಳಿಯದೇ ಹೋಗಲು ಕಾರಣ ಅದನ್ನು ಮಾತನಾಡುತ್ತಿದ್ದ ಜನ ಅದಕ್ಕೆ ಹಾಕಿಕೊಂಡ ಮಡಿವಂತಿಕೆ. ಲಿಪಿ ಇಲ್ಲದೆಯೂ ಲಕ್ಷಾಂತರ ಜನರ ಆಡುಭಾಷೆಯಾಗಿ ತುಳು ಇಂದಿಗೂ ಜೀವಂತವಾಗಿ ಉಳಿಯಲು ಬೆಳೆಯಲು ಕಾರಣ, ಅದನ್ನು ಆಡುವ ಜನರ ಇಚ್ಛಾಶಕ್ತಿ. ರಾಜ್ಯಭಾಷೆಯಾಗಿ ಬೆಳೆದಿದ್ದ ಕನ್ನಡ ಇಂದು ಅನ್ನದ ಭಾಷೆಯಲ್ಲ ಎಂಬ ಭ್ರಮೆಗೆ ಕಾರಣ, ಅದನ್ನು ಆಡುವ ಜನರ ಇಚ್ಛಾಶಕ್ತಿಯ ಕೊರತೆ.

ಭಾವುಕ ಆವೇಶದಿಂದ ಭಾಷೆ ಬೆಳೆಯುವುದಿಲ್ಲ. ನಮ್ಮ ಬದುಕು, ಪರಂಪರೆ, ಸಂಸ್ಕೃತಿ ಎಂಬ ಅರಿವಿನ ಇಚ್ಛಾಶಕ್ತಿ ಇದ್ದಾಗ ಭಾಷೆ ಕಾಲೋಚಿತವಾಗಿ ಬೆಳೆಯುತ್ತದೆ, ಉಳಿಯುತ್ತದೆ. ಹೀಗಾಗಿ, ಕನ್ನಡದ ಅಳಿವಿಗೆ ಕಾರಣ ಕನ್ನಡಿಗರೇ ವಿನಾ ಅನ್ಯರಲ್ಲ. ಕನ್ನಡಿಗರಿಗೆ ಕನ್ನಡದ ಬಗ್ಗೆ ಇರುವ ತಪ್ಪುಕಲ್ಪನೆಗಳ ಪರಿಣಾಮದ ಕೀಳರಿಮೆಯೇ ಕಾರಣ. ಇಂಗ್ಲಿಷ್, ಹಿಂದಿ, ಸಂಸ್ಕೃತದ ಬಗ್ಗೆ ಇರುವ ಭ್ರಮಾತ್ಮಕ ಭಾವನೆಯೇ ಕಾರಣ.

ಈ ಎಲ್ಲ ಕಾರಣಗಳಿಂದ ಕನ್ನಡವು ಕನ್ನಡ ನಾಡಿನಲ್ಲಿ ಕಳೆದುಹೋಗುತ್ತಿದೆ. ಶಿಕ್ಷಣದಲ್ಲಿ ಕನ್ನಡ ಉಳಿಯುತ್ತಿಲ್ಲ. ಆಡಳಿತ ಕ್ಷೇತ್ರದಲ್ಲಿ ಕನ್ನಡ ಬೆಳೆಯುತ್ತಿಲ್ಲ. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲೇ ಕನ್ನಡ ಮಾತನಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಇದಕ್ಕೆಲ್ಲಾ ಕಾರಣ ಕನ್ನಡಿಗರು ಮತ್ತು ಕನ್ನಡದ ಜನಪ್ರತಿನಿಧಿಗಳು ಅರ್ಥಾತ್ ಕರ್ನಾಟಕ ಸರ್ಕಾರ. ನಮ್ಮ ರಾಜಕಾರಣಿಗಳು ಪಕ್ಷಾತೀತವಾಗಿ ಕರ್ನಾಟಕದಲ್ಲಿ ಕನ್ನಡ ಕಾಣೆಯಾಗುವುದಕ್ಕೆ ಕಾರಣರಾಗಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಉಚಿತ ಶಿಕ್ಷಣ– ಕಡ್ಡಾಯ ಶಿಕ್ಷಣ ಎಂಬ ಯೋಜನೆ ಪ್ರಾರಂಭವಾಯಿತು. ಆಗ ಹೆಚ್ಚಿನದಾಗಿ ಭಾಷಾವಾರು ಪ್ರಾಂತ ರಚನೆಗಳನ್ನು ಆಧಾರವಾಗಿಟ್ಟು ಪ್ರಾದೇಶಿಕ ಭಾಷೆಗಳಿಗೆ ಶಿಕ್ಷಣದಲ್ಲಿ ಆದ್ಯತೆ ನೀಡಲಾಗಿತ್ತು. ಪ್ರಾದೇಶಿಕ ಭಾಷೆಯಾಗಿ ಪ್ರತಿ ರಾಜ್ಯದಲ್ಲಿಯೂ ಆಯಾ ಪ್ರದೇಶದ ಭಾಷೆಯನ್ನು ಕಲಿಯಲೇಬೇಕಾದ ಭಾಷೆಯಾಗಿ ಕಲಿಸಲಾಗುತ್ತಿತ್ತು. ಕಾರಣ, ಆಗ ಶಿಕ್ಷಣವು ಸರ್ಕಾರಗಳ ಜವಾಬ್ದಾರಿಯಾಗಿತ್ತು. ಖಾಸಗಿ ಶಿಕ್ಷಣ ಸಂಸ್ಥೆಗಳು ಹೆಚ್ಚಿರಲಿಲ್ಲ. ಇದ್ದರೂ ಆಗಲೂ ಅವು ಶಿಕ್ಷಣವನ್ನು ಒಂದು ಸೇವಾ ಮನೋಭಾವದಲ್ಲಿ ನಡೆಸುತ್ತಿದ್ದವು. ಆದರೆ ದಿನದಿಂದ ದಿನಕ್ಕೆ ಶಿಕ್ಷಣ ನೀಡುವ ಕರ್ತವ್ಯಪ್ರಜ್ಞೆಯಿಂದ ಸರ್ಕಾರಗಳು ಹಿಂದೆ ಸರಿಯಲು ತೊಡಗಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಬಾಗಿಲು ತೆರೆದವು. ಆಗ ಶಿಕ್ಷಣ ನೀಡುವುದು ಸರ್ಕಾರಗಳ ಕರ್ತವ್ಯ ಎಂಬ ಪ್ರಜ್ಞೆ ಮಾಯವಾಯಿತು. ಉಚಿತ ಶಿಕ್ಷಣ– ಕಡ್ಡಾಯ ಶಿಕ್ಷಣ ಎಂಬ ಯೋಚನೆ ಅರ್ಥ ಕಳೆದುಕೊಂಡಿತು. ಶಿಕ್ಷಣದ ಖಾಸಗೀಕರಣದಿಂದಾಗಿ ಅದೊಂದು ಉದ್ಯಮ ಕ್ಷೇತ್ರವಾಯಿತು.

ಯಾವಾಗ ಶಿಕ್ಷಣ ಕ್ಷೇತ್ರವು ಉದ್ಯಮ ಕ್ಷೇತ್ರವಾಯಿತೋ ಬಂಡವಾಳ ಹೂಡುವ ಶಕ್ತಿಯುಳ್ಳವರು ಇಲ್ಲಿ ವ್ಯಾಪಾರಕ್ಕೆ ನಿಂತರು. ಅನ್ನದ ಭಾಷೆಯ ಭ್ರಮೆಯಲ್ಲಿ ಭಾಷೆಗಳನ್ನು ವ್ಯಾಪಾರದ ಸರಕಾಗಿಸಿಕೊಂಡರು. ಸಂವಿಧಾನಾತ್ಮಕವಾದ ಶಿಕ್ಷಣ ನೀತಿಯನ್ನೇ ನಾಶ ಮಾಡುತ್ತಾ ನಡೆದರು. ಅವರ ತಾಳಕ್ಕೆ ತಕ್ಕಂತೆ ಸರ್ಕಾರಗಳೂ ಕುಣಿಯುತ್ತಾ ಹೋದವು. ಜನರೂ ಆ ಭ್ರಮೆಯಲ್ಲಿ ತೇಲುತ್ತಾ ಬಲಿಪಶುಗಳಾದರು.

ಇಂದು ಉಳ್ಳವರಿಗೆ ಶಿಕ್ಷಣ, ಬಡವರಿಗೆ ಕೂಲಿ ಬದುಕು ಎಂಬ ವಾತಾವರಣ ಸೃಷ್ಟಿಯಾಗಿದೆ. ಹೀಗಾಗಿ, ಬಹುತ್ವ ಭಾರತದ ಸಂವಿಧಾನಾತ್ಮಕ ಶಿಕ್ಷಣ ನೀತಿಯು ವ್ಯಾಪಾರೀಕರಣದ ಕ್ಷೇತ್ರವಾಗಿದೆ. ಈ ನಡುವೆ ಉತ್ತರ- ದಕ್ಷಿಣ ಎಂಬ ಭೇದೋಪಾಯದಲ್ಲಿ ಕೆಲವೇ ರಾಜ್ಯಗಳಿಗೆ ಸೀಮಿತವಾಗಿದ್ದ ಹಿಂದಿ ಭಾಷೆ ಬೇರೆ ರಾಜ್ಯಗಳಲ್ಲಿರುವ ರಾಜ್ಯ ಭಾಷೆಗಳ ಮೇಲೆ ಆಕ್ರಮಣಕ್ಕೆ ತೊಡಗಿದೆ. ಅದಕ್ಕೆ ಕೇಂದ್ರ ಸರ್ಕಾರದ ನೇರ ಬೆಂಬಲವೂ ಇದೆ. ಕೇಂದ್ರದ ಸಂಸ್ಥೆಗಳು ನಡೆಸುವ ಪರೀಕ್ಷೆಗಳಿಗೆ ಪ್ರಾದೇಶಿಕ ಭಾಷೆಗಳನ್ನು ಕಡೆಗಣಿಸಿರುವುದು, ಹಿಂದಿಯನ್ನು ಮುಂದೆ ತಂದಿರುವುದು, 'ಹಿಂದಿ ದಿವಸ್' ಅನ್ನು ರಾಷ್ಟ್ರೀಯ ಆಚರಣೆಯಾಗಿಸಿರುವುದು... ಹೀಗೆ ಒಕ್ಕೂಟ ವ್ಯವಸ್ಥೆಯ ಇಂಥ ಹಲವಾರು ವಿರೋಧಿ ನಿಲುವುಗಳು ಈ ಆಕ್ರಮಣದ ಮುಖಗಳಾಗಿವೆ. ಇದನ್ನು ಪ್ರಶ್ನಿಸುವ ಏಕೈಕ ಮಾರ್ಗ, ತ್ರಿಭಾಷಾ ಸೂತ್ರವನ್ನು ತಿರಸ್ಕರಿಸಿ ದ್ವಿಭಾಷಾ ನೀತಿಯನ್ನು ಒಪ್ಪಿಕೊಳ್ಳುವುದೇ ಆಗಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ಹಿಡಿತದಿಂದ ಶಿಕ್ಷಣವನ್ನು ಬಿಡಿಸಿ ಅದನ್ನು ಉಚಿತ ಶಿಕ್ಷಣ– ಕಡ್ಡಾಯ ಶಿಕ್ಷಣದ ನೈತಿಕ ಹೊಣೆಗಾರಿಕೆಯಾಗಿ ಸರ್ಕಾರಗಳು ಕರ್ತವ್ಯ ನಿರ್ವಹಿಸಬೇಕು. ಪ್ರಜೆಗಳ ಮೂಲಭೂತ ಹಕ್ಕಾಗಿರುವ ಶಿಕ್ಷಣವನ್ನು ನೀಡಲಾಗದ ರಾಜ್ಯ ಸರ್ಕಾರಗಳಾಗಲಿ ಕೇಂದ್ರ ಸರ್ಕಾರವಾಗಲಿ ಯಾರಿಗಾಗಿ ಆಡಳಿತ ನಡೆಸುತ್ತಿವೆ, ಯಾತಕ್ಕಾಗಿ ಆಡಳಿತ ನಡೆಸುತ್ತಿವೆ ಎಂಬ ಮೂಲಭೂತ ಪ್ರಶ್ನೆಗಳು ಏಳುತ್ತಿವೆ. ಒಂದು ಮೂಲಭೂತ ಹಕ್ಕನ್ನು ನೀಡಲಾಗದ ಸರ್ಕಾರಗಳ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಏಳುತ್ತಿದೆ. ಸರ್ಕಾರಗಳು ಪ್ರಜಾಪ್ರಭುತ್ವವಾದಿ ನಿಲುವುಗಳಿಗೆ ಬದ್ಧವಾಗಿಲ್ಲದ ಮೇಲೆ ಪ್ರಜಾಪ್ರಭುತ್ವದ ಸರ್ಕಾರಗಳು ಎಂಬ ಹಣೆಪಟ್ಟಿ ಬೇಕೆ? ಶಿಕ್ಷಣ, ಆರೋಗ್ಯ, ಉದ್ಯೋಗ ಎಲ್ಲವೂ ವ್ಯಾಪಾರೀಕರಣದ ಸರಕುಗಳಾದರೆ ಸರ್ಕಾರದ ಹೊಣೆಯ ನೈತಿಕತೆಯನ್ನು ಪ್ರಶ್ನಿಸುವುದು ಪ್ರಜೆಗಳ ಕರ್ತವ್ಯವಲ್ಲವೇ? ಎಲ್ಲಿದೆ ಭೂತ? ಏನಾಗಿದೆ ವರ್ತಮಾನ? ಏನಾಗಲಿದೆ ದೇಶ? ಈ ಪ್ರಶ್ನೆಗಳಿಗೆ ನಾವೆಲ್ಲರೂ ಉತ್ತರದಾಯಿಗಳಲ್ಲವೇ?



ಚುರುಮುರಿ



ಡಬಲ್ ಎಂಜಿನ್ ಮಹಿಮೆ

• ಸುಮಂಗಲಾ

'ದೇಶದ ರಾಜಧಾನಿ ದಿಲ್ಲಿವಳಗೆ ಇನ್ನುಮ್ಯಾಗೆ ಬಡವರೇ ಇರಂಗಿಲ್ಲ. ಎಲ್ಲಾರೂ ಮಧ್ಯಮ ವರ್ಗಕ್ಕೆ ಅಪ್‌ಗ್ರೇಡ್ ಆಗತಾರೆ' ಎಂದು ಬೆಕ್ಕಣ್ಣ ಖುಷಿಯಿಂದ ಉಲಿಯಿತು.

'ಅದೇನು ಕಂಪ್ಯೂಟರ್ ಸಾಫ್ಟ್‌ವೇರ್ ಅಪ್‌ಗ್ರೇಡ್ ಮಾಡಿದಷ್ಟು ಸುಲಭವೇನು?' ಎಂದೆ.

'ಅದಕ್ಕಿಂತ ಸುಲಭ. ದಿಲ್ಲಿ ರಸ್ತೆವಳಗೆ ಈಗ ಡಬಲ್ ಎಂಜಿನ್ ಕಾರು ಓಡತೈತಿ. ಅಲ್ಲೀಗ ಮಹಿಳೆಯರಿಗೆ ತಿಂಗಳಿಗೆ 2500 ರೂಪಾಯಿ, 500 ರೂಪಾಯಿ ಸಿಲಿಂಡರ್ ಸಬ್ಸಿಡಿ, ಇನ್ಶುರೆನ್ಸು, ಆರೋಗ್ಯ ಸೌಲಭ್ಯ ಇನ್ನೂ ಏನೇನೋ ಕೊಡ್ತೀವಂತ ಕಮಲಕ್ಕನ ಕಡೇವ್ರು ಹೇಳ್ಯಾರೆ' ಬೆಕ್ಕಣ್ಣ ಬಲುಹುರುಪಿನಿಂದ ವದರಿತು.

'ಕರ್ನಾಟಕದೊಳಗೆ ಮಹಿಳೆಯರಿಗೆ 2000 ರೂಪಾಯಿ ಕೊಡದ್ರಿಂದ ಎಲ್ಲಾರೂ ಸೋಮಾರಿ ಆಗ್ಯಾರೆ, ಖಜಾನೆ ಖಾಲಿ ಆಗೈತಿ ಅಂತೆಲ್ಲ ಇಲ್ಲಿ ಕಮಲಕ್ಕನ ಮನಿಯವ್ರು ಬೈದಾಡತಾರೆ. ಅಲ್ಲಿ ಇಷ್ಟೆಲ್ಲ ಪುಗಸಟ್ಟೆ ಕೊಟ್ಟರೆ ಖಜಾನೆ ಖಾಲಿ ಆಗಂಗಿಲ್ಲೇನು?'

'ಅದು ರಾಜಧಾನಿ. ವಿದೇಶದಿಂದ ಬಂದವರು ಮೊದಲು ಅಲ್ಲಿಗೆ ಬರತಾರಲ್ಲ... ನಮ್ ಮಹಿಳೆಯರು ಎಷ್ಟು ಸಬಲ ಆಗ್ಯಾರೆ ಅಂತ ನೋಡತಾರೆ. ಹಿಂಗಾಗಿ, ಅಲ್ಲಿ ಬಡವರನ್ನ ಮಧ್ಯಮವರ್ಗಕ್ಕೆ, ತೆರಿಗೆ ವಿನಾಯಿತಿ ನೀಡಿ ಮಧ್ಯಮವರ್ಗದವರನ್ನ ಇನ್ನೂ ಮೇಲೆ ಅಪ್‌ಗ್ರೇಡ್ ಮಾಡೂದು ಅವಶ್ಯ' ಬೆಕ್ಕಣ್ಣ ವಿತಂಡವಾದ ಮಂಡಿಸಿತು.

'ಹರಿಯಾಣದೊಳಗೂ ಡಬಲ್ ಎಂಜಿನ್ ಐತಿ. ಹಂಗಾರೆ ಅಲ್ಲಿ ಕೃಷಿ ತ್ಯಾಜ್ಯ ಸುಡೂದು ನಿಲ್ಲಿಸಿ, ದಿಲ್ಲಿ ಮಾಲಿನ್ಯ ಕಡಿಮೆ ಮಾಡಬೌದು'.

'ದಿಲ್ಲಿಗೆ ಮಾಲಿನ್ಯದ ಗಾಳಿ ಪಂಜಾಬಿನಿಂದ ಬರತೈತಿ. ಪಂಜಾಬಿನೊಳಗೂ ಡಬಲ್ ಎಂಜಿನ್ ತಂದರೆ ಮಾತ್ರ ದಿಲ್ಲಿಗೆ ಸ್ವಚ್ಛ ಗಾಳಿ ಬರತೈತಿ' ಬೆಕ್ಕಣ್ಣನ ವಾದ.

'ಸರಿಯಪ್ಪ, ಉತ್ತರಪ್ರದೇಶದೊಳಗೂ ಡಬಲ್ ಎಂಜಿನ್ ಐತಿ. ಪ್ರಯಾಗ್‌ರಾಜ್‌ನಲ್ಲಿ ವಿಪರೀತ ಜನ ಸೇರಿರುವುದರಿಂದ ಪ್ರತಿದಿನ ಸುಮಾರು 13 ಕೋಟಿ ಲೀಟರ್ ಚರಂಡಿ ನೀರು ನೇರವಾಗಿ ಗಂಗೆಗೆ ಸೇರತೈತೆ. ಅದನ್ನು ಕ್ಲೀನ್ ಮಾಡೋರು ಯಾರು?'

ಬೆಕ್ಕಣ್ಣ ಉಸಿರೆತ್ತಲಿಲ್ಲ!

ಸಂಗತ

ಮೈಕ್ರೊಫೈನಾನ್ಸ್: ವಸ್ತುಸ್ಥಿತಿ ಭಿನ್ನ

ಚುನಾಯಿತ ಸರ್ಕಾರದ ಆದ್ಯತೆ ಶೋಷಕ ಮಾರುಕಟ್ಟೆಯನ್ನು ರಕ್ಷಿಸುವುದಲ್ಲ

• ನಾ.ದಿವಾಕರ

ಕರ್ನಾಟಕದ ದುರ್ಬಲ ವರ್ಗಗಳಲ್ಲಿ ಬದುಕು ಸವೆಸಲು ಹೆಣಗಾಡುತ್ತಿರುವ ದೊಡ್ಡ ಜನಸಂಖ್ಯೆಯೇ ಇದೆ. ಈ ವರ್ಗಗಳನ್ನೇ ಶೋಷಣೆಯ ಗುರಿ ಮಾಡಿಕೊಂಡು, ತಮ್ಮ ಬಂಡವಾಳದ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳಲು ಸುಭದ್ರ ಅಡಿಪಾಯ ಒದಗಿಸುವ ಮೈಕ್ರೊಫೈನಾನ್ಸ್ ಎಂಬ ಪರಿಕಲ್ಪನೆಯೇ ನವ ಉದಾರವಾದಿ ಆರ್ಥಿಕತೆಯ ಸೃಷ್ಟಿ. ದುರ್ಬಲ ವರ್ಗಗಳ ಜನರಿಗೆ ಅವರ ತಿಂಗಳ ವರಮಾನಕ್ಕಿಂತ ತುಸು ಹೆಚ್ಚಿನ ಹಣದ ಅಗತ್ಯ ಎದುರಾದಾಗ ಅದನ್ನು ಸುಲಭದಲ್ಲಿ ಒದಗಿಸಿಕೊಡುವ ಜನಪರವಾದ ಆರ್ಥಿಕ ವ್ಯವಸ್ಥೆ ಇಲ್ಲದ ಭಾರತದಂತಹ ದೇಶಗಳಲ್ಲಿ ಇಂತಹವರು ಸಮಾಜದ 'ಉಳ್ಳವರ' ಮುಂದೆ ಕೈಚಾಚುತ್ತಾರೆ. ಇದು ಸಹಜ. ಈ ಬಗೆಯ ಕೈಚಾಚುವಿಕೆಯನ್ನು ಚಾರಿತ್ರಿಕವಾಗಿ ಊಳಿಗಮಾನ್ಯ ವ್ಯವಸ್ಥೆಯ ಜೀತಪದ್ಧತಿ- ಲೇವಾದೇವಿ ಮತ್ತು ಅದು ಸೃಷ್ಟಿಸುವ ಪರಾವಲಂಬನೆಯಲ್ಲಿ ಗುರುತಿಸಬಹುದು.

ಭಾರತ ಈಗ ವಿಶ್ವದ ಐದನೇ ದೊಡ್ಡ ಆರ್ಥಿಕತೆಯಾಗಿದ್ದರೂ ಈ ಪ್ರಾಚೀನ ವ್ಯವಸ್ಥೆಯು ಲೇವಾದೇವಿ ವಹಿವಾಟು, ಖಾಸಗಿ ಚೀಟಿ ವ್ಯವಹಾರ, ಚಕ್ರಬಡ್ಡಿ, ಮೀಟರ್‌ಬಡ್ಡಿ ಎಂದೆಲ್ಲ ರೂಪಾಂತರಗೊಂಡಿದೆ. ಮೇಲ್ಪದರದಿಂದ ತಳಮಟ್ಟದವರೆಗೂ ಇದು ಚಾಲ್ತಿಯಲ್ಲಿದೆ. ಸಿರಿವಂತರ ಸಂಖ್ಯೆ ಹೆಚ್ಚಾಗಿದೆ ಎಂಬುದೊಂದೇ ಇದಕ್ಕೆ ಕಾರಣವಲ್ಲ. ಸಾಮಾಜಿಕ ಪಿರಮಿಡ್ಡಿನ ತಳಪಾಯದಲ್ಲಿರುವ ಅಪಾರ ಜನಸ್ತೋಮದ ಬಳಿ ಜೀವನೋಪಾಯಕ್ಕೆ ಸಾಕಾಗುವಷ್ಟು ಹಣ ಅಥವಾ ಆದಾಯ ಇಲ್ಲ ಎನ್ನುವುದೂ ಕಾರಣ. ಆದರೂ ನಾವು 'ಸಮಾಜವಾದ- ಗ್ಯಾರಂಟಿ- ಕಲ್ಯಾಣ ಯೋಜನೆ' ಅಂತಹವುಗಳ ಬಗ್ಗೆ ಮಾತನಾಡುತ್ತಲೇ ಇರುತ್ತೇವೆ. ಕೆಲವರ ದೃಷ್ಟಿಯಲ್ಲಿ ಅನ್ನ, ಬಟ್ಟೆ ಮತ್ತು ಮನೆ ಇಷ್ಟಿದ್ದರೆ ಮನುಷ್ಯನ ಬದುಕಿಗೆ ಸಾಕು.

ಆದರೆ ವಾಸ್ತವದಲ್ಲಿ ಮನುಷ್ಯಜೀವಿಗೆ ಇದರಿಂದಾಚೆಗಿನ ಬಾಧ್ಯತೆಗಳು, ಕೌಟುಂಬಿಕ ಖರ್ಚುಗಳು ಬಹಳಷ್ಟು ಇರುತ್ತವೆ. ಇದು ಮಧ್ಯಮ ವರ್ಗಗಳಲ್ಲೂ ಕಾಣಬಹುದಾದ ವಿದ್ಯಮಾನ. ದುರ್ಬಲ ವರ್ಗಗಳಲ್ಲಿನ ದುಡಿಯುವ ಜನರಿಗೆ ಅನಿಶ್ಚಿತ ಬಾಧ್ಯತೆಗಳು ಕನಿಷ್ಠ ಮಟ್ಟದಲ್ಲಿದ್ದರೂ ಅವರ ದುಡಿಮೆಯ ಆದಾಯದಲ್ಲಿ ಅವುಗಳನ್ನೂ ಸರಿದೂಗಿಸುವುದು ಕಷ್ಟ. ಇದು ಮೇಲ್ಪದರದ ಸಮಾಜದಲ್ಲೂ ಇರುತ್ತದೆಯಾದರೂ ಈ ಬಾಧ್ಯತೆಗಳನ್ನು ನೀಗಿಸಲು ಅಗತ್ಯವಾದ ಸಾಲ ಸೌಲಭ್ಯಗಳು ಸಾಂಸ್ಥಿಕವಾಗಿ ಅವರಿಗೆ ಲಭ್ಯವಾಗುತ್ತವೆ. ಈ ಸಾಂಸ್ಥಿಕ ಸೌಲಭ್ಯಗಳು ಕೆಳಮಧ್ಯಮ ವರ್ಗಗಳಿಗೆ, ತಳಸಮಾಜದ ಜನರಿಗೆ ಸುಲಭವಾಗಿ ತಲುಪುವುದಿಲ್ಲ. ಹೀಗೆ ತಲುಪುವಂತೆ ಮಾಡುವ ಜವಾಬ್ದಾರಿಯನ್ನು ಸಂಬಂಧಪಟ್ಟವರು ಹೊರುವುದೂ ಇಲ್ಲ.

ಇದು ನವ ವಿಕಸಿತ ಭಾರತ ಒಪ್ಪಿಕೊಂಡಿರುವ ನವ ಉದಾರವಾದದ ಮೂಲ ಲಕ್ಷಣ. ಕರ್ನಾಟಕ ಸರ್ಕಾರವನ್ನು ಬಡಿದೆಬ್ಬಿಸಿದ್ದು ಮೈಕ್ರೊಫೈನಾನ್ಸ್ ಎಂಬ ಮಾದರಿಯಲ್ಲ, ಬದಲಾಗಿ ಅದರಿಂದುಂಟಾದ ಅನಾಹುತಗಳು, ಆತ್ಮಹತ್ಯೆಗಳು, ದುರ್ಬಲ ವರ್ಗಗಳ ನೋವು. ಹಲವು ವರ್ಷಗಳಿಂದ ದುರ್ಬಲ ವರ್ಗಗಳನ್ನು ಬಗೆದು ತಿನ್ನುತ್ತಿರುವ ಈ ತಿಮಿಂಗಿಲವನ್ನು ಸಹಿಸಿಕೊಂಡಿದ್ದ ವ್ಯವಸ್ಥೆಯನ್ನು ಕೆಲವರ ಸಾವುಗಳಾದರೂ ನಿದ್ರಾವಸ್ಥೆಯಿಂದ ಎಚ್ಚರಿಸಿವೆ. ಆದರೆ ರಾಜ್ಯ ಸರ್ಕಾರ ಈ ಹಾವಳಿಯನ್ನು ನಿಯಂತ್ರಿಸಲು ಹೊರಡಿಸಿದ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕಲು ನಿರಾಕರಿಸಿರುವುದು ದುರದೃಷ್ಟಕರ. ರಾಜ್ಯ ಸರ್ಕಾರದ ಸುಗ್ರೀವಾಜ್ಞೆ ಮೂಲತಃ ಸಾಲ ವಸೂಲಾತಿಯ ನಿಯಮಗಳನ್ನು ನಿಗ್ರಹಿಸುವ ಹಾಗೂ ಕಾನೂನುಬಾಹಿರ ಮೈಕ್ರೊಫೈನಾನ್ಸ್ ಕಂಪನಿಗಳನ್ನು ನಿರ್ಬಂಧಿಸುವ ಶಾಸನವಾಗಿತ್ತು. ಆರ್‌ಬಿಐ ವಿಧಿಸಿದ ನಿಯಮಗಳನ್ನು ಮೀರಿ ವಸೂಲಿ ಉಪಕ್ರಮಗಳನ್ನು ಕೈಗೊಳ್ಳುವ ಕಂಪನಿಗಳ ಅಮಾನುಷ ವಿಧಾನಗಳನ್ನು ನಿಗ್ರಹಿಸುವುದು ಸುಗ್ರೀವಾಜ್ಞೆಯ ಉದ್ದೇಶವಾಗಿತ್ತು.

ಸುಗ್ರೀವಾಜ್ಞೆಯನ್ನು ತಿರಸ್ಕರಿಸಿರುವ ರಾಜ್ಯಪಾಲರಿಗೆ ಕಂಡ ಲೋಪಗಳು ಭಿನ್ನ. ಪ್ರಾಮಾಣಿಕ ಸಾಲದಾತರಿಗೆ ರಕ್ಷಣೆಯಿಲ್ಲ ಎಂಬ ರಾಜ್ಯಪಾಲರ ಆಕ್ಷೇಪದಲ್ಲೇ ಗೊಂದಲ ಇದೆ. ಪ್ರಾಮಾಣಿಕ-ನೋಂದಾಯಿತ ಮೈಕ್ರೊಫೈನಾನ್ಸ್ ಕಂಪನಿಗಳಿಗೆ ಆರ್‌ಬಿಐ ನಿಯಮಗಳೇ ರಕ್ಷಣೆ ಒದಗಿಸುತ್ತಿವೆ. ಆದರೆ ಈ ಕಂಪನಿಗಳು ಆರ್‌ಬಿಐ ನಿಬಂಧನೆಗಳನ್ನೂ ಉಲ್ಲಂಘಿಸಿ ಅನುಸರಿಸುವ ವಸೂಲಿ ಉಪಕ್ರಮಗಳು, ಬಡ ಕುಟುಂಬಗಳಿಗೆ, ವಿಶೇಷವಾಗಿ ಮಹಿಳೆಯರಿಗೆ ನೀಡುವ ಕಿರುಕುಳ ಹಾಗೂ ಬೆದರಿಕೆಯ ತಂತ್ರಗಳನ್ನು ನಿಗ್ರಹಿಸುವುದು ಸರ್ಕಾರದ ಕರ್ತವ್ಯ ಅಲ್ಲವೇ? ಈಗಿರುವ ಕಾನೂನುಗಳ ಅಡಿಯಲ್ಲೇ ಇದನ್ನು ನಿರ್ವಹಿಸಬಹುದು ಎಂದು ರಾಜ್ಯಪಾಲರು ಹೇಳಿದ್ದಾರೆ. ಆದರೆ ಅದರಲ್ಲಿರುವ ತೂತುಗಳೆಷ್ಟು ಎನ್ನುವುದನ್ನೂ ಗಮನಿಸಬೇಕಲ್ಲವೇ?

ಸುಗ್ರೀವಾಜ್ಞೆಯಲ್ಲಿ ವಿಧಿಸಿರುವ ಶಿಕ್ಷೆಯ ಪ್ರಮಾಣ 'ಬಹಳ ಕಠಿಣ' ಎನ್ನುವುದು ವಾಸ್ತವ. ಆದರೆ ಬಡವರ ಜೀವ ತೆಗೆಯುವ ವಸೂಲಿಕಾರರ ದೌರ್ಜನ್ಯಗಳಿಗೆ 'ಮೃದು ಶಿಕ್ಷೆ' ವಿಧಿಸಿದರೆ ಸಾಕೇ? ಇದರಿಂದ ಮೈಕ್ರೊಫೈನಾನ್ಸ್ ಮಾರುಕಟ್ಟೆಗೆ ಹೊಡೆತ ಬೀಳುತ್ತದೆ ಎನ್ನುವುದು ಅರ್ಧಸತ್ಯ. ಪ್ರಜಾಪ್ರಭುತ್ವದಲ್ಲಿ ಚುನಾಯಿತ ಸರ್ಕಾರದ ಆದ್ಯತೆ ಶೋಷಕ ಮಾರುಕಟ್ಟೆಯನ್ನು ರಕ್ಷಿಸುವುದಲ್ಲ, ಬದಲಾಗಿ ಅದರಿಂದ ಶೋಷಣೆಗೊಳಗಾಗುವ ನೊಂದವರ ರಕ್ಷಣೆ ಸರ್ಕಾರದ ನೈತಿಕ ಕರ್ತವ್ಯ. ಆದರೆ ರಾಜ್ಯಪಾಲರು ನೀಡಿರುವ ಕಾರಣಗಳು ಇದಕ್ಕೆ ವ್ಯತಿರಿಕ್ತವಾಗಿವೆ.

ಶೋಷಿತರ ಸಹನೆಯನ್ನೂ ಶೋಷಣೆಗೆ ಒಳಪಡಿಸುವ ಮಾರುಕಟ್ಟೆ ವ್ಯವಸ್ಥೆಯಲ್ಲಿ ಮನೆ–ಮಠ, ಆಸ್ತಿ, ಕುಟುಂಬದ ಆಶ್ರಯದಾತರು ಸೇರಿದಂತೆ ಎಲ್ಲವನ್ನೂ ಕಳೆದುಕೊಂಡ ನೊಂದವರು, ಅನಾಥರಾದ ಮಕ್ಕಳು ಯಾರ ಬಾಗಿಲು ಬಡಿಯಬೇಕು?

ವಾಚಕರ ವಾಣಿ

ಮೆಟ್ರೊ ಪ್ರಯಾಣ ದರ ಏರಿಕೆ ಸಮರ್ಥನೀಯವಲ್ಲ

ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಶ್ರೀಸಾಮಾನ್ಯನಿಗೆ ಮತ್ತೊಂದು ಆಘಾತ ನೀಡಿರುವ ಬೆಂಗಳೂರು ಮೆಟ್ರೊ, ಟಿಕೆಟ್ ಬೆಲೆಯನ್ನು ಶೇಕಡ 47ರಷ್ಟು ಏರಿಸಿ ಗಾಯದ ಮೇಲೆ ಬರೆ ಎಳೆದಿದೆ. ಕೆಲವು ನಿಲ್ದಾಣಗಳಿಗೆ ಶೇಕಡ 100ರಷ್ಟು ಏರಿಕೆಯಾಗಿರುವುದು ಖಂಡಿತವಾಗಿಯೂ ಸಮರ್ಥನೀಯವಲ್ಲ. ಹಾಗೆ ನೋಡಿದರೆ, ಬೆಂಗಳೂರು ಮೆಟ್ರೊದಲ್ಲಿ ಇತ್ತೀಚೆಗೆ ಯಾವುದೇ ಹೆಚ್ಚಿನ ಸೌಲಭ್ಯ ಕಲ್ಪಿಸಿಲ್ಲ. ಬಹಳಷ್ಟು ಜನ ನಿಂತೇ ಪ್ರಯಾಣ ಮಾಡುತ್ತಾರೆ. ದೆಹಲಿ ಹಾಗೂ ಇನ್ನು ಕೆಲವು ಮೆಟ್ರೊಗಳಲ್ಲಿ ಕಲ್ಪಿಸಿರುವ ಹಲವು ಸೌಲಭ್ಯಗಳನ್ನು ನಮ್ಮ ಮೆಟ್ರೊದಲ್ಲಿ ಒದಗಿಸಿಲ್ಲ. ಇದೆಲ್ಲವನ್ನೂ ಪರಿಶೀಲಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಮೆಟ್ರೊ ಟಿಕೆಟ್ ದರ ಏರಿಕೆ ಕುರಿತು ಪುನರ್ ಪರಿಶೀಲನೆ ನಡೆಸಿ, ಬೆಂಗಳೂರಿಗರ ಬದುಕನ್ನು ಸಹನೀಯಗೊಳಿಸಬೇಕು.

ಜಿ.ಪಿ.ದಯಾನಂದ, ಬೆಂಗಳೂರು

ಅಜ್ಞಾನದಿಂದ ಅಪಘಾತ

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ತಿಂಥಣಿ ಸೇತುವೆ ಸಮೀಪ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮಗ, ಸೊಸೆ, ಮೊಮ್ಮಕ್ಕಳನ್ನು ಕಳೆದುಕೊಂಡ ಅಮರಣ್ಣ ಎಂಬುವರು 'ಹರಕೆ ತೀರಿಸಲು ಹೋದ ನಮ್ಮ ಮಗ, ಸೊಸೆ ಮತ್ತು ಮೊಮ್ಮಕ್ಕಳ ಜೀವವನ್ನು ದೇವರೇ ಕಿತ್ತುಕೊಂಡಂತಾಯಿತು' ಎಂದು ರೋದಿಸಿದ್ದು (ಪ್ರ.ವಾ., ಫೆ.7) ಎಲ್ಲರ ಮನವನ್ನು ಕಲಕುವಂತಿದೆ. ಆದರೂ ಮಗನ ಅಜ್ಞಾನಕ್ಕೆ ಮರುಕಪಡಬೇಕಾಗಿದೆ! ಏಕೆಂದರೆ, ಒಂದೇ ಬೈಕಿನ ಮೇಲೆ ಐದು ಜನ ಸವಾರಿ ಮಾಡಬಾರದೆಂಬ ಕನಿಷ್ಠ ಜ್ಞಾನವೂ ಇವರಿಗೆ ಇರಬಾರದೆ? ಹಾಗೆ ಮಾಡಲು ದೇವರು ಅವರಿಗೆ ಹೇಳಿದ್ದನೆ? ದೇವರು ನಮಗೆ ವಿವೇಕವನ್ನೂ ನೀಡಿದ್ದಾನಲ್ಲ. ಅದನ್ನು ಉಪಯೋಗಿಸಿಕೊಳ್ಳದೆ ಬರಿದೇ ದೇವರನ್ನು ಬೈದರೆ ಏನು ಬಂತು?

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

ಕನ್ನಡ ಲಿಪಿ: ಆರಂಭದಿಂದಲೇ ಬೇಕು ತರಬೇತಿ

'ಕನ್ನಡದ ನೆಂಟಸ್ತನ, ಲಿಪಿಗೆ ಬಡತನ' ಎಂಬ ಗೌರಿ ಚಂದ್ರಕೇಸರಿ ಅವರ ಲೇಖನ (ಸಂಗತ, ಫೆ. 7) ಗಂಭೀರ ವಿಚಾರಗಳಿಂದ ಕೂಡಿದೆ. ಇಂದಿನ ಕೃತಕ ಬುದ್ಧಿಮತ್ತೆಯ (ಎ.ಐ) ದಿನಗಳಲ್ಲಿ ಕನ್ನಡ ಲಿಪಿಯನ್ನು ಉಳಿಸಲು ಪ್ರಾಥಮಿಕ ಶಿಕ್ಷಣದಿಂದ ಮಾತ್ರ ಸಾಧ್ಯ. ಕನ್ನಡ ಮತ್ತು ಇಂಗ್ಲಿಷ್ ಎರಡೂ ಮಾಧ್ಯಮಗಳ ವಿದ್ಯಾರ್ಥಿಗಳಿಗೆ ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಹಂತ ಹಂತವಾಗಿ ಕನ್ನಡ ಅಕ್ಷರಗಳು, ಕಾಗುಣಿತ, ಒತ್ತಕ್ಷರದ ಪರಿಚಯ, ಕಾಪಿ ಬರವಣಿಗೆ, ಉಕ್ತಲೇಖನ, ಸರಳ ಕನ್ನಡ ವ್ಯಾಕರಣ, ಸಣ್ಣ ಪ್ರಬಂಧ, ಲೇಖನ ಬರವಣಿಗೆಯಂತಹವುಗಳ ಮೂಲಕ ಕನ್ನಡವನ್ನು ಕಲಿಸಬೇಕು. ಕನ್ನಡ ಶಬ್ದಗಳನ್ನು ಸ್ಪಷ್ಟವಾಗಿ ಉಚ್ಚರಿಸುವ, ಬರೆಯುವ, ಓದುವ ವಿದ್ಯೆಯನ್ನು ಶಾಲೆಗಳಲ್ಲಿ ಹೇಳಿಕೊಡಬೇಕು. ಪೋಷಕರು ಸಹ ಮನೆಯಲ್ಲಿ ಮಕ್ಕಳ ಭಾಷಾ ಬೆಳವಣಿಗೆಗೆ ಬೇಕಾಗುವ ಎಲ್ಲ ಮಾರ್ಗದರ್ಶನವನ್ನೂ ಮಾಡಬೇಕು. ಶಿಕ್ಷಣ ಇಲಾಖೆ ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಬೇಕು. ಆಗಮಾತ್ರ ಸುಂದರ ಕನ್ನಡ ಭಾಷೆ, ಕನ್ನಡ ಲಿಪಿ ಉಳಿದು ಬೆಳೆಯಲು ಸಾಧ್ಯ.

ಡಿ.ಜಿ.ಮಂಜುನಾಥ, ತೀರ್ಥಹಳ್ಳಿ

ಮೈಕ್ರೊಫೈನಾನ್ಸ್: ನಡೆಯಲಿ ಆತ್ಮಾವಲೋಕನ

ಮೈಕ್ರೊಫೈನಾನ್ಸ್ ಕಂಪನಿಗಳ ವ್ಯವಹಾರಗಳು ತಂತು ಬೇರಿನ ರೂಪದಲ್ಲಿ ಮನೆಯಿಂದ ಮನೆಗೆ, ಊರಿಂದ ಊರಿಗೆ ಹಬ್ಬಿಕೊಂಡು ಬೃಹತ್ತಾಗಿ ಬೆಳೆದಿವೆ. ಈ ಮುಳ್ಳಿನ ಗಿಡಗಳನ್ನು ನೆಟ್ಟು ಬೆಳೆಸಿದವರಾರು ಅಥವಾ ಇವು ಬೆಳೆಯಲು ಸಂದರ್ಭಗಳು ಹೇಗೆ ಒದಗಿಬಂದವು ಎನ್ನುವ ಬಗ್ಗೆ ಅಧ್ಯಯನ ಆಗಬೇಕು. ಈ ಕಂಪನಿಗಳು ಆರ್‌ಬಿಐ ನಿಯಮಗಳಂತೆ ಕೆಲಸ ಮಾಡುತ್ತಿವೆ ಎನ್ನುತ್ತಿದ್ದಾರೆ. ಇವುಗಳ ಅಗತ್ಯ ಈ ಸಮಾಜಕ್ಕೆ ಎಷ್ಟರಮಟ್ಟಿಗಿದೆ? ರಾಜ್ಯದ ಹೆಗ್ಗುರುತಾಗಿದ್ದ ಸರ್ಕಾರಿ ಸ್ವಾಮ್ಯದ ಕೆಲವು ಬ್ಯಾಂಕುಗಳನ್ನು ಇತರ ಬ್ಯಾಂಕುಗಳ ಜೊತೆಯಲ್ಲಿ ವಿಲೀನ ಮಾಡಲಾಯಿತು. ಹಳ್ಳಿಗಳಲ್ಲಿದ್ದ ರೈತ ಸೇವಾ ಸಹಕಾರ ಸಂಘ, ರೇಷ್ಮೆ ಬೆಳೆಗಾರರ ಸೇವಾ ಸಹಕಾರ ಸಂಘಗಳು ರೈತರಿಗೆ ಬೆಳೆ ಮತ್ತಿತರ ಸಾಲ ಕೊಡುತ್ತಿದ್ದವು. ಅವುಗಳ ಶಕ್ತಿಯನ್ನೂ ಕುಂದಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಕೂಲಿ ಸಿಗುತ್ತಿಲ್ಲ. ನರೇಗಾ ಯೋಜನೆಯ ಶಕ್ತಿಯೂ ಕುಂದಿದೆ.

ಮೊದಲು ಹೆಚ್ಚಿನ ರೈತರು ಜಾನುವಾರುಗಳನ್ನು ಸಾಕುತ್ತಿದ್ದರು. ಹಬ್ಬ ಹರಿದಿನದಂತಹ ಶುಭಕಾರ್ಯ ಇಲ್ಲವೇ ಕಷ್ಟದ ದಿನಗಳಲ್ಲಿ ಹಸುಗಳನ್ನು ಮಾರಾಟ ಮಾಡಿ ಖರ್ಚಿಗೆ ಹಣ ಮಾಡಿಕೊಳ್ಳುತ್ತಿದ್ದರು. ಗೋಹತ್ಯಾ ನಿಷೇಧ ಕಾನೂನು ಜಾರಿಗೆ ಬಂದಮೇಲೆ ಆ ವಹಿವಾಟಿಗೂ ತಡೆಯಾಯಿತು. ಊರುಗಳಲ್ಲಿನ ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಆಸ್ಪತ್ರೆಗಳು ನಿರ್ಜೀವವಾಗಿವೆ. ಸಾಲ ಮಾಡಿ ಮಕ್ಕಳಿಗೆ ಶಿಕ್ಷಣ ಕೊಡಿಸುವ ಮತ್ತು ತುರ್ತು ಸಂದರ್ಭಗಳಲ್ಲಿ ಸಾಲ ಮಾಡಿ ಖಾಸಗಿ ಆಸ್ಪತ್ರೆಗೆ ಹೋಗುವ ಪರಿಸ್ಥಿತಿ ಬಂದೊದಗಿದೆ. ಕೋವಿಡ್ ಬಂದಾಗ ಹಳ್ಳಿಗರ ಮನೆಯಲ್ಲಿದ್ದ ಅಷ್ಟಿಷ್ಟು ಚಿನ್ನವನ್ನು ಆಧಾರವಾಗಿಟ್ಟು ಹಣಕಾಸಿನ ವಹಿವಾಟು ನಡೆಸಿದ್ದಾಗಿದೆ. ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ಮೈಕ್ರೊಫೈನಾನ್ಸ್ ಸಂಸ್ಥೆಗಳು ಹಳ್ಳಿಗರಿಗೆ ಸಾಲ ಕೊಟ್ಟಿವೆ. ಈಗ ಮಾನ ಮರ್ಯಾದೆಗೆ ಅಂಜಿ, ಸಾಲಗಾರರ ಕಿರುಕುಳ ತಾಳಲಾರದೆ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಸಮಾಜವನ್ನು ಆಡಳಿತವೇ ಇಂತಹ ದುಃಸ್ಥಿತಿಗೆ ತಂದು ನಿಲ್ಲಿಸಿದೆ. ರಾಜಕಾರಣಿಗಳು ಅವರಿವರ ಮೇಲೆ ಕೆಸರು ಹಾಕದೆ ಆತ್ಮಾವಲೋಕನ ಮಾಡಿಕೊಳ್ಳಲಿ ಮತ್ತು ಪರಿಹಾರವನ್ನು ಅವರೇ ಸೂಚಿಸಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಮೂರು ದಶಕದ ಪ್ರಕರಣಕ್ಕೆ ಜೀವ!

ಬ್ಯಾಂಕೊಂದಕ್ಕೆ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ 'ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯವು ಸಚಿವರಾಗಿದ್ದ ಕೃಷ್ಣಯ್ಯ ಶೆಟ್ಟಿ ಹಾಗೂ ಇನ್ನಿತರ ಮೂವರು ಆರೋಪಿಗಳಿಗೆ ಶಿಕ್ಷೆ ವಿಧಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಸುಮಾರು 32 ವರ್ಷಗಳಿಂದಲೂ ನಡೆಯುತ್ತಿದ್ದ ಈ ಪ್ರಕರಣದ ವಿಚಾರಣೆ ಈಗ ಒಂದು ಘಟ್ಟಕ್ಕೆ ತಲುಪಿದ್ದರೂ ಆರೋಪಿಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ವರೆಗೆ ಹೋಗುವ ಸಾಧ್ಯತೆ ಇದೆ. ಹೀಗಾಗಿ, ಈ ಪ್ರಕರಣ ಮತ್ತಷ್ಟು ವರ್ಷಗಳ ಕಾಲ ನಡೆಯಬಹುದು. ಜನಮಾನಸದಲ್ಲೂ ಬಹುಶಃ ಮರೆತೇಹೋಗಿದ್ದ ಈ ಪ್ರಕರಣದ ಇತ್ಯರ್ಥಕ್ಕೆ ಇಷ್ಟೊಂದು ದೀರ್ಘ ಅವಧಿ ಏಕೆ ಬೇಕಾಯಿತು ಎಂಬುದು ಯಕ್ಷಪ್ರಶ್ನೆಯೇ ಸರಿ!

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited.
To know more about The Printers (Mysore) Private Ltd, visit www.printersmysore.com.

‘ನಮ್ಮ ಮೆಟ್ರೊ’ ದೇಶದಲ್ಲಿಯೇ ದುಬಾರಿ

ಶೇ 50–ಶೇ 100ರಷ್ಟು ಅಧಿಕ ಮೊತ್ತ ಪಾವತಿಸಬೇಕಾದ ಅನಿವಾರ್ಯ ಕೇಂದ್ರ ನೇಮಿಸಿದ್ದ ಸಮಿತಿ ವರದಿ ಆಧರಿಸಿ ದರ ನಿಗದಿ

ಮೆಟ್ರೊ ಪ್ರಯಾಣ ದರವನ್ನು ಶೇ 47ರಷ್ಟು ಹೆಚ್ಚಿಸಿ ಬಿಎಂಆರ್‌ಸಿಎಲ್ ಆದೇಶ ಹೊರಡಿಸಿದೆ. ಭಾರಿ ಪ್ರಮಾಣದ ಹೆಚ್ಚಳದ ಬಗ್ಗೆ ಅಚ್ಚರಿ ಹಾಗೂ ವಿರೋಧ ವ್ಯಕ್ತವಾಗಿವೆ. ದರ ಏರಿಕೆಯ ಪ್ರಮಾಣದ ಬಗ್ಗೆ ಪ್ರಯಾಣಿಕರಲ್ಲಿ ಗೊಂದಲವೂ ಇದೆ. ಮೆಟ್ರೊ ದರ ಹೆಚ್ಚಳವು ಹೇಗೆ ನಿರ್ಧಾರವಾಗುತ್ತದೆ, ಅದರಲ್ಲಿ ಯಾರು ಯಾರು ಭಾಗಿಯಾಗಿರುತ್ತಾರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾತ್ರ ಏನು ಎನ್ನುವುದರ ಬಗ್ಗೆ ಇಲ್ಲಿದೆ ಮಾಹಿತಿ

● ಬಾಲಕೃಷ್ಣ ಪಿ.ಎಚ್.

‘ನಮ್ಮ ಮೆಟ್ರೊ’ ಪ್ರಯಾಣ ದರವನ್ನು ಶೇ 47ರಷ್ಟು ಹೆಚ್ಚಿಸಲಾಗಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ತಿಳಿಸಿದೆ. ಈ ಮೂಲಕ ದೇಶದಲ್ಲಿಯೇ ಅತಿ ದುಬಾರಿ ಪ್ರಯಾಣ ದರವನ್ನು ಹೊಂದಿರುವ ಮೆಟ್ರೊ ಇದಾಗಿದೆ. ಪ್ರಯಾಣಿಕರಿಂದ ಪ್ರಯಾಣ ದರವನ್ನು ಪಡೆಯುವ ಬದಲು ಬಂಡವಾಳ ಕ್ರೋಡೀಕರಣದ ಉದ್ದೇಶದಿಂದ ದರ ಹೆಚ್ಚಳ ಮಾಡಲಾಗಿದೆ ಎಂಬ ಆರೋಪಕ್ಕೆ ನಿಗಮವು ಗುರಿಯಾಗಿದೆ.

ಪರಿಷ್ಕೃತ ದರದಲ್ಲಿ ಗೊಂದಲ: ಸರಾಸರಿ ಶೇ 47ರಷ್ಟು ದರ ಹೆಚ್ಚಳ ಮಾಡಲಾಗಿದೆ. ಅದರಲ್ಲಿ ಸ್ಮಾರ್ಟ್‌ಕಾರ್ಡ್ ಹೊಂದಿರುವವರಿಗೆ ಶೇ 5 ರಿಯಾಯಿತಿ ನೀಡಲಾಗಿದೆ. ಜನದಟ್ಟಣೆ ಕಡಿಮೆ ಇರುವ ಅವಧಿಯಲ್ಲಿ (ನಾನ್ ಪೀಕ್ ಅವರ್) ಸಂಚರಿಸಿದರೆ ಹೆಚ್ಚುವರಿಯಾಗಿ ಶೇ 5 ರಿಯಾಯಿತಿ ದೊರೆಯಲಿದೆ. ರಾಷ್ಟ್ರೀಯ ಹಬ್ಬಗಳು ಮತ್ತು ಎಲ್ಲ ಭಾನುವಾರ ಶೇ 10 ರಿಯಾಯಿತಿ ಇರುತ್ತದೆ. ರಿಯಾಯಿತಿಗಳನ್ನು ಕಳೆದರೆ ಶೇ 40ರಷ್ಟು ಹೆಚ್ಚಳ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ. ಸ್ಮಾರ್ಟ್ ಕಾರ್ಡ್‌ನಲ್ಲಿನ ಕನಿಷ್ಠ ಮೊತ್ತವನ್ನು ₹50ರಿಂದ ₹90ಕ್ಕೆ ಏರಿಸಲಾಗಿದೆ.

ಕಿ.ಮೀ ಆಧಾರದಲ್ಲಿ ಪ್ರಯಾಣ ದರವನ್ನು ಹೆಚ್ಚಿಸಿ, ಅದನ್ನು ಸ್ಟೇಷನ್‌ಗಳಿಗೆ ಅನ್ವಯ ಮಾಡುತ್ತಿರುವುದರಿಂದ ಪ್ರಯಾಣಿಕರಿಗೆ ಗೊಂದಲ ಉಂಟಾಗಿದೆ. ಶೇ 47ರಷ್ಟು ಹೆಚ್ಚಳ ಎಂದು ಹೇಳಿದ್ದರೂ ಹಲವು ಕಡೆಗಳಲ್ಲಿ ಹಿಂದಿನ ದರದ ದುಪ್ಪಟ್ಟು (ಶೇ 100ರಷ್ಟು ಅಧಿಕ) ನೀಡಬೇಕಾಗಿದೆ.

ದರ ಪರಿಷ್ಕರಣೆ ಪ್ರಕ್ರಿಯೆ ಹೇಗೆ?: 2011ರಲ್ಲಿ ಮೆಟ್ರೊ ಸಂಚಾರ ಆರಂಭವಾಗಿದ್ದು, 2017ರಲ್ಲಿ ದರ ಪರಿಷ್ಕರಣೆ ಮಾಡಲಾಗಿತ್ತು. ಆದರೆ, ಆಗ ದರ ನಿಗದಿಗಾಗಿ ಸಮಿತಿ ರಚಿಸದೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಒಪ್ಪಿಗೆ ಪಡೆದು ಪ್ರಯಾಣ ದರವನ್ನು ಶೇ 15ರಷ್ಟು ಹೆಚ್ಚಳ ಮಾಡಲಾಗಿತ್ತು.

ನಿರ್ವಹಣೆ ವೆಚ್ಚ, ವೇತನ ವೆಚ್ಚ, ಇಂಧನ ವೆಚ್ಚ, ಸಾಮಗ್ರಿ ವೆಚ್ಚಗಳು ಪ್ರತಿವರ್ಷ ಏರಿಕೆಯಾಗುತ್ತಿವೆ. ಏಳು ವರ್ಷಗಳಿಂದ ‘ನಮ್ಮ ಮೆಟ್ರೊ’ ದರ ಪರಿಷ್ಕರಣೆ ಮಾಡಿಲ್ಲ ಎಂದು ಬಿಎಂಆರ್‌ಸಿಎಲ್ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿತ್ತು. ಮೆಟ್ರೊ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆ, 2002ರ ಸೆಕ್ಷನ್ 33 ಮತ್ತು 34ರ ಅಡಿಯಲ್ಲಿ ಕೇಂದ್ರ ಸರ್ಕಾರವು ಮೂವರು ಸದಸ್ಯರನ್ನು ಒಳಗೊಂಡ ದರ ನಿಗದಿ ಸಮಿತಿಯನ್ನು ರಚಿಸಿತ್ತು.

ಬಿಎಂಆರ್‌ಸಿಎಲ್‌ನ ಮೊದಲ ದರ ನಿಗದಿ ಸಮಿತಿ ಇದಾಗಿತ್ತು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಆರ್. ತರಣಿ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಸತೀಂದರ್ ಪಾಲ್ ಸಿಂಗ್, ನಿವೃತ್ತ ಐಎಎಸ್ ಅಧಿಕಾರಿ ಆರ್.ವಿ. ರಮಣ ರೆಡ್ಡಿ ದರ ನಿಗದಿ ಸಮಿತಿಯ ಸದಸ್ಯರಾಗಿದ್ದರು.

ದರ ಪರಿಷ್ಕರಣೆ ಬಗ್ಗೆ ನಾಗರಿಕರು ಸಲಹೆ ನೀಡುವಂತೆ ಸಮಿತಿಯು ಅಕ್ಟೋಬರ್ 4ರಿಂದ 21ರವರೆಗೆ ಅವಕಾಶ ನೀಡಿತ್ತು. ಆನಂತರ ಅ.28ರವರೆಗೆ ಈ ಅವಧಿಯನ್ನು ವಿಸ್ತರಿಸಿತ್ತು. 2000ಕ್ಕೂ ಅಧಿಕ ಸಲಹೆಗಳು ಬಂದಿದ್ದವು. ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ, ತಜ್ಞರೊಂದಿಗೆ ಚರ್ಚೆ ನಡೆಸಿತ್ತು. ಮೂಲ ಸೌಕರ್ಯ ಒದಗಿಸುವ ವೆಚ್ಚ, ಇಂಧನ ವೆಚ್ಚ, ಅಧಿಕಾರಿಗಳು ಮತ್ತು ಸಿಬ್ಬಂದಿಯ ವೇತನದ ವೆಚ್ಚ, ಮೆಟ್ರೊ ನಿರ್ವಹಣೆ ವೆಚ್ಚಗಳನ್ನೆಲ್ಲ ಪರಿಶೀಲಿಸಿತ್ತು. ಈ ಸಮಿತಿಯ ಅವಧಿ ಮುಕ್ತಾಯದ ಕೊನೇ ದಿನವಾದ ಡಿ.16ರಂದು ಬಿಎಂಆರ್‌ಸಿಎಲ್‌ಗೆ ವರದಿ ಸಲ್ಲಿಸಿತ್ತು.

ಕೇಂದ್ರ ರೈಲ್ವೆ ಸಚಿವಾಲಯದ ಕಾರ್ಯದರ್ಶಿ ನೇತೃತ್ವದಲ್ಲಿ ಜ.17ರಂದು ಮಂಡಳಿ ಸಭೆ ನಡೆದಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯದರ್ಶಿಗಳು, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರು, ಅಧಿಕಾರಿಗಳು ಪಾಲ್ಗೊಂಡಿದ್ದ ಸಭೆಯಲ್ಲಿ ದರ ನಿಗದಿ ಸಮಿತಿಯ ಶಿಫಾರಸುಗಳಿಗೆ ಒಪ್ಪಿಗೆ ನೀಡಲಾಗಿತ್ತು.

ಆದರೆ, ದೆಹಲಿಯಲ್ಲಿ ಚುನಾವಣೆ ಮತ್ತು ಇತರ ಹಲವು ಕಾರಣಗಳಿಂದ ಪರಿಷ್ಕೃತ ದರ ಜಾರಿಯಾಗಿರಲಿಲ್ಲ. ಈ ನಡುವೆ ದರ ನಿಗದಿ ಬಗ್ಗೆ ಹೆಚ್ಚಿನ ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರ ಕೇಳಿತ್ತು. ಬಿಎಂಆರ್‌ಸಿಎಲ್ ಮಾಹಿತಿಯನ್ನು ನೀಡಿತ್ತು. ದೆಹಲಿ ಚುನಾವಣೆ ಮುಗಿದು ಫಲಿತಾಂಶ ಹೊರಬಿದ್ದ ಮರುದಿನವೇ ಪರಿಷ್ಕೃತ ದರವನ್ನು ಜಾರಿ ಮಾಡುವ ಆದೇಶವು (ಫೆ.8) ಬಿಎಂಆರ್‌ಸಿಎಲ್‌ನಿಂದ ಹೊರ ಬಿದ್ದಿದ್ದು, ಫೆ.9ರಿಂದಲೇ ಹೊಸ ದರ ಜಾರಿಯಾಗಿದೆ.

ಕನಿಷ್ಠ ದರ ₹10 ಇದ್ದಿದ್ದನ್ನು ಹಾಗೇ ಉಳಿಸಿಕೊಂಡಿರುವ ಬಿಎಂಆರ್‌ಸಿಎಲ್ ಗರಿಷ್ಠ ದರ ₹60 ಇದ್ದಿದ್ದನ್ನು ₹90ಕ್ಕೆ ಏರಿಕೆ ಮಾಡಿದೆ. ಚೆನ್ನೈ, ಮುಂಬೈ, ದೆಹಲಿ, ಹೈದರಾಬಾದ್, ಕೋಲ್ಕತಾ ಮುಂತಾದ ಮಹಾನಗರಗಳಿಗಿಂತ ಶೇ 40ರಿಂದ ಶೇ 60ರಷ್ಟು ಅಧಿಕ ದರವನ್ನು ಬೆಂಗಳೂರಿನ ಮೆಟ್ರೊ ಪ್ರಯಾಣಿಕರು ಪಾವತಿಸಬೇಕಿದೆ.

ಕೋಲ್ಕತ್ತ ಅತಿ ಕಡಿಮೆ

ಅರ್ಧ ಶತಮಾನದ ಇತಿಹಾಸ ಹೊಂದಿರುವ, ಕೋಲ್ಕತ್ತ ಮೆಟ್ರೊ ದರವು ದೇಶದಲ್ಲಿಯೇ ಅತಿ ಕಡಿಮೆ ಇದೆ. ನೀಲಿ, ಹಸಿರು, ನೇರಳೆ, ಕಿತ್ತಳೆ, ಹಳದಿ, ಗುಲಾಬಿ ಮಾರ್ಗಗಳನ್ನು ಹೊಂದಿರುವ ಇಲ್ಲಿ ಕನಿಷ್ಠ ದರವು 2 ಕಿ.ಮೀ. ವರೆಗೆ ₹5 ಮಾತ್ರ ಇದೆ. ಅಲ್ಲಿ 25 ಕಿ.ಮೀ.ಗೆ ₹25 ಇದ್ದರೆ, ಮುಂಬೈಯಲ್ಲಿ ₹50 ಇದೆ. ಬೆಂಗಳೂರಿನ ‘ನಮ್ಮ ಮೆಟ್ರೊ’ದಲ್ಲಿ ₹90 ನೀಡಬೇಕಾಗುತ್ತದೆ. ವಾಣಿಜ್ಯ ನಗರಿ ಮುಂಬೈಯಲ್ಲಿ ಗರಿಷ್ಠ ₹80, ಚೆನ್ನೈಯಲ್ಲಿ ಗರಿಷ್ಠ ₹50, ಹೈದರಾಬಾದ್ ಮತ್ತು ದೆಹಲಿಯಲ್ಲಿ ಗರಿಷ್ಠ ದರ ₹60 ಇದೆ.

ವಿವಿಧ ಮಹಾನಗರಗಳಲ್ಲಿ ಮೆಟ್ರೊ ಪ್ರಯಾಣ ದರ

ದೆಹಲಿ

ಕಿ.ಮೀ.	ದರ
0-2	₹10
2-5	₹20
5-12	₹30
12-21	₹40
21-32	₹50

ಮುಂಬೈ

ಕಿ.ಮೀ.	ದರ
0-3	₹10
3-12	₹20
12-18	₹30
18-24	₹40
24-30	₹50
30-36	₹60
36-42	₹70
42ರ ಮೇಲೆ	₹80

ಹೈದರಾಬಾದ್

ಕಿ.ಮೀ.	ದರ
0-2	₹10
2-5	₹20
5-10	₹30
10-15	₹40

ಕೋಲ್ಕತ್ತ

ಕಿ.ಮೀ.	ದರ
0-2	₹5
2-5	₹10
5-10	₹15
10-20	₹20
20-30	₹25

ಚೆನ್ನೈ

ಕಿ.ಮೀ.	ದರ
0-2	₹10
2-5	₹20
5-8	₹30
8-12	₹40

ಬೆಂಗಳೂರು

ಕಿ.ಮೀ.	ದರ
0-2	₹10
2-4	₹20
4-6	₹30
6-8	₹40
8-10	₹50
10-15	₹60
15-20	₹70
20-25	₹80
25ಕ್ಕಿಂತ ಅಧಿಕ	₹90



ನಮ್ಮ ಮೆಟ್ರೊ

ದರ ಏರಿಕೆಯ ಸುತ್ತಲಿನ ರಾಜಕಾರಣ

ಮೆಟ್ರೊ ಪ್ರಯಾಣ ದರ ಏರಿಕೆಯು ಹಲವು ಗೊಂದಲ ಹಾಗೂ ಪ್ರಶ್ನೆಗಳಿಗೂ ಕಾರಣವಾಗಿದೆ. ಪ್ರಯಾಣ ದರ ಏರಿಕೆಗೆ ಹೊಣೆ ರಾಜ್ಯ ಸರ್ಕಾರವೋ, ಕೇಂದ್ರ ಸರ್ಕಾರವೋ ಎನ್ನುವುದರ ಬಗ್ಗೆಯೂ ಹಲವು ರೀತಿಯ ಚರ್ಚೆಗಳು ನಡೆಯುತ್ತಿವೆ.

ಬಿಎಂಆರ್‌ಸಿಎಲ್ ದರ ಏರಿಕೆಗಾಗಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದ ನಂತರ ಮೂವರು ಸದಸ್ಯರಿದ್ದ ದರ ನಿಗದಿ ಸಮಿತಿ ರಚಿಸಲಾಗಿತ್ತು. ನಂತರ ನಮ್ಮ ಮೆಟ್ರೊ ಪರಿಷ್ಕೃತ ಪ್ರಯಾಣ ದರ ನಿಗದಿಯ ಮಾನದಂಡಗಳ ಬಗ್ಗೆ ಅಧ್ಯಯನ ಮಾಡಲು ಹೆಚ್ಚಿನ ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರವು ಬಿಎಂಆರ್‌ಸಿಎಲ್‌ಗೆ ಸೂಚಿಸಿತ್ತು.

ಈ ನಡುವೆ, ‘ಈಗಾಗಲೇ ಬಸ್ ದರ ಏರಿಕೆ ಮಾಡಲಾಗಿದ್ದು, ಮೆಟ್ರೊ ದರವನ್ನೂ ಏರಿಕೆ ಮಾಡಬಾರದು’ ಎಂದು ಸಂಸದ ಪಿ.ಸಿ.ಮೋಹನ್ ಆಗ್ರಹಿಸಿದ್ದರು. ‘ಈಗಿರುವ ದರವನ್ನೇ ಮುಂದುವರಿಸಬೇಕು ಎಂದು ಕೇಂದ್ರ ರೈಲ್ವೆ ಸಚಿವಾಲಯದ ಮೇಲೆ ಒತ್ತಡ ಹಾಕಿದ್ದೇನೆ’ ಎಂದು ಅವರು ತಿಳಿಸಿದ್ದರು. ಮೆಟ್ರೊ ದರ ಏರಿಕೆಯು ಫೆ.1ರಿಂದಲೇ ಜಾರಿಗೆ ಬರಬೇಕಿತ್ತು. ಆದರೆ, ಕೇಂದ್ರ ಸರ್ಕಾರ ಅದನ್ನು ತಡೆಹಿಡಿದಿದೆ ಎಂದೂ ಹೇಳಿಕೊಂಡಿದ್ದರು.

ಇನ್ನೊಂದೆಡೆ, ದರ ಏರಿಕೆಯ ಮಾತುಗಳು ಕೇಳಿಬರುತ್ತಿರುವಾಗಲೇ ಈ ಬಗ್ಗೆ ಮಾತನಾಡಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ಕೇಂದ್ರ ಸರ್ಕಾರವು ಅದಕ್ಕಾಗಿ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿದೆ; ಅದರಲ್ಲಿ ರಾಜ್ಯ ಸರ್ಕಾರವು ಹಸ್ತಕ್ಷೇಪ ಮಾಡುವುದಿಲ್ಲ’ ಎಂದಿದ್ದರು.

‘ನಮ್ಮ ಮೆಟ್ರೊ ಪ್ರಯಾಣ ದರವನ್ನು ಹೆಚ್ಚಿಸುವ ಬದಲು ಬಿಎಂಆರ್‌ಸಿಎಲ್‌ನಲ್ಲಿ ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡುವ ಮೂಲಕ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು’ ಎಂದು ಆಡಳಿತ ಮಂಡಳಿಗೆ ಬಿಎಂಆರ್‌ಸಿಎಲ್ ನೌಕರರ ಯೂನಿಯನ್ ಪತ್ರ ಬರೆದಿತ್ತು. ಪ್ರಯಾಣ ದರ ಹೆಚ್ಚಿಸದೇ ಆದಾಯ ಹೆಚ್ಚಿಸುವುದು ಹೇಗೆ ಎಂಬ ಬಗ್ಗೆ ಸಲಹೆಗಳನ್ನೂ ನೀಡಿತ್ತು. ಈ ಎಲ್ಲದರ ನಡುವೆಯೇ ದರ ಹೆಚ್ಚಳ ಜಾರಿಯಾಗಿ ಪ್ರಯಾಣಿಕರ ಮೇಲೆ ಭಾರಿ ಹೊರೆ ಬಿದ್ದಿದೆ.

ರಾಮರಸದಲ್ಲಿ ಶರಣ್

ಬಿ.ಎಂ. ಗಿರಿರಾಜ್ ನಿರ್ದೇಶನದ, ಗುರು ದೇಶಪಾಂಡೆ ನಿರ್ಮಾಣ ಮಾಡುತ್ತಿರುವ ‘ರಾಮರಸ’ ಚಿತ್ರದಲ್ಲಿ ‘ಇಂದ್ರ’ನಾಗಿ ನಟ ಶರಣ್ ಕಾಣಿಸಿಕೊಳ್ಳಲಿದ್ದಾರೆ.

ಚಿತ್ರದಲ್ಲಿ ನಾಯಕನಾಗಿ ಕಾರ್ತಿಕ್ ಮಹೇಶ್ ನಟಿಸುತ್ತಿದ್ದು, ‘ಅಧ್ಯಕ್ಷ’ ಖ್ಯಾತಿಯ ಹೆಬಾ ಪಟೇಲ್ ನಾಯಕಿಯಾಗಿದ್ದಾರೆ. ‘ಹಾಸ್ಯನಟನಾಗಿ ನಟನೆಯ ವೃತ್ತಿ ಆರಂಭಿಸಿದ ಶರಣ್ ಹೀರೊ ಆಗಿ ತಮ್ಮದೇ ಆದ ಹಾಸ್ಯತನವನ್ನು ಎಲ್ಲ ಚಿತ್ರಗಳಲ್ಲಿಯೂ ಉಣಬಡಿಸಿದ್ದಾರೆ. ‘ರಾಮರಸ’ ಚಿತ್ರದಲ್ಲಿ ದೇವಾನು ದೇವತೆಗಳ ಅಧಿಪತಿ, ಹೋಮ- ಹವನ ಮತ್ತು ಯಜ್ಞಗಳ ಒಡೆಯ ಇಂದ್ರ ದೇವೇಂದ್ರನಾಗಿ ಕಾಣಿಸಿಕೊಂಡಿದ್ದಾರೆ. ‘ರಾಮರಸ’ ಚಿತ್ರದಲ್ಲಿ ಒಂದು ಬಹುಮುಖ್ಯ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರೆ. ಅವರ ಪಾತ್ರದ ಹೆಚ್ಚಿನ ವಿವರಗಳನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು’ ಎಂದು ಚಿತ್ರತಂಡ ತಿಳಿಸಿದೆ. ಹಾರರ್ ಕಾಮಿಡಿ ಜಾನರ್‌ನ ಈ ಚಿತ್ರದಲ್ಲಿ ಬಾಲಾಜಿ ಮನೋಹರ್ ಅವರೂ ನಟಿಸಿದ್ದಾರೆ.

ಪ್ರೇಮ್ ಜೊತೆ ಸಿನಿಮಾ ಖಚಿತ

‘**ಅಭಿಮಾನಿಗಳು** ಯಾವುದೇ ಊಹಾಪೋಹಗಳಿಗೆ ಕಿವಿಗೊಡಬೇಡಿ. ನಿರ್ದೇಶಕ ಪ್ರೇಮ್ ಜೊತೆಗೆ ಖಂಡಿತವಾಗಿಯೂ ಸಿನಿಮಾ ಮಾಡುತ್ತೇನೆ’ ಎಂದು ನಟ ದರ್ಶನ್ ಹೇಳಿದ್ದಾರೆ.

ದರ್ಶನ್ ಹಲವು ದಿನಗಳ ಬಳಿಕ ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊವೊಂದನ್ನು ಅಪ್‌ಲೋಡ್ ಮಾಡಿದ್ದಾರೆ. ಸಿನಿಮಾಗಳ ಕುರಿತು ಮಾತನಾಡಿರುವ ಅವರು, ‘ಇಷ್ಟು ದಿನ ಕಾದ ನಿರ್ಮಾಪಕರಿಗೆ ಧನ್ಯವಾದಗಳು. ಆ ಕಾರಣಕ್ಕಾಗಿ ಅವರಿಗೆ ಅನ್ಯಾಯ ಮಾಡಬಾರದು. ಸೂರಪ್ಪ ಬಾಬು ಅವರಿಗೆ ನಾನು ಮುಂಗಡ ಹಣ ವಾಪಸ್ ನೀಡಿದ್ದೇನೆ. ಏಕೆಂದರೆ ಅವರು ಸಿನಿಮಾ ಮಾಡಲು ಬಂದಾಗ ಅವರಿಗೆ ಬಹಳ ಕಮಿಟ್‌ಮೆಂಟ್ಸ್ ಇತ್ತು. ಚಿತ್ರರಂಗದ ಸ್ನೇಹಿತರೊಬ್ಬರು ಅವರನ್ನು ಕರೆದುಕೊಂಡು ಬಂದಾಗ ನಾನು ಸಿನಿಮಾ ಮಾಡಲು ಒಪ್ಪಿಕೊಂಡಿದ್ದೆ. ಈಗ ಬಹಳ ಸಮಯ ಕಳೆದು ಹೋಗಿದೆ. ಈ ಸಮಯದಲ್ಲಿ ಅವರ ದುಡ್ಡನ್ನು ನಾನು ಹಿಡಿದಿಟ್ಟುಕೊಂಡರೆ ಅವರಿಗೆ ಇನ್ನೂ ಸಮಸ್ಯೆ ಆಗಲಿದೆ. ಹೀಗಾಗಿ ಕಮಿಟ್‌ಮೆಂಟ್ಸ್ ತೀರಿಸಿಕೊಳ್ಳಿ, ಮುಂದೆ ಒಳ್ಳೆಯ ವಿಷಯಗಳು ಸಿಕ್ಕಿದಾಗ ಸಿನಿಮಾ ಮಾಡೋಣ ಎಂದಿದ್ದೇನೆ. ನಾನು ಪ್ರೇಮ್ ಖಂಡಿತವಾಗಿಯೂ ಸಿನಿಮಾ ಮಾಡುತ್ತೇವೆ. ಇದು ರಕ್ಷಿತಾ ಅವರ ಆಸೆ. ದರ್ಶನ್ ಬೇರೆ ಭಾಷೆಗೆ ಹೋಗುತ್ತಾರೆ ಎನ್ನುವ ಊಹಾಪೋಹವಿದೆ. ಕನ್ನಡದಲ್ಲೇ ಇಷ್ಟೊಂದು ಪ್ರೀತಿ ಅಭಿಮಾನ ಇರುವಾಗ ಸುಮ್ಮನೆ ಎಲ್ಲಿಗೆ ಹೋಗಲಿ. ಸಾಯುವವರೆಗೂ ಇಲ್ಲಿಯೇ ಇರುತ್ತೇನೆ. ಕನ್ನಡ ಸಿನಿಮಾವನ್ನೇ ಮಾಡುತ್ತೇನೆ’ ಎಂದಿದ್ದಾರೆ.

‘ಬೆನ್ನುನೋವಿನ ಕಾರಣದಿಂದ ಅಭಿಮಾನಿಗಳ ಜೊತೆಗೆ ಜನ್ಮದಿನ ಆಚರಿಸಿಕೊಳ್ಳಲು ಆಗುತ್ತಿಲ್ಲ. ತುಂಬಾ ಹೊತ್ತುನಿಂತುಕೊಳ್ಳಲು ಸಾಧ್ಯವಾಗುತ್ತಿಲ್ಲ. ಶಸ್ತ್ರಚಿಕಿತ್ಸೆ ಎನ್ನುವುದು ಕಟ್ಟಿಟ್ಟ ಬುತ್ತಿ. ಅದನ್ನು ಮಾಡಿಸಿಕೊಳ್ಳಲೇ ಬೇಕು’ ಎಂದಿದ್ದಾರೆ.

ದರ್ಶನ್ ನಟನೆಯ, ಪ್ರಕಾಶ್ ವೀರ್ ನಿರ್ದೇಶನದ ಡೆವಿಲ್ ಸಿನಿಮಾದ ಟೀಸರ್ ಫೆ.16ರಂದು ಬಿಡುಗಡೆಯಾಗಲಿದೆ.

ದರ್ಶನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ ಡೊನಾಲ್ಡ್ ಟ್ರಂಪ್ ಅವರ ಸರ್ಕಾರ ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿದ್ದರು ಎನ್ನಲಾದ 100ಕ್ಕೂ ಹೆಚ್ಚು ಭಾರತೀಯರನ್ನು ವಿಶೇಷ ವಿಮಾನದಲ್ಲಿ ಅಮೃತಸರಕ್ಕೆ ತಂದು ಇತ್ತೀಚೆಗೆ ಇಳಿಸಿತ್ತು. ಕೈಗಳಿಗೆ ಕೋಳ ಹಾಕಿರುವವರನ್ನು ಪೊಲೀಸರು ವಿಮಾನದ ಬಳಿಗೆ ಕರೆದೊಯ್ಯುತ್ತಿರುವ ವಿಡಿಯೊಗಳು, ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಇವು ಅಮೆರಿಕದಿಂದ ಭಾರತಕ್ಕೆ ಕಳುಹಿಸಲಾದ ವ್ಯಕ್ತಿಗಳ ಚಿತ್ರಗಳು ಎಂದು ಅವುಗಳನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಟರ್ಕಿಯ ಟಿಆರ್‌ಟಿ ವರ್ಲ್ಡ್, ದೆಹಲಿಯ ಡೈಲಿ ಗಾರ್ಡಿಯನ್ ಸೇರಿದಂತೆ ಹಲವು ಮಾಧ್ಯಮಗಳೂ ಈ ಚಿತ್ರಗಳನ್ನು ಪ್ರಕಟಿಸಿವೆ. ಆದರೆ, ಇದು ಸುಳ್ಳು ಸುದ್ದಿ.

✓ ಟಿಆರ್‌ಟಿ ವರ್ಲ್ಡ್‌ನಲ್ಲಿ ಪ್ರಕಟವಾಗಿರುವ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿರುವ ಚಿತ್ರವು ಗ್ವಾಟೆಮಾಲದ ಜನರಿಗೆ ಸಂಬಂಧಿಸಿದ ಚಿತ್ರ. ಅಸೋಸಿಯೇಟೆಡ್ ಪ್ರೆಸ್ ಈ ಬಗ್ಗೆ ಫೆ.1ರಂದು ಸುದ್ದಿ ಪ್ರಕಟಿಸಿದೆ. ಅದರ ಪ್ರಕಾರ, ಜ,30ರಂದು ಗ್ವಾಟೆಮಾಲದ 80 ಮಂದಿಯನ್ನು ಅಮೆರಿಕದಿಂದ ಮೆಕ್ಸಿಕೊಗೆ ಕಳುಹಿಸುವಾಗ ಅವರ ಮುಖಕ್ಕೆ ಬಟ್ಟೆ ಕಟ್ಟಿ, ಕೈಗಳಿಗೆ ಕೋಳ ತೊಡಿಸಲಾಗಿತ್ತು. ಈ ಬಗ್ಗೆ ಕೀವರ್ಡ್ ಸರ್ಚ್ ಮಾಡಿ ಹುಡುಕಾಟ ನಡೆಸಿದಾಗ, ರಾಯಿಟರ್ಸ್‌ನಲ್ಲಿ ಇಂಥವೇ ಮತ್ತಷ್ಟು ಚಿತ್ರಗಳು ಕಂಡುಬಂದವು. ಭಾರತೀಯರಿಗೂ ಇದೇ ರೀತಿ ಕೈ ಕೋಳ ಹಾಕಿ, ಗಂಟೆಗಟ್ಟಲೇ ಅಲುಗಾಡಲೂ ಬಿಡದೇ ಕೂಡಿಹಾಕಲಾಗಿತ್ತು ಎಂದು ಅಲ್ಲಿಂದ ಬಂದವರೇ ತಮ್ಮ ಅನುಭವ ಹೇಳಿದ್ದಾರೆ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ, ಕೈಕೋಳ ಹಾಕಿಸಿಕೊಂಡು ವಿಮಾನ ನಿಲ್ದಾಣದಲ್ಲಿ ಇರುವವರ ಚಿತ್ರ ಭಾರತೀಯರದ್ದು ಅಲ್ಲ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಮನುಷ್ಯನ ಕರ್ತವ್ಯ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

128

ನಾವಿರುವ ಈ ಭೂಮಿ ಅದ್ಭುತವಾದದ್ದು. ಈ ಭೂಮಿಯನ್ನು ಕುರಿತು ನಮ್ಮ ದೇಶದ ಋಷಿಗಳು ಸಾಕಷ್ಟು ವರ್ಣನೆ ಮಾಡಿದ್ದಾರೆ. ಈ ಭೂಮಿ ಅತ್ಯಂತ ಮಧುರ, ಮಧುಮಯ, ಮನೋಹರ. ಈ ಭೂಮಿಯ ಮೇಲೆ ಎಷ್ಟು ಶಬ್ದಗಳು, ಎಷ್ಟು ರುಚಿಗಳು, ಎಷ್ಟು ಗಂಧಗಳು, ಎಷ್ಟು ರಸಗಳಿವೆ. ಈ ಭೂಮಿತಾಯಿ ತಪಸ್ಸು ಮಾಡುತ್ತದೆ. ಈ ಭೂಮಿತಾಯಿಯ ಸಂಕಲ್ಪ ಏನು ಎಂದರೆ ಸೂರ್ಯ ಬೆಳಗುತ್ತಿರಬೇಕು, ಮೋಡ ಕಟ್ಟುತ್ತಿರಬೇಕು, ಮಳೆ ಬರುತ್ತಿರಬೇಕು, ಹೊಳೆ ಹರಿಯುತ್ತಿರಬೇಕು, ನೀರು ನಮ್ಮ ಹೊಲದಲ್ಲಿ ಸಾಗುತ್ತಿರಬೇಕು; ಸಸ್ಯಗಳು ಬೆಳೆಯುತ್ತಿರಬೇಕು, ಹೂವು ಅರಳುತ್ತಿರಬೇಕು, ಹಣ್ಣು ಮಾಗುತ್ತಿರಬೇಕು. ಇದನ್ನೆಲ್ಲಾ ತಿಂದು ಪಶು ಪಕ್ಷಿ ಪ್ರಾಣಿಗಳು ಸಂತೋಷವಾಗಿರಬೇಕು. ಇದು ಭೂಮಿತಾಯಿಯ ಸಂಕಲ್ಪ. ಇಂತಹ ಭೂಮಿ ಬೇರೆಲ್ಲೂ ಸಿಗೋದಿಲ್ಲ. ಗಗನಯಾತ್ರಿಗಳು, ಜಲಯಾತ್ರಿಗಳು ಎಷ್ಟೇ ಹುಡುಕಾಟ ನಡೆಸಿದರೂ ಇಂತಹ ಮತ್ತೊಂದು ಭೂಮಿ ಸಿಗೋದಿಲ್ಲ.

ಈಗ ನೀವು ಒಂದು ತುಂಡು ಕಬ್ಬನ್ನು ಭೂಮಿಯ ಒಳಕ್ಕೆ ಹಾಕುತ್ತೀರಿ. ಅದಕ್ಕೆ ನಾವು ಹಾಕೋದು ಕಸಕಡ್ಡಿ. ಆದರೆ ಭೂಮಿ ತಾಯಿ ನಮ್ಮ ಬಾಯೊಳಗೆ ರಸ ಹಾಕ್ತಾಳ. ಇದಕ್ಕಿಂತ ದೊಡ್ಡದು ಏನಿದೆ? ನಾವು ಒಂದು ಹಣ್ಣಿನ ಗಿಡ ಹಾಕುತ್ತೇವೆ. ಹಣ್ಣಿನ ಗಿಡಕ್ಕೆ ನಾವು ಹಾಕೋದು ಏನು? ಮನೆಯಲ್ಲಿನ ಎಲ್ಲ ಹೊಲಸು ತೆಗೆದು ಹಾಕುತ್ತೇವೆ. ನಾವು ಭೂಮಿಯ ಉಡಿಯಾಗೆ ಹಾಕಿದ್ದು ಹೊಲಸು ಮಣ್ಣು, ಆಕಿ ನಮ್ಮ ಉಡ್ಯಾಗೆ ಹಾಕಿದ್ದು ಹಲಸಿನ ಹಣ್ಣು. ಒಬ್ಬ ರೈತ ಮೋಟಾರು ಸೈಕಲ್‌ನಲ್ಲಿ ಬೀಜ ತೆಗೆದುಕೊಂಡು ಹೋಗಿ ಹೊಲಕ್ಕೆ ಹಾಕುತ್ತಾನೆ. ಆದರೆ ಭೂಮಿತಾಯಿ ವಾಪಸು ಟ್ರಾಕ್ಟರ್ ತುಂಬಾ ಧಾನ್ಯ ಕೊಡ್ತಾಳ. ಇಂಥಾ ಭೂಮಿ ನಮಗೆ ಬದುಕಲು ಸ್ವರ್ಗ ಆಗದಿದ್ದರೆ ಇನ್ಯಾವುದು ಸ್ವರ್ಗ ಆಗತೈತಿ? ಇದನ್ನು ಸ್ವರ್ಗವಾಗಿಯೇ ಉಳಿಸಬೇಕು. ಅದು ಮನುಷ್ಯನ ಕರ್ತವ್ಯ.

ಇಂಥಾ ಭೂಮಿಗೆ ನಾವು ಜೀವ ಹೊತ್ಕಂಡು ಬಂದೀವಲ್ಲ. ಯಾಕೆ ಬಂದೀವಿ ಅನ್ನೋದು ಪ್ರಶ್ನೆ. ನಾವು ಜನ್ಮತಾಳಿದ ಉದ್ದೇಶ ಏನು, ಏನು ಮಾಡಬೇಕು ಇಲ್ಲಿ? ಏನು ಮಾಡಬಲ್ಲ ಮನುಷ್ಯ. ಹಿಮಾಲಯವನ್ನು ನಿರ್ಮಿಸುವುದು ಮನುಷ್ಯನಿಗೆ ಸಾಧ್ಯವಿದೆಯೇ? ಸಹ್ಯಾದ್ರಿ ಪರ್ವತವನ್ನು ನಿರ್ಮಿಸಬಲ್ಲನೆ? ಗಂಗೆ, ತುಂಗೆ, ವರದೆಯಂತಹ ನದಿಗಳನ್ನು ನಿರ್ಮಿಸಬಲ್ಲನೆ? ಏನು ಮಾಡಲಿಕ್ಕೆ ಮನುಷ್ಯನಿಗೆ ಸಾಧ್ಯವಿದೆ. ಮನೆ ನಿರ್ಮಿಸಬಹುದು, ಆದರೆ ಮಣ್ಣು ನಿರ್ಮಿಸಲು ಸಾಧ್ಯವಿಲ್ಲ. ತಂಪು ಪಾನೀಯ ಮಾಡಬಹುದು, ಆದರೆ ನೀರು ತಯಾರು ಮಾಡಲು ಆಗಲ್ಲ. ಐಸಿಯು ಘಟಕದಲ್ಲಿ ಆಮ್ಲಜನಕ ಸಿದ್ಧಪಡಿಸಿಡಬಹುದು ಆದರೆ ಗಾಳಿ ನಿರ್ಮಿಸಲು ಸಾಧ್ಯವಿಲ್ಲ. ನಿಸರ್ಗ ಎಲ್ಲವನ್ನೂ ಮಾಡಿದೆ. ನಾವು ಹುಟ್ಟಿ ಬರುವುದಕ್ಕೆ ಮೊದಲೇ ನಮ್ಮ ಸಲುವಾಗಿ ನಮ್ಮ ತಾಯಿಯ ಎದೆಯಲ್ಲಿ ಹಾಲಿಟ್ಟು ಕಳಿಸಿದ್ದಾನೆ ದೇವರು. ಇನ್ನೂ ಏನು ಮಾಡಬೇಕು? ನಿಸರ್ಗ ಎಲ್ಲವನ್ನೂ ಮಾಡಿಟ್ಟಿದೆ. ನಮ್ಮ ಸುಖಕ್ಕಾಗಿ, ನಾವು ಸಂತೋಷವಾಗಿ ಬದುಕಲು ಎಲ್ಲವನ್ನೂ ಮಾಡಿಟ್ಟಿರುವಾಗ ಮನುಷ್ಯನ ಕೆಲಸ ಏನು ಇಲ್ಲಿ? ನಿಸರ್ಗ ಸೃಷ್ಟಿಸಿದ ಯಾವುದನ್ನೂ ಕೆಡಿಸದೆ ಇರುವುದೇ ಮನುಷ್ಯನ ನಿಜವಾದ ಕರ್ತವ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಫೆಬ್ರುವರಿ 10, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ತ್ರಯೋದಶಿ ಗಂ. 18-58 ನಕ್ಷತ್ರ: ಪುನರ್ವಸು ಗಂ. 18-01 ಯೋಗ: ಪ್ರೀತಿ ಗಂ. 10-27 ಕರಣ: ಕೌಲವ ಗಂ. 07-09, ಮಕರ ಮಾಸದ 27 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 2.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-58 ಸೂರ್ಯಾಸ್ತ : 06-31
ಮುಸ್ಲಿಂ ದಿನಾಂಕ : 11 ಶಬನ್
ಅದೃಷ್ಟ ಸಂಖ್ಯೆ : 7, 8

ಮೇಷ: ಮನೆಯ ಹಿರಿಯರ ಮಧ್ಯಸ್ತಿಕೆಯಿಂದ ವಿವಾದಗಳು ಬಗೆಹರಿಯಲಿವೆ. ಪುನಃ ಮೊದಲಿನಂತೆ ಸಂಬಂಧ ಗಟ್ಟಿಯಾಗಲಿದೆ. ಲಾಭಕ್ಕಾಗಿ ಇನ್ನೊಬ್ಬರಿಗೆ ಮೋಸ ಮಾಡಬೇಡಿ. ಭಯ-ಭೀತಿಯಿಂದ ಹೊರಬರುವಂತಾಗುವುದು.

ವೃಷಭ: ವೃತ್ತಿ ಪರವಾಗಿ ನಡೆಯುವ ಎಲ್ಲ ವಿಷಯಗಳನ್ನೂ ಗಂಭೀರವಾಗಿಯೇ ಪರಿಗಣಿಸಬೇಕಾದ ಅಗತ್ಯವಿಲ್ಲ. ಪತ್ನಿಯೊಂದಿಗೆ ಅಭಿಪ್ರಾಯ ವಿನಿಮಯಗಳಿಂದ ಮನಸ್ಸಿಗೆ ನೆಮ್ಮದಿ ಮೂಡುವುದು.

ಮಿಥುನ: ಜೀವನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳುವ ಅನಿವಾರ್ಯತೆ ಕಂಡುಬರಲಿದೆ. ತಂದೆ-ತಾಯಿಯ ಆಶೀರ್ವಾದದೊಂದಿಗೆ ಈ ದಿನವನ್ನು ಪ್ರಾರಂಭಿಸಿ. ವಿದೇಶ ಪ್ರಯಾಣದ ಸಿದ್ಧತೆ ನಡೆಯಲಿದೆ.

ಕರ್ಕಾಟಕ: ಸಹೋದ್ಯೋಗಿಯೊಬ್ಬರ ಸಲಹೆ ಸೂಕ್ತ ಎನಿಸಿ ಅದರಂತೆ ನಡೆದು ವ್ಯವಹಾರದಲ್ಲಿ ಲಾಭ ಹೊಂದುವಿರಿ. ಕಾನೂನು ವಿದ್ಯಾರ್ಥಿಗಳಿಗೆ ಯಶಸ್ಸು ಲಭಿಸಲಿದೆ. ಆರೋಗ್ಯ ಕಾಳಜಿ ಮಾಡಿ.

ಸಿಂಹ: ಪಾಲುದಾರಿಕೆ ಅನಿವಾರ್ಯವಾಗಿ ಮುಂದುವರಿಸುವಂತಾಗಲಿದೆ. ಹಳೆಯ ವಾಹನ ಮಾರಾಟದ ವಿಷಯವನ್ನು ಕೈಬಿಡುವುದು ಉತ್ತಮ. ಕಂದಾಯ ಇಲಾಖೆಯ ನೌಕರರಿಗೆ ಹಣದ ಮುಗ್ಗಟ್ಟು ತೀವ್ರವಾಗುವುದು.

ಕನ್ಯಾ: ಖಾಸಗಿ ಉದ್ಯೋಗಿಗಳು ಆದಾಯ ಏರಿಕೆಯ ವಿಚಾರವನ್ನು ಮೇಲಧಿಕಾರಿಗಳಲ್ಲಿ ಪ್ರಸ್ತಾಪಿಸಬಹುದು. ಕಾಫಿ ಬೆಳೆಗಾರರಿಗೆ ಉತ್ತಮ ಆದಾಯವಿದ್ದು ವರಮಾನದಲ್ಲಿ ಕೊರತೆ ಕಾಣದು. ಸಂತಾನದ ಸುದ್ದಿ ಕೇಳಿ ಸಂತಸ ಪಡುವಿರಿ.

ತುಲಾ: ಅಗಾಧ ಜ್ಞಾನ ಶಕ್ತಿ ಹೊರ ಹೊಮ್ಮಿ ಬರಲು ಸೂಕ್ತ ಕಾಲವಿದು. ಅದನ್ನು ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ. ಇತ್ತೀಚಿನ ಲೇಖನಗಳಿಗೆ ಓದುಗರಿಂದ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ.

ವೃಶ್ಚಿಕ: ಕೋರ್ಟು ವ್ಯವಹಾರದಲ್ಲಿ ಬಹುನಿರೀಕ್ಷಿತ ಜಯದ ಸಿಹಿಯನ್ನು ಅನಿರೀಕ್ಷಿತವಾದ ಸೋಲಿನ ಕಹಿ ಕಸಿಯುವ ಸಾಧ್ಯತೆಗಳಿವೆ. ಜೀವನಕ್ರಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದ ಅನಿವಾರ್ಯತೆ ನಿಮಗಿದೆ.

ಧನು: ಅದೃಷ್ಟದ ಕಾಲವಾದ ಕಾರಣ ಬಂದ ಅವಕಾಶಗಳನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡಲ್ಲಿ ವ್ಯಾಪಾರ ವ್ಯವಹಾರದಲ್ಲಿ ಅಧಿಕ ಲಾಭ. ಹೆಂಡತಿಯ ಆರೋಗ್ಯದಲ್ಲಿ ವ್ಯತ್ಯಾಸಗಳಾಗಬಹುದು.

ಮಕರ: ತಾಂತ್ರಿಕ ಕ್ಷೇತ್ರದಲ್ಲಿ ಜೀವನ ನಡೆಸುವವರು ಉದ್ಯೋಗದಲ್ಲಿ ದಂಡ ಕಟ್ಟುವ ಸ್ಥಿತಿ ಈ ದಿನ ಎದುರಾಗಬಹುದು ಜಾಗ್ರತೆಯಿಂದ ಕೆಲಸ ಮಾಡಿ. ಉತ್ತಮವಾಗಿ ಲೆಕ್ಕ ಪತ್ರಗಳ ಪರಿಶೀಲನೆ ನಡೆಸುವಿರಿ.

ಕುಂಭ: ಸಂಸಾರ, ಮಕ್ಕಳ ಭವಿಷ್ಯದ ವಿಚಾರಗಳಲ್ಲಿ ಕಾಡುತ್ತಿದ್ದ ತಲೆನೋವು ಶಮನಹೊಂದುವುದು. ವಿಪರೀತ ಕೆಲಸಗಳಿಂದ ದೇಹಾಲಸ್ಯ ತೋರಿ ಈ ದಿನ ವಿಶ್ರಾಂತಿ ಬಯಸುವಿರಿ.

ಮೀನ: ಮದುವೆಯ ವಿಷಯಕ್ಕೆ ಸಂಬಂಧ ಪಟ್ಟಂತೆ ತಾಯಿಯ ಮತ್ತು ಅಣ್ಣಂದಿರ ಮನಸೆಳೆಯುವಲ್ಲಿ ಯಶಸ್ವಿಯಾಗುವಿರಿ. ಉತ್ತಮ ವರಮಾನದಿಂದ ಖುಷಿಯಾಗಿರುವಿರಿ.

ಪದಬಂಧ 5949

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ನೆನಪಿನಲ್ಲಿ ಉಳಿಯದಿರುವುದು (3)
4. ಒಳ್ಳೆಯ ಅಥವಾ ಕೆಟ್ಟ ನಾತ (3)
5. ಅಂಗಣಕ್ಕೇರಿದಾಗ ಕಾಣಿಸಿದ ಮಂಗಳಗ್ರಹ (4)
6. ಇದು ಮಾತಿಗೆ ನಿಲುಕದ್ದು (4)
7. ನಗರದಲ್ಲಿರುವ ಮನುಷ್ಯ (2)
9. ಕವಿಪುಂಗವರು ಹೊಕ್ಕಿರುವ ಗುಹೆ (2)
13. ಹೊಸಯುಗ ಈ ತರ ಬಂದಿದೆ (4)
14. ಅವಶ್ಯವಿಲ್ಲದ ಖರ್ಚು (4)
15. ಕಪಟವನ್ನು ಹೀಗೂ ಹೇಳಿ (3)
16. ಧರ್ಮಾಧಿಕಾರಿಯನ್ನು ಹೀಗೂ ಕರೆಯುತ್ತಾರೆ (3)

ಮೇಲಿಂದ ಕೆಳಕ್ಕೆ
1. ಜರಿಯಲ್ಲಿಟ್ಟ ರತ್ನ ಖಚಿತವಾದ ಒಡವೆ (4)
2. ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಳ್ಳುವುದು (5)
3. ಕತ್ತು ಕೊನೆಗಿಟ್ಟಾಗಿನ ಅಭಿವೃದ್ಧಿ! (4)
5. ಒಳಮನಸ್ಸು ಇದು (4)
8. ದ್ರವದಿಂದ ತುಂಬಿರುವುದು (4)
10. ಈತ ವಿವೇಕಶಾಲಿ (5)
11. ನಡುವೆ ರಂಪವಿದ್ದಾಗ ಪೀಳಿಗೆ ಕಾಣುತ್ತಿದೆಯೇ? (4)
12. ಸಮರ್ಪಕವಲ್ಲದ ಕಾರಣ (4)



5948ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುಕ್ತಕ 5.ಶ್ರೀನಿವಾಸ 6.ಋಗ 9.ಅಂಬಿಕಾತನಯದತ್ತ 12.ಗದುಗಿನನಾರಣಪ್ಪ 15.ಲೆನೆ 17.ವಿನಾಯಕ 20.ಮೈಸೂರು

ಮೇಲಿಂದ ಕೆಳಕ್ಕೆ:
1.ಮುದ್ದಣ 2.ಕವಿ 3.ಧ್ವನಿ 4.ಸಂಸ 5.ಶ್ರೀಮಂತ 7.ಗಅಂ 8.ಹುತ್ತ 10.ಕಾನನ 11.ನಗರ 12.ಗಡಿ 13.ನಾವಿಕ 14.ಪ್ಪಲೆ 16.ನೆಹರು 17.ವಿಧ 18.ಯಿತ 19.ಲಿಮ್ಮೆ

ಸುಡೊಕು 6334

3				8		9		1
							6	
	4		9			3		8
6								9
	5		7		9		8	
8						6		
9			2			7		6
	6			9	7		3	
		7				4		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6333 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಸುಂಕ ಕಡಿತದಿಂದ ಪ್ರಕರಣ ಇಳಿಕೆ: ಸಿಬಿಐಸಿ

ತಗ್ಗಿದ ಚಿನ್ನ ಕಳ್ಳಸಾಗಣೆ

ನವದೆಹಲಿ (ಪಿಟಿಐ): 'ಕಳೆದ ವರ್ಷದ ಜುಲೈನಿಂದ ದೇಶದಲ್ಲಿ ಚಿನ್ನ ಕಳ್ಳಸಾಗಣೆ ಪ್ರಕರಣಗಳು ತಗ್ಗಿವೆ' ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿಯ (ಸಿಬಿಐಸಿ) ಮುಖ್ಯಸ್ಥ ಸಂಜಯ್ ಕುಮಾರ್ ಅಗರ್ವಾಲ್ ತಿಳಿಸಿದ್ದಾರೆ.

ಕಳೆದ ವರ್ಷದ ಕೇಂದ್ರ ಬಜೆಟ್‌ನಲ್ಲಿ ಚಿನ್ನದ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಶೇ 15ರಿಂದ ಶೇ 6ಕ್ಕೆ ಇಳಿಸಲಾಗಿತ್ತು. ಸರ್ಕಾರದ ಈ ಕ್ರಮವು ಚಿನ್ನ ಕಳ್ಳಸಾಗಣೆ ಪ್ರಕರಣಗಳು ಕಡಿಮೆಯಾಗಲು ಕಾರಣವಾಗಿದೆ ಎಂದು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

ಒಟ್ಟಾರೆ ಎಷ್ಟು ಪ್ರಮಾಣದ ಚಿನ್ನ ವಶಪಡಿಸಿಕೊಳ್ಳಲಾಗಿದೆ ಎಂಬ ಬಗ್ಗೆ ಅವರು ಅಧಿಕೃತವಾಗಿ ಮಾಹಿತಿ ನೀಡಿಲ್ಲ.

'ಆದರೆ, ಹಳದಿ ಲೋಹದ ಕಳ್ಳಸಾಗಣೆ ತಡೆಗೆ ಹದ್ದಿನಕಣ್ಣು ನೆಡಲಾಗಿದೆ. ವಿದೇಶಗಳಿಂದ ಬರುವ ಪ್ರಯಾಣಿಕರು, ಗಡಿ ಭಾಗಗಳು ಹಾಗೂ ದೇಶಕ್ಕೆ ಬರುವ ಸರಕು ಸಾಗಣೆ ಹಡಗುಗಳು ಮತ್ತು ವಿಮಾನಗಳ ಮೇಲೆ ನಿಗಾ ಇಡಲಾಗಿದೆ' ಎಂದು ಹೇಳಿದ್ದಾರೆ.

ಸರ್ಕಾರದ ಅಂಕಿಅಂಶಗಳ ಪ್ರಕಾರ, ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜೂನ್‌ವರೆಗೆ ಕಸ್ಟಮ್ಸ್ ಮತ್ತು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ₹544 ಕೋಟಿ ಮೌಲ್ಯದ 847 ಕೆ.ಜಿ ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ.

1,087 ಟನ್ ಮಾದಕ ವಸ್ತು ವಶ

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ ವರ್ಷ ₹16,966 ಕೋಟಿ ಮೌಲ್ಯದ 1,087 ಟನ್ ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟು 72,496 ಪ್ರಕರಣ ದಾಖಲಿಸಲಾಗಿದೆ ಎಂದು ಕೇಂದ್ರ ಸರ್ಕಾರದ ಅಂಕಿಅಂಶ ತಿಳಿಸಿವೆ.

2023ರಲ್ಲಿ ಒಟ್ಟು ₹16,123 ಕೋಟಿ ಮೌಲ್ಯದ ₹1,389 ಟನ್ ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳನ್ನು ವಶಕ್ಕೆ ಪಡೆಯಲಾಗಿದೆ. ಒಟ್ಟು 1.09 ಲಕ್ಷ ಪ್ರಕರಣ ದಾಖಲಾಗಿದ್ದವು. ಇದಕ್ಕೆ ಹೋಲಿಸಿದರೆ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳುವಿಕೆಯಲ್ಲಿ ಶೇ 22ರಷ್ಟು ಇಳಿಕೆಯಾಗಿದೆ ಎಂದು ಹೇಳಿವೆ.

'ದೇಶದ ಅಂತರರಾಷ್ಟ್ರೀಯ ಗಡಿ ಪ್ರದೇಶಗಳಲ್ಲಿ ಮಾದಕ ವಸ್ತುಗಳ ಕಳ್ಳಸಾಗಣೆ ತಡೆಗೆ ಅಗತ್ಯ ಕ್ರಮವಹಿಸಲಾಗಿದೆ' ಎಂದು ಸಿಬಿಐಸಿ ಮುಖ್ಯಸ್ಥ ಸಂಜಯ್ ಕುಮಾರ್ ಅಗರ್ವಾಲ್ ತಿಳಿಸಿದ್ದಾರೆ.

ಇ–ರಿಕ್ಷಾ ಬಿಡುಗಡೆಗೆ ಬಜಾಜ್ ಸಿದ್ಧತೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದೊಳಗೆ ಇ–ರಿಕ್ಷಾಗಳನ್ನು ಮಾರುಕಟ್ಟೆಗೆ ಪರಿಚಯಿಸಲು ಬಜಾಜ್ ಆಟೊ ಕಂಪನಿಯು ಸಜ್ಜಾಗುತ್ತಿದೆ.

ಮಾರ್ಚ್ ತ್ರೈಮಾಸಿಕದ ಅಂತ್ಯದೊಳಗೆ ಇದಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮತಿ ಪಡೆಯಲು ನಿರ್ಧರಿಸಲಾಗಿದೆ. ತಿಂಗಳಿಗೆ 45 ಸಾವಿರ ಇ–ರಿಕ್ಷಾಗಳನ್ನು ತಯಾರಿಸುವ ಗುರಿ ಹೊಂದಲಾಗಿದೆ ಎಂದು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ರಾಕೇಶ್ ಶರ್ಮಾ ತಿಳಿಸಿದ್ದಾರೆ.

ದೇಶದಲ್ಲಿ ಇ–ರಿಕ್ಷಾ ವಲಯವು ವೇಗವಾಗಿ ಬೆಳೆಯುತ್ತಿದ್ದು, ದೊಡ್ಡ ಅವಕಾಶವೂ ಇದೆ. ಆದರೆ, ಇದು ಅಸಂಘಟಿತ ಮಾರುಕಟ್ಟೆಯಾಗಿದೆ ಎಂದು ಹೇಳಿದ್ದಾರೆ.

ಮಾರ್ಚ್ ಅಂತ್ಯಕ್ಕೆ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಆಧುನಿಕ ಸೌಲಭ್ಯ ಹೊಂದಿರುವ ರಿಕ್ಷಾಗಳು ಖರೀದಿಗೆ ಲಭ್ಯ ಇರಲಿವೆ. ಮಾಲೀಕರು ಮತ್ತು ಪ್ರಯಾಣಿಕರಿಗೆ ತೃಪ್ತಿಕರವಾದ ಸೇವೆ ಒದಗಿಸುವಂತಹ ರಿಕ್ಷಾಗಳನ್ನು ತಯಾರಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹460-669
ದ್ವಿತಳಿ (ಬಿ.ವಿ)
₹222-811

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು

100ಕ್ಕೆ	₹495
12 ಕ್ಕೆ	₹66

ಮೈಸೂರು

100ಕ್ಕೆ	₹497

ರೆಪೊ ದರ ಕಡಿತದ ಲಾಭ ಎಷ್ಟು?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಶೇ 0.25ರಷ್ಟು ಕಡಿತಗೊಳಿಸಿದೆ. ಆ ಮೂಲಕ ಗೃಹ ಸಾಲ ಪಡೆದವರಿಗೆ ದೊಡ್ಡ ಪರಿಹಾರ ನೀಡಿದೆ. ಐದು ವರ್ಷದ ಬಳಿಕ ರೆಪೊ ದರ ಇಳಿಕೆ ಮಾಡಿರುವುದು ಗ್ರಾಹಕರಿಗೆ ಖುಷಿ ಕೊಟ್ಟಿದೆ.

ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯು ಕೈಗೊಂಡಿರುವ ಈ ಕ್ರಮದ ಬೆನ್ನಲ್ಲೇ ಚಾಲ್ತಿ ಬಡ್ಡಿದರದಲ್ಲಿ ಪಡೆದಿರುವ (ಫ್ಲೋಟಿಂಗ್ ರೇಟ್) ಗೃಹ ಸಾಲದ ಮೇಲಿನ ಬಡ್ಡಿಯನ್ನು ಬ್ಯಾಂಕ್‌ಗಳು ಇಳಿಕೆ ಮಾಡುತ್ತವೆ ಎಂಬ ನಿರೀಕ್ಷೆಯಲ್ಲಿ ಸಾಲ ಪಡೆದವರಿದ್ದಾರೆ. ಬನ್ನಿ, ಬಡ್ಡಿದರ ಇಳಿಕೆಯಿಂದ ಸಾಲ ಪಡೆದ ಗ್ರಾಹಕರಿಗೆ ಹೇಗೆ ಅನುಕೂಲವಾಗುತ್ತದೆ ಎಂಬ ಬಗ್ಗೆ ತಿಳಿಯೋಣ.

ರೆಪೊ ದರ ಎಂದರೇನು: ಬ್ಯಾಂಕ್‌ಗಳು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದುಕೊಳ್ಳುವ ಸಾಲಕ್ಕೆ ನಿಗದಿ ಮಾಡುವ ಬಡ್ಡಿದರವೇ ರೆಪೊ ದರ. ಸದ್ಯ ಶೇ 6.50ರಿಂದ ಶೇ 6.25ಕ್ಕೆ ಇಳಿಸಲಾಗಿದೆ. ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಇದನ್ನು ಏರಿಕೆ ಮಾಡುವ ಅಥವಾ ಇಳಿಕೆ ಮಾಡುವ ನಿರ್ಧಾರವನ್ನು ಆರ್‌ಬಿಐ ಕೈಗೊಳ್ಳುತ್ತದೆ. ಈ ಬಡ್ಡಿದರ ಕಡಿತವಾದರೆ ಗೃಹ, ವಾಹನ ಹಾಗೂ ಉದ್ಯಮ ಸಾಲದ ಬಡ್ಡಿದರ ಇಳಿಕೆಯಾಗುತ್ತದೆ.

ಆರ್‌ಬಿಐನ ರೆಪೊ ದರವನ್ನು ಮೂಲವಾಗಿಟ್ಟು ಕೊಂಡು ಬ್ಯಾಂಕ್‌ಗಳು ಗ್ರಾಹಕರಿಗೆ ನೀಡುವ ಸಾಲಗಳ ಮೇಲೆ ಬಡ್ಡಿದರ ನಿಗದಿ ಮಾಡುವುದಕ್ಕೆ ರೆಪೊ ಆಧರಿತ ಸಾಲ ಎಂದು ಕರೆಯಲಾಗುತ್ತದೆ. ಈಗಾಗಲೇ, ಸಾಲ ಪಡೆದಿರುವವರು ಬ್ಯಾಂಕ್ ಜತೆ ಮಾತುಕತೆ ನಡೆಸಿ ರೆಪೊ ಆಧರಿತ ಸಾಲಕ್ಕೆ ಬಾಕಿ ಮೊತ್ತವನ್ನು ವರ್ಗಾಯಿಸಿಕೊಳ್ಳಲು ಸಾಧ್ಯವಿದೆ. ಆದರೆ, ಅದಕ್ಕೆ ಒಂದಿಷ್ಟು ಶುಲ್ಕ ಕಟ್ಟಬೇಕಾಗುತ್ತದೆ.

ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧರಿತ ಸಾಲ (ಎಂಸಿಎಲ್‌ಆರ್) ಪಡೆದಿರುವವರು ಕೂಡ ರೆಪೊ ಆಧರಿತ ಸಾಲಕ್ಕೆ ಬಾಕಿ ಮೊತ್ತವನ್ನು ವರ್ಗಾಯಿಸಿಕೊಳ್ಳಬಹುದಾಗಿದೆ.

ಲಾಭ ಪಡೆಯುವುದು ಹೇಗೆ: ರೆಪೊ ಆಧರಿತ ಬಡ್ಡಿದರದಲ್ಲಿ ಸಾಲ ಪಡೆದಿರುವವರಿಗೆ ಆರ್‌ಬಿಐ ಕ್ರಮದಿಂದ ಅನುಕೂಲ ಸಿಗಲಿದೆ. ಆದರೆ, ಯಾವಾನಿಗಿಂದ ಬಡ್ಡಿದರ ಇಳಿಕೆಯಾಗಲಿದೆ ಎನ್ನುವುದನ್ನು ಆಯಾ ಬ್ಯಾಂಕ್‌ಗಳು ಆರ್‌ಬಿಐನ ನಿಯಮಾನುಸಾರ ತೀರ್ಮಾನ ಮಾಡಲಿವೆ.

ಬಡ್ಡಿದರದಲ್ಲಿ ಶೇ 0.25ರಷ್ಟು ಕಡಿತ ಅಂದರೆ ಸಾಲ ಪಡೆದವರಿಗೆ ಎರಡು ಆಯ್ಕೆಗಳಿರುತ್ತವೆ. ಒಂದನೆಯದ್ದು ಬಡ್ಡಿದರ ಇಳಿಕೆಗೆ ಅನುಗುಣವಾಗಿ ಸಾಲದ ಮಾಸಿಕ ಕಂತನ್ನು (ಇಎಂಐ) ಕಡಿಮೆ ಮಾಡಿಕೊಳ್ಳುವುದು; ಎರಡನೆಯದ್ದು ಇಎಂಐ ಮೊತ್ತ ತಗ್ಗಿಸದೆ ಸಾಲದ ಅವಧಿಯನ್ನು ತಗ್ಗಿಸಿಕೊಳ್ಳುವುದು.

ಆದರೆ, ನಿಮಗೆ ಗೊತ್ತಿರಲಿ. ಇಎಂಐ ಮೊತ್ತ ಕಡಿಮೆ ಮಾಡಿಕೊಳ್ಳುವುದಕ್ಕಿಂತ ಯಥಾಪ್ರಕಾರ ಅದನ್ನು ಮುಂದುವರಿಸಿದರೆ ಸಾಲದ ಅವಧಿ ಇಳಿಕೆಯಾಗಿ ಬೇಗ ಸಾಲ ತೀರಿಸಲು ಸಾಧ್ಯವಾಗುತ್ತದೆ.

ಇಎಂಐ ಎಷ್ಟು ಕಡಿಮೆಯಾಗುತ್ತದೆ?: ಉದಾಹರಣೆಗೆ 20 ವರ್ಷದ ಅವಧಿಗೆ ಶೇ 9ರ ಬಡ್ಡಿದರದಲ್ಲಿ ₹30 ಲಕ್ಷ ಸಾಲ ಪಡೆದಿದ್ದು ಈಗ ಬಡ್ಡಿದರ ಶೇ 8.75ಕ್ಕೆ ಇಳಿಕೆಯಾದರೆ, ನಿಮ್ಮ ಮಾಸಿಕ ಸಾಲದ ಕಂತು (ಇಎಂಐ) ₹26,992ರಿಂದ ₹26,551ಕ್ಕೆ ಇಳಿಕೆಯಾಗುತ್ತದೆ.

30 ವರ್ಷದ ಅವಧಿಗೆ ಶೇ 8.75ರ ಬಡ್ಡಿದರದಲ್ಲಿ ₹50 ಲಕ್ಷ ಸಾಲ ಪಡೆದಿದ್ದು ಈಗ ಬಡ್ಡಿದರವು ಶೇ 8.50ಕ್ಕೆ ಇಳಿಕೆಯಾದರೆ, ಸಾಲದ ಮಾಸಿಕ ಕಂತು ₹39,335ರಿಂದ ₹38,446ಕ್ಕೆ ಇಳಿಕೆಯಾಗುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಗಳಿಕೆ ಕಂಡ ಷೇರುಪೇಟೆ

ಜಾಗತಿಕ ಅನಿಶ್ಚಿತತೆ ನಡುವೆಯೂ ಫೆಬ್ರುವರಿ 7ಕ್ಕೆ ಕೊನೆಗೊಂಡ ವಾರದಲ್ಲಿ ಷೇರು ಸೂಚ್ಯಂಕಗಳು ಅಲ್ಪ ಗಳಿಕೆ ದಾಖಲಿಸಿವೆ. 77,860 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.46ರಷ್ಟು ಗಳಿಸಿಕೊಂಡಿದೆ. 23,559 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 0.22ರಷ್ಟು ಜಿಗಿದಿದೆ.

ಬಜೆಟ್ ಘೋಷಣೆ, ರೆಪೊ ದರ ಕಡಿತ, ಕಂಪನಿಗಳ ತ್ರೈಮಾಸಿಕ ಫಲಿತಾಂಶದಲ್ಲಿ ಮಂದಗತಿಯ ಬೆಳವಣಿಗೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಎನರ್ಜಿ ಶೇ 3.18, ಎಫ್‌ಎಂಸಿಜಿ ಶೇ 2.78, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.91, ಅನಿಲ ಮತ್ತು ತೈಲ ಶೇ 0.84, ಮತ್ತು ರಿಯಲ್ ಎಸ್ಟೇಟ್ ಶೇ 0.4ರಷ್ಟು ಕುಸಿದಿವೆ. ಫಾರ್ಮಾ ಶೇ 2.98, ಮಾಧ್ಯಮ ಶೇ 2.63, ಆಟೊ ಶೇ 2.59, ಲೋಹ ಶೇ 2.22, ಫೈನಾನ್ಸ್ ಶೇ 1.37, ಬ್ಯಾಂಕ್ ಶೇ 1.15 ಮತ್ತು ಮಾಹಿತಿ ತಂತ್ರಜ್ಞಾನ ಶೇ 0.61ರಷ್ಟು ಗಳಿಸಿಕೊಂಡಿವೆ.

ಇಳಿಕೆ–ಏರಿಕೆ: ನಿಫ್ಟಿಯಲ್ಲಿ ಪವರ್ ಗ್ರಿಡ್ ಶೇ 7.8, ಎಲ್ ಆ್ಯಂಡ್ ಟಿ ಶೇ 6.44, ಭಾರತ್ ಎಲೆಕ್ಟ್ರಾನಿಕ್ಸ್ ಶೇ 5.45, ಟ್ರೆಂಟ್ ಶೇ 5.18, ಒಎನ್‌ಜಿಸಿ ಶೇ 5.14, ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 4.93, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ 4.66, ಕೋಲ್ ಇಂಡಿಯಾ ಶೇ 4.43, ಎಚ್‌ಸಿಎಲ್ ಶೇ 4.36, ನೆಸ್ಲೆ ಇಂಡಿಯಾ ಶೇ 3.79, ಐಟಿಸಿ ಶೇ 3.72, ಎನ್‌ಟಿಪಿಸಿ ಶೇ 2.28ರಷ್ಟು ಕುಸಿದಿವೆ.

ಇಂಡಸ್ ಇಂಡ್ ಬ್ಯಾಂಕ್ ಶೇ 8.6, ಬಜಾಜ್ ಫೈನಾನ್ಸ್ ಶೇ 7.42, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 6.89, ಮಾರುತಿ ಸುಜುಕಿ ಶೇ 6, ಐಟಿಸಿ ಹೋಟೆಲ್ಸ್ ಶೇ 5.62, ಅದಾನಿ ಪೋರ್ಟ್ಸ್ ಶೇ 4.32, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 3.89, ಬಜಾಜ್ ಫೈನಾನ್ಸ್ ಶೇ 3.56, ಐಷರ್ ಮೋಟರ್ಸ್ ಶೇ 3.39, ಎಕ್ಸಿಸ್ ಬ್ಯಾಂಕ್ ಶೇ 3.35, ಏರ್‌ಟೆಲ್ ಶೇ 3.06 ಮತ್ತು ಶ್ರೀರಾಮ್ ಫೈನಾನ್ಸ್ ಶೇ 2.85ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಕಂಪನಿಗಳ ತ್ರೈಮಾಸಿಕ ಫಲಿತಾಂಶವು ಮಾರುಕಟ್ಟೆಯ ನಿರೀಕ್ಷೆಯಂತೆ ಸಾಧಾರಣವಾಗಿದೆ. ಆರ್‌ಬಿಐ ರೆಪೊ ದರ ಇಳಿಕೆ ಮಾಡಿರುವುದು ಮತ್ತು ಸರ್ಕಾರವು ಆದಾಯ ತೆರಿಗೆ ಹೊರೆ ತಗ್ಗಿಸಿರುವುದರಿಂದ ಆರ್ಥಿಕ ಚೇತರಿಕೆ ಆಗಬಹುದೇ ಎನ್ನುವ ಲೆಕ್ಕಾಚಾರದಲ್ಲಿ ಹೂಡಿಕೆದಾರರು ಇದ್ದಾರೆ.

ಟ್ರಂಪ್ ಅವರ ವ್ಯಾಪಾರ ನೀತಿ ಕುರಿತಂತೆ ಇರುವ ಅನಿಶ್ಚಿತತೆಯು ಹೂಡಿಕೆದಾರರು ಎಚ್ಚರಿಕೆಯಿಂದ ಹೆಜ್ಜೆ ಇಡುವಂತೆ ಮಾಡಿದೆ. ಉಳಿದಂತೆ ಸದ್ಯದಲ್ಲೇ ಹೊರಬೀಳಲಿರುವ ಕೈಗಾರಿಕೆ ಉತ್ಪಾದನೆ ದತ್ತಾಂಶ ಮತ್ತು ಹಣದುಬ್ಬರ ಅಂಕಿಅಂಶಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಬೈಜುಸ್‌ನಿಂದ ₹158 ಕೋಟಿ ಬಾಕಿ ಪ್ರಕರಣ

'ಬಿಸಿಸಿಐ ಅರ್ಜಿ: ವಾರದೊಳಗೆ ನಿರ್ಧರಿಸಿ'



ನವದೆಹಲಿ (ಪಿಟಿಐ): ಹಣಕಾಸಿನ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಸಲ್ಲಿಸಿರುವ ಅರ್ಜಿಯ ಬಗ್ಗೆ ಒಂದು ವಾರದೊಳಗೆ ನಿರ್ಧರಿಸುವಂತೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಗೆ (ಎನ್‌ಸಿಎಲ್‌ಟಿ), ಚೆನ್ನೈನ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು (ಎನ್‌ಸಿಎಲ್‌ಎಟಿ) ಸೂಚಿಸಿದೆ.

ಭಾರತದ ಕ್ರಿಕೆಟ್ ತಂಡದ ಪ್ರಾಯೋಜಕತ್ವ ಸಂಬಂಧ ಬೈಜುಸ್ ಕಂಪನಿಯು ₹158 ಕೋಟಿಯನ್ನು ಬಿಸಿಸಿಐಗೆ ಪಾವತಿಸದೆ ಬಾಕಿ ಉಳಿಸಿಕೊಂಡಿದೆ. ಬಾಕಿ ಮೊತ್ತ ಪಾವತಿಸುವ ಬಗ್ಗೆ ಬೈಜುಸ್ ಒಪ್ಪಿಗೆ ನೀಡಿರುವುದರಿಂದ, ಕಾರ್ಪೊರೇಟ್ ದಿವಾಳಿ ಗೊತ್ತುವಳಿ ಪ್ರಕ್ರಿಯೆಯನ್ನು (ಸಿಐಆರ್‌ಪಿ) ಹಿಂಪಡೆಯಲು ಬಿಸಿಸಿಐ ಮುಂದಾಗಿದೆ.

ಬೈಜುಸ್‌ಗೆ ಅಮೆರಿಕ ಮೂಲದ ಗ್ಲಾಸ್ ಟ್ರಸ್ಟ್ ಕಂಪನಿ ಮತ್ತು ಆದಿತ್ಯ ಬಿರ್ಲಾ ಫೈನಾನ್ಸ್ ಕೂಡ ಸಾಲ ನೀಡಿವೆ. ಆದರೆ, ದಿವಾಳಿ ಪರಿಹಾರ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡಲು ರಚಿಸಲಾದ ಸಾಲದ ಸಮಿತಿಯಿಂದ ಈ ಎರಡು ಕಂಪನಿಗಳನ್ನು ಹೊರಗಿಡಲಾಗಿತ್ತು.

ಬೈಜುಸ್‌ನ ಪರಿಹಾರ ಅಧಿಕಾರಿಯಾಗಿದ್ದ ಪಂಕಜ್ ಶ್ರೀವಾಸ್ತವ ಅವರು ಈ ನಿರ್ಧಾರ ಕೈಗೊಂಡಿದ್ದರು. ಇದಕ್ಕೆ ಎನ್‌ಸಿಎಲ್‌ಟಿ ಬೆಂಗಳೂರು ಶಾಖೆಯ ಆಕ್ಷೇಪ ವ್ಯಕ್ತಪಡಿಸಿತ್ತು. ನಂತರ ಸಾಲಗಾರರ ಸಮಿತಿಯಲ್ಲಿ ಈ ಎರಡೂ ಕಂಪನಿಗಳನ್ನು ಸೇರ್ಪಡೆಗೊಳಿಸಿ ಜನವರಿ 29ರಂದು ಆದೇಶ ಹೊರಡಿಸಿತ್ತು. ಅಲ್ಲದೆ, ಪಂಕಜ್ ವಿರುದ್ಧ ತನಿಖೆ ನಡೆಸುವಂತೆ ಹಣಕಾಸು ನಷ್ಟ ಮತ್ತು ದಿವಾಳಿ ಮಂಡಳಿಗೆ (ಐಬಿಬಿಐ) ಸೂಚಿಸಿತ್ತು.

ಈ ಆದೇಶ ಪ್ರಶ್ನಿಸಿ ಬೈಜು ರವೀಂದ್ರನ್ ಅವರ ಸಹೋದರ ಹಾಗೂ ಬೈಜುಸ್‌ನ ಮಾಜಿ ಪ್ರವರ್ತಕ ರಿಜು ರವೀಂದ್ರನ್ ಅವರು, ಎನ್‌ಸಿಎಲ್‌ಎಟಿಗೆ ಮೇಲ್ಮನವಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ವಿಭಾಗೀಯ ಪೀಠದ ನ್ಯಾಯಾಧೀಶರಾದ ರಾಕೇಶ್ ಕುಮಾರ್ ಜೈನ್ ಮತ್ತು ಜತೀಂದ್ರನಾಥ್ ಸ್ವೈನ್ ಈ ಅರ್ಜಿಯನ್ನು ವಜಾಗೊಳಿಸಿದ್ದಾರೆ.

ಈ ಮೇಲ್ಮನವಿ ಅರ್ಜಿಯ ವಿಚಾರಣೆ ವೇಳೆ ಪ್ರಕರಣದ ವಾಸ್ತವಾಂಶಗಳ ಬಗ್ಗೆ ಪೀಠವು ಯಾವುದೇ ಅವಲೋಕನ ನಡೆಸಿಲ್ಲ ಎಂದು ಹೇಳಿದ್ದಾರೆ.

ಎಫ್‌ಪಿಐ: ₹7,342 ಕೋಟಿ ವಾಪಸ್

ನವದೆಹಲಿ (ಪಿಟಿಐ): ಫೆಬ್ರುವರಿ ಮೊದಲ ವಾರದಲ್ಲಿ ದೇಶದ ಈಕ್ವಿಟಿ ಮಾರುಕಟ್ಟೆಯಿಂದ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಒಟ್ಟು ₹7,342 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಜನವರಿಯಲ್ಲಿ ಒಟ್ಟು ₹78,027 ಕೋಟಿ ವಿದೇಶಿ ಬಂಡವಾಳ ಹಿಂಪಡೆಯಲಾಗಿತ್ತು.

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕೆನಡಾ, ಮೆಕ್ಸಿಕೊ, ಚೀನಾ ಮೇಲೆ ಸುಂಕ ಹೇರಿದ್ದಾರೆ. ಈ ನೀತಿಯಿಂದ ಜಾಗತಿಕ ವ್ಯಾಪಾರ ವಹಿವಾಟಿಗೆ ತೊಡಕಾಗುವ ಸಾಧ್ಯತೆ ಇದೆ. ಹಾಗಾಗಿ, ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದಾರೆ. ಇದರಿಂದ ಬಂಡವಾಳ ಹೊರಹರಿವು ಮುಂದುವರಿದಿದೆ' ಎಂದು ಮಾರ್ನಿಂಗ್ ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಭಾರತ ನೆಲದಿಂದ ರಾಮೇಶ್ವರ ದ್ವೀಪಕ್ಕೆ ಸಂಪರ್ಕ • ₹531 ಕೋಟಿ ವೆಚ್ಚ

ಲಿಫ್ಟ್ ಸೇತುವೆ ಉದ್ಘಾಟನೆಗೆ ಸಜ್ಜು

• ಆದಿತ್ಯ ಕೆ.ಎ.

ತಮಿಳುನಾಡಿನ ಪಂಬನ್‌ನಲ್ಲಿ ನಿರ್ಮಿಸಿರುವ ರೈಲ್ವೆ ಸೇತುವೆ

ರಾಮೇಶ್ವರ (ತಮಿಳುನಾಡು): ಭಾರತದ ನೆಲದಿಂದ ರಾಮೇಶ್ವರ ದ್ವೀಪವನ್ನು ಸಂಪರ್ಕಿಸಲು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ನಿರ್ಮಿಸಿರುವ ಪಂಬನ್ ಲಿಫ್ಟ್ ಸೇತುವೆ ಉದ್ಘಾಟನೆಗೆ ಸಜ್ಜಾಗಿದೆ. ಉದ್ಘಾಟನೆಯ ಬಳಿಕ ರೈಲುಗಳು ಮಂಡಪಂ ಹಾಗೂ ಪಂಬನ್ ನಿಲ್ದಾಣಗಳ ನಡುವೆ ಈ ಸೇತುವೆಯ ಮೂಲಕ ಸಂಚಾರ ನಡೆಸಲಿವೆ.

ಬಂಗಾಳ ಕೊಲ್ಲಿಯಲ್ಲಿರುವ ರಾಮೇಶ್ವರ ದ್ವೀಪಕ್ಕೆ ಸಂಪರ್ಕ ಕಲ್ಪಿಸಲು ನಿರ್ಮಿಸಲಾಗಿದ್ದ ಸೇತುವೆ ಶಿಥಿಲಗೊಂಡಿದ್ದರಿಂದ 2019ರಲ್ಲಿ ಹೊಸ ಸೇತುವೆ ನಿರ್ಮಾಣ ಕಾಮಗಾರಿ ಆರಂಭಿಸಲಾಗಿತ್ತು. ಪಾಕ್ ಜಲಸಂಧಿ ಎಂದೇ ಗುರುತಿಸಲಾಗುವ ಈ ಸ್ಥಳದಲ್ಲಿ ಇದೀಗ 2.10 ಕಿ.ಮೀ ಉದ್ದದ ಹೊಸ ಸೇತುವೆಯನ್ನು ₹531 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಲಂಬವಾಗಿ ತೆರೆದುಕೊಳ್ಳುವ ದೇಶದ ಮೊದಲ ಸೇತುವೆ ಇದಾಗಿದೆ. ಈ ಸೇತುವೆಯ ಮೇಲೆ ರೈಲಿನ ಪ್ರಾಯೋಗಿಕ ಸಂಚಾರವು ಯಶಸ್ವಿಯಾಗಿದೆ.

ಸ್ಪೇನ್ ಹಾಗೂ ಜರ್ಮನಿಯ ತಂತ್ರಜ್ಞಾನ ಬಳಸಿ ಲಂಬವಾಗಿ ತೆರೆದುಕೊಳ್ಳುವ ಸೇತುವೆಯನ್ನು ಭೂ ಭಾಗದಿಂದ 600 ಮೀಟರ್ ದೂರದಲ್ಲಿ ನಿರ್ಮಾಣ ಮಾಡಲಾಗಿದ್ದು, ಲಿಫ್ಟ್ ಅಳವಡಿಕೆಯೇ ಸೇತುವೆಯ ವಿಶೇಷ.

'ಈ ಸೇತುವೆ ಮೇಲೆ ಗಂಟೆಗೆ 75 ಕಿ.ಮೀ ವೇಗದಲ್ಲಿ ರೈಲುಗಳು ಸಂಚರಿಸಬಹುದಾಗಿದೆ. 333 ಪಿಲ್ಲರ್‌ಗಳನ್ನು ಸಮುದ್ರದ ಮಧ್ಯದಲ್ಲಿ ನಿರ್ಮಿಸಲಾಗಿದೆ. ಲಿಫ್ಟ್ ಸ್ಪ್ಯಾನ್ ಹಾಗೂ ರೈಲ್ವೆ ಟ್ರ್ಯಾಕ್ 660 ಟನ್ ತೂಕವಿದೆ. ವಿದ್ಯುತ್ ಸಹಾಯದಿಂದ 5 ನಿಮಿಷ 30 ಸೆಕೆಂಡ್‌ಗಳಲ್ಲಿ ಮೇಲಕ್ಕೆ ಎತ್ತರಿಸಿ, ಕೆಳಭಾಗದಲ್ಲಿ ಮೀನುಗಾರಿಕೆಯ ಬೃಹತ್ ದೋಣಿಗಳು ಹಾಗೂ ಕರಾವಳಿ ಕಾವಲು ಪಡೆ ಮತ್ತು ಸರಕು ಸಾಗಣೆ ದೋಣಿಗಳು ಸಂಚರಿಸಲು ಅವಕಾಶ ಕಲ್ಪಿಸಲಾಗುತ್ತದೆ. ಸೇತುವೆಯ ಬಾಳಿಕೆ ಅವಧಿ 100 ವರ್ಷ ಎಂದು ಅಂದಾಜಿಸಲಾಗಿದೆ. ನಂತರ ನಿರ್ವಹಣೆ ಮಾಡಿದರೆ ಇನ್ನೂ ಹಲವು ವರ್ಷ ಸೇತುವೆ ಸುಭದ್ರವಾಗಿರಲಿದೆ' ಎಂದು ಹೈದರಾಬಾದ್‌ನ ಬಾಲಾಜಿ ರೈಲು -ರೋಡ್ ಸಿಸ್ಟಂನ ಎಂಜಿನಿಯರ್ ಕೆ.ವೇಲು ಮುರುಗನ್ ತಿಳಿಸಿದರು.

'ಪಂಬನ್ ಸೇತುವೆಯನ್ನು ಸಮುದ್ರದಲ್ಲಿ ನಿರ್ಮಿಸಿರುವುದರಿಂದ ತುಕ್ಕು ಹಿಡಿಯುವುದನ್ನು ತಡೆಯಲು ಪಾಲಿಸಿಲೋಕ್ಸೇನ್ ಬಣ್ಣವನ್ನು ಎರಡು ಪದರಗಳಲ್ಲಿ ಬಳಸಲಾಗಿದೆ. ಸೇತುವೆಗೆ ತುಕ್ಕುನಿರೋಧಕ ಉಕ್ಕು ಬಳಸಲಾಗಿದೆ. ಅಪಾಯದ ಎಚ್ಚರಿಕೆ ನೀಡಲು ಸೆನ್ಸಾರ್ ಅಳವಡಿಸಲಾಗಿದೆ. ಇದರಿಂದ ಗಾಳಿಯ ವೇಗ ಪತ್ತೆ ಸಾಧ್ಯವಾಗಲಿದೆ. ಚಂಡಮಾರುತದಂತಹ ಸಂದರ್ಭದಲ್ಲಿ ರೈಲು ಸಂಚಾರವನ್ನು ಸ್ವಯಂ ಚಾಲಿತವಾಗಿ ನಿಲುಗಡೆ ಮಾಡಬಹುದಾಗಿದೆ' ಎಂದು ಎಂಜಿನಿಯರ್ ವಿವರಿಸಿದರು.

ಭಾರತ ಹಾಗೂ ಶ್ರೀಲಂಕಾ ನಡುವೆ ವ್ಯಾಪಾರ ಸಂಬಂಧ ಸುಧಾರಿಸಲು, ಪಾಕ್ ಜಲಸಂಧಿ ಹಾದುಹೋಗುವ ಈ ಪ್ರದೇಶದಲ್ಲಿ 1914ರಲ್ಲಿ ರೈಲ್ವೆ ಸೇತುವೆ ನಿರ್ಮಾಣ ಮಾಡಲಾಗಿತ್ತು. ಭಾರತದ ನೆಲದಿಂದ ರಾಮೇಶ್ವರ ದ್ವೀಪವನ್ನು ಸಂಪರ್ಕಿಸಲು ಅದೊಂದೇ ಮಾರ್ಗವಾಗಿತ್ತು. 1988ರಲ್ಲಿ ರಸ್ತೆ ಸೇತುವೆ ನಿರ್ಮಾಣ ಮಾಡಲಾಯಿತು.

1964ರಲ್ಲಿ ಚಂಡಮಾರುತದಿಂದ ರೈಲು ಸಂಚಾರಕ್ಕೆ ನಿರ್ಮಿಸಿದ್ದ ಸೇತುವೆಗೆ ಹಾನಿಯಾಗಿತ್ತು. ನಂತರ ದುರಸ್ತಿಗೊಳಿಸಿ ರೈಲು ಮಾರ್ಗವನ್ನು ಮೀಟರ್ ಗೇಜ್‌ನಿಂದ ಬ್ರಾಡ್ ಗೇಜ್‌ಗೆ ಪರಿವರ್ತಿಸಲಾಗಿತ್ತು. ಸೇತುವೆಗೆ 110 ವರ್ಷ ಆಗಿದ್ದರಿಂದ ಅದರ ಪಕ್ಕದಲ್ಲೇ ಹೊಸ ಸೇತುವೆ ತಲೆ ಎತ್ತಿದೆ. ಹಳೆಯ ಸೇತುವೆಯಲ್ಲಿದ್ದ ಗೇಟ್‌ಗಳು ಮೇಲಕ್ಕೆ ಹೋಗಿ ದೋಣಿಗಳ ಸಂಚಾರಕ್ಕೆ ಮುಕ್ತವಾಗಲು 44 ನಿಮಿಷ ಬೇಕಿತ್ತು. ಹೊಸ ಸೇತುವೆ ಸಂಚಾರಕ್ಕೆ ಮುಕ್ತವಾದ ಬಳಿಕ ಹಳೆಯ ಸೇತುವೆ ತೆರವು ಮಾಡಲಾಗುವುದು ಎಂದು ಎಂಜಿನಿಯರ್‌ಗಳು ಹೇಳಿದರು.

(ರೈಲ್ವೆ ಇಲಾಖೆ ಆಹ್ವಾನದ ಮೇರೆಗೆ ವರದಿಗಾರ ರಾಮೇಶ್ವರಕ್ಕೆ ತೆರಳಿದ್ದರು)

ಸೇತುವೆ ಉದ್ಘಾಟಿಸಲಿರುವ ಪ್ರಧಾನಿ

'ಫೆಬ್ರುವರಿ ಕೊನೆ ಅಥವಾ ಮಾರ್ಚ್ ಮೊದಲ ವಾರ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ. ನಂತರ, ರೈಲ್ವೆ ಸಚಿವರ ಜೊತೆಗೂಡಿ ನೂತನ ಲಿಫ್ಟ್ ಸೇತುವೆ ಪರಿಶೀಲಿಸುವರು' ಎಂದು ಎಂಜಿನಿಯರ್‌ಗಳು ಹೇಳಿದರು.

ಹಳೆಯ ಸೇತುವೆ ಶಿಥಿಲಗೊಂಡಿದ್ದರಿಂದ ರೈಲು ಸಂಚಾರ ಬಂದ್ ಆಗಿತ್ತು. ರಾಮೇಶ್ವರಕ್ಕೆ ತೆರಳುವ ಪ್ರಯಾಣಿಕರಿಗೆ ತೊಂದರೆಯಾಗಿತ್ತು. ಹೊಸ ಸೇತುವೆಯಿಂದ ಅನುಕೂಲವಾಗಲಿದೆ

ಮಂಜುನಾಥ ಕನಮಡಿ, ಸಿಪಿಆರ್‌ಒ, ನೈರುತ್ಯ ರೈಲ್ವೆ ವಲಯ

ಇನ್‌ವೆಸ್ಟ್ ಕರ್ನಾಟಕ 2025ಕ್ಕೆ ನಾಳೆ ಚಾಲನೆ

ಪ್ರಜಾವಾಣಿ ವಾರ್ತೆ

ಎಂ.ಬಿ ಪಾಟೀಲ

ಬೆಂಗಳೂರು: ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ 'ಇನ್‌ವೆಸ್ಟ್ ಕರ್ನಾಟಕ– 2025'ಕ್ಕೆ ಆತಿಥ್ಯ ವಹಿಸಲು ರಾಜ್ಯ ಸರ್ಕಾರ ಸಜ್ಜಾಗಿದೆ. ನಾಲ್ಕು ದಿನಗಳ ಹೂಡಿಕೆ ಉತ್ಸವದ ಉದ್ಘಾಟನೆ ಮಂಗಳವಾರ (ಫೆ. 11) ನಡೆಯಲಿದೆ.

'ಕರ್ನಾಟಕವನ್ನು ಜಾಗತಿಕ ಬಂಡವಾಳ ಹೂಡಿಕೆಯ ಶಕ್ತಿ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಸಮಾವೇಶವು ನೆರವಾಗಲಿದೆ. ನಾವೀನ್ಯ, ಕೈಗಾರಿಕಾ ಪ್ರಗತಿ, ಜಾಗತಿಕ ಪಾಲುದಾರಿಕೆಗೆ ರಾಜ್ಯದಲ್ಲಿನ ಸೌಲಭ್ಯಗಳನ್ನು ಇಡೀ ವಿಶ್ವಕ್ಕೆ ಪರಿಚಯಿಸಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

'ವಿವಿಧ ಕ್ಷೇತ್ರಗಳ ದಿಗ್ಗಜರು ಕರ್ನಾಟಕದಲ್ಲಿನ ಬಂಡವಾಳ ಹೂಡಿಕೆ ಮತ್ತು ಕೈಗಾರಿಕಾ ಪ್ರಗತಿಯ ಭವಿಷ್ಯ ರೂಪಿಸಲು ಒಳನೋಟಗಳನ್ನು ನೀಡಲಿದ್ದಾರೆ' ಎಂದೂ ಹೇಳಿದ್ದಾರೆ. ಸಮಾವೇಶದ ಕಾರ್ಯಕ್ರಮಗಳ ವಿವರಗಳಿಗೆ https://investkarnataka.co.in/gim2025/events-schedule/ ಭೇಟಿ ನೀಡಬಹುದು.

ಭಾರತದ 14 ಮೀನುಗಾರರ ಬಂಧಿಸಿದ ಶ್ರೀಲಂಕಾ

ಕೊಲೊಂಬೊ (ಪಿಟಿಐ): ತನ್ನ ದೇಶದ ವ್ಯಾಪ್ತಿ ಪ್ರವೇಶಿಸಿದ್ದಕ್ಕೆ ಭಾರತದ 14 ಮೀನುಗಾರರನ್ನು ಬಂಧಿಸಲಾಗಿದೆ ಎಂದು ಶ್ರೀಲಂಕಾ ನೌಕಾಪಡೆಯು ಹೇಳಿಕೆಯಲ್ಲಿ ತಿಳಿಸಿದೆ.

ಶ್ರೀಲಂಕಾ ವ್ಯಾಪ್ತಿಯ ಸಮುದ್ರದಲ್ಲಿ ಇದ್ದ ಎರಡು ದೋಣಿಗಳನ್ನೂ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದೆ.

ನ್ಯೂಯಾರ್ಕ್: ಹಕ್ಕಿಜ್ವರದಿಂದ 15 ಪಕ್ಷಿಗಳು ಸಾವು

ನ್ಯೂಯಾರ್ಕ್ (ಎಪಿ): ನ್ಯೂಯಾರ್ಕ್ ನಗರದ ಎರಡು ಪ್ರಾಣಿ ಸಂಗ್ರಹಾಲಯಗಳಲ್ಲಿ ಕನಿಷ್ಠ 15 ಹಕ್ಕಿಗಳು ಹಕ್ಕಿಜ್ವರದಿಂದ ಮೃತಪಟ್ಟಿವೆ ಎಂದು ಮೃಗಾಲಯ ನಿರ್ವಹಿಸುವ ಸಂಸ್ಥೆ ತಿಳಿಸಿದೆ.

ಕ್ವೀನ್ಸ್ ಮೃಗಾಲಯದಲ್ಲಿ ಮೂರು ಬಾತುಕೋಳಿಗಳು ಸೋಂಕಿನಿಂದ ಮೃತಪಟ್ಟಿವೆ. ಬ್ರಾನ್ಕ್ಸ್ ಮೃಗಾಲಯದಲ್ಲಿ ಮೃತಪಟ್ಟ ಮೂರು ಬಾತುಕೋಳಿಗಳು ಮತ್ತು ಒಂಬತ್ತು ಪಕ್ಷಿಗಳ ಕಳೇಬರಗಳ ಪರೀಕ್ಷೆ ಬಾಕಿ ಇದೆ ಎಂದು ವನ್ಯಜೀವಿ ಸಂರಕ್ಷಣಾ ಸೊಸೈಟಿ ತಿಳಿಸಿದೆ.

'ಮುಂಜಾಗ್ರತಾ ಕ್ರಮವಾಗಿ ದುರ್ಬಲ ಹಕ್ಕಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದೇವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಕ್ರೇನ್ ಸಮರ ಕೊನೆಗೊಳಿಸಲು ಪುಟಿನ್ ಜೊತೆ ಚರ್ಚಿಸಿದ ಟ್ರಂಪ್

ಮಾಸ್ಕೊ (ರಾಯಿಟರ್ಸ್): ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸುವ ಸಂಬಂಧ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜೊತೆ ಮಾತನಾಡಿರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ್ದಾರೆ ಎಂದು ನ್ಯೂಯಾರ್ಕ್ ಪೋಸ್ಟ್ ವರದಿ ಮಾಡಿದೆ.

ಅಮೆರಿಕ ಹಾಗೂ ರಷ್ಯಾ ಅಧ್ಯಕ್ಷರ ನಡುವೆ 2022ರ ಆರಂಭದ ನಂತರದಲ್ಲಿ ನಡೆದ ನೇರ ಮಾತುಕತೆಯು ಬಹಿರಂಗ ಆಗಿರುವುದು ಇದೇ ಮೊದಲು.

ಉಕ್ರೇನ್ ಸಮರವನ್ನು ಕೊನೆಗೊಳಿಸುವುದಾಗಿ ಟ್ರಂಪ್ ಅವರು ಈಗಾಗಲೇ ಭರವಸೆ ನೀಡಿದ್ದಾರೆ. ಆದರೆ ಅದನ್ನು ಮಾಡುವುದು ಹೇಗೆ ಎಂಬುದನ್ನು ಅವರು ಬಹಿರಂಗಪಡಿಸಿಲ್ಲ. ಏರ್‌ಫೋರ್ಸ್ ಒನ್ ವಿಮಾನದಲ್ಲಿ 'ನ್ಯೂಯಾರ್ಕ್ ಪೋಸ್ಟ್'ಗೆ ಸಂದರ್ಶನ ನೀಡಿರುವ ಟ್ರಂಪ್ ಅವರು, 'ಜನ ಸಾಯುವುದು ಕೊನೆಗೊಳ್ಳುವುದನ್ನು ನೋಡಲು ತಾವು ಬಯಸಿರುವುದಾಗಿ ಅವರು (ಪುಟಿನ್) ಹೇಳಿದ್ದಾರೆ' ಎಂದು ತಿಳಿಸಿದ್ದಾರೆ.

'ನ್ಯೂಯಾರ್ಕ್ ಪೋಸ್ಟ್'ನ ವರದಿಯನ್ನು ರಷ್ಯಾದ ವಕ್ತಾರ ಡಿಮಿಟ್ರಿ ಪೆಸ್ಕೊವ್ ಅವರು ಖಚಿತಪಡಿಸಿಲ್ಲ, ನಿರಾಕರಿಸಿಯೂ ಇಲ್ಲ.

ಯುದ್ಧ ನಿಲ್ಲಿಸಲು ಪುಟಿನ್ ಭೇಟಿ ಮಾಡುವುದಾಗಿಯೂ ಟ್ರಂಪ್ ಹಲವು ಬಾರಿ ಹೇಳಿದ್ದಾರೆ. ಸೌದಿ ಅರೇಬಿಯಾ ಅಥವಾ ಯುಎಇ ದೇಶದಲ್ಲಿ ಇವರಿಬ್ಬರ ನಡುವಿನ ಭೇಟಿ ನಡೆಯಬಹುದು ಎಂಬುದು ರಷ್ಯಾದ ಲೆಕ್ಕಾಚಾರ.

ಸಂಕ್ಷಿಪ್ತ ಸುದ್ದಿ

ನೈರುತ್ಯ ಚೀನಾದಲ್ಲಿ ಭೂಕುಸಿತ: 28 ಮಂದಿ ಕಣ್ಮರೆ

ಬೀಜಿಂಗ್ (ಎಪಿ): ಚೀನಾದ ನೈರುತ್ಯ ಭಾಗದಲ್ಲಿರುವ ಸಿಚುವಾನ್ ಪ್ರಾಂತ್ಯದಲ್ಲಿ ಭಾರಿ ಮಳೆಯಿಂದ ಸಂಭವಿಸಿದ ಭೂಕುಸಿತದಿಂದ ಮಣ್ಣಿನಡಿಯಲ್ಲಿ ಸಿಲುಕಿದ್ದ ಒಬ್ಬರ ಮೃತದೇಹವನ್ನು ಹೊರತೆಗೆಯಲಾಗಿದೆ. 28 ಮಂದಿ ಕಣ್ಮರೆಯಾಗಿದ್ದಾರೆ.

'ಜಿನ್‌ಪಿಂಗ್ ಗ್ರಾಮದ ಘಟನಾ ಸ್ಥಳಕ್ಕೆ ಒಂದು ಸಾವಿರ ಮಂದಿ ಯೋಧರು, ಅಗ್ನಿಶಾಮಕ ಪಡೆಯವರು ಹಾಗೂ ವೈದ್ಯಕೀಯ ಸಿಬ್ಬಂದಿ ಒಳಗೊಂಡ ರಕ್ಷಣಾ ತಂಡ ತಲುಪಿದ್ದು, ರಕ್ಷಣಾ ಕಾರ್ಯ ಆರಂಭಿಸಿದೆ. ಉರುಳಿದ ಕಟ್ಟಡಗಳಲ್ಲಿ ಸಿಲುಕಿದವರನ್ನು ಪತ್ತೆಹಚ್ಚುವ ಕಾರ್ಯದಲ್ಲಿ ಅಧಿಕಾರಿಗಳು ನಿರತರಾಗಿದ್ದಾರೆ. ಡ್ರೋನ್, ರೇಡಾರ್ ಬಳಸಿ ಶೋಧ ಮುಂದುವರಿಸಲಾಗಿದೆ' ಎಂದು ಚೀನಾದ ಪ್ರಮುಖ ಮಾಧ್ಯಮಸಂಸ್ಥೆ 'ಸಿಸಿಟಿವಿ' ವರದಿ ಮಾಡಿದೆ.

ನಿರ್ಮಾಣ ಹಂತದ 10 ಕಟ್ಟಡಗಳು ಕುಸಿದಿದ್ದರಿಂದ 360 ಮಂದಿಯನ್ನು ಸ್ಥಳಾಂತರಿಸಲಾಗಿದ್ದು, ಇಬ್ಬರು ಗಾಯಾಳುಗಳನ್ನು ರಕ್ಷಿಸಲಾಗಿದೆ.

ಬಾಂಗ್ಲಾದೇಶ ಹಿಂಸಾಚಾರ 40 ಮಂದಿ ಬಂಧನ

ಢಾಕಾ (ಪಿಟಿಐ): ರಾಜಧಾನಿ ಢಾಕಾ ಸೇರಿದಂತೆ ವಿವಿಧೆಡೆಗಳಲ್ಲಿ ಅವಾಮಿ ಲೀಗ್ ಪಕ್ಷದ ನಾಯಕರ ಮನೆಗಳ ಮೇಲೆ ನಡೆಸಿದ ದಾಳಿ ಹಾಗೂ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಬಾಂಗ್ಲಾದೇಶ ಸರ್ಕಾರವು ಕಾರ್ಯಾಚರಣೆ ಆರಂಭಿಸಿದ್ದು, 40 ಮಂದಿಯನ್ನು ಬಂಧಿಸಿದೆ.

ಇಲ್ಲಿನ ಗಾಜಿಪುರ್ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ವಿದ್ಯಾರ್ಥಿಗಳು ಹಾಗೂ ನಾಗರಿಕರ ಮೇಲೆ ದಾಳಿ ನಡೆದಿತ್ತು. ಇದರ ಬೆನ್ನಲ್ಲೇ, ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ನೇತೃತ್ವದ ಸರ್ಕಾರವು 'ಆಪರೇಷನ್ ಡೆವಿಲ್ ಹಂಟ್' ಹೆಸರಿನಲ್ಲಿ ಕಾರ್ಯಾಚರಣೆ ನಡೆಸುವಂತೆ ಸೂಚನೆ ನೀಡಿತ್ತು.

'ಜಿಲ್ಲೆಯ ವಿವಿಧೆಡೆ ಸುಮಾರು 40 ಮಂದಿಯನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಬೇರ್ ಸಾದೆಕ್ ತಿಳಿಸಿದ್ದಾರೆ ಎಂದು 'ಯುನೈಟೆಡ್ ನ್ಯೂಸ್ ಆಫ್ ಬಾಂಗ್ಲಾದೇಶ್' ವರದಿ ಮಾಡಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಅನುಭವವುಳ್ಳ ವಾಹನ ಚಾಲಕರು ಬೇಕಾಗಿದ್ದಾರೆ. Heavy_vehicle ಲೈಸನ್ಸ್ ಹೊಂದಿರಬೇಕು. ಸಂಪರ್ಕಿಸಿ:ಗಾಯತ್ರಿ ಅಸೋಸಿಯೆಟ್ಸ್ ಬೈರತಿ, ಬೆಂಗಳೂರು_560077. 8453353646/ 6362872796/ 9448488536/ 9844083318.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 14,000-18,000. 8951315839, 7022770052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606385001, 9606384001

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ

Astrology

★ಓಂ ದುರ್ಗಾಆಂಜನಂ★ ಇಚ್ಛಾಸಿದ್ಧಿ ಶಕ್ತಿಪೀಠ ಭಾರತದ ಪ್ರಖ್ಯಾತ ವಂಶಪಾರಂಪರ್ಯ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀದೇವಾನಂದನರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ, ವಶೀಕರಣಗಳಿಗೆ,ಚಮತ್ಕಾರಿ ಪವಾಡ ಪರಿಹಾರಕ್ಕೆ ಸಂಪರ್ಕಿಸಿರಿ:ರಹೇಜಪಾರ್ಕ್ ಎದುರು,ಮಾಗಡಿರಸ್ತೆ, ಬೆಂಗಳೂರು.9845005009

ಪ್ರವಾಸ

Travel

23.04. 2025, 16.05.2025 ರಿಂದ 18ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10ದೇಶಗಳು. ಪ್ರೇಕ್ಷಣೀಯ ಸ್ಥಳಗಳು ಮತ್ತು ಊಟ, ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿಂದ ಬೆಂಗಳೂರಿನ ತನಕ ಎಲ್ಲ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04, 9900080794, 9611329473

10/3/25 ರಿಂದ 15ದಿನಗಳು ರೈಲು ಮತ್ತು ವಿಮಾನದಲ್ಲಿ ಜೈಪುರ, ಜೈಸಲ್ಮೇರ್, ಪಂಚದ್ವಾರಕ ಮಾತೃಗಯಾ, ಪಟೇಲ್ ಪ್ರತಿಮೆ, ನಿಷ್ಕಲಂಕ ಮಹಾದೇವ, ನಾಲ್ಕು ಜ್ಯೋತಿರ್ ಲಿಂಗಗಳ ಪ್ರವಾಸ. ಶ್ರೀ ಗಂಗಾ ಟೂರಿಸ್ಟ್- 9480253807

ದೆಹಲಿ ಆಗ್ರಾ, ಅಯೋಧ್ಯೆ 7 ದಿನಗಳು. ವೈಷ್ಣೋದೇವಿ 7ದಿನಗಳು, ನೇಪಾಳ,ಮುಕ್ತಿನಾಥ ಯಾತ್ರಾ 7 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮಣಿಪುರ: ರಾಷ್ಟ್ರಪತಿ ಆಳ್ವಿಕೆ ಹೇರಿಕೆ?

ಪ್ರಜಾವಾಣಿ ವಾರ್ತೆ/ಪಿಟಿಐ

ಇಂಫಾಲ್: ಮಣಿಪುರದಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆಗಳು ನಡೆಯುತ್ತಿವೆ. ಬಿರೇನ್ ಸಿಂಗ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಹೊಸ ಮುಖ್ಯಮಂತ್ರಿಯ ಬಗ್ಗೆ ಯಾವುದೇ ಮಾಹಿತಿಯನ್ನು ಪಕ್ಷ ನೀಡಿಲ್ಲ. ಸೋಮವಾರದಿಂದ ಮಣಿಪುರದಲ್ಲಿ ಬಜೆಟ್ ಅಧಿವೇಶನ ನಡೆಯಬೇಕಿತ್ತು. ಆದರೆ, ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ಅಧಿವೇಶನ ಆರಂಭಕ್ಕೆ ನೀಡಿದ್ದ ಆದೇಶವನ್ನು ಭಾನುವಾರ ಹಿಂಪಡೆದಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲಾಗುತ್ತದೆ ಎನ್ನಲಾಗುತ್ತಿದೆ.

2023ರ ಮೇ ತಿಂಗಳಿನಿಂದ ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವೆ ರಾಜ್ಯದಲ್ಲಿ ಜನಾಂಗೀಯ ಸಂಘರ್ಷ ನಡೆಯುತ್ತಿದೆ. ಸಂಘರ್ಷ ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾಗಿದೆ.ಆದ್ದರಿಂದ ಬಿರೇನ್ ಸಿಂಗ್ ಅವರು ರಾಜೀನಾಮೆ ನೀಡಲೇಬೇಕು ಎಂಬ ಒತ್ತಡ ಇತ್ತು. 2023ರ ಜುಲೈನಲ್ಲಿ ಬಿರೇನ್ ಸಿಂಗ್ ಅವರು ರಾಜೀನಾಮೆ ನೀಡಲು ಮುಂದಾಗಿದ್ದರು. ಆ ವೇಳೆ ಮೈತೇಯಿ ಸಮುದಾಯದ ಮಹಿಳೆಯರು ಮುಖ್ಯಮಂತ್ರಿ ನಿವಾಸದ ಎದುರು ಜಮಾಯಿಸಿ, ರಾಜೀನಾಮೆ ಪತ್ರವನ್ನು ಹರಿದುಹಾಕಿದ್ದರು.

ಸಂಘರ್ಷ ಹೆಚ್ಚಾದಂತೆ, ಕುಕಿ ಬುಡಕಟ್ಟು ಸಮುದಾಯದ ಜನರು ಮಾತ್ರವಲ್ಲ ಮೈತೇಯಿ ಸಮುದಾಯದ ಜನರ ವಿಶ್ವಾಸವನ್ನೂ ಬಿರೇನ್ ಸಿಂಗ್ ಅವರು ಕಳೆದುಕೊಳ್ಳತೊಡಗಿದರು. ಇದೇ ಕಾರಣಕ್ಕೆ ಬಿರೇನ್ ಸಿಂಗ್ ಅವರ ನಾಯಕತ್ವವನ್ನು ಬಿಜೆಪಿಯ ಹಲವು ಶಾಸಕರು ವಿರೋಧಿಸಿದರು. ಸರ್ಕಾರದ ಹಲವು ಸಭೆಗಳಿಗೆ ಹಲವು ಶಾಸಕರು ಗೈರಾಗಿದ್ದರು. ಇಷ್ಟೆಲ್ಲಾ ಒತ್ತಡ ಇದ್ದರೂ ಬಿರೇನ್ ಸಿಂಗ್ ಅವರ ರಾಜೀನಾಮೆ ಪಡೆಯಲು ಬಿಜೆಪಿ ವರಿಷ್ಠರು ಮುಂದಾಗಿರಲಿಲ್ಲ.

ಈಗಲೇ ಏಕೆ ರಾಜೀನಾಮೆ: ಫೆ.10ರಂದು (ಸೋಮವಾರ) ಮಣಿಪುರದಲ್ಲಿ ಬಜೆಟ್ ಅಧಿವೇಶನ ಆರಂಭಗೊಳ್ಳಬೇಕಿತ್ತು. ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸುವುದಾಗಿ ಕಾಂಗ್ರೆಸ್ ಘೋಷಿಸಿತು. ಈ ಬೆಳವಣಿಗೆ ಹಿನ್ನೆಲೆಯಲ್ಲಿ ಬಿರೇನ್ ಸಿಂಗ್ ಅವರು ಶನಿವಾರ ಕರೆದಿದ್ದ ಸಭೆಗೆ ಹಲವು ಬಿಜೆಪಿ ಶಾಸಕರು ಗೈರಾಗಿದ್ದರು. ಒಂದು ವೇಳೆ ಅವಿಶ್ವಾಸ ನಿರ್ಣಯ ಮಂಡನೆಯಾಗಿದ್ದರೆ, ಸರ್ಕಾರ ಪತನವಾಗುವ ಸಂಭವವಿತ್ತು.

ಶನಿವಾರವಷ್ಟೆ ಬಿಜೆಪಿಯು ದೆಹಲಿಯಲ್ಲಿ ಭಾರಿ ಗೆಲುವು ಸಾಧಿಸಿದೆ. ಈ ಗೆಲುವಿನ ಮಧ್ಯೆ ಮಣಿಪುರದಲ್ಲಿ ಸರ್ಕಾರ ಪತನವಾದ ಸುದ್ದಿ ಪಕ್ಷಕ್ಕೆ ನಕಾರಾತ್ಮಕವಾಗಲಿದೆ ಎಂಬ ಕಾರಣದಿಂದ ಬಿಜೆಪಿ ವರಿಷ್ಠರು ಬಿರೇನ್ ಸಿಂಗ್ ಅವರಿಗೆ ರಾಜೀನಾಮೆ ನೀಡಲು ಸೂಚಿಸಿದರು ಎನ್ನಲಾಗುತ್ತಿದೆ. 2016ರಲ್ಲಿ ಬಿರೇನ್ ಸಿಂಗ್ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿಕೊಂಡಿದ್ದರು.

2017ರಲ್ಲಿ ಬಿಜೆಪಿ ಮಣಿಪುರದಲ್ಲಿ ಅಧಿಕಾರ ಹಿಡಿಯಿತು. ಅಲ್ಲಿಂದ ಇಲ್ಲಿಯವರೆಗೂ ಬಿರೇನ್ ಸಿಂಗ್ ಅವರೇ ಮುಖ್ಯಮಂತ್ರಿಯಾಗಿದ್ದಾರೆ. 2022ರಲ್ಲಿ ಬಿಜೆಪಿಯು ಮೊದಲ ಬಾರಿಗೆ ಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸಿತ್ತು.

ಬಿರೇನ್ ಸಿಂಗ್ ಸಲಹೆ

'ಕೇಂದ್ರ ಸರ್ಕಾರಕ್ಕೆ ಕೆಲವು ವಿಚಾರಗಳ ಬಗ್ಗೆ ನಾನು ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ' ಎಂದಿರುವ ಬಿರೇನ್ ಮಾತಿನ ಸಾರ:

- ಮಣಿಪುರಕ್ಕೆ ಸಾವಿರಾರು ವರ್ಷಗಳ ಶ್ರೀಮಂತ ಹಾಗೂ ನಾಗರಿಕ ಇತಿಹಾಸವಿದೆ. ಇಂಥ ರಾಜ್ಯದ ಪ್ರಾದೇಶಿಕ ಸಮಗ್ರತೆಯನ್ನು ಕಾಪಾಡಬೇಕು
- ರಾಜ್ಯದ ಗಡಿಯೊಳಗೆ ಅಕ್ರಮವಾಗಿ ನುಸುಳುವುದನ್ನು ತಡೆಯಬೇಕು. ಅಕ್ರಮ ವಲಸಿಗರನ್ನು ವಾಪಸು ಅವರ ದೇಶಕ್ಕೆ ಕಳುಹಿಸಲು ನೀತಿ ರೂಪಿಸಬೇಕು
- ಮಾದಕವಸ್ತು ಮತ್ತು ಇದರ ಭಯೋತ್ಪಾದನೆಯ ವಿರುದ್ಧ ಹೋರಾಟವನ್ನು ಮುಂದುವರಿಸಬೇಕು
- ಭಾರತ-ಮ್ಯಾನ್ಮಾರ್ ಗಡಿಗೆ ಆದಷ್ಟು ಬೇಗ ಬೇಲಿ ಹಾಕಬೇಕು

> ಸಂದರ್ಭವನ್ನು ಅರಿತು ಬಿರೇನ್ ಸಿಂಗ್ ರಾಜೀನಾಮೆ ನೀಡಿದ್ದಾರೆ. 2023ರಿಂದಲೂ ನಾವು ಇದನ್ನೇ ಆಗ್ರಹಿಸುತ್ತಿದ್ದೆವು. ಅದರೂ ಇದು ಬಹಳ ತಡವಾಯಿತು. ಪದೇ ಪದೇ ವಿದೇಶಗಳಿಗೆ ಹಾರುವ ಪ್ರಧಾನಿ ಅವರಿಗೆ ಮಣಿಪುರಕ್ಕೆ ಭೇಟಿ ನೀಡಲು ಸಮಯವೂ ಇಲ್ಲ, ಒಲವೂ ಇಲ್ಲ
>
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಬಹುಮತ ಕಳೆದುಕೊಳ್ಳುವ ಭೀತಿ ಇತ್ತು...

60 ಒಟ್ಟು ಸ್ಥಾನಗಳು **31** ಬಹುಮತಕ್ಕೆ ಬೇಕಾಗಿರುವ ಸ್ಥಾನಗಳು

ಸರ್ಕಾರದ ಬಲಾಬಲ

37	5	7	1	3
ಬಿಜೆಪಿ	ನಾಗಾ ಪೀಪಲ್ಸ್ ಪಾರ್ಟಿ	ನ್ಯಾಷನಲ್ ಪೀಪಲ್ಸ್ ಪಾರ್ಟಿ	ಜೆಡಿಯು	ಪಕ್ಷೇತರ ಶಾಸಕರು

ಎನ್‌ಡಿಎ ಸರ್ಕಾರ

ವಿರೋಧ ಪಕ್ಷಗಳು

5	2
ಕಾಂಗ್ರೆಸ್	ಕುಕಿ ಪೀಪಲ್ಸ್ ಅಲಯನ್ಸ್

- ಚುನಾವಣೆಯಲ್ಲಿ ಬಿಜೆಪಿಯು ಒಟ್ಟು 32 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಸರ್ಕಾರ ರಚನೆಯ ಕೆಲವೇ ತಿಂಗಳ ಬಳಿಕ ಜೆಡಿಯುದ ಆರು ಶಾಸಕರ ಪೈಕಿ ಐವರು ಬಿಜೆಪಿ ಸೇರಿಕೊಂಡರು. ಅಲ್ಲಿಗೆ ಬಿಜೆಪಿಯ ಒಟ್ಟು ಶಾಸಕ ಸಂಖ್ಯೆ 37ಕ್ಕೆ ಏರಿತು
- ಜನಾಂಗೀಯ ಸಂಘರ್ಷವನ್ನು ನಿಯಂತ್ರಿಸುವಲ್ಲಿ ಸರ್ಕಾರ ಸೋತಿದೆ ಎಂದು ಕಾರಣ ನೀಡಿ, ನ್ಯಾಷನಲ್ ಪೀಪಲ್ಸ್ ಪಾರ್ಟಿಯು ಸರ್ಕಾರಕ್ಕೆ ನೀಡಿದ್ದ ತನ್ನ ಬೆಂಬಲವನ್ನು 2024ರ ನವೆಂಬರ್‌ನಲ್ಲಿ ವಾಪಸು ಪಡೆದುಕೊಂಡಿತು
- ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಯು ಪಕ್ಷವು ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿಕೊಂಡಿದ್ದರಿಂದ ಒಬ್ಬ ಜೆಡಿಯು ಶಾಸಕ ಕೂಡ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಬೆಂಬಲ ಸೂಚಿಸಿದರು

ಈಗಿನ ಬಲಾಬಲ

37 ಬಿಜೆಪಿ

7 ಸಂಘರ್ಷದ ಬಳಿಕ ಬಿಜೆಪಿಯಿಂದ ದೂರ ಉಳಿದಿರುವ ಕುಕಿ ಬುಡಕಟ್ಟು ಸಮುದಾಯಕ್ಕೆ ಸೇರಿದ ಬಿಜೆಪಿ ಶಾಸಕರ ಸಂಖ್ಯೆ

9-12 ಬಜೆಟ್ ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸುವುದಾಗಿ ಕಾಂಗ್ರೆಸ್ ಹೇಳಿತ್ತು. ಈ ಹಿನ್ನೆಲೆಯಲ್ಲಿ ಬಿರೇನ್ ಸಿಂಗ್ ಅವರು ಬಿಜೆಪಿ ಶಾಸಕರ ಸಭೆ ಕರೆದಿದ್ದರು. ಈ ಸಭೆಗೆ ಗೈರಾಗಿದ್ದ ಬಿಜೆಪಿ ಶಾಸಕರು)

3 ಪಕ್ಷೇತರ ಶಾಸಕರು

5 ನಾಗಾ ಪೀಪಲ್ಸ್ ಪಾರ್ಟಿ

1 ಜೆಡಿಯು

- ಒಂದು ವೇಳೆ ಕುಕಿ ಬುಡಕಟ್ಟು ಸಮುದಾಯದ 7 ಶಾಸಕರು ಹಾಗೂ ಸಭೆಗೆ ಹಾಜರಾಗದೇ ಇದ್ದ 9 ಶಾಸಕರು ಸರ್ಕಾರದಿಂದ ಹೊರಬಂದರೆ, ಸರ್ಕಾರವು ಬಹುಮತ ಕಳೆದುಕೊಳ್ಳುತ್ತಿತ್ತು
- ರಾಜೀನಾಮೆ ನೀಡುವ ಸಂದರ್ಭದಲ್ಲಿ ಬಿರೇನ್ ಸಿಂಗ್ ಅವರ ಜೊತೆಯಲ್ಲಿ ಬಿಜೆಪಿ ಮತ್ತು ನಾಗಾ ಪೀಪಲ್ಸ್ ಪಾರ್ಟಿ ಸೇರಿ ಒಟ್ಟು 14 ಶಾಸಕರು ಇದ್ದರು

ದೆಹಲಿ ಸಿ.ಎಂ ಹುದ್ದೆಗೆ ಆತಿಶಿ ರಾಜೀನಾಮೆ

ಹೊಸ ಸರ್ಕಾರ ರಚನೆ ಆಗುವವರೆಗೆ ಸಿ.ಎಂ ಆಗಿ ಮುಂದುವರಿಯುವಂತೆ ವಿ.ಕೆ. ಸಕ್ಸೇನಾ ಸೂಚನೆ

ನವದೆಹಲಿ (ಪಿಟಿಐ): ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಸೋಲು ಕಂಡ ಪರಿಣಾಮವಾಗಿ, ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ಆತಿಶಿ ಅವರು ಭಾನುವಾರ ರಾಜೀನಾಮೆ ಸಲ್ಲಿಸಿದರು.

ರಾಜೀನಾಮೆ ಪತ್ರವನ್ನು ಆತಿಶಿ ಅವರು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ 'ರಾಜನಿವಾಸ'ದಲ್ಲಿ ಸಲ್ಲಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ಸರ್ಕಾರ ರಚನೆ ಆಗುವವರೆಗೆ ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿಯುವಂತೆ ಸಕ್ಸೇನಾ ಅವರು ಆತಿಶಿ ಅವರಿಗೆ ಸೂಚನೆ ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶ ಪ್ರವಾಸದಿಂದ ಮರಳಿದ ನಂತರ ಬಿಜೆಪಿಯು ದೆಹಲಿಯಲ್ಲಿ ಸರ್ಕಾರ ರಚಿಸಲು ಹಕ್ಕು ಮಂಡಿಸುವ ನಿರೀಕ್ಷೆ ಇದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಸಕ್ಸೇನಾ ಅವರಿಗೆ ಬಿಜೆಪಿ ಪತ್ರ: ದೆಹಲಿ ವಿಧಾನಸಭೆಯಲ್ಲಿ ಭಾರಿ ಜಯ ಸಾಧಿಸಿರುವ ಬಿಜೆಪಿಯು, ದೆಹಲಿಯ ಏಳು ಮಂದಿ ಸಂಸದರು ಹಾಗೂ ಹೊಸದಾಗಿ ಆಯ್ಕೆಯಾಗಿರುವ ಶಾಸಕರ ಜೊತೆ ಭೇಟಿಗೆ ಸಮಯ ಕೊಡಬೇಕು ಎಂದು ಕೋರಿ ಸಕ್ಸೇನಾ ಅವರಿಗೆ ಮನವಿ ಸಲ್ಲಿಸಿದೆ.

ಭೇಟಿಗೆ ಆದಷ್ಟು ಬೇಗ ಸಮಯ ನಿಗದಿ ಮಾಡಿಕೊಡಬೇಕು ಎಂದು ಕೋರಿ ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ ವಿರೇಂದ್ರ ಸಚ್‌ದೇವ ಅವರು ಸಕ್ಸೇನಾ ಅವರಿಗೆ ಪತ್ರ ಬರೆದಿದ್ದಾರೆ.

ಆತಿಶಿ ಅವರು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರನ್ನು ಭಾನುವಾರ ಭೇಟಿ ಮಾಡಿ ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು –ಪಿಟಿಐ ಚಿತ್ರ

ಶಾಸಕರ ಜೊತೆ ಕೇಜ್ರಿವಾಲ್ ಸಭೆ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭೆಗೆ ಆಯ್ಕೆಯಾಗಿರುವ ಎಎಪಿಯ 22 ಶಾಸಕರ ಜೊತೆ ಭಾನುವಾರ ಸಭೆ ನಡೆಸಿದ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು, ಜನರಿಗಾಗಿ ಕೆಲಸ ಮಾಡುವಂತೆ ಸೂಚಿಸಿದರು.

ಸಭೆಯ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಉಸ್ತುವಾರಿ ಮುಖ್ಯಮಂತ್ರಿ ಆತಿಶಿ, ಎಎಪಿಯು ರಚನಾತ್ಮಕ ಪ್ರತಿಪಕ್ಷದ ಕೆಲಸವನ್ನು ಮಾಡಲಿದೆ, ಬಿಜೆಪಿಯು ತನ್ನ ಭರವಸೆಗಳನ್ನು ಈಡೇರಿಸುವುದನ್ನು ಖಾತರಿಪಡಿಸಲಿದೆ ಎಂದು ತಿಳಿಸಿದರು.

ಜನರ ಸಮಸ್ಯೆ ಪರಿಹರಿಸುವ ಕೆಲಸವನ್ನು ಎಎಪಿ ಶಾಸಕರು ಮಾಡಬೇಕು ಎಂದು ಕೇಜ್ರಿವಾಲ್ ಸೂಚನೆ ನೀಡಿದರು ಎಂದು ಆತಿಶಿ ಹೇಳಿದರು.

'ಬಿಜೆಪಿಯು ಮಹಿಳೆಯರಿಗೆ ಪ್ರತಿ ತಿಂಗಳಿಗೆ ₹2,500 ನೀಡುವ, 300 ಯೂನಿಟ್ ಉಚಿತ ವಿದ್ಯುತ್ ನೀಡುವ ಯೋಜನೆಗಳನ್ನು ಮಾರ್ಚ್ 8ಕ್ಕೆ ಮೊದಲು ಆರಂಭಿಸುವಂತೆ ಎಎಪಿ ಖಾತರಿಪಡಿಸಲಿದೆ' ಎಂದರು.

ಕಳೆದ 10 ವರ್ಷಗಳಲ್ಲಿ ಎಎಪಿ ನೇತೃತ್ವದ ಸರ್ಕಾರ ನೀಡಿದ್ದ ಸೌಲಭ್ಯಗಳನ್ನು ಹಾಗೂ ಉಚಿತ ಸೇವೆಗಳನ್ನು ಬಿಜೆಪಿ ಸ್ಥಗಿತಗೊಳಿಸದಂತೆ ನೋಡಿಕೊಳ್ಳಲಾಗುವುದು ಎಂದು ಹೇಳಿದರು.

ಜನಸಂಪರ್ಕಕ್ಕೆ ದೊರೆತ ಫಲ: ಇಕ್ಬಾಲ್

ನವದೆಹಲಿ (ಪಿಟಿಐ): ಮಟಿಯಾ ಮಹಲ್ ಕ್ಷೇತ್ರದಲ್ಲಿ ಎಎಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ, ದೆಹಲಿ ಚುನಾವಣೆಯಲ್ಲಿ ಈ ಬಾರಿ ಅತ್ಯಂತ ಹೆಚ್ಚು ಅಂತರದ ಜಯ ಕಂಡಿರುವ ಆಲೆ ಮೊಹಮ್ಮದ್ ಇಕ್ಬಾಲ್ ಅವರು, ಈ ಗೆಲುವನ್ನು ದಾಖಲೆ ಎಂಬುದಕ್ಕಿಂತಲೂ ಇದು ಸಾರ್ವಜನಿಕರ ಜೊತೆ ತಾವು ನಿರಂತರವಾಗಿ ಇರಿಸಿಕೊಂಡ ಸಂಪರ್ಕಕ್ಕೆ ಸಿಕ್ಕ ಫಲ ಎಂದು ಕರೆದಿದ್ದಾರೆ.

2012ರಲ್ಲಿ ಮೊದಲ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ಇಕ್ಬಾಲ್ ಅವರಿಗೆ 22 ವರ್ಷ ವಯಸ್ಸು. 'ನಾನು ಎರಡನೆಯ ಬಾರಿಗೆ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ನನ್ನ ವಿರುದ್ಧ 13 ಅಭ್ಯರ್ಥಿಗಳು ಕಣದಲ್ಲಿದ್ದರು. ಅವರೆಲ್ಲರೂ ಠೇವಣಿ ಕಳೆದುಕೊಂಡಿದ್ದರು' ಎಂದು ಇಕ್ಬಾಲ್ ತಿಳಿಸಿದರು.

'ನನ್ನ ತಂದೆ ಶೋಯೆಬ್ ಇಕ್ಬಾಲ್ ಕಳೆದ 30 ವರ್ಷಗಳಿಂದ ಈ ಕ್ಷೇತ್ರಕ್ಕಾಗಿ ಕೆಲಸ ಮಾಡಿರುವ ಬಗೆ, ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅವರು ಮಾಡಿರುವ ಕೆಲಸಗಳು ನನಗೆ ಬಹಳ ನೆರವಿಗೆ ಬಂದಿವೆ' ಎಂದು ಇಕ್ಬಾಲ್ ಹೇಳಿದರು. ಬಿಜೆಪಿಯ ದೀಪ್ತಿ ಇಂದೋರಾ ಅವರನ್ನು ದಾಖಲೆಯ 42,724 ಮತಗಳಿಂದ ಇಕ್ಬಾಲ್ ಸೋಲಿಸಿದ್ದಾರೆ.

> ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯ ಸಾಧಿಸಿರುವುದು ಬಿಹಾರ ವಿಧಾನಸಭಾ ಚುನಾವಣೆಯ ಮೇಲೆ ಪರಿಣಾಮ ಬೀರುವುದಿಲ್ಲ.
>
> **ತೇಜಸ್ವಿ ಯಾದವ್,** ಆರ್‌ಜೆಡಿ ನಾಯಕ

> ಯಮುನಾ ನದಿಯ ಅಕ್ಕಪಕ್ಕದ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ದೆಹಲಿಯಲ್ಲಿ ಬಿಜೆಪಿಯ ಆದ್ಯತೆಗಳಲ್ಲಿ ಒಂದಾಗಿರಲಿದೆ.
>
> **ಪರ್ವೇಶ್ ವರ್ಮಾ,** ಬಿಜೆಪಿ ಶಾಸಕ

ಭಕ್ತರಿಗೆ ತುರ್ತಾಗಿ ಆಹಾರ– ನೀರು ಕಲ್ಪಿಸಿ: ಅಖಿಲೇಶ್

ಮಹಾಕುಂಭಕ್ಕೆ ಜನಜಂಗುಳಿ

ಪ್ರಜಾವಾಣಿ ವಾರ್ತೆ

ಲಖನೌ: ಮಹಾಕುಂಭಮೇಳದಲ್ಲಿ ಪಾಲ್ಗೊಳ್ಳಲು ವಾರಾಂತ್ಯದ ದಿನಗಳಲ್ಲಿ ಅಸಂಖ್ಯಾತ ಭಕ್ತರು ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದತ್ತ ಧಾವಿಸಿದರು.

ಮಹಾಕುಂಭಮೇಳ ನಗರದ ಸುತ್ತಮುತ್ತಲೂ ಜನದಟ್ಟಣೆ ಹೆಚ್ಚಿದ್ದು, ರಸ್ತೆಗಳಲ್ಲಿ ಸಂಚಾರದಟ್ಟಣೆಯೂ ಅಧಿಕವಾಗಿದೆ. ಇದರ ಪರಿಣಾಮ ಅಪಾರ ಸಂಖ್ಯೆಯ ಭಕ್ತರು ರಸ್ತೆಗಳಲ್ಲೇ ಸಿಲುಕಿಕೊಂಡಿದ್ದು, ತಾಸುಗಟ್ಟಲೇ ಕುಡಿಯುವ ನೀರು ಸಹ ಸಿಗದೆ ಪರಿತಪಿಸಿದರು.

ಜನದಟ್ಟಣೆ– ವಾಹನದಟ್ಟಣೆಯಿಂದ ರಸ್ತೆಗಳಲ್ಲಿ ಸಿಲುಕಿರುವ ಭಕ್ತರಿಗೆ ಸರ್ಕಾರ ಹಾಗೂ ಅಧಿಕಾರಿ ವರ್ಗವು ಕುಡಿಯುವ ನೀರು, ಆಹಾರದ ವ್ಯವಸ್ಥೆಯನ್ನು ತುರ್ತಾಗಿ ಕಲ್ಪಿಸಬೇಕು ಎಂದು ಸಮಾಜವಾದಿ ಪಕ್ಷದ ವರಿಷ್ಠ ಅಖಿಲೇಶ್ ಯಾದವ್ ಆಗ್ರಹಿಸಿದ್ದಾರೆ.

ಮಧ್ಯಪ್ರದೇಶ, ಲಖನೌ, ವಾರಾಣಸಿ ಸೇರಿದಂತೆ ಇತರ ಸ್ಥಳಗಳಿಂದ ತ್ರಿವೇಣಿ ಸಂಗಮಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳು ಭಕ್ತರ ವಾಹನಗಳಿಂದ ತುಂಬಿವೆ. ಸಂಗಮದತ್ತ ನಡೆದು ಹೋಗಲು ಪ್ರಯಾಸಪಡಬೇಕಿದೆ.

ರಸ್ತೆಯಲ್ಲೇ ಎಂಟು ತಾಸು ಕಾಯಬೇಕಾಗಿದ್ದರಿಂದ ಅಸಮಾಧಾನಗೊಂಡ ಕೆಲವು ಭಕ್ತರು, ಹಲವು ಕಡೆ ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಸಿದರು. ತಮ್ಮ ವಾಹನಗಳು ಮುಂದೆ ಚಲಿಸಲು ಬ್ಯಾರಿಕೇಡ್ ತೆರವುಗೊಳಿಸಿ ಎಂದು ಒತ್ತಾಯಿಸಿದರು.

'ಆರು ಕಿ.ಮೀ. ದೂರ ಕ್ರಮಿಸಲು ಆರು ತಾಸು ಬೇಕಾಯಿತು' ಎಂದು ಭಕ್ತರಾದ ಅನಾಮಿಕ ತಿವಾರಿ ತಿಳಿಸಿದರು.

ಮಹಾಕುಂಭಕ್ಕೆ ತೆರಳಬೇಕಿದ್ದ ಪ್ರಯಾಣಿಕರಿಗೆ ವಾರಾಣಸಿ, ಹರ್ದೋಯಿ ಸೇರಿದಂತೆ ಇತರ ಕೆಲವು ರೈಲು ನಿಲ್ದಾಣಗಳಲ್ಲಿ ಬೋಗಿಗಳಿಗೆ ಹತ್ತಲು ಅವಕಾಶವೇ ಸಿಗಲಿಲ್ಲ. ಜನರಿಂದ ತುಂಬಿದ್ದ ರೈಲಿನ ಬಹುತೇಕ ಬೋಗಿಗಳ ಬಾಗಿಲನ್ನು ಒಳಗಿನಿಂದಲೇ ಹಾಕಲಾಗಿತ್ತು.

ವಾರಾಣಸಿ ರೈಲು ನಿಲ್ದಾಣದಲ್ಲಿ ಬೋಗಿಗಳಿಗೆ ಹತ್ತಲು ಸಾಧ್ಯವಾಗದ ಹಲವು ಮಹಿಳೆಯರು ರೈಲಿನ ಎಂಜಿನ್ ಬೋಗಿಗೆ ನುಗ್ಗಿದರು. ಪೊಲೀಸರು ಮಧ್ಯಪ್ರವೇಶಿಸಿ ಹೊರ ಕಳಿಸಬೇಕಾಯಿತು.

ಹರ್ದೋಯಿಯಲ್ಲಿ ಬೋಗಿಗಳಿಗೆ ಹತ್ತಲು ಸಾಧ್ಯವಾಗದ ಕೆಲವರು ಹಾನಿಗೆ ಯತ್ನಿಸಿದರು.

ಮಹಾಕುಂಭಮೇಳ ನಗರದಲ್ಲಿ ಭಾನುವಾರ ಕಂಡುಬಂದ ಭಕ್ತಸಾಗರ –ಪಿಟಿಐ ಚಿತ್ರ

ಮುಖ್ಯಾಂಶಗಳು

- ರೈಲು ಎಂಜಿನ್‌ನ ಬೋಗಿಗೆ ನುಗ್ಗಿದ ಮಹಿಳೆಯರು
- ಹರ್ದೋಯಿಯಲ್ಲಿ ರೈಲಿನ ಬೋಗಿಗೆ ಹಾನಿ
- ಪೊಲೀಸರೊಂದಿಗೆ ಭಕ್ತರ ಮಾತಿನ ಚಕಮಕಿ

ಮತ್ತೊಂದು ಡೇರೆಯಲ್ಲಿ ಬೆಂಕಿ

ಮಹಾಕುಂಭನಗರ (ಪಿಟಿಐ): ಕುಂಭಮೇಳದ ಸೆಕ್ಟರ್ 19ರಲ್ಲಿರುವ ಕಲ್ಪವಾಸಿ ಡೇರೆಯಲ್ಲಿ ಅನಿಲ ಸೋರಿಕೆಯಿಂದಾಗಿ ಭಾನುವಾರ ಬೆಂಕಿ ಕಾಣಿಸಿಕೊಂಡಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಓಂ ಪ್ರಕಾಶ್ ಪಾಂಡೆ ಸೇವಾ ಸಂಸ್ಥಾನವು ಹಾಕಿದ್ದ ಡೇರೆಯಲ್ಲಿ ಬೆಂಕಿ ಹೊತ್ತಿಕೊಂಡಿತು. ಹತ್ತೇ ನಿಮಿಷದಲ್ಲಿ ಅಗ್ನಿಶಾಮಕ ದಳದವರು ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದು, ಯಾರಿಗೂ ತೊಂದರೆಯಾಗಿಲ್ಲ ಎಂದು ಅಗ್ನಿಶಾಮಕ ದಳದ ಮುಖ್ಯ ಅಧಿಕಾರಿ ಪ್ರಮೋದ್ ಶರ್ಮಾ ಹೇಳಿದ್ದಾರೆ.

ಸೋಮವಾರ ರಾಷ್ಟ್ರಪತಿ ಪುಣ್ಯಸ್ನಾನ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕುಂಭಮೇಳಕ್ಕೆ ಸೋಮವಾರ ಭೇಟಿ ನೀಡಲಿದ್ದು, ಪುಣ್ಯಸ್ನಾನ ಮಾಡಲಿದ್ದಾರೆ ಎಂದು ರಾಷ್ಟ್ರಪತಿ ಭವನವು ಪ್ರಕಟಣೆಯ ಮೂಲಕ ತಿಳಿಸಿದೆ.

'ಗಂಗಾ, ಯಮುನಾ, ಸರಸ್ವತಿ ನದಿಗಳ ಸಂಗಮದಲ್ಲಿ ರಾಷ್ಟ್ರಪತಿಯವರು ಪುಣ್ಯಸ್ನಾನ ಮಾಡಿ, ಪೂಜೆ ಸಲ್ಲಿಸಲಿದ್ದಾರೆ. ನಂತರ ಅಕ್ಷಯವಟ್ ಹಾಗೂ ಹನುಮಂತನ ಮಂದಿರಕ್ಕೆ ಭೇಟಿ ನೀಡಲಿದ್ದಾರೆ. ಡಿಜಿಟಲ್ ಕುಂಭ ಅನುಭವ ಕೇಂದ್ರಕ್ಕೂ ಹೋಗಲಿದ್ದಾರೆ' ಎಂದು ಪ್ರಕಟಣೆ ಹೇಳಿದೆ.

'ಸಂವಿಧಾನ ದುರ್ಬಲಗೊಳಿಸುವ ಯತ್ನ'

ವಯನಾಡ್ (ಪಿಟಿಐ): 'ಇತಿಹಾಸದಲ್ಲೇ ಮೊದಲ ಬಾರಿಗೆ ಸರ್ಕಾರವು ದೇಶದ ಸಂವಿಧಾನ ಹಾಗೂ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಲು ಯತ್ನಿಸುತ್ತಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಕೇಂದ್ರ ಸರ್ಕಾರದ ವಿರುದ್ಧ ಆರೋಪಿಸಿದ್ದಾರೆ.

ಸ್ವಕ್ಷೇತ್ರ ವಯನಾಡ್ ಪ್ರವಾಸದಲ್ಲಿರುವ ಅವರು ಭಾನುವಾರ ಪಕ್ಷದ ಮತಗಟ್ಟೆ ಮಟ್ಟದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

'ಮೊದಲ ಬಾರಿಗೆ ಸರ್ಕಾರವೊಂದು ಸಂವಿಧಾನ ದುರ್ಬಲಗೊಳಿಸಲು ಯತ್ನಿಸುತ್ತಿದೆ. ನಾವು ಕೇವಲ ನಮ್ಮ ರಾಜಕೀಯ ಹಾಗೂ ಸಿದ್ಧಾಂತ ಉಳಿಸಲು ಹೋರಾಡುತ್ತಿಲ್ಲ. ಭಾರತದ ಅಂತಃಸತ್ವ ಉಳಿಸಲು ಹೋರಾಟ ಮಾಡುತ್ತಿದ್ದೇವೆ' ಎಂದರು. ಭೇಟಿಯ ಎರಡನೇ ದಿನ ಅವರು, ಮಾನವ– ವನ್ಯಪ್ರಾಣಿಗಳ ಸಂಘರ್ಷದ ಕುರಿತಂತೆ ಕೂಡ ಸ್ಥಳೀಯರ ಜೊತೆ ಸಮಾಲೋಚನೆ ನಡೆಸಿದರು.

ಸಂಕ್ಷಿಪ್ತ ಸುದ್ದಿ

'ಮೆನು'ವಿನಲ್ಲಿ ಬೀಫ್ ಬಿರಿಯಾನಿ: ಅಲಿಗಢ ವಿ.ವಿಯಲ್ಲಿ ವಿವಾದ

ಅಲಿಗಢ (ಪಿಟಿಐ): ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಸರ್ ಶಾ ಸುಲೈಮಾನ್ ಹಾಲ್‌ನಲ್ಲಿ ಭಾನುವಾರ ಮಧ್ಯಾಹ್ನದ ಊಟಕ್ಕೆ ದನದ ಮಾಂಸದ (ಬೀಫ್) ಬಿರಿಯಾನಿ ಲಭ್ಯವಿದೆ ಎಂಬ ಮೆನುವಿನ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ.

ಇಬ್ಬರು ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ಈ ಮೆನು ಪ್ರಕಟಿಸಿದ್ದರು ಎಂದು ಹೇಳಲಾಗಿದೆ. ಅದರಲ್ಲಿ, 'ಭಾನುವಾರ ಭೋಜನದ ಪಟ್ಟಿ ಬದಲಾಗಿದೆ. ಸಾಕಷ್ಟು ಜನರ ಬೇಡಿಕೆಯ ಕಾರಣ, ಚಿಕನ್ ಬಿರಿಯಾನಿ ಬದಲು ಬೀಫ್ ಬಿರಿಯಾನಿ ನೀಡಲಾಗುವುದು' ಎಂದು ಬರೆಯಲಾಗಿದೆ.

ಈ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ವಿಶ್ವವಿದ್ಯಾಲಯವು ಸ್ಪಷ್ಟನೆ ನೀಡಿ, 'ಟೈಪಿಂಗ್ ದೋಷ'ದಿಂದಾಗಿ ಪ್ರಮಾದ ಸಂಭವಿಸಿದೆ. ಕಾರಣರಾದವರಿಗೆ ಶೋಕಾಸ್ ನೋಟಿಸ್ ನೀಡಲಾಗುವುದು' ಎಂದು ಹೇಳಿದೆ.

ಸರ್ ಶಾ ಸುಲೈಮಾನ್ ಹಾಲ್‌ನಲ್ಲಿದ್ದ ನೋಟಿಸ್ ಅನ್ನು ವಿದ್ಯಾರ್ಥಿಗಳು ಗಮನಿಸಿ, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆ ಮಾಡಿದ ನಂತರ ವಿವಾದ ಭುಗಿಲೆದ್ದಿದೆ. ಪ್ರಾರಂಭದಲ್ಲಿ ಈ ಬಗ್ಗೆ ಸ್ಪಷ್ಟನೆ ನೀಡಲು ವಿಶ್ವವಿದ್ಯಾಲಯ ನಿರಾಕರಿಸಿತ್ತು. ನಂತರ 'ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಇಬ್ಬರು ಹಿರಿಯ ವಿದ್ಯಾರ್ಥಿಗಳಿಗೆ ನೋಟಿಸ್ ನೀಡಿದ್ದೇವೆ' ಎಂದು ತಿಳಿಸಿದೆ.

ಉತ್ತರ ಪ್ರದೇಶ: ಮಸೀದಿಯ ಒತ್ತುವರಿ ಭಾಗ ಧ್ವಂಸ

ಲಖನೌ: ಉತ್ತರ ಪ್ರದೇಶದ ಕುಶಿನಗರ ಜಿಲ್ಲೆಯಲ್ಲಿ ಸರ್ಕಾರಿ ಜಾಗ ಒತ್ತುವರಿ ಮಾಡಿ ಕಟ್ಟಿದ್ದ ಮಸೀದಿಯೊಂದರ ಭಾಗವನ್ನು ಭಾನುವಾರ ಬುಲ್ಡೋಜರ್‌ನಿಂದ ಕೆಡವಲಾಗಿದೆ.

'ಜಿಲ್ಲೆಯ 'ಹಟಾ' ಪಟ್ಟಣದಲ್ಲಿ ನಿರ್ಮಿಸಿದ್ದ ಮದನಿ ಮಸೀದಿಯ ಭಾಗವೊಂದನ್ನು ಆರು ಬುಲ್ಡೋಜರ್‌ಗಳನ್ನು ಬಳಸಿ ಕೆಡವಲಾಯಿತು. ಮುಂಜಾಗ್ರತಾ ಕ್ರಮವಾಗಿ ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿ ಮದನಿ ಮಸೀದಿಯನ್ನು ನಿರ್ಮಿಸಿದ್ದು, ಸಮೀಕ್ಷೆ ನಡೆಸಬೇಕು ಎಂದು ಕೋರಿ ಹಿಂದೂ ಸಂಘಟನೆಯ ಹೋರಾಟಗಾರ ರಾಮ್ ಬಚ್ಚನ್ ಸಿಂಗ್ ಅವರು ಮುಖ್ಯಮಂತ್ರಿ ಅವರ ಪೋರ್ಟಲ್‌ನಲ್ಲಿ ದೂರು ನೀಡಿದ್ದರು. ಕಂದಾಯ ಇಲಾಖೆಯ ಅಧಿಕಾರಿಗಳು ಕೆಲವು ತಿಂಗಳುಗಳ ಹಿಂದೆಯೇ ಸ್ಥಳದ ಸಮೀಕ್ಷೆ ನಡೆಸಿದ್ದರು. ಈ ವೇಳೆ ಒತ್ತುವರಿ ಮಾಡಿದ್ದು ಕಂಡುಬಂದಿತ್ತು.

ನಂತರ, ಮಸೀದಿಯ ಮೇಲುಸ್ತುವಾರಿ ವಹಿಸಿದ್ದವರಿಗೆ ಈ ಸಂಬಂಧ ನೋಟಿಸ್ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ, ಮಸೀದಿಯ ಆಡಳಿತ ಮಂಡಳಿಯವರು ಅಲಹಾಬಾದ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯವು ಫೆ.8ರವರೆಗೆ ಒಡೆದುಹಾಕದಂತೆ ತಡೆಯಾಜ್ಞೆ ನೀಡಿತ್ತು. ಭಾನುವಾರ ಈ ತಡೆಯಾಜ್ಞೆ ಅವಧಿ ಮುಕ್ತಾಯಗೊಂಡಿದ್ದರಿಂದ ಮಸೀದಿಯ ಭಾಗವನ್ನು ಅಧಿಕಾರಿಗಳು ಒಡೆದು ಹಾಕಿದರು.

'ಪಟ್ಟಣದಲ್ಲಿ ಮಸೀದಿ ನಿರ್ಮಿಸುವ ಸಂಬಂಧ 15 ವರ್ಷಗಳ ಹಿಂದೆ ಮುಸ್ಲಿಂ ಸಮುದಾಯದವರು 19,939 ಚದರ ಅಡಿ ಭೂಮಿಯನ್ನು ಖರೀದಿಸಿದ್ದರು. ಈ ಪೈಕಿ 13 ಸಾವಿರ ಅಡಿ ಜಾಗದಲ್ಲಿ ಮಸೀದಿ ನಿರ್ಮಿಸಿದ್ದು, ಯಾವುದೇ ಒತ್ತುವರಿ ಮಾಡಿಲ್ಲ' ಎಂದು ಮಸೀದಿಯ ಉಸ್ತುವಾರಿ ತಿಳಿಸಿದ್ದಾರೆ.

'ಹತ್ತು ವರ್ಷಗಳ ಹಿಂದೆಯೇ ಮಸೀದಿ ನಿರ್ಮಿಸಿದ್ದು, ಮುಸಲ್ಮಾನರು ನಿರಂತರವಾಗಿ ಇಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಂಚಿ: 325 ಹಕ್ಕಿಗಳ ಹತ್ಯೆ

ರಾಂಚಿ (ಪಿಟಿಐ): ಹಕ್ಕಿಜ್ವರ ಪತ್ತೆಯಾದ ಕಾರಣ ಬಿರ್ಸಾ ಕೃಷಿ ವಿಶ್ವವಿದ್ಯಾಲಯದ (ಬಿಎಯು) ಫಾರ್ಮ್‌ನಲ್ಲಿನ 325 ಹಕ್ಕಿಗಳನ್ನು ಭಾನುವಾರ ಕೊಲ್ಲಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಗಿನಿಯಾ ಫೌಲ್ ಹಕ್ಕಿಗಳಿಗೆ ಸೋಂಕು ತಗುಲಿದ್ದು, ಅವುಗಳನ್ನು ಪರೀಕ್ಷಿಸಲೆಂದು ಇರಿಸಲಾಗಿದೆ ಎಂದು ಜಿಲ್ಲಾ ಪಶು ಸಂಗೋಪನಾ ಅಧಿಕಾರಿ ಕವೀಂದ್ರ ನಾಥ್ ಹೇಳಿದ್ದಾರೆ.

ಕೊಳೆಗೇರಿಯಲ್ಲಿ ಬೆಂಕಿ: 30 ಗುಡಿಸಲು ಭಸ್ಮ, ವ್ಯಕ್ತಿ ಸಾವು

ಕೋಲ್ಕತ್ತ (ಪಿಟಿಐ): ನಗರದ ನಾರ್ಕೆಲ್‌ಡಂಗಾ ಪ್ರದೇಶದ ಕೊಳೆಗೇರಿಯಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಸುಮಾರು 30 ಗುಡಿಸಲುಗಳು ಭಸ್ಮವಾಗಿದ್ದು, ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ ಎಂದು ಅಗ್ನಿ ಶಾಮಕ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಶನಿವಾರ ರಾತ್ರಿ 10 ಗಂಟೆ ಸುಮಾರಿಗೆ ಸಂಭವಿಸಿದ ಬೆಂಕಿ ದುರಂತದಿಂದ ಸುಮಾರು 200 ಜನರು ನಿರ್ವಸಿತರಾಗಿದ್ದಾರೆ. 17 ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ತೊಡಗಿ, ಭಾನುವಾರ ನಸುಕಿನ 3 ಗಂಟೆ ವೇಳೆಗೆ ಬೆಂಕಿ ನಿಯಂತ್ರಣಕ್ಕೆ ಬಂದಿತು. ಗುಡಿಸಲುಗಳಿಗೆ ಹೊಂದಿಕೊಂಡಂತೆ ಇದ್ದ ಗೋಡಾನ್‌ವೊಂದರಲ್ಲಿ ಹಬೀಬುಲ್ಲಾ ಮೊಲ್ಲಾ (65) ಅವರ ಶವ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಸಿಕ್ಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಧಾರ್ಮಿಕ ದೇಣಿಗೆ: ಪ್ರತ್ಯೇಕ ಕಾನೂನು ಏಕೆ?- ಆಲೋಕ್

ಏಕರೂಪದ ಕಾನೂನಿಗೆ ವಿಎಚ್‌ಪಿ ಕರೆ

ಮಹಾಕುಂಭ ನಗರ (ಪಿಟಿಐ): ಧಾರ್ಮಿಕ ದೇಣಿಗೆ ವಿಚಾರದಲ್ಲಿ ಎಲ್ಲ ಧರ್ಮದವರಿಗೂ ಅನ್ವಯವಾಗುವ ಏಕರೂಪದ ಕಾನೂನು ಜಾರಿಗೊಳಿಸಬೇಕು ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಅಂತರ ರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಅವರು ಭಾನುವಾರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಇಲ್ಲಿ ನಡೆದ ವಿಎಚ್‌ಪಿಯ ಮೂರು ದಿನಗಳ ಸಭೆ ಬಳಿಕ ಮಾತನಾಡಿದ ಅವರು, ಧಾರ್ಮಿಕ ದೇಣಿಗೆಗೆ ಪ್ರತ್ಯೇಕ ಕಾನೂನುಗಳ ಅಸ್ತಿತ್ವವನ್ನು ಪ್ರಶ್ನಿಸಿದರು.

'ಮುಸ್ಲಿಮರು ಅಲ್ಲಾಹನಿಗೆ ಭೂಮಿಯನ್ನು ದಾನ ಮಾಡಿದಾಗ ಅದು ವಕ್ಫ್ ಆಸ್ತಿಯಾಗುತ್ತದೆ. ಆದರೆ ಹಿಂದೂಗಳು ದೇವಾಲಯಗಳಿಗೆ, ಕ್ರೈಸ್ತರು ಚರ್ಚ್‌ಗಳಿಗೆ ಅಥವಾ ಸಿಖ್ಖರು ಗುರುದ್ವಾರಗಳಿಗೆ ದಾನ ಮಾಡಿದಾಗ ಏನಾಗುತ್ತದೆ? ದೇಣಿಗೆಗೆ ಸಂಬಂಧಿಸಿದಂತೆ ವಿವಿಧ ಧರ್ಮಗಳಿಗೆ ಭಿನ್ನ ಕಾನೂನುಗಳು ಇರುವುದು ಏಕೆ' ಎಂದು ಕೇಳಿದರು.

1954ರ ವಕ್ಫ್ ಕಾಯ್ದೆಯನ್ನು ಉಲ್ಲೇಖಿಸಿ, 'ಧಾರ್ಮಿಕ ದೇಣಿಗೆಗೆ ಸಂಬಂಧಿಸಿದಂತೆ ಮುಸ್ಲಿಮರು ಪ್ರತ್ಯೇಕ ಕಾನೂನು ಹೊಂದುವುದನ್ನು ಕಾಂಗ್ರೆಸ್‌ನ ಇಬ್ಬರು ರಾಜ್ಯಸಭಾ ಸದಸ್ಯರು ಅಂದಿನ ಕಾನೂನು ಸಚಿವರನ್ನು ಪ್ರಶ್ನಿಸಿದ್ದರು. ಏಕರೂಪದ ಕಾನೂನು ಜಾರಿಗೊಳಿಸುವುದನ್ನು ಪರಿಗಣಿಸುವುದಾಗಿ ಸಚಿವರು ಆಗ ಹೇಳಿದ್ದರು. ಅಂತಹ ಕಾನೂನು ಜಾರಿಗೆ ಇದೀಗ ಕಾಲ ಕೂಡಿಬಂದಿದೆ' ಎಂದು ತಿಳಿಸಿದರು.

ಭಾರತವನ್ನು 'ಹಿಂದೂ ರಾಷ್ಟ್ರ' ಎಂದು ಘೋಷಿಸುವಂತೆ ಕೆಲವರು ಆಗ್ರಹಿಸಿರುವುದರ ಬಗ್ಗೆ ಪ್ರತಿಕ್ರಿಯಿಸಿದ ಕುಮಾರ್, 'ಭಾರತವು ಈಗಾಗಲೇ ಹಿಂದೂ ರಾಷ್ಟ್ರವಾಗಿರುವುದರಿಂದ ಅಂತಹ ಘೋಷಣೆಯ ಅಗತ್ಯವಿಲ್ಲ. ನಾವು ಧರ್ಮದ ಆಧಾರದಲ್ಲಿ ಸಂವಿಧಾನವನ್ನು ಹೊಂದಿರುವ ದೇಶವನ್ನು ಬಯಸುವುದಿಲ್ಲ' ಎಂದರು.

'ಸರ್ಕಾರದ ಹಿಡಿತದಿಂದ ದೇವಸ್ಥಾನ ಮುಕ್ತವಾಗಬೇಕು'

ದೇವಸ್ಥಾನಗಳು ಸರ್ಕಾರದ ಹಿಡಿತದಿಂದ ಮುಕ್ತವಾಗಬೇಕು ಎಂದು ಹೇಳಿದ ಅಲೋಕ್ ಕುಮಾರ್, 'ಈ ಸಂಬಂಧ ಈಗಾಗಲೇ ಆರಂಭಿಸಿರುವ ಅಭಿಯಾನವನ್ನು ರಾಷ್ಟ್ರ ವ್ಯಾಪಿ ಮುಂದುವರಿಸಲಾಗುವುದು' ಎಂದರು.

'ದೇವಸ್ಥಾನಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸುವಂತೆ ಆಗ್ರಹಿಸಿ ಆಂಧ್ರಪ್ರದೇಶದ ವಿಜಯವಾಡದಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ 2.5 ಲಕ್ಷ ಮಂದಿ ಪಾಲ್ಗೊಂಡಿದ್ದರು. ಮುಂದಿನ ದಿನಗಳಲ್ಲಿ ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಪ್ರಮುಖ ನಗರಗಳಲ್ಲಿ ಅದೇ ರೀತಿಯ ಕಾರ್ಯಕ್ರಮ ಏರ್ಪಡಿಸಲಾಗುವುದು' ಎಂದು ತಿಳಿಸಿದರು.

'ದೇಶದಾದ್ಯಂತವಿರುವ ಹಲವು ದೇವಾಲಯಗಳು 208 ವರ್ಷಗಳಿಂದಲೂ ಸರ್ಕಾರದ ನಿಯಂತ್ರಣದಲ್ಲಿದೆ. ದೇವಸ್ಥಾನಗಳ ಆಡಳಿತ ಭಕ್ತರ ಕೈಗೆ ಬರಬೇಕು' ಎಂದು ಹೇಳಿದರು.



'ಡಲ್ಲೇವಾಲ್‌ಗೆ ನೀಡುತ್ತಿದ್ದ ವೈದ್ಯಕೀಯ ನೆರವು ಸ್ಥಗಿತ'

ಚಂಡೀಗಢ (ಪಿಟಿಐ): ಅನಿರ್ದಿಷ್ಟಾವಧಿ ನಿರಶನ ನಡೆಸುತ್ತಿರುವ ರೈತ ನಾಯಕ ಜಗಜಿತ್ ಸಿಂಗ್ ಡಲ್ಲೇವಾಲ್ ಅವರಿಗೆ ನೀಡುತ್ತಿದ್ದ ವೈದ್ಯಕೀಯ ಚಿಕಿತ್ಸೆಯನ್ನು ನಿಲ್ಲಿಸಲಾಗಿದೆ ಎಂದು ಎರಡು ಪ್ರಮುಖ ರೈತ ಸಂಘಟನೆಗಳು ಭಾನುವಾರ ಹೇಳಿವೆ.

'ಡಲ್ಲೇವಾಲ್ ಅವರಿಗೆ ನೀಡುತ್ತಿದ್ದ ವೈದ್ಯಕೀಯ ನೆರವನ್ನು ಆರು ದಿನಗಳ ಹಿಂದೆಯೇ ನಿಲ್ಲಿಸಲಾಗಿದೆ. ವೈದ್ಯರು ಅವರಿಗೆ ರಕ್ತನಾಳದ ಮೂಲಕ ಔಷಧ ಹಾಗೂ ದ್ರವಾಹಾರ ನೀಡುತ್ತಿದ್ದರು. ಆದರೆ, ಇದೀಗ ಅವರಿಗೆ ಡ್ರಿಪ್ ನೀಡಲು ರಕ್ತನಾಳಗಳನ್ನು ಕಂಡುಹಿಡಿಯಲೇ ಸಾಧ್ಯವಾಗುತ್ತಿಲ್ಲ' ಎಂದು ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

2024ರ ನವೆಂಬರ್ 26ರಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಡಲ್ಲೇವಾಲ್ ಜ.19 ರಂದು ವೈದ್ಯಕೀಯ ನೆರವು ಪಡೆಯಲು ಸಮ್ಮತಿಸಿದ್ದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ತ್ಯಾಜ್ಯನೀರು-ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವ್ಯಾಲಿ	ಬೆಂಜಮಂ/ಕಾನಿಅ (ತ್ಯಾನೀನಿ–ಎಸ್‌ಟಿಪಿ) ಕೆ&ಟಿ/ಸಅ/658/2024–25 ದಿನಾಂಕ: 04.02.2025	1.	ರೂ.40,57,905/– / ರೂ.81,160/–	24.02.2025 ಸಂಜೆ 4:00 ಗಂಟೆಯವರೆಗೆ	25.02.2025 ರ ಸಂಜೆ 04:05 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವ್ಯಾಲಿ

ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
2.	ಪೂರ್ವ–2	ಬೆಂಜಮಂ/2024–25/ ಡಬ್ಲ್ಯೂಎಸ್/ವರ್ಕ್_ಇಂಡೆಂಟ್ 1483/7ನೇ ಕರೆ	1.	ರೂ.77,14,000/– / ರೂ.1,54,300/–	17.02.2025 ಸಂಜೆ 4:00 ಗಂಟೆಯವರೆಗೆ	18.02.2025 ರ ಸಂಜೆ 4:00 ಗಂಟೆಗೆ
3.	ಪೂರ್ವ–2	ಬೆಂಜಮಂ/2024–25/ ಡಬ್ಲ್ಯೂಎಸ್/ವರ್ಕ್_ಇಂಡೆಂಟ್ 1480/7ನೇ ಕರೆ	2.	ರೂ.75,38,000/– / ರೂ.1,50,800/–	17.02.2025 ಸಂಜೆ 4:00 ಗಂಟೆಯವರೆಗೆ	18.02.2025 ರ ಸಂಜೆ 4:00 ಗಂಟೆಗೆ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–2)

ಮುಖ್ಯ ಅಭಿಯಂತರರ ಕಚೇರಿ (ಕಾವೇರಿ–ಕಾರ್ಯಾಚರಣೆ ಮತ್ತು ನಿರ್ವಹಣೆ) 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
4.	ಕಾವೇರಿ (ಕಾ&ನಿ–2)	ಬೆಂಜಮಂ/ಕಾನಿಅ(ಕಾವೇರಿ–ಕಾ&ನಿ)–2/ ಪಿಬಿ/3016/2024–25 ದಿನಾಂಕ: 05.02.2025	1.	ರೂ.74.14 ಲಕ್ಷಗಳು / ರೂ.1,50,000/–	24.02.2025 ಸಂಜೆ 4:00 ಗಂಟೆಯವರೆಗೆ	25.02.2025ರ ಸಂಜೆ 05:00 ಗಂಟೆಯ ನಂತರ
5.	ಕಾವೇರಿ (ಕಾ&ನಿ–2)	ಬೆಂಜಮಂ/ಕಾನಿಅ(ಕಾವೇರಿ–ಕಾ&ನಿ)–2/ ಪಿಬಿ/3019/2024–25 ದಿನಾಂಕ: 05.02.2025	2.	ರೂ.77.48 ಲಕ್ಷಗಳು / ರೂ.1,55,000/–	24.02.2025 ಸಂಜೆ 4:00 ಗಂಟೆಯವರೆಗೆ	25.02.2025ರ ಸಂಜೆ 05:00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕಾವೇರಿ – ಕಾರ್ಯಾಚರಣೆ ಮತ್ತು ನಿರ್ವಹಣೆ–2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/4923/SSC/2024-25

ಇಂಗ್ಲೆಂಡ್ ಎದುರು ಭಾರತಕ್ಕೆ ಭರ್ಜರಿ ಜಯ • 2–0ಯಿಂದ ಸರಣಿ ಕೈವಶ • ಜಡೇಜ ಮಿಂಚು

ಕಟಕ್‌ನಲ್ಲಿ ಪ್ರಜ್ವಲಿಸಿದ ಹಿಟ್‌ಮ್ಯಾನ್

ಕಟಕ್(ಪಿಟಿಐ): ಹಲವು ದಿನಗಳಿಂದ ಫಾರ್ಮ್ ಕಳೆದುಕೊಂಡು ಅನುಭವಿಸಿದ್ದ ಒತ್ತಡ ಮತ್ತು ಕ್ರಿಕೆಟ್‌ನಿಂದ ತಮ್ಮ ನಿವೃತ್ತಿಯ ಕುರಿತ ಪ್ರಶ್ನೆಗಳನ್ನು ಎದುರಿಸುವ ಮುಜುಗರಗಳೆಲ್ಲವನ್ನೂ ರೋಹಿತ್ ಶರ್ಮಾ ಅವರು ಭಾನುವಾರ ರಾತ್ರಿ ಗಂಟುಕಟ್ಟಿ ಬೌಂಡರಿಯಾಚೆ ಬಿಸಾಡಿದರು. ಏಕದಿನ ಕ್ರಿಕೆಟ್‌ನಲ್ಲಿ ತಮ್ಮ 32ನೇ ಶತಕ ದಾಖಲಿಸಿದ ಮುಂಬೈಕರ್ ಮೆರೆದಾಡಿದರು.

ಅವರ ಆಟದ ಬಲದಿಂದ ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಎರಡನೇ ಏಕದಿನ ಪಂದ್ಯವನ್ನು 4 ವಿಕೆಟ್‌ಗಳಿಂದ ಗೆದ್ದಿತು. 3 ಪಂದ್ಯಗಳ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಬಾರಾಬತಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 49.5 ಓವರ್‌ಗಳಲ್ಲಿ 304 ಗಳಿಸಿದ ಇಂಗ್ಲೆಂಡ್ ತಂಡವನ್ನು ಕಟ್ಟಿಹಾಕಲು ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ (35ಕ್ಕೆ3) ನೆರವಾದರು.

ಸವಾಲಿನ ಮೊತ್ತವನ್ನು ಬೆನ್ನತ್ತಿದ್ದ ಭಾರತಕ್ಕೆ 37 ವರ್ಷದ ರೋಹಿತ್ 90 ಎಸೆತಗಳಲ್ಲಿ 119 ರನ್ ಗಳಿಸಿ ಗೆಲುವಿನ ಕಾಣಿಕೆ ನೀಡಿದರು. 76 ಎಸೆತಗಳಲ್ಲಿ ಶತಕ ಪೂರೈಸಿದರು. ಇದೇ ತಿಂಗಳು ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೂ ಮುನ್ನ ರೋಹಿತ್ ಲಯಕ್ಕೆ ಮರಳಿದ್ದು ಭಾರತದ ಪಾಳೆಯದಲ್ಲಿ ಸಂತಸ ಮೂಡಿಸಿತು.

ಅಭಿಮಾನಿಗಳ ಪಾಲಿಗೆ ಬಹುಕಾಲದ ನಂತರ ರೋಹಿತ್ ಅವರ ಬ್ಯಾಟಿಂಗ್ ಆರ್ಭಟ ನೋಡುವ ಅವಕಾಶ ಒದಗಿಬಂದಿತು. ಅವರ ಆಟದಲ್ಲಿ 7 ಸಿಕ್ಸರ್‌ಗಳು ಮತ್ತು 12 ಬೌಂಡರಿಗಳು ಸಿಡಿದವು. ಅವರ ಮಿಂಚಿನ ಆಟದಿಂದಾಗಿ ತಂಡವು ಕೇವಲ 44.3 ಓವರ್‌ಗಳಲ್ಲಿ ಗುರಿ ಮುಟ್ಟಿತು. ಸರಣಿಯ 3ನೇ ಪಂದ್ಯವು ಬುಧವಾರ ಅಹಮದಾಬಾದಿನಲ್ಲಿ ನಡೆಯಲಿದೆ.

ರೋಹಿತ್ ಅಷ್ಟೇ ಅಲ್ಲ. ಶುಭಮನ್ ಗಿಲ್ (60; 52ಎಸೆತ, 4X9, 6X1) ಅವರ ಆಟವೂ ಸೊಗಸಾಗಿತ್ತು. ರೋಹಿತ್ ಆರ್ಭಟದಲ್ಲಿ ಗಿಲ್ ಬ್ಯಾಟಿಂಗ್ ಎದ್ದು ಕಾಣಲಿಲ್ಲ ಅಷ್ಟೇ. ಆದರೆ ಇವರಿಬ್ಬರೂ ಮೊದಲ ವಿಕೆಟ್ ಜೊತೆಯಾಟದಲ್ಲಿ 136 ರನ್ ಸೇರಿಸಿ ಗಟ್ಟಿಮುಟ್ಟಾದ ಅಡಿಪಾಯ ಹಾಕಿದರು. ಇವರಿಬ್ಬರೂ ಏಕದಿನ ಕ್ರಿಕೆಟ್‌ನಲ್ಲಿ 6ನೇ ಬಾರಿ ಶತಕದ ಜೊತೆಯಾಟದಲ್ಲಿ ಭಾಗಿಯಾದರು. ಯಶಸ್ವಿ ಜೈಸ್ವಾಲ್ ಅವರಿಗೆ ವಿಶ್ರಾಂತಿ ನೀಡಿದ್ದರಿಂದ ಗಿಲ್ ಇನಿಂಗ್ಸ್ ಆರಂಭಿಸಿದರು.

ಗಿಲ್ ಔಟಾದ ನಂತರ ಕ್ರೀಸ್‌ಗೆ ಬಂದ ವಿರಾಟ್ ಕೊಹ್ಲಿ (5 ರನ್) ಮತ್ತೊಮ್ಮೆ ವೈಫಲ್ಯ ಅನುಭವಿಸಿದರು. ಆದಿಲ್ ರಶೀದ್ ಹಾಕಿದ ಲೆಗ್‌ಬ್ರೇಕ್ ಎಸೆತವನ್ನು ಆಡುವ ಭರದಲ್ಲಿ ಕೊಹ್ಲಿ ಅವರು ವಿಕೆಟ್ ಹಿಂದಿದ್ದ ಫಿಲಿಪ್ ಸಾಲ್ಟ್‌ಗೆ ಕ್ಯಾಚಿತ್ತರು. ಸರಣಿಯ ಮೊದಲ ಪಂದ್ಯದಲ್ಲಿ ಕೊಹ್ಲಿ ಮಂಡಿನೋವಿನಿಂದ ವಿಶ್ರಾಂತಿ ಪಡೆದಿದ್ದರು.

ಕ್ರೀಸ್‌ಗೆ ಬಂದ ಇನ್ನೊಬ್ಬ ಮುಂಬೈಕರ್ ಶ್ರೇಯಸ್ ಅಯ್ಯರ್ (44 ರನ್) ಅವರು ರೋಹಿತ್ ಜೊತೆಗೂಡಿ 70 ರನ್ ಸೇರಿಸಿದರು. ಲಿವಿಂಗ್‌ಸ್ಟೋನ್ ಬೌಲಿಂಗ್‌ನಲ್ಲಿ ಫುಲ್ ಟಾಸ್ ಎಸೆತವನ್ನು ಹೊಡೆದ ರೋಹಿತ್ ಅವರು ರಶೀದ್ ಪಡೆದ ಆಕರ್ಷಕ ಕ್ಯಾಚ್‌ಗೆ ಔಟಾದರು. ಅದರೊಂದಿಗೆ ರೋಹಿತ್ ಅವರ ಸೊಗಸಾದ ಬ್ಯಾಟಿಂಗ್‌ಗೆ ತೆರೆ ಬಿತ್ತು. ಸುಂದರ ಫ್ಲಿಕ್, ಪುಲ್ ಮತ್ತು ಡ್ರೈವ್‌ಗಳ ಮೂಲಕ ಬೌಲರ್‌ಗಳ ಬೆವರಿಳಿಸಿದ ರೋಹಿತ್ ಆಟ ನೋಡುಗರ ಮನಕ್ಕೆ ಮುದ ನೀಡಿತು.

ನಂತರ ಶ್ರೇಯಸ್ ಕೂಡ ರನ್‌ಔಟ್ ಆದರು. ಕೆ.ಎಲ್. ರಾಹುಲ್ (10 ರನ್) ಮತ್ತು ಹಾರ್ದಿಕ್ ಪಾಂಡ್ಯ (10 ರನ್) ಕೂಡ ಅಗ್ಗಕ್ಕೆ ವಿಕೆಟ್ ಚೆಲ್ಲಿದರು. ಆದರೂ ಗೆಲುವಿನ ಅವಕಾಶ ಭಾರತಕ್ಕೆ ಹೆಚ್ಚು ಇತ್ತು. ಆದ್ದರಿಂದ ಅಕ್ಷರ್ ಪಟೇಲ್ (ಅಜೇಯ 41) ಮತ್ತು ರವೀಂದ್ರ ಜಡೇಜ (ಅಜೇಯ 11) ಅವರು ತಾಳ್ಮೆಯಿಂದ ಆಡಿದರು. ಇನಿಂಗ್ಸ್‌ನಲ್ಲಿ ಇನ್ನೂ 33 ಎಸೆತಗಳು ಬಾಕಿ ಇರುವಾಗಲೇ ತಂಡವನ್ನು ಗೆಲುವಿನ ದಡ ಸೇರಿಸಿದರು.

ರನ್ 119
ಎಸೆತ 90
ಬೌಂಡರಿ 12
ಸಿಕ್ಸರ್ 7

ರೋಹಿತ್ ಶರ್ಮಾ

ಪಿಟಿಐ ಚಿತ್ರ

ಏಕದಿನ ಕ್ರಿಕೆಟ್: ಗರಿಷ್ಠ ಸಿಕ್ಸರ್

ಆಟಗಾರ	ದೇಶ	ಪಂದ್ಯ	ಸಿಕ್ಸರ್
ಶಾಹೀದ್ ಅಫ್ರಿದಿ	ಪಾಕಿಸ್ತಾನ	398	351
ರೋಹಿತ್ ಶರ್ಮಾ	ಭಾರತ	267	338
ಕ್ರಿಸ್ ಗೇಲ್	ವೆಸ್ಟ್‌ಇಂಡೀಸ್	301	331
ಸನತ್ ಜಯಸೂರ್ಯ	ಶ್ರೀಲಂಕಾ	445	270
ಎಂ.ಎಸ್.ಧೋನಿ	ಭಾರತ	350	229

ರಾಹುಲ್ ದ್ರಾವಿಡ್ ದಾಖಲೆ ಮೀರಿದ ರೋಹಿತ್ ಶರ್ಮಾ

ರೋಹಿತ್ ಶರ್ಮಾ ಅವರು ಇಲ್ಲಿ ರಾಹುಲ್ ದ್ರಾವಿಡ್ ಅವರ ದಾಖಲೆಯನ್ನು ಮೀರಿನಿಂತರು. ರೋಹಿತ್ ಏಕದಿನ ಕ್ರಿಕೆಟ್‌ನಲ್ಲಿ 10,987 ರನ್ ಗಳಿಸಿದರು. ಇದರೊಂದಿಗೆ ದ್ರಾವಿಡ್ (10,889) ದಾಖಲೆ ಮೀರಿದರು. 11 ಸಾವಿರ ರನ್ ಕ್ಲಬ್ ಸೇರಲು ರೋಹಿತ್ ಅವರಿಗೆ ಇನ್ನೂ 13 ರನ್‌ಗಳು ಮಾತ್ರ ಬೇಕು.

ಕೆಟ್ಟು ಹೋದ ಫ್ಲಡ್‌ಲೈಟ್: ಭಾರತ ತಂಡದ ಬ್ಯಾಟಿಂಗ್ ನಡೆಯುವ ಹೊತ್ತಿನಲ್ಲಿ ಕ್ರೀಡಾಂಗಣದ ಫ್ಲಡ್‌ಲೈಟ್‌ಗಳಲ್ಲಿ ಸಮಸ್ಯೆ ತಲೆದೋರಿತು. ಇದರಿಂದಾಗಿ ಬೆಳಕಿನಲ್ಲಿ ವ್ಯತ್ಯಾಸ ಕಂಡುಬಂದಿತು. ಆದ್ದರಿಂದ 35 ನಿಮಿಷ ಆಟ ಸ್ಥಗಿತವಾಯಿತು. ಈ ಹಂತದಲ್ಲಿ ರೋಹಿತ್ 29 ರನ್ ಗಳಿಸಿ ಆಡುತ್ತಿದ್ದರು. ಫ್ಲಡ್‌ಲೈಟ್‌ಗಳು ದುರಸ್ತಿಯಾದ ನಂತರ ಮತ್ತೆ ಆಟ ಆರಂಭವಾಯಿತು. ರೋಹಿತ್ ಪ್ರಜ್ವಲಿಸಿದರು.

ಸ್ಕೋರ್ ಕಾರ್ಡ್

ಇಂಗ್ಲೆಂಡ್: 304 (49.5 ಓವರ್‌ಗಳಲ್ಲಿ)
ಸಾಲ್ಟ್ ಸಿ ಜಡೇಜ ಬಿ ವರುಣ್ 26 (29ಎ, 4x2, 6x1)
ಡಕೆಟ್ ಸಿ ಪಾಂಡ್ಯ ಬಿ ಜಡೇಜ 65 (56ಎ, 4x10)
ರೂಟ್ ಸಿ ಕೊಹ್ಲಿ ಬಿ ಜಡೇಜ 69 (72ಎ, 4x6)
ಬ್ರೂಕ್ ಸಿ ಶುಭಮನ್ ಬಿ ಹರ್ಷಿತ್ 31 (52ಎ, 4x3, 6x1)
ಬಟ್ಲರ್ ಸಿ ಶುಭಮನ್ ಬಿ ಪಾಂಡ್ಯ 34 (35ಎ, 4x2)
ಲಿವಿಂಗ್‌ಸ್ಟೋನ್ ರನೌಟ್ (ಅಯ್ಯರ್/ರಾಹುಲ್) 41 (32ಎ, 4x2, 6x2)
ಓವರ್ಟನ್ ಸಿ ಶುಭಮನ್ ಬಿ ಜಡೇಜ 6 (10ಎ)
ಅಟ್ಕಿನ್ಸನ್ ಸಿ ಕೊಹ್ಲಿ ಬಿ ಶಮಿ 3 (7ಎ)
ರಶೀದ್ ರನೌಟ್ (ಜಡೇಜ/ಹರ್ಷಿತ್/ರಾಹುಲ್) 14 (5ಎ, 4x3)
ಮಾರ್ಕ್ ರನೌಟ್ (ರಾಹುಲ್) 0 (1ಎ)
ಸಕಿಬ್ ಮೊಹಮ್ಮದ್ ಔಟಾಗದೇ 0 (1ಎ)
ಇತರೆ: 15 (ಲೆಗ್‌ಬೈ 2, ನೋಬಾಲ್ 1, ವೈಡ್ 12)
ವಿಕೆಟ್ ಪತನ: 1-81 (ಫಿಲಿಪ್ ಸಾಲ್ಟ್, 10.5), 2-102 (ಬೆನ್ ಡಕೆಟ್, 15.5), 3-168 (ಹ್ಯಾರಿ ಬ್ರೂಕ್, 29.4), 4-219 (ಜೋಸ್ ಬಟ್ಲರ್, 38.4), 5-248 (ಜೋ ರೂಟ್, 42.3), 6-258 (ಜೇಮಿ ಓವರ್ಟನ್, 44.6), 7-272 (ಗಸ್ ಅಟ್ಕಿನ್ಸನ್, 47.1), 8-297 (ಅದಿಲ್ ರಶೀದ್, 48.5), 9-304 (ಲಿಯಾಮ್ ಲಿವಿಂಗ್‌ಸ್ಟೋನ್, 49.4), 10-304 (ಮಾರ್ಕ್ ವುಡ್, 49.5)
ಬೌಲಿಂಗ್: ಮೊಹಮ್ಮದ್ ಶಮಿ 7.5–0–66–1, ಹರ್ಷಿತ್ ರಾಣಾ 9–0–62–1, ಹಾರ್ದಿಕ್ ಪಾಂಡ್ಯ 7–0–53–1, ವರುಣ್ ಚಕ್ರವರ್ತಿ 10–0–54–1, ರವೀಂದ್ರ ಜಡೇಜ 10–1–35–3, ಅಕ್ಷರ್ ಪಟೇಲ್ 6–0–32–0

ಭಾರತ: 6ಕ್ಕೆ 308 (44.3 ಓವರ್‌ಗಳಲ್ಲಿ)
ರೋಹಿತ್ ಸಿ ರಶೀದ್ ಬಿ ಲಿವಿಂಗ್‌ಸ್ಟೋನ್ 119 (90ಎ, 4x12, 6x7)
ಶುಭಮನ್ ಬಿ ಓವರ್ಟನ್ 60 (52ಎ, 4x9, 6x1)
ಕೊಹ್ಲಿ ಸಿ ಸಾಲ್ಟ್ ಬಿ ರಶೀದ್ 5 (8ಎ, 4x1)
ಶ್ರೇಯಸ್ ರನೌಟ್ (ಬಟ್ಲರ್;ರಶೀದ್) 44 (47ಎ. 4x3, 6x1)
ಅಕ್ಷರ್ ಪಟೇಲ್ ಔಟಾಗದೇ 41 (43ಎ, 4x4)
ರಾಹುಲ್ ಸಿ ಸಾಲ್ಟ್ ಬಿ ಓವರ್ಟನ್ 10 (14ಎ, 4x1)
ಪಾಂಡ್ಯ ಸಿ ಓವರ್ಟನ್ ಬಿ ಅಟ್ಕಿನ್ಸನ್ 10 (6ಎ, 4x2)
ರವೀಂದ್ರ ಜಡೇಜ ಔಟಾಗದೇ 11 (7ಎ, 4x2)
ಇತರೆ: 8 (ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1-136 (ಶುಭಮನ್ ಗಿಲ್, 16.4), 2-150 (ವಿರಾಟ್ ಕೊಹ್ಲಿ, 19.3), 3-220 (ರೋಹಿತ್ ಶರ್ಮಾ, 29.4), 4-258 (ಶ್ರೇಯಸ್ ಅಯ್ಯರ್, 36.6), 5-275 (ಕೆ.ಎಲ್.ರಾಹುಲ್, 40.4), 6-286 (ಹಾರ್ದಿಕ್ ಪಾಂಡ್ಯ, 41.6)
ಬೌಲಿಂಗ್: ಸಕಿಬ್ ಮೊಹಮ್ಮದ್ 6–0–36–0, ಗಸ್ ಅಟ್ಕಿನ್ಸನ್ 7–0–65–1, ಮಾರ್ಕ್ ವುಡ್ 8–0–57–0, ಅದಿಲ್ ರಶೀದ್ 10–0–78–1, ಜೇಮಿ ಓವರ್ಟನ್ 5–0–27–2, ಲಿಯಾಮ್ ಲಿವಿಂಗ್‌ಸ್ಟೋನ್ 7–0–29–1, ಜೋ ರೂಟ್ 1.3–0–15–0
ಪಂದ್ಯದ ಆಟಗಾರ: ರೋಹಿತ್ ಶರ್ಮಾ

ಫಲಿತಾಂಶ: ಭಾರತಕ್ಕೆ 4 ವಿಕೆಟ್‌ಗಳ ಜಯ, 2-0 ಸರಣಿ ಮುನ್ನಡೆ

73 ಸೆಕೆಂಡುಗಳಲ್ಲಿ ಓವರ್ ಮುಗಿಸಿದ ಜಡೇಜ

ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಅವರು ಭಾನುವಾರ ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಕೇವಲ 73 ಸೆಕೆಂಡುಗಳಲ್ಲಿ ಒಂದು ಓವರ್ ಹಾಕಿದರು. ಇನಿಂಗ್ಸ್‌ನ 24ನೇ ಓವರ್ ಬೌಲಿಂಗ್ ಮಾಡಿದ ಜಡೇಜ ಈ ದಾಖಲೆ ಬರೆದರು. ಈ ಓವರ್ ಮೇಡನ್ ಕೂಡ ಆಯಿತು. ಇಂಗ್ಲೆಂಡ್ ಬ್ಯಾಟರ್ ಹ್ಯಾರಿ ಬ್ರೂಕ್ ಅವರು ಆರು ಎಸೆತಗಳನ್ನೂ ಎದುರಿಸಿದರು. ಈ ಪಂದ್ಯದಲ್ಲಿ ಅವರು 3 ವಿಕೆಟ್‌ಗಳನ್ನೂ ಗಳಿಸಿದರು. ಅವರು ಕಳೆದ ಪಂದ್ಯದಲ್ಲಿಯೂ 3 ವಿಕೆಟ್ ಗಳಿಸಿದ್ದರು. ಎಲ್ಲ ಮಾದರಿಗಳಲ್ಲಿ ಸೇರಿ 6000 ಸಾವಿರ ರನ್ ಮತ್ತು 600 ವಿಕೆಟ್ ಗಳಿಸಿದ ದಾಖಲೆಯನ್ನೂ ಮಾಡಿದ್ದರು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಜೆಮ್ಶೆಡ್‌ಪುರ್ ಎಫ್‌ಸಿ ವಿರುದ್ಧದ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡದ ಎಡ್ಗರ್ ಮೆಂಡೇಜ್ ಅವರು ಗೋಲು ಗಳಿಸಲು ಯತ್ನಿಸಿದರು ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಐಎಸ್‌ಎಲ್: ಅಲ್ಬರ್ಟೊ ನೊಗೇರಾ ಡಬಲ್ ಗೋಲು

ತವರಿನಂಗಳದಲ್ಲಿ ಗೆದ್ದ ಬೆಂಗಳೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಸೇರಿದ್ದ ಅಭಿಮಾನಿಗಳಿಗೆ ಬೆಂಗಳೂರು ಫುಟ್‌ಬಾಲ್ ಕ್ಲಬ್ ಭರಪೂರ ಮನರಂಜನೆ ನೀಡಿತು. ಜೊತೆಗೆ ಗೆಲುವಿನ ಉಡುಗೊರೆಯನ್ನೂ ಕೊಟ್ಟಿತು.

ಅಲ್ಬರ್ಟೊ ನೊಗೇರಾ ಹೊಡೆದ ಎರಡು ಗೋಲುಗಳ ನೆರವಿನಿಂದ ಬಿಎಫ್‌ಸಿ ತಂಡವು 3–0ಯಿಂದ ಜೆಮ್ಶೆಡ್‌ಪುರ್ ಎಫ್‌ಸಿ ವಿರುದ್ಧ ಜಯಿಸಿತು. ಆರಂಭದಿಂದಲೂ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಬೆಂಗಳೂರು ತಂಡದ ಎಡ್ಗರ್ ಮೆಂಡೇಜ್ (43ನಿ) ಮೊದಲ ಗೋಲು ಹೊಡೆದರು.

ಬಿಎಫ್‌ಸಿಯನ್ನು ಹಿಂದಿಕ್ಕಲು ಜೆಎಫ್‌ಸಿ ಆಟಗಾರರು ಬಹುವಾಗಿ ಪ್ರಯತ್ನಿಸಿದರು. ಆದರೆ, ಸುನಿಲ್ ಚೆಟ್ರಿ ಬಳಗದ ರಕ್ಷಣಾ ಆಟಗಾರರು ಯಾವುದೇ ಅವಕಾಶ ನೀಡಲಿಲ್ಲ.

57ನೇ ನಿಮಿಷದಲ್ಲಿ ಅಲ್ಬರ್ಟೊ ಗೋಲು ಗಳಿಸಿ, ತಂಡದ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ಅಲ್ಬರ್ಟೊ 82ನೇ ನಿಮಿಷದಲ್ಲಿ ಮತ್ತೊಂದು ಗೋಲು ಹೊಡೆದು ಜೆಎಫ್‌ಸಿ ತಂಡಕ್ಕೆ ಆಘಾತ ನೀಡಲು ವೇದಿಕೆ ಸಿದ್ಧಗೊಳಿಸಿದರು. ಇಡೀ ಪಂದ್ಯದಲ್ಲಿ ಚೆಂಡಿನ ಮೇಲೆ ಬಿಎಫ್‌ಸಿಯು ಬಹುಪಾಲು ಅವಧಿಯಲ್ಲಿ ನಿಯಂತ್ರಣ ಸಾಧಿಸಿತ್ತು. ಬಿಎಫ್‌ಸಿ ಆಟಗಾರರು ಮಾಡಿದ 331 ಪಾಸ್‌ಗಳಲ್ಲಿ ಶೇ 68ರಷ್ಟು ನಿಖರವಾಗಿದ್ದವು. ಉಭಯ ತಂಡಗಳ ಒಬ್ಬೊಬ್ಬ ಆಟಗಾರ ಹಳದಿ ಕಾರ್ಡ್ ದರ್ಶನ ಕೂಡ ಮಾಡಿದರು.

ಬೆಂಗಳೂರು ತಂಡವು 20 ಪಂದ್ಯಗಳನ್ನು ಆಡಿ, 31 ಅಂಕಗಳನ್ನು ಗಳಿಸಿದೆ. ಪಾಯಿಂಟ್ ಪಟ್ಟಿಯಲ್ಲಿ 4ನೇ ಸ್ಥಾನದಲ್ಲಿದೆ. 9 ಪಂದ್ಯಗಳಲ್ಲಿ ಗೆದ್ದು, 7ರಲ್ಲಿ ಸೋತಿತ್ತು. 4ರಲ್ಲಿ ಡ್ರಾ ಮಾಡಿಕೊಂಡಿದೆ. ಜೆಎಫ್‌ಸಿ ತಂಡವು 19 ಪಂದ್ಯಗಳಿಂದ 34 ಅಂಕ ಗಳಿಸಿದೆ. 3ನೇ ಸ್ಥಾನದಲ್ಲಿ ಮುಂದುವರಿದಿದೆ.

ಮೋಹನ್ ಬಾಗನ್ (46 ಅಂಕ) ಹಾಗೂ ಗೋವಾ ಎಫ್‌ಸಿ (36 ಅಂಕ) ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನದಲ್ಲಿವೆ. ಮುಂಬೈ ಸಿಟಿ (31 ಅಂಕ) ಐದನೇ ಸ್ಥಾನದಲ್ಲಿದೆ.

ರಣಜಿ ಟ್ರೋಫಿ: ಅಂಕಿತ್ ಶತಕ



ಅಂಕಿತ್

ಕೋಲ್ಕತ್ತ (ಪಿಟಿಐ): ನಾಯಕ ಅಂಕಿತ್ ಕುಮಾರ್ (136; 206ಎ, 4X21) ಶತಕದ ಬಲದಿಂದ ಹರಿಯಾಣ ತಂಡವು ಮುಂಬೈ ವಿರುದ್ಧದ ರಣಜಿ ಟ್ರೋಫಿ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಇನಿಂಗ್ಸ್ ಮುನ್ನಡೆಯತ್ತ ಹೆಜ್ಜೆ ಇಟ್ಟಿದೆ.

ಆದರೆ, ಮೊದಲ ದಿನದಾಟದಲ್ಲಿ ಬ್ಯಾಟಿಂಗ್‌ನಲ್ಲಿ ತಂಡಕ್ಕೆ ಆಸರೆಯಾಗಿದ್ದ ತನುಷ್ ಕೋಟ್ಯಾನ್ (57ಕ್ಕೆ2) ಮತ್ತು ಶಮ್ಸ್ ಮುಲಾನಿ (59ಕ್ಕೆ2) ಅವರು ಭಾನುವಾರ ಬೌಲಿಂಗ್‌ನಲ್ಲಿಯೂ ಮಿಂಚಿದರು. ತಲಾ ಎರಡು ವಿಕೆಟ್ ಗಳಿಸಿದ ಅವರು ಹರಿಯಾಣದ ಓಟಕ್ಕೆ ತಡೆಯೊಡ್ಡಿದ್ದಾರೆ. ಇದರಿಂದಾಗಿ ಎರಡನೇ ದಿನದಾಟದ ಮುಕ್ತಾಯಕ್ಕೆ ಹರಿಯಾಣ 72 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 263 ರನ್ ಗಳಿಸಿದೆ. ಮೊದಲ ಇನಿಂಗ್ಸ್ ಬಾಕಿ ಚುಕ್ತಾ ಮಾಡಲು ಇನ್ನೂ 52 ರನ್ ಬೇಕಿದೆ. ರೋಹಿತ್ ಪ್ರಮೋದ್ ಶರ್ಮಾ (ಬ್ಯಾಟಿಂಗ್ 22) ಮತ್ತು ಅನುಜ್ ಠಕ್ರಾಲ್ (ಬ್ಯಾಟಿಂಗ್ 5) ಕ್ರೀಸ್‌ನಲ್ಲಿದ್ದಾರೆ.

ಶನಿವಾರ ದಿನದಾಟದಲ್ಲಿ ಮುಂಬೈ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತ್ತು. ಆಗ ತನುಷ್ ಮತ್ತು ಶಮ್ಸ್ ಅವರು ದಿಟ್ಟ ಆಟದಿಂದ ಆಸರೆಯಾಗಿದ್ದರು. ಅದರಿಂದಾಗಿ ತಂಡವು ದಿನದಂತ್ಯಕ್ಕೆ 81 ಓವರ್‌ಗಳಲ್ಲಿ 8ಕ್ಕೆ278 ರನ್ ಗಳಿಸಿತ್ತು. ತನುಷ್ 85 ರನ್ ಗಳಿಸಿ ಕ್ರೀಸ್‌ನಲ್ಲಿದ್ದರು.

ಭಾನುವಾರ ಬೆಳಿಗ್ಗೆ ಆಟ ಮುಂದುವರಿಸಿದ ತನುಷ್ ಮತ್ತು ಮೋಹಿತ್ ಅವಸ್ಥಿ ಸೇರಿ ತಂಡದ ಮೊತ್ತವನ್ನು ತ್ರಿಶತಕದ ಗಡಿ ದಾಟಿಸಿದರು. ಆದರೆ ತನುಷ್ ಅವರು, ತಮ್ಮ ಶತಕಕ್ಕೆ ಮೂರು ರನ್ ಅಗತ್ಯವಿದ್ದಾಗ ಸುಮಿತ್ ಕುಮಾರ್ ಬೌಲಿಂಗ್‌ನಲ್ಲಿ ಔಟಾದರು. ತಂಡವು ಇನಿಂಗ್ಸ್‌ನಲ್ಲಿ 315 ರನ್ ಗಳಿಸಿತು.

ಗುಜರಾತ್ ಮುನ್ನಡೆ: ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಗುಜರಾತ್ ತಂಡವು ಸೌರಾಷ್ಟ್ರದ ವಿರುದ್ಧ 44 ರನ್‌ಗಳ ಮುನ್ನಡೆ ಸಾಧಿಸಿದೆ.

ಸಂಕಷ್ಟದಲ್ಲಿ ತಮಿಳುನಾಡು

ಕನ್ನಡಿಗ ಕರುಣ್ ನಾಯರ್ (122; 243ಎ. 4X18, 6X1) ಅವರ ಅಮೋಘ ಶತಕದ ಬಲದಿಂದ ವಿದರ್ಭ ತಂಡವು ಮೊದಲ ಇನಿಂಗ್ಸ್‌ನಲ್ಲಿ 353 ರನ್ ಗಳಿಸಿತು. ಆದರೆ ಅದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ತಮಿಳುನಾಡು ತಂಡಕ್ಕೆ ವಿದರ್ಭದ ಮಧ್ಯಮವೇಗಿ ಆದಿತ್ಯ ಠಾಕ್ರೆ (18ಕ್ಕೆ4) ಪೆಟ್ಟು ನೀಡಿದರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ತಮಿಳುನಾಡು ತಂಡವು 46 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಮೊದಲ ಇನಿಂಗ್ಸ್ ಹಿನ್ನಡೆಯ ಭೀತಿ ಎದುರಿಸುತ್ತಿದೆ.

ಸೌರಾಷ್ಟ್ರ ತಂಡವು ಮೊದಲ ಇನಿಂಗ್ಸ್‌ನಲ್ಲಿ 216 ರನ್‌ಗಳಿಗೆ ಆಲೌಟ್ ಆಗಿತ್ತು. ಅದಕ್ಕುತ್ತರವಾಗಿ ಗುಜರಾತ್ ಎರಡನೇ ದಿನದಾಟದ ಅಂತ್ಯಕ್ಕೆ 95 ಓವರ್‌ಗಳಲ್ಲಿ 4ಕ್ಕೆ260 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ: ಮೊದಲ ಇನಿಂಗ್ಸ್–ಮುಂಬೈ: 88.2 ಓವರ್‌ಗಳಲ್ಲಿ 315 (ತನುಷ್ ಕೋಟ್ಯಾನ್ 97, ಮೋಹಿತ್ ಅವಸ್ಥಿ ಔಟಾಗದೆ 18, ಅನ್ಶುಲ್ ಕಾಂಬೋಜ್ 71ಕ್ಕೆ3, ಸುಮಿತ್ ಕುಮಾರ್ 81ಕ್ಕೆ3) ಹರಿಯಾಣ: 72 ಓವರ್‌ಗಳಲ್ಲಿ 5ಕ್ಕೆ263 (ಲಕ್ಷ್ಯ ದಲಾಲ್ 34, ಅಂಕಿತ್ ಕುಮಾರ್ 136, ನಿಶಾಂತ್ ಸಿಂಧು 20, ರೋಹಿತ್ ಪಿ ಶರ್ಮಾ ಬ್ಯಾಟಿಂಗ್ 22, ಶಮ್ಸ್ ಮುಲಾನಿ 59ಕ್ಕೆ2, ತನುಷ್ ಕೋಟ್ಯಾನ್ 57ಕ್ಕೆ2)
ರಾಜ್‌ಕೋಟ್: ಮೊದಲ ಇನಿಂಗ್ಸ್: ಸೌರಾಷ್ಟ್ರ – 72.1 ಓವರ್‌ಗಳಲ್ಲಿ 216. ಗುಜರಾತ್: 95 ಓವರ್‌ಗಳಲ್ಲಿ 4ಕ್ಕೆ260 (ಪ್ರಿಯಾಂಕ್ ಪಾಂಚಾಲ್ 25, ಮೆನನ್ ಮನನ್ ಹಿಂಗರಜಿಯಾ 83, ಜಯಮೀತ್ ಪಟೇಲ್ ಬ್ಯಾಟಿಂಗ್ 88, ಊರ್ವಿ ಪಟೇಲ್ ಬ್ಯಾಟಿಂಗ್ 29, ಚಿರಾಗ್ ಜಾನಿ 25ಕ್ಕೆ2)
ನಾಗ್ಪುರ: ಮೊದಲ ಇನಿಂಗ್ಸ್: ವಿದರ್ಭ: 121.1 ಓವರ್‌ಗಳಲ್ಲಿ 353 (ಕರುಣ್ ನಾಯರ್ 122, ಹರ್ಷ ದುಬೆ 69, ಸೋನು ಯಾದವ್ 91ಕ್ಕೆ3, ವಿಜಯ ಶಂಕರ್ 75ಕ್ಕೆ3) ತಮಿಳುನಾಡು: 46 ಓವರ್‌ಗಳಲ್ಲಿ 6ಕ್ಕೆ159 (ಎನ್. ಜಗದೀಶನ್ 22, ವಿಜಯ ಶಂಕರ್ 22, ಆಂದ್ರೆ ಸಿದ್ಧಾರ್ಥ್ 65, ಪ್ರದೋಷ್ ರಂಜನ್ ಪಾಲ್ ಬ್ಯಾಟಿಂಗ್ 18, ಆದಿತ್ಯ ಠಾಕ್ರೆ 18ಕ್ಕೆ4)

ಆಸ್ಟ್ರೇಲಿಯಾ ತಂಡಕ್ಕೆ ಟೆಸ್ಟ್ ಸರಣಿ

ಗಾಲ್ (ಪಿಟಿಐ): ಮ್ಯಾಥ್ಯೂ ಕುನೇಮನ್ ಮತ್ತು ವೆಬ್‌ಸ್ಟರ್ ಅವರ ಅಮೋಘ ಬೌಲಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ಶ್ರೀಲಂಕಾ ಎದುರಿನ ಎರಡನೇ ಹಾಗೂ ಕೊನೆ ಟೆಸ್ಟ್‌ನಲ್ಲಿ 9 ವಿಕೆಟ್‌ಗಳಿಂದ ಜಯಿಸಿತು. ಸರಣಿಯನ್ನು 2–0ಯಿಂದ ಗೆದ್ದಿತು.

ಭಾನುವಾರ ಮುಕ್ತಾಯವಾದ ಪಂದ್ಯದಲ್ಲಿ 75 ರನ್‌ಗಳ ಗೆಲುವಿನ ಗುರಿಯನ್ನು ಆಸ್ಟ್ರೇಲಿಯಾ ತಂಡವು 1 ವಿಕೆಟ್ ಕಳೆದುಕೊಂಡು 17.4 ಓವರ್‌ಗಳಲ್ಲಿ ಸಾಧಿಸಿತು.

ಈ ಸರಣಿ ಜಯದೊಂದಿಗೆ ಆಸ್ಟ್ರೇಲಿಯಾ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್ ಪಟ್ಟಿಯ ಎರಡನೇ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡಿತು ದಕ್ಷಿಣ ಆಫ್ರಿಕಾ (ಶೇ 69.44) ಮೊದಲ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ (67.54) ನಂತರದ ಸ್ಥಾನದಲ್ಲಿದೆ.

ಭಾರತ ತಂಡವನ್ನು ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡವು 3–1ರಿಂದ ಸೋಲಿಸಿತ್ತು. ಆಗಲೇ ಡಬ್ಲ್ಯುಟಿಸಿ ಫೈನಲ್ ಖಚಿತಪಡಿಸಿಕೊಂಡಿತ್ತು. ಲಾರ್ಡ್ಸ್‌ನಲ್ಲಿ ಜೂನ್ 11ರಿಂದ ಫೈನಲ್ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಶ್ರೀಲಂಕಾ: 97.4 ಓವರ್‌ಗಳಲ್ಲಿ 257. ಆಸ್ಟ್ರೇಲಿಯಾ: 106.4 ಓವರ್‌ಗಳಲ್ಲಿ 414. ಎರಡನೇ ಇನಿಂಗ್ಸ್: 68.1 ಓವರ್‌ಗಳಲ್ಲಿ 231 (ಏಂಜೆಲೊ ಮ್ಯಾಥ್ಯೂಸ್ 76, ಕುಶಾಲ ಮೆಂಡಿಸ್ 50, ಮ್ಯಾಥ್ಯೂ ಕುನೇಮನ್ 63ಕ್ಕೆ4, ವೆಬ್‌ಸ್ಟರ್ 6ಕ್ಕೆ2) ಆಸ್ಟ್ರೇಲಿಯಾ: 17.4 ಓವರ್‌ಗಳಲ್ಲಿ 1ವಿಕೆಟ್‌ಗೆ 75 (ಉಸ್ಮಾನ್ ಖ್ವಾಜಾ ಔಟಾಗದೇ 27, ಟ್ರಾವಿಸ್ ಹೆಡ್ 20, ಮಾರ್ನಸ್ ಲಾಬುಷೇನ್ ಔಟಾಗದೇ 26, ಪ್ರಭಾತ್ ಜಯಸೂರ್ಯ 20ಕ್ಕೆ1) ಪಂದ್ಯಶ್ರೇಷ್ಠ: ಅಲೆಕ್ಸ್ ಕ್ಯಾರಿ, ಸರಣಿ ಶ್ರೇಷ್ಠ: ಸ್ಟಿವನ್ ಸ್ಮಿತ್.

ಕ್ರಿಕೆಟ್‌ಗೆ ದಿಮುತ್ ವಿದಾಯ

ದುಬೈ (ಪಿಟಿಐ): ಶ್ರೀಲಂಕಾ ಕ್ರಿಕೆಟ್ ತಂಡದ ಆಟಗಾರ ದಿಮುತ್ ಕರುಣಾರತ್ನೆ ಅವರು ತಮ್ಮ ವೃತ್ತಿಜೀವನದ 100ನೇ ಹಾಗೂ ಕೊನೆಯ ಟೆಸ್ಟ್ ಪಂದ್ಯ ಆಡಿದರು. ಇದರೊಂದಿಗೆ ಅಂತರ ರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದರು.

ಭಾನುವಾರ ಮುಕ್ತಾಯವಾದ ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಅವರಿಗೆ ಕೊನೆಯದಾಯಿತು. ಈ ಟೆಸ್ಟ್ ಪಂದ್ಯದಲ್ಲಿ ಕರುಣಾರತ್ನೆ 36 ಮತ್ತು 14 ರನ್‌ಗಳನ್ನು ಗಳಿಸಿದರು.

‘ಟೆಸ್ಟ್‌ನಲ್ಲಿ ದಿಮುತ್ ಉತ್ತಮ ಬ್ಯಾಟರ್ ಆಗಿ ಯಶಸ್ವಿಯಾಗಿದ್ದಾರೆ. 100ನೇ ಟೆಸ್ಟ್ ಪಂದ್ಯಗಳನ್ನು ಆಡಿದ ಸಾಧನೆ ಮಾಡಿದ ಲಂಕಾದ 7ನೇ ಬ್ಯಾಟರ್ ಎನಿಸಿದರು. ಅವರ ಸಾಧನೆಗೆ ಅಭಿನಂದನೆಗಳು’ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಖ್ಯಸ್ಥ ಜಯ್ ಶಾ ತಿಳಿಸಿದ್ದಾರೆ.

36 ವರ್ಷದ ದಿಮುತ್ ಕರುಣಾರತ್ನೆ ಟೆಸ್ಟ್‌ನಲ್ಲಿ 7,222 ರನ್ ಕಲೆ ಹಾಕಿದ್ದಾರೆ. 244 ರನ್ ಅವರ ವೈಯಕ್ತಿಕ ಶ್ರೇಷ್ಠ ಸ್ಕೋರ್ ಆಗಿದೆ. 50 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳನ್ನಾಡಿದ್ದು 1,316 ರನ್ ಗಳಿಸಿದ್ದಾರೆ.

ರಚಿನ್ ಹಣೆಗೆ ಅಪ್ಪಳಿಸಿದ ಚೆಂಡು



ಲಾಹೋರ್ (ಎಎಫ್‌ಪಿ): ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಆಲ್‌ರೌಂಡರ್ ರಚಿನ್ ರವೀಂದ್ರ ಅವರು ಶನಿವಾರ ಇಲ್ಲಿ ನಡೆದ ಅಭ್ಯಾಸ ಪಂದ್ಯದಲ್ಲಿ ಹಣೆಗೆ ಚೆಂಡು ಬಡಿದು ಗಾಯಗೊಂಡಿದ್ದಾರೆ. ಅವರು ಕ್ಯಾಚ್ ಪಡೆಯುವ ವೇಳೆ ಈ ಘಟನೆ ನಡೆಯಿತು. ತಲೆಯಿಂದ ರಕ್ತಸ್ರಾವ ಆಯಿತು. ಕೂಡಲೇ ಅವರಿಗೆ ಚಿಕಿತ್ಸೆ ನೀಡಲಾಯಿತು.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ (ಹೊನಲು ಬೆಳಕು) ಆತಿಥೇಯ ಪಾಕ್ ತಂಡದ ಬ್ಯಾಟರ್ ಖುಶ್ ದಿಲ್ ಶಾ ಅವರು ಎತ್ತರಕ್ಕೆ ಹೊಡೆದ ಚೆಂಡನ್ನು ಹಿಡಿಯಲು ರಚಿನ್ ಪ್ರಯತ್ನಿಸಿದರು. ಆದರೆ ಚೆಂಡಿನ ಚಲನೆಯನ್ನು ನಿಖರವಾಗಿ ಗುರುತಿಸುವಲ್ಲಿ ತುಸು ತಪ್ಪಿದ ಅವರ ಹಣೆಗೆ ಚೆಂಡು ಅಪ್ಪಳಿಸಿತು. ಇದರಿಂದಾಗಿ ಅವರು ತೀವ್ರ ನೋವಿನಿಂದ ಕುಸಿದರು. ಈ ಸಂದರ್ಭದಲ್ಲಿ ಮೈದಾನದಲ್ಲಿದ್ದ ಪ್ರೇಕ್ಷಕ ಹಾಗೂ ಡ್ರೆಸಿಂಗ್ ಕೋಣೆಯಲ್ಲಿದ್ದ ಉಭಯ ತಂಡಗಳ ಆಟಗಾರರಲ್ಲಿ ಆತಂಕ ಮೂಡಿತ್ತು.

ವೈದ್ಯಕೀಯ ತಂಡ ಮತ್ತು ಭದ್ರತಾ ಸಿಬ್ಬಂದಿಯು ಕೂಡಲೇ ಅವರತ್ತ ಧಾವಿಸಿದರು. ವೈದ್ಯರು ಅವರಿಗೆ ಚಿಕಿತ್ಸೆ ನೀಡಿ ಬ್ಯಾಂಡೇಜ್ ಹಾಕಿದರು. ವೈದ್ಯರ ನೆರವಿನಿಂದ ರಚಿನ್ ಮೈದಾನ ತೊರೆದರು.

ಯುಪಿ ವಾರಿಯರ್ಸ್‌ಗೆ ದೀಪ್ತಿ ನಾಯಕಿ

ನವದೆಹಲಿ (ಪಿಟಿಐ): ಇದೇ ತಿಂಗಳು ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಯುಪಿ ವಾರಿಯರ್ಸ್ ತಂಡಕ್ಕೆ ದೀಪ್ತಿ ಶರ್ಮಾ ಅವರನ್ನು ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ.

ತಂಡದ ಪೂರ್ಣಾವಧಿ ನಾಯಕಿಯಾಗಿದ್ದ ಅಲಿಸಾ ಹೀಲಿ ಅವರಿಗೆ ಕಾಲಿನ ಗಾಯದಿಂದ ಬಳಲಿದ್ದಾರೆ. ಅವರು ಚಿಕಿತ್ಸೆಗಾಗಿ ತೆರಳಿದ್ದು ಈ ಬಾರಿಯ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಕಿರೀಟ ಮುಂಬೈ ಇಂಡಿಯನ್ಸ್ ಕೇಪ್‌ಟೌನ್ ತಂಡವು ದಕ್ಷಿಣ ಆಫ್ರಿಕಾದ ಎಸ್‌ಎ 20 ಕ್ರಿಕೆಟ್ ಟೂರ್ನಿಯ 2025ರ ಆವೃತ್ತಿಯ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಶನಿವಾರ ನಡೆದ ಫೈನಲ್‌ನಲ್ಲಿ ರಶೀದ್ ಖಾನ್ ನಾಯಕತ್ವದ ಎಂಐ ಕೇಪ್‌ಟೌನ್ ತಂಡವು 76 ರನ್‌ಗಳಿಂದ ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡವನ್ನು ಮಣಿಸಿತು -ಎಕ್ಸ್ ಚಿತ್ರ

ರಾಷ್ಟ್ರೀಯ ಕ್ರೀಡಾಕೂಟ: ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಕರಿಷ್ಮಾಗೆ ಬೆಳ್ಳಿ

ಕರ್ನಾಟಕ ಮಹಿಳಾ ರಿಲೆ ತಂಡಕ್ಕೆ ಚಿನ್ನದ ಪದಕ

ಡೆಹ್ರಾಡೂನ್ (ಪಿಟಿಐ): ಕರ್ನಾಟಕದ 4x100 ಮೀಟರ್ ಮಹಿಳೆಯರ ರಿಲೆ ತಂಡವು ಇಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾನುವಾರ ಚಿನ್ನದ ಸಾಧನೆ ಮೆರೆದಿದೆ.

ಕೀರ್ತನಾ ಎಸ್, ನಿಯೋಲ್ ಅನ್ನಾ ಕಾರ್ನೆಲಿಯೊ, ಜ್ಯೋತಿಕಾ, ಉನ್ನತಿ ಅಯ್ಯಪ್ಪ ಅವರನ್ನು ಒಳಗೊಂಡ ರಾಜ್ಯ ತಂಡ 45.99 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಕೇರಳ (47.04ಸೆ) ಮತ್ತು ತೆಲಂಗಾಣ (47.58ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡವು.

ಮಹಿಳೆಯರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಕರ್ನಾಟಕದ ಕರಿಷ್ಮಾ ಎಸ್. ಸನಿಲ್ ಮತ್ತು ರಮ್ಯಶ್ರೀ ಜೈನ್ ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಕೊರಳೊಡ್ಡಿದರು. ಕರಿಷ್ಮಾ 55.55 ಮೀಟರ್ ಸಾಧನೆ ಮಾಡಿದರೆ, ರಮ್ಯಶ್ರೀ 54.85 ಮೀಟರ್ ಜಾವೆಲಿನ್ ಎಸೆದರು. ಹರಿಯಾಣದ ಜ್ಯೋತಿ ರಾಕೇಶ್ (55.55ಮೀ) ಚಿನ್ನ ಗೆದ್ದರು.

ಪುರುಷರ ಹೈಜಂಪ್‌ನಲ್ಲಿ ಕರ್ನಾಟಕದ ಸುದೀಪ್ 2.08 ಮೀಟರ್ ಸಾಧನೆಯೊಂದಿಗೆ ಕಂಚಿನ ಪದಕ ತಮ್ಮದಾಗಿಸಿಕೊಂಡರು. ತಮಿಳುನಾಡಿನ ಆದರ್ಶ್ ರಾಮ್ (2.14ಮೀ) ಮತ್ತು ಒಡಿಶಾದ ಸ್ವಧಿನ್ ಕುಮಾರ್ (2.11ಮೀ) ಅವರು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕವನ್ನು ಗೆದ್ದರು.

ಜ್ಯೋತಿ, ತೇಜಸ್ ದಾಖಲೆ: ಆಂಧ್ರ ಪ್ರದೇಶದ ಜ್ಯೋತಿ ಯರಾಜಿ ಮತ್ತು ತೇಜಸ್ ಶಿರ್ಸೆ ಕ್ರಮವಾಗಿ ಮಹಿಳೆಯರ 110 ಮೀಟರ್ ಹರ್ಡಲ್ಸ್ ಮತ್ತು ಪುರುಷರ 100 ಮೀಟರ್ ಹರ್ಡಲ್ಸ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

25 ವರ್ಷ ವಯಸ್ಸಿನ ಜ್ಯೋತಿ 13.10 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರು. ಈ ಮೂಲಕ 2023ರಲ್ಲಿ ಗೋವಾದಲ್ಲಿ ನಡೆದ ಕೂಟದಲ್ಲಿ ಅವರೇ ನಿರ್ಮಿಸಿದ್ದ (13.22ಸೆ) ದಾಖಲೆಯನ್ನು ಸುಧಾರಿಸಿ ಕೊಂಡರು. ಪಶ್ಚಿಮ ಬಂಗಾಲದ ಮೌಮಿತಾ ಮೊಂಡಾಲ್ (13.36ಸೆ) ಮತ್ತು ತಮಿಳು ನಾಡಿನ ನಿತ್ಯಾ ರಾಮ್‌ರಾಜ್ (13.60ಸೆ) ಕ್ರಮವಾಗಿ ನಂತರದ ಸ್ಥಾನ ಪಡೆದರು.

22 ವರ್ಷ ವಯಸ್ಸಿನ ತೇಜಸ್ 13.65 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಈ ಮೂಲಕ 2022ರಲ್ಲಿ ಗುಜರಾತ್‌ನಲ್ಲಿ ನಡೆದ ಕೂಟದಲ್ಲಿ ತಾವು ನಿರ್ಮಿಸಿದ್ದ ದಾಖಲೆ (13.71ಸೆ) ಸುಧಾರಿಸಿದರು. ತಮಿಳುನಾಡಿನ ಮಾನವ್ ರಾಜನಾರಾಯಣ್ (14.03ಸೆ) ಮತ್ತು ಕೇರಳದಮೊಹಮ್ಮದ್ ಲಾಜಾನ್ (14.23ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ತಮ್ಮದಾಗಿಸಿಕೊಡರು.

100 ಮೀ. ಓಟದಲ್ಲಿ ಚಾಂಪಿಯನ್ ಆದ ಅನಿಮೇಶ್ ಕುಜೂರ್ ಅವರನ್ನು ಒಳಗೊಂಡ ಒಡಿಶಾ (39.47ಸೆ) 4x100 ಮೀಟರ್ ಪುರುಷರ ರಿಲೆ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಸಾಧನೆ ಮಾಡಿತು. 2011ರಲ್ಲಿ ಸರ್ವಿಸಸ್ (39.94ಸೆ) ನಿರ್ಮಿಸಿದ್ದ ದಾಖಲೆಯನ್ನು ಮುರಿದರು. ತಮಿಳುನಾಡು ಮತ್ತು ಕೇರಳ ಕ್ರಮವಾಗಿ ನಂತರದ ಸ್ಥಾನ ಪಡೆಯಿತು.

ಮಹಿಳೆಯರ 4x100 ಮೀಟರ್ ರಿಲೆ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಕರ್ನಾಟಕದ ಕೀರ್ತನಾ ಎಸ್, ಜ್ಯೋತಿಕಾ, ಬಿ.ಪಿ. ಅಯ್ಯಪ್ಪ (ಕೋಚ್), ಉನ್ನತಿ ಅಯ್ಯಪ್ಪ ಮತ್ತು ನಿಯೋಲ್ ಅನ್ನಾ ಕಾರ್ನೆಲಿಯೊ

ಪದಕ ಪಟ್ಟಿ

ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಸರ್ವೀಸಸ್	42	16	13	71
ಕರ್ನಾಟಕ	31	13	18	62
ಮಹಾರಾಷ್ಟ್ರ	29	42	47	118
ಹರಿಯಾಣ	23	30	30	83
ಮಧ್ಯಪ್ರದೇಶ	20	13	18	51
ತಮಿಳುನಾಡು	16	22	22	60
ಉತ್ತರಾಖಂಡ	15	24	28	67

ಟೆನಿಸ್: ಕರ್ನಾಟಕಕ್ಕೆ ನಾಲ್ಕು ಪದಕ ಖಚಿತ

ಅಮೋದಿನಿ ವಿ. ನಾಯ್ಕ್

ಬೆಂಗಳೂರು: ಸ್ಫೂರ್ತಿಯುತ ಆಟವಾಡಿದ ಕರ್ನಾಟಕದ ಆಟಗಾರರು ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದ ಟೆನಿಸ್ ಸ್ಪರ್ಧೆಯ ವಿವಿಧ ವಿಭಾಗಗಳಲ್ಲಿ ನಾಲ್ಕು ಪದಕ ಖಚಿತಪಡಿಸಿದ್ದಾರೆ.

ಮೈಸೂರಿನ ಎಸ್‌.ಡಿ. ಪ್ರಜ್ವಲ್ ದೇವ್ ಮತ್ತು ನಿಕಿ ಪೂಣಚ್ಚ ಜೋಡಿಯು ಪುರುಷರ ಡಬಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದೆ. ಕರ್ನಾಟಕದ ಜೋಡಿ ಸೆಮಿಫೈನಲ್ 6-3, 6-0ಯಿಂದ ದೆಹಲಿಯ ಶಿವಾಂಕ್ ಭಟ್ನಾಗರ್ ಮತ್ತು ಸಾರ್ಥಕ್ ಸುಡೆನ್ ಅವರನ್ನು ಸೋಲಿಸಿತು. ನಿಕಿ ಪೂಣಚ್ಚ ಅವರು ಸೋಹಾ ಸಾದಿಕ್ ಅವರೊಂದಿಗೆ ಮಿಶ್ರ ಡಬಲ್ಸ್‌ನಲ್ಲೂ ಪ್ರಶಸ್ತಿ ಸುತ್ತು ತಲುಪಿದರು. ನಿಕಿ–ಸೋಹಾ ಜೋಡಿಯು 6-2, 6-3ರಿಂದ ಹರಿಯಾಣದ ಅದಿತಿ ರಾವತ್ ಮತ್ತು ಸುನಿಲ್ ಕುಮಾರ್ ಅವರನ್ನು ಸೋಲಿಸಿತು. ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಪ್ರಜ್ವಲ್ 6-3, 6-2ರಿಂದ ದೆಹಲಿಯ ಸಾರ್ಥಕ್ ಅವರನ್ನು ಮಣಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಅಮೋದಿನಿ ವಿ. ನಾಯ್ಕ್ ಅವರು ಮಹಿಳೆಯರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ 4-6, 6-4, 6-3ರಿಂದ ನಾಲ್ಕನೇ ಶ್ರೇಯಾಂಕದ ಹರಿಯಾಣದ ಅದಿತಿ ರಾವತ್ ಅವರನ್ನು ಮಣಿಸಿದರು.

ಸಂಕ್ಷಿಪ್ತ ಸುದ್ದಿ

ಸ್ಪರ್ಧೆಯಿಂದ ಹಿಂದೆ ಸರಿದ ಸಿಂಧು

ನವದೆಹಲಿ (ಪಿಟಿಐ): ಪಿ.ವಿ. ಸಿಂಧು ಅವರು ಇದೇ 11ರಿಂದ 16ರವರೆಗೆ ಚೀನಾದ ಕ್ವಿಂಗ್ಡಾವ್‌ನಲ್ಲಿ ನಡೆಯಲಿರುವ ಏಷ್ಯಾ ಮಿಶ್ರ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿದಿದ್ದಾರೆ.

ಕಳೆದ ಆವೃತ್ತಿಯಲ್ಲಿ ಕಂಚಿನ ಗೆದ್ದ ಭಾರತ ತಂಡದ ಭಾಗವಾಗಿದ್ದ 29 ವರ್ಷ ವಯಸ್ಸಿನ ಸಿಂಧು ಅವರು, ಪ್ರಸ್ತುತ ಮಂಡಿರಜ್ಜು (ಹ್ಯಾಮ್‌ಸ್ಟ್ರಿಂಗ್) ಸೆಳೆತದಿಂದ ಬಳಲುತ್ತಿದ್ದಾರೆ. ಈ ಬಾರಿ ಸುಧಾರಿತ ಪ್ರದರ್ಶನದೊಂದಿಗೆ ಪದಕದ ಬಣ್ಣ ಬದಲಾಯಿಸುವ ಗುರಿ ಭಾರತದ ಮುಂದಿದೆ.

ಭಾರತದ ಸಿಂಗಲ್ಸ್ ಆಟಗಾರರಾದ ಲಕ್ಷ್ಯ ಸೇನ್, ಎಚ್‌. ಎಸ್. ಪ್ರಣಯ್, ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಗುವಾಹಟಿಯಲ್ಲಿ ನಡೆಯುತ್ತಿರುವ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ.

ಕರುವಾನಗೆ ಮಣಿದ ಗುಕೇಶ್

ಹ್ಯಾಂಬರ್ಗ್ (ಜರ್ಮನಿ) (ಪಿಟಿಐ): ವಿಶ್ವ ಚಾಂಪಿಯನ್, ಭಾರತದ ಡಿ. ಗುಕೇಶ್ ಅವರು ಇಲ್ಲಿ ನಡೆಯುತ್ತಿರುವ ಫ್ರೀಸ್ಟೈಲ್ ಗ್ರ್ಯಾನ್ ಸ್ಲಾಮ್ ಟೂರ್ ಚೆಸ್ ಟೂರ್ನಿಯ ಕ್ವಾರ್ಟರ್ ಫೈನಲ್‌ನ ಮೊದಲ ಗೇಮ್‌ನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ ವಿರುದ್ಧ ಪರಾಭವಗೊಂಡರು.

ಮತ್ತೊಂದೆಡೆ ಅಗ್ರಮಾನ್ಯ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ವಿರುದ್ಧ ಜಯ ಸಾಧಿಸಿದರು. ಜರ್ಮನಿಯ ವಿನ್ಸೆಂಟ್ ಕೀಮರ್ ವಿರುದ್ಧ ಫ್ರಾನ್ಸ್‌ನ ಅಲಿರೇಜಾ ಫಿರೋಜ್ ಸೋತರು.

ಅರ್ಹತಾ ಸುತ್ತಿನ ಅಂತಿಮ ಸುತ್ತಿನಲ್ಲಿ ಗುಕೇಶ್ ಅವರು ಕಾರ್ಲ್‌ಸನ್ ಅವರಿಗೆ ಮಣಿದಿದ್ದರು. ಈ ಸೋಲಿನ ಹೊರತಾಗಿಯೂ ಗುಕೇಶ್ ನಾಕೌಟ್ ಹಂತ ಪ್ರವೇಶಿಸಿದ್ದರು.

ಮ್ಯಾರಥಾನ್: ಸಚಿನ್‌ಗೆ ಪ್ರಶಸ್ತಿ

ಉಡುಪಿ: ಕಾರ್ಕಳದ ಜಾರ್ಕಳ ನಿವಾಸಿ ಸಚಿನ್ ಪೂಜಾರಿ ಮತ್ತು ಇಥಿಯೋಪಿಯಾದ ಲೆಶಾರ್ಜ್ ಸೆನಾಟ್ ಕೆಫೆಲೆನ್ ಅವರು ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ) ಭಾನುವಾರ ಆಯೋಜಿಸಿದ್ದ ಮಣಿಪಾಲ ಮ್ಯಾರಥಾನ್‌ನ 7ನೇ ಆವೃತ್ತಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಮ್ಯಾರಥಾನ್‌ನಲ್ಲಿ (42 ಕಿಮೀ) ಸಚಿನ್ 2 ತಾಸು 31 ನಿಮಿಷ 20 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಓಟ ಪೂರ್ಣಗೊಳಿಸಲು ಕೆಫೆಲೆನ್ 3 ತಾಸು 11ನಿಮಿಷ 29 ಸೆಕೆಂಡುಗಳನ್ನು ತೆಗೆದುಕೊಂಡರು.

22ರಂದು ಆಯ್ಕೆ ಟ್ರಯಲ್ಸ್

ಗೋಣಿಕೊಪ್ಪ: ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್ ಮತ್ತು ಕೆ.ಎ.ಎಲ್.ಎಸ್ ಸಹಭಾಗಿತ್ವದಲ್ಲಿ 14 ಮತ್ತು 16 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರಿಗೆ ಇದೇ 22ರಂದು ಆಯ್ಕೆ ಟ್ರಯಲ್ಸ್ ನಡೆಯಲಿದೆ. ಅಥ್ಲೆಟಿಕ್ಸ್ ಮತ್ತು ಹಾಕಿ ಕ್ರೀಡೆಯ ವಿಭಾಗಗಳಿಗೆ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಅಥ್ಲೆಟಿಕ್ಸ್‌ನಲ್ಲಿ 14 ಮತ್ತು 16 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರು ಹಾಗೂ ಹಾಕಿ ಕ್ರೀಡೆಯಲ್ಲಿ 14 ವರ್ಷದೊಳಗಿವರ ಬಾಲಕರ ಆಯ್ಕೆ ನಡೆಯಲಿದೆ. ಆಟಗಾರರು ಆನ್‌ಲೈನ್ ಮೂಲಕ https://forms.gle/W1NVLKg1PegYXP4C9 ನೋಂದಣಿ ಮಾಡಿಕೊಳ್ಳಬೇಕು. ವಿವರ ಗಳಿಗೆ; ಕೆಎಎಲ್‌ಎಸ್/ಎಎಸ್‌ಎಫ್, ಪೋಸ್ಟ್ ಬಾಕ್ಸ್ 23, ಗೋಣಿಕೊಪ್ಪಲ್, ದಕ್ಷಿಣ ಕೊಡಗು–571213, ಮೊಬೈಲ್: 95677 46443, 99805 23443 (ಅಥ್ಲೆಟಿಕ್ಸ್), 99805 23443, 70199 32609(ಹಾಕಿ) ಸಂಪರ್ಕಿಸಬೇಕು.